ಶುಕ್ರವಾರ, ಏಪ್ರಿಲ್ 11, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೂಪರ್‌ಕಿಂಗ್ಸ್‌ಗೆ ಮತ್ತೆ ಧೋನಿ ನಾಯಕ

ವಿಕೆಟ್‌ಕೀಪರ್–ಬ್ಯಾಟರ್ ಮಹೇಂದ್ರಸಿಂಗ್ ಧೋನಿ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕರಾಗಿ ಮತ್ತೆ ನೇಮಕವಾಗಿದ್ದಾರೆ. ಋತುರಾಜ್ ಗಾಯಕವಾಡ ಅವರ ಮೊಣಕೈಗೆ ಪೆಟ್ಟಾಗಿದ್ದು, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಿಂದ ಹೊರನಡೆದಿದ್ದಾರೆ

PRM/KA/RERA/1251/310/PR/040524/006862
www.rera.karnataka.gov.in | *T & C apply

LUXURIOUS 3, 4 BHK APTS & 5 BHK PENTHOUSE

₹1.4CR - ₹3.6CR*

7 MINS FORUM MALL
10 MINS JP NAGAR
4 MINS VAJARAHALLI METRO STN.
8 MINS NICE ROAD
10 MINS YASHASVI INTL. SCHOOL

18 ACRES ROMAN THEMED COMMUNITY (PH - I)
15 ACRES OF OPEN SPACE
2.5 ACRES - BENGALURU'S LARGEST CLUBHOUSE
100+ WORLD-CLASS AMENITIES

PRICE BENEFITS

MARKET PRICE ~~₹9500/SFT~~
CASAGRAND PRICE ~~₹6499/SFT~~
EARLY BIRD PRICE ₹6399/SFT
(FOR FIRST 25 BOOKINGS ONLY)

TOTAL UNITS - 805 (PH I) | COMPLETION IN 30 MONTHS

TYPE	SIZE	CASAGRAND PRICE	EARLY BIRD PRICE
3 BHK	1982 SFT	~~₹1.42CR~~	₹1.40CR
4 BHK	3039 SFT	~~₹2.31CR~~	₹2.28CR
5 BHK PENTHOUSE	3800 SFT - 3884 SFT	~~₹3.58CR - ₹3.64CR~~	₹3.54CR - ₹3.60CR

CREDAI
93840 54982
EXCLUSIVE SITE VISIT AVAILABLE.
VISIT MODEL HOUSE AT SITE.
SCAN FOR THE GREATEST LIVING EXPERIENCE
CASAGRAND
building aspirations

PRM/KA/RERA/1251/310/PR/041023/006307
WWW.RERA.KARNATAKA.GOV.IN

You can't find a better home at HSR Layout!

CASAGRAND FLAMINGO

ULTRA-LUXURIOUS 3 BHK APTS. AT HSR LAYOUT FROM ₹2.3 CR*

PREMIUM LIVING

- 60+ WORLD-CLASS AMENITIES
- 20,000 SFT. 5 STAR CLUBHOUSE
- 218 EXCLUSIVE UNITS ON 3.52 ACRES (77% OF OPEN SPACE)
- ITALIAN MARBLE FLOORING
- 2 CAR PARKING INCLUDED

PRIME LOCATION

- CLOSE TO KORAMANGALA IT HUB, BELLANDUR IT HUB, INFOSYS, TECH MAHINDRA, MICROSOFT
- 3 MINS FROM THE NEAREST UPCOMING METRO
- 10-12% ANNUAL APPRECIATION

NEIGHBOURHOOD PRICE

- JAYANAGAR: ₹16,000/SFT.
- KORAMANGALA: ₹14,500/SFT.
- INDIRANAGAR: ₹14,000/SFT.
- BTM LAYOUT: ₹14,000/SFT.

*T&C APPLY

HANDOVER IN SEPTEMBER 2026

HSR LAYOUT MARKET PRICE ~~₹15,000~~/SFT. | CASAGRAND PRICE ~~₹10,599~~/SFT. | CASAGRAND OFFER PRICE ₹10,199/SFT.

INCREDIBLY PRICED: 3 BHK - 1700 SFT. - 1845 SFT. | TOTAL UNITS - 218 | UNITS SOLD OUT - 180+

WHY CASAGRAND?

- 20 years of real estate excellence
- 160+ landmark projects
- 55,000+ happy families
- 2023 rigorous quality checks
- 87% on-time delivery
- 7 cities Chennai, Bengaluru, Hyderabad, Coimbatore, Pune, Delhi & Dubai
- 2 months of rental assurance
- 6 months of resale support
- 8 year warranty & 10 year community maintenance
- 75% open area for 2x more light & ventilation
- 0% space wastage for carpet area efficiency
- 23 global brands used in fittings and finishing materials

Exclusive site visit available. Visit model house at site.

93848 88405 | www.casagrand.co.in

CREDAI

CASAGRAND building aspirations

ಶುಕ್ರವಾರ, ಏಪ್ರಿಲ್ 11, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ...

ಮಹಾವೀರ ಜಯಂತಿ ಅಂಗವಾಗಿ ಕಲಬುರಗಿಯ ಜಗತ್ ವೃತ್ತದ ಬಳಿ ಗುರುವಾರ ಸಂಜೆ ಜೈನ ಸಮಾಜದ ಮಹಿಳೆಯರು ಸಂಭ್ರಮದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡರು

63 OF EXCELLENCE SINCE 1962
A UNIT OF The Chennai Silks

ಇದೀಗ ಹೊಸೂರ್‌ನಲ್ಲಿ

ಶ್ರೀ ಕುಮರನ್ ಜ್ಯುವೆಲ್ಲರ್ಸ್

ಅಕ್ಷಯ ತೃತೀಯಾ
ಏಪ್ರಿಲ್ 30

ಈ ಮಂಗಳಕರ ದಿನದಂದು ನಿಮಗೆ ಅದೃಷ್ಟ ಮತ್ತು ಸಮೃದ್ಧಿ ಲಭಿಸಲಿ ಎಂದು ಹಾರೈಸುತ್ತೇವೆ. 916 ಹಾಲ್‌ಮಾರ್ಕ್ ಗೋಲ್ಡ್ ಜ್ಯುವೆಲ್ಲರಿಗಳ ಆಕರ್ಷಕ ಸಂಗ್ರಹವನ್ನು ಕಾಣಲು ನಮ್ಮ ಮಳಿಗೆಗೆ ಭೇಟಿ ಕೊಡಿ

ಅಕ್ಷಯ ತೃತೀಯಾ ದಿನದಂದು (30.04.2025)
ನಮ್ಮ ಮಳಿಗೆ ಬೆಳಗ್ಗೆ 06.00 ಗಂಟೆಗೆ ತೆರೆಯುತ್ತದೆ

ಪ್ರಿ ಬುಕ್ಕಿಂಗ್ ಆರಂಭವಾಗಿದೆ

ಮುಂಗಡವಾಗಿ ಚಿನ್ನ ಬುಕ್ಕಿಂಗ್ ಮಾಡುವ ಮೂಲಕ ಚಿನ್ನ ದರ ಹೆಚ್ಚಳದಿಂದ ಸುರಕ್ಷಿತವಾಗಿರಿ. ಈ ಅಕ್ಷಯ ತೃತೀಯಾ ದಿನದಂದು, ಕನಿಷ್ಠ 50% ಪಾವತಿಸಿ ನಿಮ್ಮ ಆಭರಣಗಳನ್ನು ಬುಕ್ ಮಾಡಿರಿ ಹಾಗೂ ನೀವು ಬುಕ್ ಮಾಡಿರುವ ದರದಲ್ಲಿ ಅಥವಾ ಚಾಲ್ತಿಯಲ್ಲಿರುವ ದರದಲ್ಲಿ, ಯಾವುದು ಕಡಿಮೆಯೊ ಆ ದರದಲ್ಲಿ ಆಭರಣಗಳನ್ನು ಪಡೆಯಿರಿ.

Sree Kumaran DIGI GOLD

ಯೋಜನೆಯಲ್ಲಿ ಸೇರಿಕೊಳ್ಳಿ!
ನಿಮ್ಮ ಚಿನ್ನ ಉಳಿಸಿರಿ!

ಈ ಯೋಜನೆಯಲ್ಲಿ ಗ್ರಾಹಕರಿಂದ ಮಾಡಲಾಗುವ ಪ್ರತಿ ಹೂಡಿಕೆಯನ್ನು, ಆಯಾ ದಿನದ ಚಿನ್ನದ ದರದ ಪ್ರಕಾರ 916 ಚಿನ್ನದ ತೂಕಕ್ಕೆ ಠೇವಣಿ ಮಾಡಲಾಗುತ್ತದೆ.

ಈಗ ನೀವು
₹100
ರಿಂದ ಹೂಡಿಕೆ ಮಾಡಬಹುದು ಪ್ರತಿದಿನ ಎಷ್ಟು ಸಾರಿ ಬೇಕಾದರೂ ಹೂಡಿಕೆ ಮಾಡಬಹುದು

ನಮ್ಮ ಆ್ಯಪ್ ಡೌನ್‌ಲೋಡ್ ಮಾಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
GET IT ON Google Play
Download on the App Store

ಹೆಚ್ಚಿನ ವಿವರಗಳಿಗಾಗಿ: 8056813888

JOIN OUR OFFICIAL WHATSAPP CHANNEL

India's Most Trusted Jeweller

ಶ್ರೀ ಕುಮರನ್ ಜ್ಯುವೆಲರ್ಸ್
ಚಿನ್ನ • ವಜ್ರ • ಪ್ಲಾಟಿನಂ • ಬೆಳ್ಳಿ

Sree Kumaran JEWELLERS
Gold • Diamond • Platinum • Silver

SCAN TO LOCATE US

ಶೋರೂಮ್: ದಿ ಚೆನ್ನೈ ಸಿಲ್ಕ್ಸ್ ಬಿಲ್ಡಿಂಗ್, ಬೆಂಗಳೂರು ಹೆದ್ದಾರಿ, ಹೊಸೂರ್. ಫೋನ್: 279788, 91675 27777/47777
ಗ್ರಾಹಕ ಸೇವಾ ಕೇಂದ್ರ: ಎಎಸ್‌ಎಲ್ ಪ್ಲಾಜಾ, ಬಸ್ ನಿಲ್ದಾಣದ ಎದುರು, ಹೊಸೂರ್. ಫೋನ್: 7845759888

ಟೋಲ್‌ಫ್ರೀ: 1800 599 8100

ಕರ್ನಾಟಕ • ತೆಲಂಗಾಣ • ತಮಿಳುನಾಡು • ಪುದುಚೆರಿ 4 ರಾಜ್ಯಗಳು 48 ಶೋರೂಮ್‌ಗಳು

ಕರಗ ಸಂಭ್ರಮ

ತಿಗಳರ ಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ನಡೆಯುವ ಕರಗ ಮಹೋತ್ಸವ ಅಂಗವಾಗಿ ಗುರುವಾರ ಮಹಿಳೆಯರು ಆರತಿ ದೀಪವನ್ನು ಹೊತ್ತು ಮೆರವಣಿಗೆಯಲ್ಲಿ ಸಾಗಿದರು.

ಆರತಿ ದೀಪ ಮೆರವಣಿಗೆ ವೇಳೆ ಜಾನಪದ ಕಲಾವಿದರು ಪ್ರದರ್ಶನ ನೀಡಿದರು ಚಿತ್ರಗಳು: ಎಂ.ಎಸ್ ಮಂಜುನಾಥ್

'2ನೇ ವಿಮಾನ ನಿಲ್ದಾಣ ತಿಂಗಳಲ್ಲಿ ಎಎಐ ವರದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಸಮೀಪ ನಿರ್ಮಿಸಲು ಉದ್ದೇಶಿಸಿರುವ ಎರಡನೇ ವಿಮಾನ ನಿಲ್ದಾಣಕ್ಕಾಗಿ ಮೂರು ಸ್ಥಳಗಳನ್ನು ಪರಿಶೀಲಿಸಿರುವ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಉನ್ನತ ಮಟ್ಟದ ತಂಡ ತಿಂಗಳಲ್ಲಿ ಅಭಿಪ್ರಾಯ ತಿಳಿಸುವ ಸಾಧ್ಯತೆ ಇದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಎಂ.ಬಿ.ಪಾಟೀಲ

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಎಎಐ ತಂಡ ನೀಡುವ ಅಭಿಪ್ರಾಯವನ್ನು ವಿಸ್ತೃತ ಅಧ್ಯಯನಕ್ಕೆ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವಂಥ ಪರಿಣತ ಕಂಪನಿಗಳ ಮುಂದೆ ಕೊಂಡೊಯ್ಯಲಾಗುವುದು. ನಂತರ ವಿಮಾನ ನಿಲ್ದಾಣಕ್ಕೆ ಸರ್ಕಾರ ಸ್ಥಳವನ್ನು ಅಂತಿಮಗೊಳಿಸಲಿದೆ. ವಿಮಾನ ನಿಲ್ದಾಣ ಎಲ್ಲಿ ಮಾಡಿದರೆ ಸೂಕ್ತ ಎನ್ನುವುದು ಪ್ರಯಾಣಿಕರು ಹಾಗೂ ಕಾರ್ಗೊ ದಟ್ಟಣೆ ಮತ್ತು ಕೈಗಾರಿಕೆಗಳ ಅಗತ್ಯ ಮತ್ತಿತರ ಅಂಶಗಳನ್ನು ಅವಲಂಬಿಸಿದೆ' ಎಂದರು.

'ಪಕ್ಷದ ಹಿರಿಯ ನಾಯಕ ಟಿ.ಬಿ. ಜಯಚಂದ್ರ ಅವರು ತಮ್ಮ ಕ್ಷೇತ್ರವಾದ ಶಿರಾ ಸಮೀಪ ಎರಡನೇ ವಿಮಾನ ನಿಲ್ದಾಣ ಬರಲೆಂದು ಪ್ರಯತ್ನಿಸುತ್ತಿದ್ದಾರೆ. ಅಲ್ಲಿ ಜಿಲ್ಲಾ ಮಟ್ಟದ ವಿಮಾನ ನಿಲ್ದಾಣ ಮಾಡಬಹುದೇ ವಿನಾ ಅದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆಗುವುದಿಲ್ಲ. ಬಿಜೆಪಿಯ ಅರವಿಂದ ಬೆಲ್ಲದ ಅವರು ಕೂಡ ಉತ್ತರ ಕರ್ನಾಟಕಕ್ಕೆ ಅನುಕೂಲವಾಗುವ ಜಾಗದಲ್ಲಿ ಹೊಸ ವಿಮಾನ ನಿಲ್ದಾಣ ಬರಲಿ ಎನ್ನುತ್ತಿದ್ದಾರೆ. ಕೇವಲ ಜಾಗವನ್ನು ಕೊಟ್ಟ ಮಾತ್ರಕ್ಕೆ ಎಲ್ಲವೂ ಆಗುವುದಿಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

'ವಿಜಯಪುರ ವಿಮಾನ ನಿಲ್ದಾಣ ಉದ್ಘಾಟನೆಗೆ ಸಜ್ಜಾಗಿದೆ. ಪರಿಸರ ಇಲಾಖೆಯ ಅನುಮತಿ ಸಂಬಂಧ ಸುಪ್ರೀಂ ಕೋರ್ಟಿನಲ್ಲಿ ಒಂದು ಪ್ರಕರಣವಿದೆ. ಅದು ಸದ್ಯದಲ್ಲೇ ಇತ್ಯರ್ಥಗೊಳ್ಳುವ ಲಕ್ಷಣಗಳಿವೆ' ಎಂದರು.

ಶಿರಾದಲ್ಲಿ ವಿಮಾನ ನಿಲ್ದಾಣ: ಜಾರಕಿಹೊಳಿ

'ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಶಿರಾ ಬಳಿ ನಿರ್ಮಾಣ ಆಗಬೇಕು ಎಂದು ನಾನು ಆರು ತಿಂಗಳ ಹಿಂದೆಯೇ ಮುಖ್ಯಮಂತ್ರಿಗೆ ಪತ್ರ ಬರೆದಿದ್ದೇನೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸತೀಶ ಜಾರಕಿಹೊಳಿ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಶಿರಾದಲ್ಲಿ ವಿಮಾನ ನಿಲ್ದಾಣ ಬಂದರೆ ಉತ್ತರ ಕರ್ನಾಟಕ ಭಾಗದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಸೇರಿದಂತೆ ಹಲವು ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಅಲ್ಲಿ ಸರ್ಕಾರದ ಭೂಮಿ ಕೂಡ ಲಭ್ಯವಿದೆ' ಎಂದರು.

'2ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಶಿರಾದಲ್ಲಾದರೆ ಏಳೆಂಟು ಜಿಲ್ಲೆಗಳ ಜನ ಬೆಂಗಳೂರಿಗೆ ಬರುವುದು ತಪ್ಪುತ್ತದೆ. ಬೆಂಗಳೂರು ಬಳಿಯೇ ಮತ್ತೊಂದು ವಿಮಾನ ನಿಲ್ದಾಣವಾದರೆ ಮತ್ತಷ್ಟು ಸಂಚಾರ ದಟ್ಟಣೆ ಆಗಲಿದೆ' ಎಂದರು.

'ನಾವು ಏನೇ ಶಿಫಾರಸು ಮಾಡಿದರೂ ಅಂತಿಮ ತೀರ್ಮಾನ ವಿಮಾನ ನಿಲ್ದಾಣ ಪ್ರಾಧಿಕಾರದ್ದು. ತಾಂತ್ರಿಕ ಅಂಶಗಳನ್ನು ಪರಿಗಣಿಸಿ ತಜ್ಞರ ಸಮಿತಿ ನಿರ್ಧಾರ ತೆಗೆದುಕೊಳ್ಳುತ್ತದೆ. ನಾವು ನಮ್ಮ ಅನುಕೂಲಕ್ಕೆ ತಕ್ಕಂತೆ ಏನೇ ಹೇಳಿದರೂ ಅದು ಕಾರ್ಯಸಾಧುವಲ್ಲ' ಎಂದೂ ಹೇಳಿದರು.

ಸುದ್ದಿ 2 ನಿಮಿಷ

ಎಲ್‌ಪಿಜಿ ಬೆಲೆ ಏರಿಕೆ: ಇದೇ 17ಕ್ಕೆ ಪ್ರತಿಭಟನೆ: ಡಿ.ಕೆ.ಶಿವಕುಮಾರ್

ಬೆಂಗಳೂರು: 'ಅಡುಗೆ ಅನಿಲ ಸಿಲಿಂಡರ್, ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ರಾಜ್ಯ ಬಿಜೆಪಿಯ ದ್ವಂದ್ವ ನಿಲುವಿನ ವಿರುದ್ಧ ಇದೇ 17ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೂ ಈ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ' ಎಂದರು.



'ಬಿಜೆಪಿಯವರು ಯಾತ್ರೆ ಹೊರಟ ದಿನವೇ ಕೇಂದ್ರ ಸರ್ಕಾರ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ₹50, ಪೆಟ್ರೋಲ್, ಡೀಸೆಲ್‌ಗೆ ತಲಾ ₹2 ಹೆಚ್ಚಿಸಿದೆ. ತಮ್ಮ ಯಾತ್ರೆ ಕೇಂದ್ರ ಸರ್ಕಾರದ ವಿರುದ್ಧದ ಜನಾಕ್ರೋಶ ಎಂದು ಬಿಜೆಪಿಯವರು ಫಲಕ ಹಾಕಿಕೊಳ್ಳಬೇಕು' ಎಂದರು.

'ನಮ್ಮ ಸರ್ಕಾರ ರೈತರನ್ನು ಉಳಿಸಲು ಹಾಲಿನ ದರ ಏರಿಕೆ ಮಾಡಿದೆ' ಎಂದು ಸಮರ್ಥಿಸಿದ ಅವರು 'ನೀರಿಗೆ ಅತ್ಯಂತ ಕನಿಷ್ಠ ದರ ಹೆಚ್ಚಿಸಿದ್ದೇವೆ. ಕಸ ಸಂಗ್ರಹಣೆ ಶುಲ್ಕವನ್ನು ಹಿಂದೆ ಬಿಜೆಪಿ ಸರ್ಕಾರ ನಿಗದಿ ಮಾಡಿದ್ದಕ್ಕಿಂತ ಕಡಿಮೆ ನಿಗದಿ ಮಾಡಿದ್ದೇವೆ. ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡಿದ ಕಾರಣ ನಮ್ಮಲ್ಲಿಯೂ ಬೆಲೆ ಏರಿಕೆಯಾಗಿದೆ' ಎಂದು ತಿಳಿಸಿದರು.

ಪ್ರಶಸ್ತಿ ಆಯ್ಕೆಗೆ ಅಪಸ್ವರ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಸ್ಮರಣಾರ್ಥ ರಾಜ್ಯ ಸರ್ಕಾರ ನೀಡಿದ 2023, 2024 ಮತ್ತು 2025ನೇ ಸಾಲಿನ 'ಅಂಬೇಡ್ಕರ್ ಪ್ರಶಸ್ತಿ'ಗೆ ಒಂದೇ ಉಪಜಾತಿಯವರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

'ಮೂರು ವರ್ಷಗಳ ಪ್ರಶಸ್ತಿಗೆ ಆಯ್ಕೆ ಮಾಡಿದ 15 ಸಾಧಕರು ದಲಿತ ಚಳವಳಿಯಲ್ಲಿ ತೊಡಗಿಸಿಕೊಂಡವರು, ಅಂಬೇಡ್ಕರ್ ತತ್ವ, ಸಿದ್ಧಾಂತಗಳನ್ನು ತಮ್ಮತಮ್ಮ ಕ್ಷೇತ್ರಗಳ ಮೂಲಕ ಅನುಷ್ಠಾನಗೊಳಿಸಲು ಶ್ರಮಿಸಿದವರೇ ಆಗಿದ್ದಾರೆ. ಆದರೆ, ಆಯ್ಕೆ ಮಾಡುವಾಗ ಇತರೆ ಸಮುದಾಯಗಳ ಸಾಧಕರನ್ನೂ ಗಣನೆಗೆ ತೆಗೆದುಕೊಳ್ಳಬೇಕಿತ್ತು. ಪ್ರಶಸ್ತಿಗೆ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಸೇರಿದವರನ್ನೇ ಅಧಿಕ ಸಂಖ್ಯೆಯಲ್ಲಿ ಪರಿಗಣಿಸಿರುವುದು ಸರಿಯಲ್ಲ' ಎಂದು ದಲಿತ ಸಮುದಾಯದ ಮುಖಂಡ ಆಲೂರು ನಿಂಗರಾಜ್ ದೂರಿದ್ದಾರೆ.

'ಸಮಾಜಕಲ್ಯಾಣ ಇಲಾಖೆಯನ್ನು ಸಚಿವ ಮಹದೇವಪ್ಪ ಹಾಗೂ ಅಧಿಕಾರಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ. ಪ್ರಶಸ್ತಿಗೆ ಆಯ್ಕೆಯಾದ 15ರಲ್ಲಿ 12 ಮಂದಿ ಅವರದೇ ಸ್ವಜಾತಿಗೆ (ಬಲಗೈ) ಸೇರಿದವರು. ಆ ಮೂಲಕ ಸರ್ಕಾರ ಅಂಬೇಡ್ಕರ್ ತತ್ವಗಳಿಗೆ ಕಳಂಕ ತಂದಿದೆ. ಎಚ್. ಕೃಷ್ಣಪ್ಪ ಅವರ ಅನುಯಾಯಿಗಳಿಗೆ ನೋವುಂಟು ಮಾಡಿದೆ' ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಶಿವಮೊಗ್ಗ ಬೇಸರ ವ್ಯಕ್ತಪಡಿಸಿದರು.

ಮಹಿಂದ್ರಾ ಪಿಕಪ್–ಬಸ್ ನಡುವೆ ಡಿಕ್ಕಿ: ನಾಲ್ವರ ಸಾವು

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಮದ್ರಿಕಿ ಕ್ರಾಸ್ ಬಳಿ ಮಹಿಂದ್ರಾ ಪಿಕಪ್ ವಾಹನ ಹಾಗೂ ಸಾರಿಗೆ ಸಂಸ್ಥೆಯ ಬಸ್ ನಡುವೆ ನಡೆದ ರಸ್ತೆ ಅಪಘಾತದಲ್ಲಿ ನಾಲ್ವರು ಮೃತಪಟ್ಟಿದ್ದು, ಹತ್ತು ಜನ ಗಾಯಗೊಂಡಿದ್ದಾರೆ. ಮೃತರ ಗುರುತು ಪತ್ತೆಯಾಗಿಲ್ಲ.

ಮಹಿಂದ್ರಾ ಪಿಕಪ್ ಶಹಾಪುರದಿಂದ ಕಲಬುರಗಿ ಕಡೆಗೆ ತೆರಳುತ್ತಿತ್ತು. ಸಾರಿಗೆ ಬಸ್ ಕಲಬುರಗಿಯಿಂದ ಬರುತ್ತಿತ್ತು ಎನ್ನಲಾಗುತ್ತಿದೆ.

ಎರಡು ದಿನ ರಾಜ್ಯದ ಅತಿ ದೊಡ್ಡ ಶೈಕ್ಷಣಿಕ ಮೇಳ

ನಾಳೆಯಿಂದ 'ಎಡ್ಯುವರ್ಸ್'

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ DH ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಪ್ರವೇಶ ನೋಂದಣಿಗಾಗಿ ಉಪಯೋಗಿಸಿ..

ಆಯೋಜನೆ:	'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'
ಸ್ಥಳ:	ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು
ದಿನಾಂಕ:	ಏಪ್ರಿಲ್ 12–13
ಸಮಯ:	ಬೆಳಿಗ್ಗೆ 10ರಿಂದ
ಉದ್ಘಾಟನೆ:	ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ
ಮುಖ್ಯ ಅತಿಥಿ:	ಪ್ರಕಾಶ್ ಬೆಳವಾಡಿ, ನಟ
ಪ್ರೇರಣಾ ಭಾಷಣ:	ನಂದಿನಿ ಕೆ.ಆರ್, ಸಿಇಒ, ಮಂಡ್ಯ ಜಿ.ಪಂ
ಸಂಪನ್ಮೂಲ ವ್ಯಕ್ತಿಗಳು:	ಸುಶಾಂತ್ ರಜಪೂತ್, ಅಮೀನ್-ಎ-ಮುದಸ್ಸರ್, ಎ.ಎಸ್. ರವಿ

ಬೆಂಗಳೂರು: ದ್ವಿತೀಯ ಪಿಯು ಮುಗಿಸಿ, ನೀಟ್ ಹಾಗೂ ಸಿಇಟಿ ಬರೆಯುತ್ತಿರುವ ವಿದ್ಯಾರ್ಥಿಗಳಿಗಾಗಿ ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಗಳಾದ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಬೆಂಗಳೂರು ಅರಮನೆ ಮೈದಾನದಲ್ಲಿ (ತ್ರಿಪುರವಾಸಿನಿ) ಇದೇ ಏಪ್ರಿಲ್ 12 ಮತ್ತು 13ರಂದು ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಆಯೋಜಿಸಿದೆ.

60ಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳು ನೀಡುವ ವೈವಿಧ್ಯಮಯ ವೃತ್ತಿ ಅವಕಾಶಗಳನ್ನು ಅನ್ವೇಷಿಸಲು ಈ ಕಾರ್ಯಕ್ರಮವು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಸಾಂಸ್ಥಿಕ ಪ್ರದರ್ಶನಗಳ ಜತೆಗೆ, ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲು ಪ್ರಖ್ಯಾತ ಶಿಕ್ಷಣ ತಜ್ಞರು ಮಾರ್ಗದರ್ಶನ ನೀಡಲಿದ್ದಾರೆ.

ಈ ಶೈಕ್ಷಣಿಕ ಮೇಳವನ್ನು ಏಪ್ರಿಲ್ 12ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸುವರು. ಹಿರಿಯ ನಟ ಪ್ರಕಾಶ್ ಬೆಳವಾಡಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುವರು. ಮಂಡ್ಯ ಜಿಲ್ಲಾ ಪಂಚಾಯತ್‌ನ ಸಿಇಒ, ಐಎಎಸ್ ಅಧಿಕಾರಿ ನಂದಿನಿ ಕೆ.ಆರ್. ಪ್ರೇರಣಾ ಭಾಷಣ ಮಾಡುವರು. ಪರೀಕ್ಷೆಯ ಪ್ರಮುಖ ಅಂಶಗಳು ಮತ್ತು ಕಾಲೇಜು ಆಯ್ಕೆ ಪ್ರಕ್ರಿಯೆ, ಸಿಇಟಿ ಕುರಿತು ಎ.ಎಸ್. ರವಿ ಅವರು ಉಪಯುಕ್ತ ಮಾಹಿತಿ ನೀಡುವರು.

ಅಣಕು ಸಿಇಟಿ: ವಿದ್ಯಾರ್ಥಿಗಳು ಆತ್ಮ ವಿಶ್ವಾಸದಿಂದ ಸಿಇಟಿ ಬರೆಯಲು ಅನುಕೂಲವಾಗುವಂತೆ ಮೇಳದಲ್ಲೇ ಅಣಕು ಸಿಇಟಿ ಪರೀಕ್ಷೆಯೂ ನಡೆಸಲಾಗುತ್ತಿದೆ. ಅದಕ್ಕಾಗಿ ಏ.13ರಂದು ಎರಡು ಆಕರ್ಷಕ ಅವಧಿಗಳನ್ನು ಮೀಸಲಿಡಲಾಗಿದೆ. ಅಲ್ಲದೇ, ವೈದ್ಯಕೀಯ ಆಕಾಂಕ್ಷಿಗಳಿಗೆ ಅಣಕು ನೀಟ್ ಪರೀಕ್ಷೆ ನಡೆಸಲಾಗುತ್ತದೆ. ಉತ್ತಮ ಅಂಕಗಳಿಸಿದವರಿಗೆ ಬಹುಮಾನ ನೀಡಲಾಗುತ್ತದೆ.

'ಐ ವಿಶ್ ಸಮ್‌ಒನ್ ಟೋಲ್ಡ್ ಮಿ ದಿಸ್ ಬಿಫೋರ್ ಮೈ ಫಸ್ಟ್ ಜಾಬ್' ಮತ್ತು 'ಮೈಂಡ್‌ಫುಲ್ ಮೊಮೆಂಟಮ್' ಕೃತಿಗಳ ಲೇಖಕ ಸುಶಾಂತ್ ರಜಪೂತ್, ಅವರು 'ಕೃತಕ ಬುದ್ಧಿಮತ್ತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ಪ್ರಾಮುಖ್ಯತೆಯ ಮೇಲೆ ಕೇಂದ್ರೀಕರಿಸುವ ಪರ್ಯಾಯ ವೃತ್ತಿ ಅವಕಾಶಗಳು' ಕುರಿತು ಮಾತನಾಡುವರು. ಪ್ರಸಿದ್ಧ ವೃತ್ತಿ ಸಲಹೆಗಾರರಾದ ಅಮೀನ್-ಎ-ಮುದಸ್ಸರ್ ವೃತ್ತಿ ಸಮಾಲೋಚನೆಯ ಅಗತ್ಯದ ಕುರಿತು ಮಾಹಿತಿ ನೀಡಲಿದ್ದಾರೆ.

ವಿದ್ಯಾರ್ಥಿಗಳು ತಮ್ಮ ಕೌಶಲ ಪ್ರದರ್ಶಿಸಲು ರೇಡಿಯೊ 'ಸಿಟಿ 91.1FM' ವೇದಿಕೆ ಒದಗಿಸಲಿದೆ. ಆಯಕಟ್ಟಿನ ಸ್ಥಳಗಳಲ್ಲಿ ಪ್ರದರ್ಶಿಸಲಾದ ಕ್ಯೂರ್ ಕೋಡ್ ಸ್ಕ್ಯಾನ್ ಮಾಡಬಹುದು. ಅವಕಾಶಕ್ಕಾಗಿ ತಮ್ಮ ಧ್ವನಿಮುದ್ರಿಕೆಗಳನ್ನು ಸಲ್ಲಿಸಬಹುದು. ಎರಡೂ ದಿನವೂ ರೇಡಿಯೊ ಜಾಕಿಗಳು ವಿದ್ಯಾರ್ಥಿಗಳಿಗೆ ನೆರವಾಗುವರು.

ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ನೀಟ್, ಸಿಇಟಿ ಫಲಿತಾಂಶದ ನಂತರ ಉತ್ತಮ ಕಾಲೇಜು, ಕೋರ್ಸ್‌ಗಳ ಆಯ್ಕೆ, ಪ್ರವೇಶ ಶುಲ್ಕ, ಶೈಕ್ಷಣಿಕ ಸಾಲ ಸೌಲಭ್ಯ, ಭವಿಷ್ಯದಲ್ಲಿನ ಉದ್ಯೋಗಾವಕಾಶಗಳ ಕುರಿತು ಈ ಮೇಳ ಸಮಗ್ರ ಮಾಹಿತಿ ನೀಡಲಿದೆ.

'ಸಿ.ಎಂ ಮಾತು ಕೇಳದ ಸಚಿವರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಇನ್ನು ಹೆಚ್ಚು ದಿನ ಅಧಿಕಾರದಲ್ಲಿ ಮುಂದುವರಿಯುವುದಿಲ್ಲ ಎಂಬ ಉಡಾಫೆ ಭಾವನೆ ಹಲವು ಸಚಿವರಲ್ಲಿದ್ದು, ಯಾರೊಬ್ಬರೂ ಅವರ ಮಾತನ್ನು ಕೇಳುತ್ತಿಲ್ಲ. ಇದರ ಪರಿಣಾಮ ರಾಜ್ಯ ಜನರ ಅಹವಾಲು ಕೇಳುವವರೇ ಇಲ್ಲವಾಗಿದೆ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.



ಆರ್. ಅಶೋಕ

ಇವೆಲ್ಲದರ ಪರಿಣಾಮವಾಗಿ ಸಿದ್ದರಾಮಯ್ಯ ಸರ್ಕಾರದ ಆಡಳಿತ ಯಂತ್ರ ಕುಸಿದು ಬಿದ್ದಿದ್ದು, ಭ್ರಷ್ಟಾಚಾರ ಮೇರೆ ಮೀರಿದೆ. ರಾಜ್ಯದಾದ್ಯಂತ ಜನಾಕ್ರೋಶ ವ್ಯಕ್ತವಾಗುತ್ತಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಭ್ರಷ್ಟಾಚಾರದಲ್ಲಿ ಕರ್ನಾಟಕ ನಂಬರ್ ಒನ್ ಎಂದು ಮುಖ್ಯಮಂತ್ರಿ ಅವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ನೀಡಿರುವ ಸರ್ಟಿಫಿಕೇಟ್ ಮತ್ತು 20 ತಿಂಗಳ ಬಳಿಕ ಸರ್ಕಾರ ಟೇಕಾಫ್ ಆಗುತ್ತಿದೆ ಎಂದು ಸಚಿವ ಡಿ.ಸುಧಾಕರ್ ನೀಡಿರುವ ಹೇಳಿಕೆ ಸರ್ಕಾರದ ಕಾರ್ಯ ವೈಖರಿಗೆ ಕನ್ನಡಿ ಹಿಡಿದಿವೆ' ಎಂದು ಅವರು ಹೇಳಿದ್ದಾರೆ.

'ಸಿದ್ದರಾಮಯ್ಯ ಅವರು ಕೆಲವು ತಿಂಗಳ ಹಿಂದೆ ವಿಧಾನಸೌಧದ ಮುಂದೆ ದಿನವಿಡೀ ಜನತಾದರ್ಶನ ಕಾರ್ಯಕ್ರಮ ನಡೆಸಿದ್ದರು. ಇನ್ನು ಮುಂದೆ ಜಿಲ್ಲಾ ಉಸ್ತುವಾರಿ ಸಚಿವರು ಪ್ರತಿ ತಿಂಗಳು ಕಡ್ಡಾಯವಾಗಿ ಜಿಲ್ಲಾ ಕೇಂದ್ರಗಳಲ್ಲಿ ಜನತಾ ದರ್ಶನ ಮಾಡಬೇಕು ಎಂದೂ ಸೂಚನೆ ನೀಡಿದ್ದರು. ಆದರೆ ಮುಖ್ಯಮಂತ್ರಿ ಮಾತಿಗೆ ಯಾವ ಸಚಿವರೂ ಕಿಮ್ಮತ್ತು ಕೊಟ್ಟಿಲ್ಲ. ಎಲ್ಲಿಯೂ ಜನತಾದರ್ಶನ ಮಾಡಿಲ್ಲ' ಎಂದಿದ್ದಾರೆ.

ಆಡಳಿತ ವಯನಾಡಿಗೆ ಶಿಫ್ಟ್: 'ಈಗ ವಿಧಾನಸೌಧದ ಆಡಳಿತ ಕೇರಳದ ವಯನಾಡಿಗೆ ವರ್ಗಾವಣೆ ಆಗಿದೆ. ಅಲ್ಲಿಂದ ಬರುವ ಸೂಚನೆಯನ್ನು ಇಲ್ಲಿ ಪಾಲಿಸಲಾಗುತ್ತಿದೆ. ಹುಲಿ ಯೋಜನೆ ಪ್ರದೇಶದ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಪ್ರದೇಶದಲ್ಲಿ ಮಲಯಾಳ ಚಲನಚಿತ್ರ ಚಿತ್ರೀಕರಣ ಮಾಡಲು ಅವಕಾಶ ನೀಡಿರುವುದೇ ಇದಕ್ಕೆ ಸಾಕ್ಷ್ಯ' ಎಂದು ಅಶೋಕ ಹೇಳಿದ್ದಾರೆ.

ಭೂಸ್ವಾಧೀನ ಕೈಬಿಡಲು ಪಿವಿಸಿ ಆಗ್ರಹ

ಪ್ರಜಾವಾಣಿ ವಾರ್ತೆ

ಆನೇಕಲ್ : ತಾಲ್ಲೂಕಿನ ವಿವಿಧೆಡೆ ಕೆಐಎಡಿಬಿ ಕೈಗೊಂಡಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಬೇಕೆಂದು ಪ್ರಜಾ ವಿಮೋಚನಾ ಚಳವಳಿ (ಪಿವಿಸಿ) ಆಗ್ರಹಿಸಿದೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಂಘಟನೆಯ ನೂತನ ಪದಾಧಿಕಾರಿಗಳಿಗೆ ಜವಾಬ್ದಾರಿ ಪತ್ರ ನೀಡುವ ಸಮಾರಂಭದಲ್ಲಿ ಮಾತನಾಡಿದ ರಾಜ್ಯ ಘಟಕದ ಅಧ್ಯಕ್ಷ ಆನೇಕಲ್ ಕೃಷ್ಣಪ್ಪ, ತಾಲ್ಲೂಕಿನಲ್ಲಿ ಐದು ಕೈಗಾರಿಕ ಪ್ರದೇಶಗಳಿವೆ. ಇದಕ್ಕಾಗಿ ಸಾವಿರಾರು ಎಕರೆ ಜಮೀನನ್ನು ದಶಕಗಳ ಹಿಂದೆಯೇ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಕರ್ನಾಟಕ ಗೃಹ ಮಂಡಳಿಯು ಮೂರು ಸಾವಿರ ಎಕರೆಗೂ ಹೆಚ್ಚು ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡಿದೆ. ಇದರಿಂದ ರಾಗಿಯ ಕಣಜ ಎಂದು ಹೆಸರಾಗಿದ್ದ ಆನೇಕಲ್ ತಾಲ್ಲೂಕಿನಲ್ಲಿ ಕೃಷಿಗೆ ಜಮೀನು ಇಲ್ಲದಂತಾಗಿದೆ ಎಂದು ಬೇಸರಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Flats

BASAVANGUDI RENT Flat Ground Floor 2BHK Furnished Ventilated 28k PM Maintain Cost Extra 9886019240/ 26603673 Brokers Excuse

Industrial And Factory

Available for Rent or Lease at Mysore

A full fledged running plywood manufacturing unit with a valid sawmill and peeling license established on a land area of 3.5 acres situated at Yelawala (Mysore) with a close proximity to the main highway connecting to Mysore-Coorg and Hassan districts. The Establishment has all the required machineries to manufacture 2.5 lakh to 3 lakhs sq.ft. of plywood on 18 mm basis is available on rent or long term lease.

For details Please contact: 9448472639

REAL ESTATE BUYING

Sites

Banashankari

BDA-SITE WANTED @ Banashankari 6th Stage any Block 30x40, 40x60, 50x80 Immediate Settlement Contact: 98455-55666

PUBLIC NOTICE

PUBLIC NOTICE

This is to inform the general public that my client intends to purchase the properties mentioned and described in the schedule hereunder from its Owners mentioned here below. The Owners represent that they are the absolute owners of their respective portion of the Schedule Property and the same is free from all encumbrance, mortgage, charge, lien or litigation and they have not entered into any sort of agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, agreement of sale, gift, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of agricultural lands situated at Kemapannahalli Village, Kasaba Hobli, Ramanagara Taluk, Ramanagara District and the details of which are mentioned herebelow:

Sl. No.	Name of the Owner	Sy. No.	Extent		Boundaries			
			Acres	Guntas	East	West	North	South
1.	Lakshmamma, wife of Venkatahanumaiah	72/2	00 .	20	Survey No. 72/3	Survey No. 72/1	Survey No. 72/4	Remaining portion of Survey No.72/2
2.	Lakshmidevi, wife of Late Rajanna	72/2	00	10	Survey Nos. 72/3 & 73	Survey No. 72/1	Remaining portion of Survey No. 72/2	Road
3.	**a)** P. Hanumantharaju, son of Late Puttaswamy.	72/3	00	21¼	Survey No. 73/2	Survey No. 72/2	Survey No.73/1	Road
	b) Rangaswamy Gowda, son of Late Dasappa.	73/1	00	06¾	Survey No. 73/2	Survey Nos. 72/2 & 72/4	Survey No. 73/4	Survey No. 72/3
4.	Santhosh K.C, son of Late Channappa @ Chinnappa	72/4	00	11¾	Survey No. 73/4	Survey Nos. 72/1 & 71	Survey No. 71	Survey No. 72/2
		73/4	00	13¾	Survey No. 73/2	Survey Nos. 72/2 & 72/4	Survey No. 74	Survey No. 73/1

Place : Bengaluru
Date: 10-04-2025

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road,
Bengaluru-560001 Ph.: 080 22863885 email:vinay@vinaykademane.in

CONNECT ಕ್ಲಾಸಿಫೈಡ್ಸ್



REAL ESTATE SELLING

Commerical

J P Nagar

J.P.NAGAR, 100' Ring Road OC/CC Commercial Rental income Building, Prime location 60x92 North facing 20000sft. Built-Up Area, Sale 26,00,00,000/- -9845000299.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

HRD & Admin

WANTED FEMALE Office Assistant Any Degree Fluent in English, Kannada, Hindi, Location: Rajajinagar. Contact: 9108458798/ 9845579620

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

TOURS & TRAVEL

Travel

HEAVENLY WORLD TOURS BHUTAN 7DAYS 55000 VIETNAM 5 DAYS 85000 MALAYSIA 4DAYS 47000 THAILAND 5DAYS 47000 KASHMIR 5DAYS 57000 SHIMLA KULU MANALI 7DAYS 43000 DELHI AGRA JAIPUR 6DAYS 39000 Mobile:9880541665/ 9947547866

PERSONAL

Change of Name

WE, H.R Divya and Yathish K.R, R/at Kicchavadi, Halevur post, Huliyurudurga Hobli, Kunigal Taluk, Tumkur Distrcit-572123 have changed our minor son name from PRUTHVIK K.Y to POORVIK K.Y, vide affidavit dt:03.02.2025 before notary Onkarappa N.R, Bangalore.



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 89713-79031 / 96111-99900

ಶುಕ್ರವಾರ, ಏಪ್ರಿಲ್ 11, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 100 | ಪುಟ 18
• www.prajavani.net
prajavani.net prajavani prajavani prajavani

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಧಾರ: ರಾಜ್ಯಸಭೆಯಲ್ಲಿ ಸಂಸದ ಈರಣ್ಣ ಕಡಾಡಿ ಅವರು ಕೇಳಿದ ಪ್ರಶ್ನೆಗೆ ಕೇಂದ್ರ ಆರೋಗ್ಯ ಸಚಿವಾಲಯ ನೀಡಿದ ಮಾಹಿತಿ

ಆಳ-ಅಗಲ
ಮುಂಬೈ ದಾಳಿ ರಾಣಾ ಪಾತ್ರವೇನು?
ಕೆಪಿಎಸ್‌ಸಿ ಸದಸ್ಯರ ನೇಮಕ: ಟೀಕೆ 5
ಬ್ಯಾಂಕ್, ಎನ್‌ಬಿಎಫ್‌ಸಿಗೆ ಲಗಾಮು 10
ವಕ್ಫ್: ಬಿಜೆಪಿ ಜಾಗೃತಿ ಅಭಿಯಾನ 7
ಸ್ಮಾರ್ಟ್ ಮೀಟರ್‌ಗೆ ಸಹಾಯಧನ ಖೋತಾ 6

ಎನ್‌ಐಎ ವಶದಲ್ಲಿ ರಾಣಾ

ಮುಂಬೈ ದಾಳಿಯ ಸಂಚುಕೋರ ಕೊನೆಗೂ ಭಾರತದ ಸೆರೆಗೆ • ವಿಶೇಷ ವಿಮಾನದಲ್ಲಿ ದೆಹಲಿಗೆ ಕರೆತಂದ ತನಿಖಾ ತಂಡ • ಪಟಿಯಾಲ ಹೌಸ್ ಕೋರ್ಟ್ ಮುಂದೆ ಹಾಜರು • 20 ದಿನ ಕಸ್ಟಡಿ ಕೋರಿದ ಎನ್‌ಐಎ • ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ಸಿಕ್ಕ ದೊಡ್ಡ ಗೆಲುವು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಮುಂಬೈ ಮೇಲಿನ ಭಯೋತ್ಪಾದಕ ದಾಳಿಯ ಪ್ರಮುಖ ಸಂಚುಕೋರರಲ್ಲಿ ಒಬ್ಬ, ಪಾಕಿಸ್ತಾನ ಮೂಲದ ಕೆನಡಾ ಪ್ರಜೆ ತಹವ್ವುರ್ ಹುಸೇನ್ ರಾಣಾನನ್ನು ಅಮೆರಿಕದಿಂದ ಭಾರತಕ್ಕೆ ಕರೆತರಲಾಗಿದ್ದು, ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಶದಲ್ಲಿದ್ದಾನೆ.

ರಾಣಾನನ್ನು ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದ ಎನ್‌ಐಎ, ಆತನನ್ನು 20 ದಿನ ಕಸ್ಟಡಿಗೆ ನೀಡುವಂತೆ ಕೋರಿತು. ನ್ಯಾಯಾಲಯದಲ್ಲಿ ತಡರಾತ್ರಿವರೆಗೂ ವಾದ–ಪ್ರತಿವಾದ ಮುಂದುವರಿಯಿತು.

ಗುರುವಾರ ಸಂಜೆ ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ವಿಶೇಷ ವಿಮಾನದಿಂದ ಆರೋಪಿ ಹೊರಬರುತ್ತಿದ್ದಂತೆಯೇ ಎನ್‌ಐಎ ಅಧಿಕಾರಿಗಳು ಬಂಧಿಸಿದರು. 'ಅಮೆರಿಕದಿಂದ ರಾಣಾನ ಹಸ್ತಾಂತರ ಪ್ರಕ್ರಿಯೆ ಯಶಸ್ವಿಯಾಗಿ ನಡೆದಿದ್ದು, ನವದೆಹಲಿಗೆ ಬಂದಿಳಿದ ಕೂಡಲೇ ಬಂಧಿಸಲಾಯಿತು' ಎಂದು ಎನ್‌ಐಎ ತಿಳಿಸಿದೆ.

ಆ ಬಳಿಕ ಬಿಗಿ ಭದ್ರತೆಯಲ್ಲಿ ವಿಶೇಷ ಎನ್‌ಐಎ ನ್ಯಾಯಾಧೀಶ ಚಂದರ್‌ಜೀತ್ ಸಿಂಗ್ ಮುಂದೆ ಹಾಜರುಪಡಿಸಲಾಯಿತು. ದೆಹಲಿ ಕಾನೂನು ಸೇವೆಗಳ ಪ್ರಾಧಿಕಾರದ ವಕೀಲ ಪೀಯೂಷ್ ಸಚ್‌ದೇವ್ ಅವರು ಆರೋಪಿ ರಾಣಾ ಪರ ಹಾಜರಾದರು.

ಮುಂಬೈ ದಾಳಿ ಘಟನೆ ನಡೆದ 16 ವರ್ಷಗಳ ನಂತರ ನಡೆದಿರುವ ಹಸ್ತಾಂತರ ಪ್ರಕ್ರಿಯೆಯು ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ಸಿಕ್ಕ ಬಲು ದೊಡ್ಡ ಜಯ ಎಂದು ವಿಶ್ಲೇಷಿಸಲಾಗಿದೆ. ಈ ದಾಳಿಯಲ್ಲಿ ಪಾಕಿಸ್ತಾನ ಸರ್ಕಾರದ ಪಾತ್ರವನ್ನು ಹೊರಗೆಳೆಯಲು ರಾಣಾ ಹಸ್ತಾಂತರವು ತನಿಖಾ ಸಂಸ್ಥೆಗಳಿಗೆ ನೆರವಾಗಲಿದೆ.

6ನೇ ಪುಟ ನೋಡಿ

ತಹವ್ವುರ್ ರಾಣಾನನ್ನು ಎನ್‌ಐಎ ಅಧಿಕಾರಿಗಳು ವಿಮಾನ ನಿಲ್ದಾಣದಿಂದ ಹೊರಕ್ಕೆ ಕರೆತಂದರು —ಪಿಟಿಐ ಚಿತ್ರ

ದಿನದ ಬೆಳವಣಿಗೆ
- ಗುರುವಾರ ಸಂಜೆ ನವದೆಹಲಿಗೆ ಬಂದಿಳಿದ ವಿಶೇಷ ವಿಮಾನ
- ಅಮೆರಿಕದ ಲಾಸ್ ಏಂಜಲೀಸ್‌ನಿಂದ ಬುಧವಾರ ಪ್ರಯಾಣ ಬೆಳೆಸಿದ್ದ ವಿಮಾನ
- ವಿಮಾನ ನಿಲ್ದಾಣದಲ್ಲೇ ಎನ್‌ಐಎ ಅಧಿಕಾರಿಗಳಿಂದ ಆರೋಪಿ ಬಂಧನ
- ರಾಣಾ ಪ್ರಕರಣದ ವಿಚಾರಣೆಗೆ ವಿಶೇಷ ಪ್ರಾಸಿಕ್ಯೂಟರ್ ಆಗಿ ನರೇಂದರ್ ಮಾನ್ ನೇಮಕ
- ವಿಚಾರಣೆಗೆ ಸಂಬಂಧಿಸಿದ ಕಡತಗಳನ್ನು ಮುಂಬೈನಿಂದ ತರಿಸಿಕೊಂಡ ನ್ಯಾಯಾಲಯ

ದಯಾನ್ ಕೃಷ್ಣನ್ ನೇತೃತ್ವದಲ್ಲಿ ವಾದ
ರಾಣಾನನ್ನು ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ಅಮೆರಿಕದ ನ್ಯಾಯಾಲಯದಲ್ಲಿ ಭಾರತದ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ದಯಾನ್ ಕೃಷ್ಣನ್ ಅವರು ಎನ್‌ಐಎ ಪರ ವಕೀಲರ ತಂಡದ ನೇತೃತ್ವ ವಹಿಸಲಿದ್ದಾರೆ.

ಹಸ್ತಾಂತರ ಪ್ರಕ್ರಿಯೆಗೆ 2010ರಿಂದಲೂ ನೆರವು ನೀಡಿರುವ ಕೃಷ್ಣನ್ ಅವರಿಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ನರೇಂದರ್ ಮಾನ್ ವಾದದಲ್ಲಿ ಸಹಾಯ ನೀಡಲಿದ್ದಾರೆ. ವಕೀಲರ ತಂಡದಲ್ಲಿ ಎನ್‌ಐಎ ನ್ಯಾಯವಾದಿ ಅಲ್ಲದೆ ವಕೀಲರಾದ ಸಂಜೀವಿ ಶೇಷಾದ್ರಿ ಮತ್ತು ಶ್ರೀಧರ್ ಕಾಳೆ ಅವರೂ ಇರುವರು ಎಂದು ಮೂಲಗಳು ತಿಳಿಸಿವೆ.

ಮತ್ತೆ 'ಕಮಿಷನ್' ಸದ್ದು

ಗುತ್ತಿಗೆದಾರರ ಸಂಘದ ಆರೋಪ • ಸಿ.ಎಂ– ಸಚಿವರಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭಾರಿ ಸದ್ದು ಮಾಡಿ, ಅಂದಿನ ವಿರೋಧ ಪಕ್ಷಕ್ಕೆ ಪ್ರಮುಖ ಅಸ್ತ್ರವಾಗಿದ್ದ ಗುತ್ತಿಗೆ ಹಾಗೂ ಬಿಲ್ ಪಾವತಿಗೆ 'ಕಮಿಷನ್' ಆರೋಪ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ಮತ್ತೆ ಪ್ರತಿಧ್ವನಿಸಿದೆ.

'ಬಿಜೆಪಿ ಸರ್ಕಾರವನ್ನು ಶೇ 40ರ ಕಮಿಷನ್ ಸರ್ಕಾರ' ಎಂದು ಜರೆದಿದ್ದ ಕಾಂಗ್ರೆಸ್ ನಾಯಕರು, ರಾಜ್ಯದಾದ್ಯಂತ ಆಂದೋಲನವನ್ನೇ ನಡೆಸಿದ್ದರು. ಇದು, ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ವರವಾಗಿ ಪರಿಣಮಿಸಿತ್ತು. ಈಗ ಮತ್ತೆ ಗುತ್ತಿಗೆದಾರರ ಸಂಘವು ರಾಜ್ಯ ಸರ್ಕಾರದ ವಿರುದ್ಧ ಹಲವು ಆರೋಪಗಳನ್ನು ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಅವರಿಗೆ ಏಪ್ರಿಲ್ 3ರಂದು ಪತ್ರ ಬರೆದಿರುವ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಹಾಗೂ ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ಅವರು 'ಕಾಣದ ಕೈಗಳು ಕೆಲಸ ಮಾಡುತ್ತಿವೆ' ಎಂದು ಗಂಭೀರ ಆರೋಪ ಮಾಡಿದ್ದಾರೆ.

11ನೇ ಪುಟ ನೋಡಿ

ಲೋಕಾಯುಕ್ತಕ್ಕೊ, ಪೊಲೀಸರಿಗೋ ದೂರು ನೀಡಲಿ: ಡಿ.ಕೆ.ಶಿವಕುಮಾರ್
'ಎಲ್‌ಒಸಿಗೆ ಕಮಿಷನ್ ಕೇಳುತ್ತಿರುವವರ ಬಗ್ಗೆ ಗುತ್ತಿಗೆದಾರರ ಸಂಘದವರು ಲೋಕಾಯುಕ್ತಕ್ಕೊ, ಪೊಲೀಸರಿಗೊ ದೂರು ನೀಡಲಿ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಮ್ಮ ಸರ್ಕಾರ ನ್ಯಾಯ-ಬದ್ಧವಾಗಿ ಆಡಳಿತ ನೀಡುತ್ತಿದೆ. ನಾವು ಯಾವುದೇ ಲಂಚಕ್ಕೆ ಪ್ರೋತ್ಸಾಹ ನೀಡುವವರಲ್ಲ. ನನ್ನ ಇಲಾಖೆಯ ಮೇಲೆ ಆರೋಪ ಇದ್ದರೂ ಸರಿ, ಅವರು ಲಿಖಿತವಾಗಿ ದೂರು ಕೊಟ್ಟರೆ ತನಿಖೆ ಮಾಡಿಸೋಣ' ಎಂದರು.

'ಯಾವ ವಿಶೇಷ ಎಲ್‌ಒಸಿಯೂ ಇಲ್ಲ. ಏನೂ ಇಲ್ಲ. ನಾವು ಶೇ 10-20ರಷ್ಟು ಬಿಲ್ ಬಿಡುಗಡೆ ಮಾಡಿರುತ್ತೇವೆ' ಎಂದರು.

'31 ಕೆ.ಜಿ ಚಿನ್ನ ಕಳ್ಳಸಾಗಣೆ ಮಾಡಿದ್ದ ರನ್ಯಾ–ತರುಣ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟಿ ರನ್ಯಾ ರಾವ್ ಮತ್ತು ಉದ್ಯಮಿ ತರುಣ್ ರಾಜು ಅವರು ದುಬೈನಿಂದ ಬೆಂಗಳೂರಿಗೆ ಒಟ್ಟು 31 ಕೆ.ಜಿ. ಯಷ್ಟು ಚಿನ್ನವನ್ನು ಕಳ್ಳಸಾಗಣೆ ಮಾಡಿದ್ದಾರೆ' ಎಂದು ರೆವೆನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಹೇಳಿದೆ.

ತರುಣ್ ರಾಜು ಸಲ್ಲಿಸಿರುವ ಜಾಮೀನು ಅರ್ಜಿಗೆ ಸಂಬಂಧಿಸಿ ವಿಚಾರಣೆ ನಡೆಸುತ್ತಿರುವ ಸಿಸಿಎಚ್ ನ್ಯಾಯಾಲಯಕ್ಕೆ, ಡಿಆರ್‌ಐ ತನ್ನ ಆಕ್ಷೇಪಣೆಯನ್ನು ಸಲ್ಲಿಸಿತ್ತು. ಡಿಆರ್‌ಐನ ಆಕ್ಷೇಪಣೆಯ ಪ್ರತಿ ಮಾಧ್ಯಮಗಳಿಗೆ ಸೋರಿಕೆಯಾಗಿದ್ದು, 'ರನ್ಯಾ ರಾವ್ ಮತ್ತು ತರುಣ್ ರಾಜು ಅವರು 31 ಕೆ.ಜಿ.ಯಷ್ಟು ಚಿನ್ನ ಕಳ್ಳಸಾಗಣೆ ಮಾಡಿರುವುದು ತನಿಖೆ ವೇಳೆ ಗೊತ್ತಾಗಿದೆ. ಆ ಚಿನ್ನಕ್ಕೆ ಸಂಬಂಧಿಸಿದ ಹಣವನ್ನು ಹವಾಲಾ ಮೂಲಕ ದುಬೈಗೆ ರವಾನೆ ಮಾಡಿರುವ ಬಗ್ಗೆ ಇಬ್ಬರೂ ವಿಚಾರಣೆ ವೇಳೆ ಮಾಹಿತಿ ನೀಡಿದ್ದಾರೆ' ಎಂದ ವಿವರ ಅದರಲ್ಲಿದೆ.

10ನೇ ಪುಟ ನೋಡಿ

ಚಿನಕುರುಳಿ
ಪ್ರಕಾಶ್ ಶೆಟ್ಟಿ

'ಲೋಕಾ' ಪ್ರಾಸಿಕ್ಯೂಷನ್ 105 ಪ್ರಕರಣಗಳು ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆ, ಭ್ರಷ್ಟಾಚಾರ ಆರೋಪ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು, ನೌಕರರ ಮೇಲೆ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಲೋಕಾಯುಕ್ತವು ಕಳುಹಿಸಿರುವ 105 ಪ್ರಕರಣಗಳು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಬಾಕಿ ಇವೆ.

ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಂದು ತಿಂಗಳ ಒಳಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮತ್ತು ಕೈಗೊಂಡ ಕ್ರಮದ ಮಾಹಿತಿಯನ್ನು ನೀಡುವಂತೆ ಇಲಾಖೆಗಳನ್ನು ಕೋರಲು ಅನುಮೋದನೆ ನೀಡಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) ಸಚಿವ ಸಂಪುಟ ಸಭೆಗೆ ಪ್ರಸ್ತಾವ ಸಲ್ಲಿಸಿದೆ.

ಅಧಿಕಾರಿ, ನೌಕರರ ಮೇಲೆ ಭ್ರಷ್ಟಾಚಾರ ತಡೆ ಕಾಯ್ದೆ 1988ರ ಕಲಂ 19ರಡಿ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ನೀಡುವಂತೆ ವಿವಿಧ ಇಲಾಖೆಗಳಿಗೆ (ಸಕ್ಷಮ ಪ್ರಾಧಿಕಾರಗಳು) ಲೋಕಾಯುಕ್ತವು ಪ್ರಸ್ತಾವ ಸಲ್ಲಿಸುತ್ತಿದೆ. ಆದರೆ, ಈ ಪ್ರಸ್ತಾವಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವ ಅಥವಾ ತಿರಸ್ಕರಿಸುವ ಕುರಿತು ನಿರ್ಣಯ ತೆಗೆದುಕೊಳ್ಳುವ ವಿಚಾರದಲ್ಲಿ ಇಲಾಖೆಗಳು ವಿಳಂಬ ನೀತಿ ಅನುಸರಿಸುತ್ತಿವೆ. ಭ್ರಷ್ಟಾಚಾರ ತಡೆ ಕಾಯ್ದೆಯಡಿ ಸರ್ಕಾರಿ ನೌಕರರ ವಿರುದ್ಧ ದಾಖಲಾಗುವ ಪ್ರಕರಣಗಳಲ್ಲಿ ಮೂರು ತಿಂಗಳ ಒಳಗೆ ಸಂಬಂಧಿಸಿದ ಇಲಾಖೆಗಳು ಪ್ರಾಸಿಕ್ಯೂಷನ್ ಮಂಜೂರಾತಿ ನೀಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಕಾಲಮಿತಿ ನಿಗದಿಪಡಿಸಿದೆ. ಈ ಆದೇಶ ಪಾಲಿಸಬೇಕಿದೆ ಎಂದು ಮೂಲಗಳು ತಿಳಿಸಿವೆ.

11ನೇ ಪುಟ ನೋಡಿ

ಉಕ್ಕು ಕಾರ್ಖಾನೆಗೆ ಅನುಮತಿ: ಬಲ್ಡೋಟಾ

ನವದೆಹಲಿ (ಪಿಟಿಐ): ಕರ್ನಾಟಕದ ಕೊಪ್ಪಳದಲ್ಲಿ ಇಂಟಿಗ್ರೇಟೆಡ್ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಅನುಮತಿ ನೀಡಿದೆ ಎಂದು ಬಲ್ಡೋಟಾ ಸಮೂಹ ತಿಳಿಸಿದೆ.

ಉಕ್ಕು ಕಾರ್ಖಾನೆ ಸ್ಥಾಪನೆಗೆ ₹54 ಸಾವಿರ ಕೋಟಿ ಹೂಡಿಕೆ ಮಾಡಲಾಗುತ್ತಿದ್ದು, ಒಟ್ಟು 10.5 ದಶಲಕ್ಷ ಟನ್ ಉತ್ಪಾದನೆಯ ಗುರಿ ಹೊಂದಲಾಗಿದೆ ಎಂದು ತಿಳಿಸಿದೆ.

ಬಲ್ಡೋಟಾ ಸಮೂಹವು ನವೀಕರಿಸಬಹುದಾದ ಇಂಧನ (ಪವನ ಮತ್ತು ಸೌರ), ಹಡಗು, ಅನಿಲ ಮತ್ತು ಗಣಿಗಾರಿಕೆ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದೆ.

'ಕಾರ್ಖಾನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಮೌಲ್ಯಮಾಪನ ನಡೆಸಿದ ಬಳಿಕವೇ ಸಚಿವಾಲಯವು ಮೊದಲ ಹಂತದಲ್ಲಿ 3.7 ದಶಲಕ್ಷ ಟನ್ ಉತ್ಪಾದನೆಗೆ ಅನುಮತಿ ನೀಡಿದೆ. ಪ್ರಸಕ್ತ ವರ್ಷದಲ್ಲಿಯೇ ಯೋಜನೆಯ ಜಾರಿಗೆ ನಿರ್ಧರಿಸಲಾಗಿದೆ' ಎಂದು ಕಂಪನಿಯ ಉಪಾಧ್ಯಕ್ಷ ನಾಗರಾಜ್ ಎನ್.ಬಿ. ತಿಳಿಸಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ಹಂತ ಹಂತವಾಗಿ ಉಕ್ಕು ಉತ್ಪಾದನೆಯಲ್ಲಿ ನಿಗದಿತ ಗುರಿ ಸಾಧನೆಗೆ ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ಪ್ರಸ್ತುತ ಭಾರತವು 180 ದಶಲಕ್ಷ ಟನ್‌ನಷ್ಟು ಉಕ್ಕು ಉತ್ಪಾದನಾ ಸಾಮರ್ಥ್ಯ ಹೊಂದಿದೆ. 2030ರ ವೇಳೆಗೆ ಇದನ್ನು 300 ದಶಲಕ್ಷ ಟನ್‌ಗೆ ವಿಸ್ತರಿಸುವ ಗುರಿ ಹೊಂದಿದೆ. ಇದಕ್ಕೆ ಸಮೂಹವು 10.5 ದಶಲಕ್ಷ ಟನ್ ಕೊಡುಗೆ ನೀಡಲಿದೆ ಎಂದು ವಿವರಿಸಿದ್ದಾರೆ.

10ನೇ ಪುಟ ನೋಡಿ

ಆರೋಪಿಗೆ ಜಾಮೀನು ನೀಡಿದ ಅಲಹಾಬಾದ್ ಹೈಕೋರ್ಟ್

'ಅತ್ಯಾಚಾರ: ಆಕೆಯೇ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಕೆ (ದೂರುದಾರಳು) ತನ್ನನ್ನು ತಾನು ಅಪಾಯಕ್ಕೆ ಒಡ್ಡಿಕೊಂಡಿದ್ದಾಳೆ. ಆದ್ದರಿಂದ ಆಕೆಯ ಮೇಲಾದ ಅತ್ಯಾಚಾರಕ್ಕೆ ಅವಳೇ ಜವಾಬ್ದಾರಳು' ಎಂದು ಅಲಹಾಬಾದ್ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅತ್ಯಾಚಾರ ಪ್ರಕರಣವೊಂದರಲ್ಲಿ ಆರೋಪಿಗೆ ಜಾಮೀನು ನೀಡುವಾಗ ನ್ಯಾಯಮೂರ್ತಿ ಸಂಜಯ್ ಕುಮಾರ್ ಸಿಂಗ್ ವ್ಯಕ್ತಪಡಿಸಿದ ಅಭಿಪ್ರಾಯವಿದು.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಈ ಪ್ರಕರಣ ನಡೆದಿತ್ತು. ನೊಯಿಡಾದ ಖ್ಯಾತ ವಿಶ್ವವಿದ್ಯಾಲಯವೊಂದರ ವಿದ್ಯಾರ್ಥಿನಿ ತನ್ನ ಇಬ್ಬರು ಸ್ನೇಹಿತೆಯರ ಜೊತೆ ದೆಹಲಿಯಲ್ಲಿರುವ ಬಾರ್‌ವೊಂದಕ್ಕೆ ತೆರಳಿದ್ದರು. ವಿದ್ಯಾರ್ಥಿನಿಗೆ ಪರಿಚಯದ ವ್ಯಕ್ತಿಯೊಬ್ಬರು ಬಾರ್‌ನಲ್ಲಿ ಸಿಕ್ಕಿದ್ದರು.

11ನೇ ಪುಟ ನೋಡಿ

ನ್ಯಾಯಮೂರ್ತಿ ಹೇಳಿದ್ದೇನು?

ನ್ಯಾ. ಸಂಜಯ್ ಕುಮಾರ್

- ಸಂತ್ರಸ್ತೆಯ ಆರೋಪಗಳೆಲ್ಲವೂ ಸತ್ಯ ಎಂದು ಒಪ್ಪಿಕೊಂಡರೂ, ಇದು ಆಕೆಯೇ ತಂದುಕೊಂಡ ಸಂಕಷ್ಟ ಎಂದೇ ಹೇಳಬೇಕಾಗುತ್ತದೆ. ತನ್ನ ಮೇಲಾದ ಅತ್ಯಾಚಾರಕ್ಕೆ ಆಕೆಯೇ ಹೊಣೆ. ಇದನ್ನೇ ಸಂತ್ರಸ್ತೆ ತನ್ನ ಹೇಳಿಕೆಯಲ್ಲಿಯೂ ಹೇಳಿದ್ದಾರೆ. ಕನ್ಯಾಪೊರೆ ಹರಿದಿದೆ. ಆದರೆ, ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಬಗ್ಗೆ ಆಕೆಯ ವೈದ್ಯಕೀಯ ಪರೀಕ್ಷೆ ನಡೆಸಿದ ವೈದ್ಯರು ಏನೂ ಹೇಳಿಲ್ಲ ಎಂದು ಹೇಳಿದ್ದಾರೆ
- ಸಂತ್ರಸ್ತೆ ಸ್ನಾತಕೋತ್ತರ ಪದವಿ ವಿದ್ಯಾರ್ಥಿ. ಆಕೆ ಏನು ಮಾಡುತ್ತಿದ್ದಾರೋ ಅದರ ನೈತಿಕತೆಯ ಬಗ್ಗೆ ಅರ್ಥ ಮಾಡಿಕೊಳ್ಳಲು ಶಕ್ತರಿದ್ದಾರೆ
- ಪ್ರಕರಣದ ಸತ್ಯಾಸತ್ಯತೆಗಳು, ಸಂದರ್ಭಗಳು, ಅಪರಾಧದ ಸ್ವರೂಪ, ಸಾಕ್ಷ್ಯಗಳನ್ನು ಗಮನಿಸಿದರೆ ಆರೋಪಿಗೆ ಜಾಮೀನು ನೀಡುಬಹುದು ಎನ್ನಿಸುತ್ತದೆ.

'ಮನುಷ್ಯನ ಹಲ್ಲುಗಳು ಅಪಾಯಕಾರಿ ಆಯುಧವಲ್ಲ'
ಮುಂಬೈ (ಪಿಟಿಐ): 'ಮನುಷ್ಯನ ಹಲ್ಲುಗಳು ಅಪಾಯಕಾರಿ ಆಯುಧ ಅಲ್ಲ. ಅವುಗಳಿಂದ ಗಂಭೀರ ಸ್ವರೂಪದ ಗಾಯಗಳಾಗುವುದಿಲ್ಲ' ಎಂದು ಬಾಂಬೆ ಹೈಕೋರ್ಟ್ ಹೇಳಿದೆ. 'ನನ್ನ ನಾದಿನಿ ನನ್ನನ್ನು ಕಚ್ಚಿ, ಗಂಭೀರವಾಗಿ ಗಾಯಗೊಳಿಸಿದ್ದಾರೆ' ಎಂದು ಆರೋಪಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ರದ್ದುಗೊಳಿಸಿ ನ್ಯಾಯಾಲಯ ಈ ರೀತಿ ಅಭಿಪ್ರಾಯಪಟ್ಟಿದೆ.

'ಮಹಿಳೆಗೆ ಹೆಚ್ಚಿನ ಗಾಯಗಳಾಗಿಲ್ಲ. ಹಲ್ಲುಗಳ ಅಚ್ಚು ಮೂಡಿದೆಯಷ್ಟೆ ಎಂಬುದನ್ನು ವೈದ್ಯಕಿಯ ಪ್ರಮಾಣಪತ್ರದಲ್ಲಿಯೇ ಹೇಳಲಾಗಿದೆ. ಜಮೀನು ವಿವಾದದ ಸಂಬಂಧ ಇಬ್ಬರ ನಡುವೆ ಜಗಳ ನಡೆದಿರಬಹುದು ಎಂದು ತೋರುತ್ತಿದೆ' ಎಂದು ನ್ಯಾಯಮೂರ್ತಿಗಳಾದ ವಿಭಾ ಕಂಕನವಾಡಿ ಮತ್ತು ಸಂಜಯ್ ದೇಶಮುಖ ಅವರಿದ್ದ ಪೀಠವು ಹೇಳಿದೆ.

'ಜಗಳ ನಡೆಯುವ ವೇಳೆಯಲ್ಲಿ ಮಹಿಳೆಯನ್ನು ಆಕೆಯ ನಾದಿನಿ ಕಚ್ಚಿ ಗಾಯಗೊಳಿಸಿದ್ದರು' ಎಂದು 2020ರ ಏಪ್ರಿಲ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಭಾರತೀಯ ದಂಡ ಸಂಹಿತೆಯ 324ನೇ ಸೆಕ್ಷನ್ (ಅಪಾಯಕಾರಿ ಶಸ್ತ್ರಗಳಿಂದ ಗಾಯಗೊಳಿಸುವುದು) ಅಡಿಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ವೈಭವದ ರುದ್ರೇಶ್ವರ ರಥೋತ್ಸವ

ಅಗ್ನಿಕುಂಡ ಪ್ರವೇಶಕ್ಕೂ ಮುನ್ನ ವೀರಗಾಸೆ ಕಲಾವಿದರು ಪೂಜೆ ಸಲ್ಲಿಸಿದರು.

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ಕವಾಡಿಮಠದ ರುದ್ರೇಶ್ವರ ಸ್ವಾಮಿ ರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಸೋಮವಾರದಿಂದಲೆ ವಿವಿಧ ದೇವತಾ ಕಾರ್ಯಗಳು ಪ್ರಾರಂಭವಾದವು. ಮಂಗಳವಾರ ಸಂಜೆ ವೀರಗಾಸೆ ಗುಗ್ಗಳದೊಂದಿಗೆ ಪಟಾಕಿ ಮದ್ದುಗಳನ್ನು ಸಿಡಿಸಿಕೊಂಡು ರುದ್ರೇಶ್ವರ ಸ್ವಾಮಿಯನ್ನು ಪಟ್ಟಣದಲ್ಲಿ ಮೆರವಣಿಗೆ ಮಾಡಲಾಯಿತು.

ಮೆರವಣಿಗೆ ನಂತರ ಗೊನೆ ಸಹಿತ ಬಾಳೆ ಕಂಬವನ್ನು ಕತ್ತರಿಸಿ ಅಗ್ನಿಕುಂಡ ಪ್ರವೇಶ ಮಾಡಲಾಯಿತು ನಂತರ ಭಕ್ತರಿಗೆ ಅಗ್ನಿಕುಂಡ ಪ್ರವೇಶ ಮಾಡಲು ಅನುಮತಿ ಕೊಡಲಾಯಿತು.

ಬುಧವಾರ ಹೋಮ ಹವನಗಳೊಂದಿಗೆ ರುದ್ರೇಶ್ವರ ಸ್ವಾಮಿಯ ರಥೋತ್ಸವ ನಡೆಯಿತು. ಸೋಮವಾರದಿಂದ ಬುಧವಾರದವರೆಗೆ ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಗುರುವಾರ ಬೆಳಿಗ್ಗೆ ಧಾರ್ಮಿಕ ವಿಧಿ ವಿಧಾನಗಳು ಮುಗಿದವು. ರುದ್ರೇಶ್ವರ ತರುಣ ಸಂಘದಿಂದ ಪಾನಕ, ಮಜ್ಜಿಗೆ, ಕೋಸಂಬರಿ ವಿತರಣೆ ನಡೆಯಿತು.

Advetorial

ಲಾಭಗಳಿಕೆಯಲ್ಲಿ ದಾಖಲೆ ನಿರ್ಮಿಸಿದ ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.

ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಕೇಂದ್ರ ಕಛೇರಿ ಹೊಂದಿರುವ ದಿ ಜನತಾ ಕೋ-ಆಪರೇಟಿವ್ ಬ್ಯಾಂಕು 1964 ರಲ್ಲಿ ಸ್ಥಾಪನೆಗೊಂಡಿದ್ದು, 60 ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿ 61ನೇ ವರ್ಷಕ್ಕೆ ಕಾಲಿರಿಸಿದೆ. ಬ್ಯಾಂಕಿನ ಆಡಳಿತ ಮಂಡಳಿಯ ಮಾರ್ಗದರ್ಶನ, ಸಿಬ್ಬಂದಿ ವರ್ಗದವರ ಪರಿಶ್ರಮ, ಜಾಗರೂಕ ಸದಸ್ಯರ ಸಹಕಾರದಿಂದಾಗಿ ಬ್ಯಾಂಕು ದಿನಾಂಕ 31.03.2025 ರ ಅಂತ್ಯಕ್ಕೆ ರೂ.27.90 ಕೋಟಿ ಲಾಭಗಳಿಸಿದೆ ಮತ್ತು ತೆರಿಗೆ ಹಾಗೂ ಅವಕಾಶಗಳ ನಂತರ ರೂ.17.92 ಕೋಟಿ ನಿವ್ವಳ ಲಾಭಗಳಿಸುವ ಮೂಲಕ ದಾಖಲೆ ನಿರ್ಮಿಸಿದೆ. ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಬ್ಯಾಂಕು ಒಟ್ಟು 7 ಶಾಖೆಗಳನ್ನು ಹೊಂದಿದ್ದು, 23881 ಸದಸ್ಯರು ಹಾಗೂ 58561 ಗ್ರಾಹಕರು ಬ್ಯಾಂಕಿನಲ್ಲಿ ವ್ಯವಹರಿಸುತ್ತಿದ್ದು, ರೂ.837.00 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ರೂ.5.00 ಸಾವಿರ ಕೋಟಿಗಳ ವಹಿವಾಟು ನಡೆಸಿರುತ್ತದೆ ಹಾಗೂ ರೂ.142.09 ಕೋಟಿಗಳ ಸ್ವಂತ ಬಂಡವಾಳ ಕ್ರೂಢೀಕರಿಸಿರುವುದು ಬ್ಯಾಂಕಿನ ಅರ್ಥಿಕ ಸದೃಢತೆಗೆ ಸಾಕ್ಷಿಯಾಗಿದೆ. ಬ್ಯಾಂಕು ತನ್ನ ಸದಸ್ಯರ ಅವಶ್ಯಕತೆಗನುಗುಣವಾಗಿ ಒಟ್ಟು ರೂ.428.00 ಕೋಟಿಯಷ್ಟು ಸಾಲ ವಿತರಿಸಿದ್ದು, ಸಾಲಗಾರ ಸದಸ್ಯರು ಸಾಲದ ಕಂತುಗಳನ್ನು ಕ್ರಮಬದ್ಧವಾಗಿ ಪಾವತಿಸಿರುವ ಕಾರಣದಿಂದಾಗಿ ದಿನಾಂಕ 31.03.2025 ರ ಅಂತ್ಯಕ್ಕೆ ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲದ ಪ್ರಮಾಣ ಶೂನ್ಯಕ್ಕೆ ತಲುಪಿರುವುದು ಬ್ಯಾಂಕಿನ ಆಡಳಿತ ಮಂಡಳಿಯ ವೃತ್ತಿಪರತೆ ಹಾಗೂ ಸಮರ್ಥ ಆಡಳಿತದ ದ್ಯೋತಕವಾಗಿದೆ ಎಂದು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀಮತಿ. ವಿನೋದ ಶಿವರಾಮಯ್ಯರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಭಗವಾನ್ ಶ್ರೀ ಮಹಾವೀರ ಜಯಂತಿ' ಕಾರ್ಯಕ್ರಮದಲ್ಲಿ ಸಚಿವ ಶಿವರಾಜ ತಂಗಡಗಿ

'ಜಯಂತಿ ಜಾತಿಗೆ ಸೀಮಿತವಾಗದಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬುದ್ಧ, ಮಹಾವೀರ, ಬಸವ, ಅಂಬೇಡ್ಕರ್‌ರಂತಹ ಮಹಾನ್ ವ್ಯಕ್ತಿಗಳ ಜಯಂತಿ ಆಚರಣೆ ಒಂದು ಜಾತಿ, ಸಮುದಾಯಕ್ಕೆ ಸೀಮಿತವಾಗಬಾರದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರು ತಿಳಿಸಿದರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರುವಾರ ಆಯೋಜಿಸಿದ್ದ 'ಭಗವಾನ್ ಶ್ರೀ ಮಹಾವೀರ ಜಯಂತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬುದ್ಧ, ಮಹಾವೀರ, ಬಸವ, ಅಂಬೇಡ್ಕರ್, ಕನಕದಾಸ, ಪುರಂದರದಾಸರಂತಹ ಮಹಾನ್ ವ್ಯಕ್ತಿಗಳ ಸಂದೇಶವನ್ನು ಯುವ ಪೀಳಿಗೆಗೆ ತಲುಪಿಸಬೇಕು. ಇಂದಿನ ಯುವಜನಾಂಗದ ಜಗತ್ತೇ ಬೇರೆಯಾಗಿದ್ದು, ನಮ್ಮ ಸಂಸ್ಕೃತಿ ಹಾಗೂ ಇತಿಹಾಸ ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ತಿಳಿಸಬೇಕು. ಹೀಗಾಗಿಯೇ ಜಯಂತಿಗಳನ್ನು ತಾಲ್ಲೂಕು ಮಟ್ಟದಲ್ಲಿ ಆಚರಣೆ ಮಾಡಲಾಗುತ್ತಿದೆ. ಮನೆಗಳಲ್ಲಿ ಪೋಷಕರು ಮಕ್ಕಳಿಗೆ ಮಹಾನ್ ವ್ಯಕ್ತಿಗಳ ಬಗ್ಗೆ ತಿಳಿಹೇಳಬೇಕು' ಎಂದು ಹೇಳಿದರು.

'ಮಹಾವೀರ ಜಯಂತಿ ನಂತರ ಬುದ್ಧನ ಜಯಂತಿಯನ್ನೂ ಆಚರಿಸಲಾಗುತ್ತಿದ್ದು, ಒಟ್ಟು 33 ಜಯಂತಿಗಳನ್ನು ಸರ್ಕಾರದ ವತಿಯಿಂದಲೇ ಆಯೋಜಿಸಲಾಗುತ್ತಿದೆ' ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ನರಸಿಂಹರಾಜಪುರ ಸಿಂಹನಗದ್ದೆ ಜೈನಮಠದ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಮಾತನಾಡಿ, 'ಚೆಲುವ ಕನ್ನಡ ನಾಡನ್ನು ಆಳಿ ಗಂಧದ ಗುಡಿಯನ್ನಾಗಿಸಿದ ಪ್ರಖ್ಯಾತ ರಾಜರೆಲ್ಲರೂ ಜೈನ ಧರ್ಮಕ್ಕೆ ಸೇರಿದವರಾಗಿದ್ದಾರೆ. ಇಮ್ಮಡಿ ಪುಲಕೇಶಿ, ವಿಷ್ಣುವರ್ಧನ, ಕದಂಬ ರಾಜಮನೆತನ ಜೈನ ಧರ್ಮದ್ದು. ಜೈನ ವೀರ ಮಹಿಳೆಯರೂ ರಾಜ ಮನೆತನದವರಾಗಿದ್ದಾರೆ. ಅವರ ಕೊಡುಗೆಯನ್ನು ಮೆಚ್ಚಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾವೀರ ಜಯಂತಿಯನ್ನು ಸರ್ಕಾರದಿಂದಲೇ ಆಚರಿಸುತ್ತಿರುವುದು ಶ್ಲಾಘನಾರ್ಹ' ಎಂದರು.

ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ಮಾತನಾಡಿ, 'ಜೈನರು ಬಿಜೆಪಿಗೇ ಮಾತ್ರ ಮತ ಹಾಕುತ್ತಾರೆ ಎಂಬ ಭಾವನೆಯನ್ನು ತೊಡೆದುಹಾಕಬೇಕು. ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಜೈನರ ಮತ ಕಾಂಗ್ರೆಸ್‌ಗೇ ಹೆಚ್ಚು ಬಂದಿದೆ. ಜೈನ ಸಮುದಾಯದವರು ಹೆಚ್ಚು ಸಂಘಟಿತರಾಗಬೇಕು' ಎಂದು ಹೇಳಿದರು.

ಭಗವಾನ್ ಶ್ರೀ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಪದ್ಮರಾಜ ದಂಡಾವತಿ, ಕೆ.ಎಂ. ಗಾಯತ್ರಿ, ಲಕ್ಷ್ಮಿಸೇನಾ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ, ಡಿ. ಸುಧಾಕರ್, ಲಹರ್ ಸಿಂಗ್ ಸಿರೋಯ ಮತ್ತು ಶಿವರಾಜ್ ಎಸ್. ತಂಗಡಗಿ ಅವರು ಭಗವಾನ್ ಮಹಾವೀರರ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು (ಎಡಚಿತ್ರ) ಜೈನ್ ಯುವ ಸಂಘಟನೆ ಆಯೋಜಿಸಿದ್ದ ಶೋಭಾಯಾತ್ರೆಯಲ್ಲಿ ವಿಂಟೇಜ್ ಜೀಪಿನ ಮೇಲೆ ಕೂತು ಯುವತಿಯರು ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ



ಜೈನ್ ಯುವ ಸಂಘಟನೆ ಗುರುವಾರ ಆಯೋಜಿಸಿದ್ದ ಮಹಾವೀರ ಜಯಂತಿಯಲ್ಲಿ, ಮಹಾವೀರರ ವಿಗ್ರಹಕ್ಕೆ ಅಭಿಷೇಕ ಮಾಡಲಾಯಿತು

ಪತ್ರಕರ್ತ ಪದ್ಮರಾಜ ದಂಡಾವತಿ ಅವರು ಮಹಾವೀರರ ಬಗ್ಗೆ ಉಪನ್ಯಾಸ ನೀಡಿದರು. ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ, ಜೈನ್ ಅಸೋಸಿಯೇಷನ್ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಉಪಸ್ಥಿತರಿದ್ದರು.

'ಅಹಿಂಸಾ ತತ್ವ ಎಂದಿಗೂ ಪ್ರಸ್ತುತ'

'ಭಗವಾನ್ ಮಹಾವೀರ ಅವರು ಅಹಿಂಸಾ ತತ್ವವನ್ನು ಜಗತ್ತಿಗೆ ಸಾರಿದರು. ಅಹಿಂಸೆಯೇ ಪರಮ ಧರ್ಮ ಎಂಬ ಅವರ ಮಾತು ಇಂದಿಗೂ, ಎಂದಿಗೂ ಪ್ರಸ್ತುತ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಜೈನ್ ಯುವ ಸಂಘಟನೆ ನಗರದಲ್ಲಿ ಗುರುವಾರ ಆಯೋಜಿಸಿದ್ದ 'ಮಹಾವೀರ ಜಯಂತಿ ಹಾಗೂ ಅಹಿಂಸಾ ಮತ್ತು ವಿಶ್ವಶಾಂತಿ ಸಮಾವೇಶ'ದಲ್ಲಿ ಅವರು ಮಾತನಾಡಿದರು. 'ಅಹಿಂಸಾ ತತ್ವದ ಪಾಲನೆಯಿಂದ ಎಲ್ಲರಿಗೂ ಒಳಿತಾಗುತ್ತದೆ. ಜೈನ ಧರ್ಮ ಮತ್ತು ಮಹಾವೀರರು ಮಾನವೀಯತೆಯನ್ನು ಬೋಧಿಸಿದರು. ಅದನ್ನು ಎಲ್ಲರೂ ಅಳವಡಿಸಿಕೊಳ್ಳಬಹುದು' ಎಂದರು. ಸಂಸದ ಪಿ.ಸಿ.ಮೋಹನ್, 'ಜೈನ ಧರ್ಮ ಬೋಧಿಸಿದ ಮಾನವೀಯತೆಯ ಪಾಠವನ್ನು ಜೈನ್ ಯುವ ಸಂಘಟನೆ ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಅನುಸರಿಸಿಕೊಂಡು ಬರುತ್ತಿದೆ. ರಕ್ತದಾನ, ಅಶಕ್ತರಿಗೆ ಆರ್ಥಿಕ ನೆರವು, ಉಚಿತ ಆರೋಗ್ಯ ತಪಾಸಣೆ, ಅನ್ನಸಂತರ್ಪಣೆಗಳಲ್ಲಿ ತೊಡಗಿಸಿಕೊಂಡಿದೆ' ಎಂದು ಶ್ಲಾಘಿಸಿದರು.

ಇದಕ್ಕೂ ಮುನ್ನ ನಗರದ ಪುರಭವನ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಸಂಘಟನೆಯ ಸದಸ್ಯರು ಶೋಭಾಯಾತ್ರೆ ನಡೆಸಿದರು. ಮೆರವಣಿಗೆಯಲ್ಲಿದ್ದ ಹಿರಿಯರು ಮಹಾವೀರರ ತತ್ವಗಳನ್ನು ಕುರಿತ ಹಾಡುಗಳನ್ನು ಹಾಡುತ್ತಾ ನಡೆದರೆ, ಯುವಕರು ಅಂಗಡಿ-ಅಂಗಡಿಗೆ ಭೇಟಿ ನೀಡಿ ಗೋ ಸೇವೆಗಾಗಿ ದೇಣಿಗೆ ಸಂಗ್ರಹಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಶಾಂತಿ ಸಮಾವೇಶದ ಭಾಗವಾಗಿ ಆಯೋಜಿಸಲಾಗಿದ್ದ ಶಿಬಿರದಲ್ಲಿ 500ಕ್ಕೂ ಹೆಚ್ಚು ಯುವಕರು ರಕ್ತದಾನ ಮಾಡಿದರು. ಕಣ್ಣು ಮತ್ತು ಅಂಗಾಂಗ ದಾನಕ್ಕೆ ಹೆಸರು ನೋಂದಣಿ ಮಾಡಿದರು. ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರಿಗೆ ಉಚಿತವಾಗಿ ಮಜ್ಜಿಗೆ, ತಂಪಾದ ನೀರು ವಿತರಿಸಿದರು.

'ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಪ್ರಮುಖ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಿದ್ಯಾರ್ಥಿಗಳ ಜೀವನ ಮತ್ತು ಉಜ್ವಲ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದೆ ಎಂದು ಸಿಲಿಕಾನ್ ಸಿಟಿ ಕಾಲೇಜಿನ ಅಧ್ಯಕ್ಷ ಎಚ್.ಎಂ.ಚಂದ್ರಶೇಖರ್ ಹೇಳಿದರು.

ಕೆ.ಆರ್.ಪುರ ಸಮೀಪದ ಸಿಲಿಕಾನ್ ಸಿಟಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಾಲೇಜು ವಾರ್ಷಿಕೋತ್ಸವ 'ಪರಂಪರ' ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಯುವ ಮನಸ್ಸುಗಳನ್ನು ರೂಪಿಸುವ ನಿಟ್ಟಿನಲ್ಲಿ ಶಿಕ್ಷಕರು ಅಗತ್ಯವಿರುವ ಸಮರ್ಪಣೆ ಮತ್ತು ಬದ್ಧತೆಯ ಬಗ್ಗೆ ತಿಳಿಸಿದರು.

ಐಪಿಎಸ್ ಅಧಿಕಾರಿ ಪ್ರಭಾರಾವ್ ಅವರು ಹೆಚ್ಚುತ್ತಿರುವ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಪ್ರಭಾವ ಕುರಿತು ಹಾಗೂ ತಾಂತ್ರಿಕ ಪ್ರಗತಿಯ ತ್ವರಿತಗತಿಯ ಬಗ್ಗೆ ವಿವರಿಸಿದರು. ವಿದ್ಯಾರ್ಥಿಗಳು ಮತ್ತು ಶಿಕ್ಷಣ ಸಂಸ್ಥೆಗಳು ಇಬ್ಬರೂ ವಿಕಸನಗೊಳ್ಳುತ್ತಿರುವ ಚಲನಶೀಲತೆಗೆ ತ್ವರಿತವಾಗಿ ಹೊಂದಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು. ಹಿರಿಯ ಶಿಕ್ಷಣ ತಜ್ಞ ಮತ್ತು ತಂತ್ರಜ್ಞ ಪ್ರೊ.ಡಿ.ಎಸ್.ಚೌಹಾಣ್, ಕಾಲೇಜಿನ ನಿರ್ದೇಶಕ ಎಚ್.ಎಂ.ಮುಕುಂದ ಇದ್ದರು.

ರಾಡ್ರಿಗಸ್‌ರಿಗೆ 'ಬೋಧಿವೃಕ್ಷ' ಪ್ರಶಸ್ತಿ



ವೇಲೇರಿಯನ್ ರಾಡ್ರಿಗಸ್

ನಫೀಸಾ ಪೆರುವಾಯಿ

ಶಿವಪ್ಪ ಅರಿವು

ಸಂಗಮ್ಮ ಸಾಣಕ

ಡಿಂಗ್ರಿ ನರಸಪ್ಪ

ಬೆಟ್ಟಯ್ಯ ಕೋಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಳಸಮುದಾಯದ ಬದುಕು-ಸಂಸ್ಕೃತಿಯ ರಕ್ಷಣೆಯಲ್ಲಿ ತೊಡಗಿಕೊಂಡಿರುವವರನ್ನು ಗೌರವಿಸುವ ಸಲುವಾಗಿ ನೀಡುವ 'ಬೋಧಿವೃಕ್ಷ' ಮತ್ತು 'ಬೋಧಿವರ್ಧನ' ಪ್ರಶಸ್ತಿಗಳ ಈ ಸಾಲಿನ ಪುರಸ್ಕೃತರ ಪಟ್ಟಿಯನ್ನು ಸ್ಫೂರ್ತಿಧಾಮವು ಪ್ರಕಟಿಸಿದೆ.

'ಅಂಬೇಡ್ಕರ್‌ವಾದದ ಪ್ರಸಾರ ಮತ್ತು ಕರಾವಳಿ ಕರ್ನಾಟಕದ ಭೂರಹಿತ ತಳಸಮುದಾಯದ ರೈತರ ಹಕ್ಕುಗಳ ಹೋರಾಟದಲ್ಲಿ ತೊಡಗಿಕೊಂಡಿರುವ ಪ್ರೊ.ವೇಲೇರಿಯನ್ ರಾಡ್ರಿಗಸ್ ಅವರನ್ನು 'ಬೋಧಿವೃಕ್ಷ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು, ಫಲಕ ಮತ್ತು ₹1 ಲಕ್ಷ ನಗದು ಒಳಗೊಂಡಿದೆ' ಎಂದು ಪ್ರಕಟಣೆ ತಿಳಿಸಿದೆ.

'ವಿವಿಧ ಭೂಹೋರಾಟ ಮತ್ತು ದಲಿತ ಹತ್ಯಾಕಾಂಡಗಳ ವಿರುದ್ಧ ಹೋರಾಡಿರುವ ಬೆಟ್ಟಯ್ಯ ಕೋಟೆ, ಅಸ್ಪೃಶ್ಯತೆ ನಿವಾರಣೆಗಾಗಿ ಹಲವು ಪ್ರಯೋಗಗಳನ್ನು ಮಾಡಿರುವ ಪ್ರಾಧ್ಯಾಪಕ ಜಿ.ಶಿವಪ್ಪ ಅರಿವು, ದೇವದಾಸಿ ಪದ್ಧತಿ ಮತ್ತು ಬಾಲ್ಯವಿವಾಹದ ವಿರುದ್ಧದ ಹೋರಾಟದಲ್ಲಿ ತೊಡಗಿಕೊಂಡಿರುವ ಡಿಂಗ್ರಿ ನರಸಪ್ಪ ಅವರನ್ನು 'ಬೋಧಿವರ್ಧನ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ತಿಳಿಸಿದೆ.

'ಗ್ರಾಮ ಪಂಚಾಯತಿ ಒಂದರ ಉಪಾಧ್ಯಕ್ಷೆ ಆಗಿದ್ದು, ಸ್ವಚ್ಛತಾ ಕಾರ್ಯಗಳಿಗಾಗಿ ಮನ್ನಣೆ ಪಡೆದಿರುವ ನಫೀಸಾ ಪೆರುವಾಯಿ ಮತ್ತು ಮದ್ಯಪಾನ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಸಂಗಮ್ಮ ಸಾಣಕ ಅವರನ್ನು 'ಬೋಧಿವರ್ಧನ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದೆ. ಈ ಇಬ್ಬರನ್ನೂ 2025ನೇ ಸಾಲಿನ 'ಪ್ರಜಾವಾಣಿ ಸಾಧಕಿಯರು' ಎಂದು ಗುರುತಿಸಲಾಗಿತ್ತು.

'ಬೋಧಿವರ್ಧನ ಪ್ರಶಸ್ತಿಗೆ ಆಯ್ಕೆಯಾದ ಐವರಿಗೂ ಫಲಕ ಮತ್ತು ತಲಾ ₹25,000 ನಗದು ನೀಡಲಾಗುತ್ತದೆ. ಅಂಬೇಡ್ಕರ್ ಜಯಂತಿಯಂದು ಸ್ಫೂರ್ತಿಧಾಮದಲ್ಲಿ ನಡೆಯಲಿರುವ 'ಅಂಬೇಡ್ಕರ್ ಹಬ್ಬ'ದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

ಮಹಿಳಾ ಕಥಾ ಸ್ಪರ್ಧೆಗೆ ಕಥೆಗಳ ಆಹ್ವಾನ

ಬೆಂಗಳೂರು: ವೈದ್ಯೆ ಹಾಗೂ ಕಥೆಗಾರ್ತಿ ಡಾ. ಅನುಪಮಾ ನಿರಂಜನ ಅವರ ಜನ್ಮದಿನದ ಅಂಗವಾಗಿ ಕನ್ನಡ ಸಂಘರ್ಷ ಸಮಿತಿಯು ಉದಯೋನ್ಮುಖ ಕಥೆಗಾರ್ತಿಯರಿಗಾಗಿ 'ಮಹಿಳಾ ಕಥಾ ಸ್ಪರ್ಧೆ'ಯನ್ನು ಆಯೋಜಿಸಿದೆ.

ಆಯ್ಕೆಯಾದ ಕಥೆಗಳಿಗೆ ಪ್ರಥಮ ಬಹುಮಾನ ₹2500, ದ್ವಿತೀಯ ಬಹುಮಾನ ₹2000 ಮತ್ತು ತೃತೀಯ ಬಹುಮಾನ 1500 ನಗದು ಒಳಗೊಂಡಿರುತ್ತದೆ.

ಅಧ್ಯಕ್ಷರು, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು- 560056 ಈ ವಿಳಾಸಕ್ಕೆ ಕಥೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಖ್ಯೆ: 9739001410ಕ್ಕೆ ಸಂಪರ್ಕಿಸಬಹುದು.

ಕೆ.ಆರ್.ಪುರದಲ್ಲಿ ನ್ಯಾಯಾಲಯ ಆರಂಭ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಇಪ್ಪತ್ತು ವರ್ಷಗಳ ಹೋರಾಟದ ಫಲವಾಗಿ ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರದಲ್ಲಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ (ಗ್ರಾಮಾಂತರ) ಆರಂಭಗೊಂಡಿದ್ದು, ಎರಡು ದಿನಗಳಿಂದ ಕಲಾಪಗಳು ನಡೆಯುತ್ತಿವೆ.

ಕೆ.ಆರ್.ಪುರ, ವರ್ತೂರು, ಬಿದರಹಳ್ಳಿ ಹೋಬಳಿಗಳ ಹಾಗೂ ವರ್ತೂರು, ವೈಟ್‌ಫೀಲ್ಡ್, ಕಾಡುಗೋಡಿ, ಆವಲಹಳ್ಳಿ ಹಾಗೂ ವೈಟ್‌ಫೀಲ್ಡ್ ಸಂಚಾರ ಠಾಣೆಯ ಮೊಕದ್ದಮೆಗಳು ನ್ಯಾಯಾಲಯ ವ್ಯಾಪ್ತಿಗೆ ಸೇರಿವೆ. ಸುಮಾರು 8 ಸಾವಿರ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿವೆ. ಇನ್ನು ಮುಂದೆ ಈ ನ್ಯಾಯಾಲಯದಲ್ಲಿಯೇ ಮೊಕ್ಕದಮೆಗಳ ನಡೆಯಲಿವೆ.

2003 ರಲ್ಲಿ ಎಲ್ಲಾ ತಾಲ್ಲೂಕು ವ್ಯಾಪ್ತಿಯಲ್ಲಿ ನ್ಯಾಯಾಲಯ ಸ್ಥಾಪನೆಗೆ ಸರ್ಕಾರ ಅಧಿಸೂಚನೆ ಹೊರಡಿಸಿತು. ಅಧಿಸೂಚನೆ ಅನ್ವಯ ದೇವನಹಳ್ಳಿ, ಆನೇಕಲ್, ನೆಲಮಂಗಲ, ಮಾಲೂರು, ಹೊಸಕೋಟೆ ಕಡೆ ನ್ಯಾಯಾಲಯ ಆರಂಭಗೊಂಡವು. ಆದರೆ, ಕೆ.ಆರ್.ಪುರದಲ್ಲಿ ಕಟ್ಟಡ ಹಾಗೂ ಎಲ್ಲಾ ರೀತಿಯ ಮೂಲಸೌಕರ್ಯಗಳಿದ್ದರೂ ಕಾರಣಾಂತರಗಳಿಂದ ನ್ಯಾಯಾಲಯ ಸ್ಥಾಪನೆಯಾಗದೇ ನನೆಗುದಿಗೆ ಬಿದ್ದಿತ್ತು.

'ನ್ಯಾಯಾಲಯ ಪ್ರಾರಂಭಕ್ಕಾಗಿ 2004 ರಿಂದಲೂ ಸತತವಾಗಿ ನ್ಯಾಯಾಂಗ ಇಲಾಖೆ ಹಾಗೂ ಸರ್ಕಾರ ಮಟ್ಟದಲ್ಲಿ ಹೋರಾಟ ಮಾಡಿದ್ದೇವೆ. ಅಲ್ಲದೆ ವಿವಿಧ ಸಂಘ ಸಂಸ್ಥೆಗಳು, ಕನ್ನಡಪರ, ಮಹಿಳಾ, ದಲಿತ ಸಂಘಟನೆಗಳು ಹಾಗೂ ಈ ಭಾಗದ ನಾಗರಿಕರು ನಮ್ಮ ಹೋರಾಟಕ್ಕೆ ಕೈಜೋಡಿಸಿದ್ದಾರೆ' ಎಂದು ಬೆಂಗಳೂರು ಪೂರ್ವ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎಂ.ಮುನಿಯಪ್ಪ ತಿಳಿಸಿದರು.

ಕೆ.ಆರ್.ಪುರದಲ್ಲಿ ಆರಂಭವಾಗಿರುವ ನ್ಯಾಯಾಲಯ

ನಿಧನ ವಾರ್ತೆ

ಶತಾಯುಷಿ ತಾಯಮ್ಮ

ಬೆಂಗಳೂರು: ಇಲ್ಲಿನ ಜಯನಗರದ ನಿವಾಸಿ ತಾಯಮ್ಮ (102) ಅವರು ವಯೋಸಹಜ ಅನಾರೋಗ್ಯದಿಂದ ಗುರುವಾರ ಮಧ್ಯಾಹ್ನ ನಿಧನರಾದರು.



ಮೃತರಿಗೆ ನಿವೃತ್ತ ಎಸ್‌ಪಿ ಸುರೇಂದ್ರ ರಾವ್ ಸೇರಿದಂತೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಮಗಳು ಇದ್ದಾರೆ.

ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಶುಕ್ರವಾರ ಮಧ್ಯಾಹ್ನ 12.30ರ ಬಳಿಕ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.



ನಮ್ಮ ಸರಕಾರ ಭಾರತೀಯ ರೈಲ್ವೆ ಸೇವೆಯನ್ನು ಆಧುನಿಕ ಹಾಗೂ ವಿಶ್ವ ದರ್ಜೆಯ ಸೇವೆ ನೀಡಲು ಬದ್ಧವಾಗಿದೆ.
– ನರೇಂದ್ರ ಮೋದಿ, ಪ್ರಧಾನ ಮಂತ್ರಿ

ರೈಲು ಸಂಖ್ಯೆ 20662
ಧಾರವಾಡ-ಕೆಎಸ್‌ಆರ್ ಬೆಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ
ಎಸ್‌ಎಂಎಂ ಹಾವೇರಿ ರೈಲ್ವೆ ನಿಲ್ದಾಣದಲ್ಲಿ ಹೆಚ್ಚುವರಿ ನಿಲುಗಡೆಯೊಂದಿಗೆ

ಹಸಿರು ನಿಶಾನೆ

ಸೌಲಭ್ಯಗಳು

- ಹಾವೇರಿ ಭಾಗದ ಸಾಫ್ಟ್‌ವೇರ್ ವೃತ್ತಿಪರರಿಗೆ ಹಾಗೂ ವ್ಯವಹಾರಸ್ಥರಿಗೆ ಬೆಂಗಳೂರಿಗೆ ಪ್ರಯಾಣಿಸಲು ಅನುಕೂಲವಾಗುವುದು
- ಹಾವೇರಿ ಸುತ್ತ-ಮುತ್ತಲಿನ ಪ್ರವಾಸಿ ಸ್ಥಳ, ಧಾರ್ಮಿಕ ಮತ್ತು ಪರಂಪರೆಯ ತಾಣಗಳನ್ನು ವೀಕ್ಷಿಸಲು ಬರುವ ಪ್ರಯಾಣಿಕರಿಗೆ ಅನುಕೂಲಕರ
- ಬೆಂಗಳೂರು ಮತ್ತು ಹಾವೇರಿ ನಡುವಿನ ಸಂಪರ್ಕವನ್ನು ವೇಗಗೊಳಿಸುವ ಮೂಲಕ ಈ ಪ್ರದೇಶದಲ್ಲಿನ ಸಾಮಾಜಿಕ-ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತದೆ
- ಹಾವೇರಿ ಪ್ರದೇಶದ ಜನತೆಗೆ ಶಿಕ್ಷಣ, ಆರೋಗ್ಯ ಸೇವೆ ಮತ್ತು ಇತರ ಅಗತ್ಯ ಸೇವೆಗಳ ಸುಲಭ ಲಭ್ಯತೆಯನ್ನು ಖಚಿತಪಡಿಸುತ್ತದೆ

ಇವರಿಂದ
ವಿ. ಸೋಮಣ್ಣ
ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರು

11.04.2025 | ಮಧ್ಯಾಹ್ನ 1:30 ಕ್ಕೆ | ಎಸ್‌ಎಂಎಂ ಹಾವೇರಿ ರೈಲು ನಿಲ್ದಾಣ

ಸರ್ವರಿಗೂ ಆದರದ ಸ್ವಾಗತ

ನೈಋತ್ಯ ರೈಲ್ವೆ

South Western Railway - SWR | @SWRRLY | SWRRLY | southwesternrailway_swr | www.swr.indianrailways.gov.in

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/EPC/46/2025
ದಿನಾಂಕ: 09.01.2025 ರ ಮೇಲಿನ ತಿದ್ದುಪಡಿ
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ತುಮಕೂರು ನಿಲ್ದಾಣದ ಪುನರಾಭಿವೃದ್ಧಿ: ತುಮಕೂರು ನಿಲ್ದಾಣದಲ್ಲಿ ತುಮಕೂರು ನಿಲ್ದಾಣದ ಪುನರಾಭಿವೃದ್ಧಿಗೆ ಸಂಬಂಧಿಸಿದಂತೆ ಸಿವಿಲ್ ಕಾಮಗಾರಿ, ಸಿಗ್ನಲ್ ಮತ್ತು ದೂರಸಂಪರ್ಕ ಕೆಲಸ ಮತ್ತು ಎಲೆಕ್ಟ್ರಿಕಲ್ ಸಾಮಾನ್ಯ ಕಾಮಗಾರಿಗಳನ್ನು ಒಳಗೊಂಡಂತೆ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ದ ಅನುಬಂಧ.(ಟೆಂಡರು ಉಲ್ಲೇಖ ಸಂ. TK-STN-DEVELOP-EPC)	ರೂ. 74,97,63,438/-

ಟೆಂಡರು ಮುಚ್ಚುವ ದಿನಾಂಕ	
ಪ್ರಸ್ತುತ	ಪರಿಷ್ಕೃತ
10.04.2025 (15:00 ಗಂಟೆಗೆ)	25.04.2025 (15:00 ಗಂಟೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ ಬೆಂಗಳೂರು ದಂಡು
PUB/25/AAMO/PRB/SWR/2025-26
South Western Railway - SWR | SWRRLY | SWRRLY

ಕೇಂದ್ರೀಯ ವಿದ್ಯಾಲಯ
ರಾಷ್ಟ್ರೀಯ ವೈಮಾನಿಕ ಪ್ರಯೋಗಶಾಲೆ, ಪರಿಸರ
ಬೆಂಗಳೂರು-560 017.
(An Autonomous Body under ministry of Education, Govt. of India)
Tel: 080-25211610 Website: https://nal.kvs.ac.in E-mail: kvnal05@gmail.com

Ref.: F.13049/k.v. (n.a.l.)/2025-26/ Date : 09/04/2025

2025-2026ರ ಅವಧಿಗೆ ಅಗತ್ಯ ಆಧಾರಿತ ಗುತ್ತಿಗೆ ಶಿಕ್ಷಕರ ಸಮಿತಿಯನ್ನು ಸಿದ್ಧಪಡಿಸಲು ಕೆವಿಎನ್‌ಎಎಲ್ ಬೆಂಗಳೂರಿನಲ್ಲಿ ವಾಕ್-ಇನ್ ಸಂದರ್ಶನವನ್ನು ನಡೆಸಲಾಗುವುದು. ವಿವರಗಳಿಗಾಗಿ ವಿದ್ಯಾಲಯ ವೆಬ್‌ಸೈಟ್ https://nal.kvs.ac.in ಗೆ ಭೇಟಿ ನೀಡಿ.

ಸಹಿ/- ಪ್ರಾಂಶುಪಾಲರು

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: HE-TRD-2024-25-OT-45
ದಿನಾಂಕ: 04.04.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ ಡಿಎಸ್‌ಡಿಸಿ ರೈಲುಗಳನ್ನು ಚಾಲನೆ ಮಾಡುವ ಸಲುವಾಗಿ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು.	ರೂ. 50,39,475/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.04.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ/ ಹುಬ್ಬಳ್ಳಿ
PUB/22/AAMO/PRB/SWR/2025-26
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: HE-TRD-2024-25-OT-44
ದಿನಾಂಕ: 04.04.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ಟ್ರಾಕ್ಷನ್ ಉಪ ಸ್ಟೇಷನ್ ನಲ್ಲಿ 110 ಕೆವಿ / 25 ಕೆವಿ ಹೆಚ್ಚುವರಿ ಟ್ರಾಕ್ಷನ್ ಟ್ರಾನ್ಸ್‌ಫಾರ್ಮರ್‌ಗಳ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭ.	ರೂ. 1,37,10,110.44

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.05.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ/ ಹುಬ್ಬಳ್ಳಿ
PUB/21/AAMO/PRB/SWR/2025-26
South Western Railway - SWR | SWRRLY | SWRRLY

PUBLIC NOTICE

Our client is intending to purchase Schedule Property from its owner **Mr. M.. Prabhakar @ Prabhakaran. M.** S/o Mr. Balakrishna.

This Notice is hereby given for the information of General Public that any person/s, or Banks or Financial Institutions, etc., is having any right, title, interest, claim, or demand on the said property by way of sale, agreement of sale, exchange, gift, mortgage, charge, trust, inheritance, possession, lease, tenancy, easements, attachments, family settlements, Will / bequest, succession rights, development rights, power of attorney, partnership or otherwise whatsoever in nature is hereby required to intimate in writing along with documentary evidence to the office address as mentioned hereunder **within 15 days** from the date this publication failing which, no claim/objections/disputes will be entertained in future and said sale will be completed.

SCHEDULE

All that piece and parcel of the immovable property bearing Site No.233, PID No.1754588835 situated at BTM 6th stage, 1st Phase, Hulimavu, Bangalore South Taluk, presently within BBMP Limits. Measuring East to West 80 feet and North to South 50 feet, totally measuring 4000 Sft. and bounded on

East by : 80 feet Road,
West by : Site No. 227, & 228, Road,
North by : Site No. 234, and
South by : Site No. 232.

B.H. SHAMANNA & A.S. GIRISH,
Advocates
No. 14/3, 4TH Floor Annex, (Opp. YAVANIKA), Sri Aravinda Bhavan, Nrupatunga Road, Bangalore-560001.

‘ಜೈಲ್ ಭರೋ’ ಚಳವಳಿ ನಡೆಸುವುದಾಗಿ ರೈತ ಹಾಗೂ ನಿವೇಶನದಾರರ ಸಂಘ ಎಚ್ಚರಿಕೆ

ಪಿಆರ್‌ಆರ್: ಸೂಕ್ತ ಪರಿಹಾರಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದ ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ (ಬೆಂಗಳೂರು ಬ್ಯುಸಿನೆಸ್ ಕಾರಿಡಾರ್) ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನುಗಳಿಗೆ ಸೂಕ್ತ ಪರಿಹಾರ ನೀಡಬೇಕು. ಇಲ್ಲವಾದರೆ ಜೈಲ್ ಭರೋ ಚಳವಳಿ ನಡೆಸಲಾಗುವುದು ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘ ಎಚ್ಚರಿಕೆ ನೀಡಿದೆ.

ಪಿಆರ್‌ಆರ್ ಯೋಜನೆಗೆ 2005ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ, 2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿತ್ತು. 2013ರ ಹೊಸ ಭೂ ಸ್ವಾಧೀನ ಕಾಯ್ದೆಯಂತೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸುವಂತೆ ಸರ್ಕಾರ ಹಾಗೂ ಬಿಡಿಎಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಈ ಬಗ್ಗೆ ಹಲವು ಬಾರಿ ಪ್ರತಿಭಟನೆ ನಡೆಸಿ, ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಮಾವಳಿಪುರ ಶ್ರೀನಿವಾಸ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಮೀನಿನ ಮಾಲೀಕರಿಗೆ ಭೂ ಸ್ವಾಧೀನ ಮತ್ತು ಪರಿಹಾರ ಕಾಯ್ದೆ 2013ರಂತೆ ಪರಿಹಾರ ನೀಡಲಾಗುವುದು ಎಂದು 2024ರ ಸೆಪ್ಟೆಂಬರ್ 12ರಂದು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿತ್ತು. ಒಂಬತ್ತು ದಿನದ ಬಳಿಕ, ಸೆಪ್ಟೆಂಬರ್ 21ರಂದು ಈ ಆದೇಶ ರದ್ದುಗೊಳಿಸಿ, ಭೂ ಸ್ವಾಧೀನ ಕಾಯ್ದೆ 1894ರ ಅನ್ವಯ ಪರಿಹಾರ ನೀಡುವಂತೆ ಆದೇಶಿಸಲಾಗಿತ್ತು ಎಂದು ವಿವರಿಸಿದರು.

ಇಲಾಖೆಯ ಈ ಕ್ರಮ, ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿದೆ. ರೈತ ಕುಟುಂಬಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಕಾಣದೆ ವಂಚಿತವಾಗಿವೆ. ಬಂಡವಾಳಶಾಹಿಗಳ ಒತ್ತಡಕ್ಕೆ ಮಣಿದು ಭೂ ಮಾಲೀಕರಿಗೆ ನೋಟಿಸ್ ನೀಡಲಾಗುತ್ತಿದೆ. ಬಲವಂತವಾಗಿ ಸಂಧಾನ ಪತ್ರಕ್ಕೆ ರೈತರಿಂದ ಸಹಿ ಮಾಡಿಸಿಕೊಳ್ಳಲು ಅಧಿಕಾರಿಗಳು ಆರಂಭಿಸಿದ್ದಾರೆ ಎಂದು ಆರೋಪಿಸಿದರು.

2013ರ ಕಾಯ್ದೆಯಂತೆ ಪರಿಹಾರ ಹಾಗೂ ಪುನರ್ವಸತಿ ಅಥವಾ ಈಗಿನ ಪ್ರಸ್ತುತ ಮಾರುಕಟ್ಟೆ ಬೆಂಬಲ ಬೆಲೆಗೆ ಅನುಗುಣವಾಗಿ ಸೂಕ್ತ ಪರಿಹಾರ ನೀಡುವಂತೆ ತೀರ್ಮಾನ ತೆಗೆದು-ಕೊಳ್ಳಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಇಲ್ಲವಾದರೆ ಯೋಜನೆಗೆ ಒಳಪಡುವ ಜಮೀನಿನ ರೈತರು, ದಲಿತ ಕುಟುಂಬಗಳೊಂದಿಗೆ ಜೈಲ್ ಭರೋ ಚಳವಳಿ ಹಮ್ಮಿಕೊಂಡು ಯೋಜನೆ ರದ್ದತಿಗೆ ಒತ್ತಾಯಿಸಲಾಗುವುದು ಎಂದು ಎಚ್ಚರಿಸಿದರು.

ಮೂಲಸೌಕರ್ಯ ವಿಳಂಬ: ಪರಿಹಾರಕ್ಕೆ ಆಗ್ರಹ

ಬೆಂಗಳೂರು: ಮೂಲಸೌಕರ್ಯಗಳನ್ನು ಒದಗಿಸಲು ವಿಫಲವಾಗಿರುವ ಕಾರಣ ಪರಿಹಾರ ನೀಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ)ಕ್ಕೆ ನಿರ್ದೇಶನ ನೀಡುವಂತೆ ನಾಡಪ್ರಭು ಕೆಂಪೇಗೌಡ ಬಡಾವಣೆಯ (ಎನ್‌ಕೆಪಿಎಲ್) ನಿವಾಸಿಗಳು ಕೆ–ರೇರಾವನ್ನು ಒತ್ತಾಯಿಸಿದ್ದಾರೆ.

ಮೂಲ ಸೌಲಭ್ಯಗಳನ್ನು ಒದಗಿಸಿರುವ ಕುರಿತು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ) ವಿಚಾರಣೆ ನಡೆಸಿತು. ಮನೆ ನಿರ್ಮಿಸಲು ಬಡಾವಣೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದ ನಿವೇಶನ ಮಾಲೀಕರು, ಮೂಲಸೌಕರ್ಯ ವಿಳಂಬಕ್ಕೆ ಪರಿಹಾರವನ್ನು ನೀಡುವಂತೆ ಮನವಿ ಮಾಡಿದರು.

ಡಾ.ಶಿವರಾಮ ಕಾರಂತ ಬಡಾವಣೆಯ ಅಭಿವೃದ್ಧಿಯ ಮೇಲುಸ್ತುವಾರಿಗೆ ಸುಪ್ರೀಂ ಕೋರ್ಟ್ ಸಮಿತಿ ರಚಿಸಿದ್ದನ್ನು ಉಲ್ಲೇಖಿಸಿದ ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ, ಅದೇ ಮಾದರಿಯಲ್ಲಿ ಸಮಿತಿ ರಚಿಸುವಂತೆ ಮನವಿ ಮಾಡಿತು.

ಭೂಸ್ವಾಧೀನ ಮತ್ತು ಇತರ ಆಡಳಿತಾತ್ಮಕ ಪ್ರಕ್ರಿಯೆಗಳಿಂದಾಗಿ ಮೂಲಸೌಕರ್ಯ ಒದಗಿಸಲು ವಿಳಂಬವಾಗುತ್ತಿರುವುದು ಕಾರಣ ಎಂಬುದನ್ನು ಬಿಡಿಎ ಪರ ವಕೀಲರು ತಿಳಿಸಿದರು.

‘ಮೂಲಸೌಕರ್ಯ ಒದಗಿಸುವ ಕಾಮಗಾರಿಗಳು ಪೂರ್ಣಗೊಳ್ಳುವವರೆಗೆ ಪ್ರತಿ ತಿಂಗಳ ವಿಳಂಬಕ್ಕೆ ಪ್ರತಿ ಚದರ ಮೀಟರ್‌ಗೆ ₹ 100 ದರದಲ್ಲಿ ಮಧ್ಯಂತರ ಪರಿಹಾರ ನೀಡಬೇಕು’ ಎಂದು ನಿವೇಶನ ಮಾಲೀಕರು ಪಟ್ಟುಹಿಡಿದರು.

ಕೆ-ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಮಾತನಾಡಿ, ‘ಎಲ್ಲರಿಗೂ ಯೋಗ್ಯವಾಗುವಂತಹ ಪರಿಹಾರ ಕಂಡುಕೊಳ್ಳಲು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗು-ವುದು. ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮೊದಲು ಕಾನೂನು ಅಂಶವನ್ನು ಪರಿಶೀಲಿಸಲಾಗುವುದು’ ಎಂದು ಭರವಸೆ ನೀಡಿದರು.

ಪ್ರಕರಣದ ವಿಚಾರಣೆಯನ್ನು ಮೇ ತಿಂಗಳಿಗೆ ಮುಂದೂಡಲಾಯಿತು.

ಬಿಐಸಿಯಲ್ಲಿ ಇಂದು ಕಂಸಾಳೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಐಸಿ ಜಾನಪದ’ ಸರಣಿಯ ಅಂಗವಾಗಿ ದೊಮ್ಮಲೂರು ಎರಡನೇ ಹಂತದಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ(ಬಿಐಸಿ)ದಲ್ಲಿ ಶುಕ್ರವಾರ ಸಂಜೆ ಕಂಸಾಳೆ ನೃತ್ಯ ಪ್ರದರ್ಶನ ಆಯೋಜಿಸಲಾಗಿದೆ.

ತ್ವರಿತ ಆರ್ಟ್ಸ್ ಕಲೆಕ್ಟಿವ್ ಇಂಡಿಯಾ ಮತ್ತು ಬಿಐಸಿ ಸಹಯೋಗದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶುಕ್ರವಾರ ಸಂಜೆ 6.30ರಿಂದ 8ರವರೆಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಕಂಸಾಳೆ ನೃತ್ಯದ ಸೊಬಗನ್ನು ಆಸ್ವಾದಿಸುವ ಅವಕಾಶ ಸಿಗಲಿದೆ.

ಈ ಕಾರ್ಯಕ್ರಮದಲ್ಲಿ ಕಂಸಾಳೆ ಕುರಿತ ಚರ್ಚೆ, ಸಂವಾದ, ಕಂಸಾಳೆ ನೃತ್ಯದ ವಿವಿಧ ಭಂಗಿಗಳನ್ನು ಅರಿಯುವುದು, ಕಂಸಾಳೆ ವಾದ್ಯ ಸಾಧನಗಳ ಕುರಿತು ತಿಳಿಯಲು ಅವಕಾಶ ಇರುತ್ತದೆ. ಕಂಸಾಳೆ ನೃತ್ಯ ಪ್ರದರ್ಶನದ ಜೊತೆಯಲ್ಲೇ ನೃತ್ಯ ಪ್ರಕಾರಕ್ಕೆ ಸಂಬಂಧಿಸಿದ ಇತಿಹಾಸವನ್ನೂ ತಿಳಿಸಲಾಗುತ್ತದೆ. ಕಂಸಾಳೆಯು ಮಹದೇಶ್ವರನ ಆರಾಧನೆಯ ಭಾಗವಾಗಿ ಪ್ರದರ್ಶಿಸುವ ಕಲೆ. ಇದು ಹೆಜ್ಜೆ ಹಾಕುವುದು, ಆಕರ್ಷಕ ಘೋಷಣೆಗಳನ್ನೂ ಒಳಗೊಂಡಿದೆ. ಕಂಸಾಳೆಯ ಚರಿತ್ರೆಯನ್ನು ಅರಿಯುತ್ತಲೇ ಈ ಕಲೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸವನ್ನು ಈ ಕಾರ್ಯಕ್ರಮದ ಮೂಲಕ ಮಾಡಲಾಗುತ್ತಿದೆ ಎಂದು ಬಿಐಸಿ ಪ್ರಕಟಣೆ ತಿಳಿಸಿದೆ.

ಇಂದಿನಿಂದ ಬಿಜೆಪಿ ‘ಭೀಮ ಹೆಜ್ಜೆ’ ರ‍್ಯಾಲಿ

ಬೆಂಗಳೂರು: ಶುಕ್ರವಾರದಿಂದ ಆರಂಭವಾಗುವ ‘ಭೀಮ ಹೆಜ್ಜೆ’ ರ‍್ಯಾಲಿಯಲ್ಲಿ ಸುಮಾರು ಒಂದರಿಂದ ಒಂದೂವರೆ ಸಾವಿರ ದ್ವಿಚಕ್ರ ವಾಹನಗಳು ಭಾಗವಹಿಸಲಿವೆ ಎಂದು ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್ ಅವರು ಹೇಳಿದ್ದಾರೆ.

ವಿಧಾನಸೌಧದ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಬಿಐಸಿ ಎಕ್ಸಿಬಿಷನ್ ಸೆಂಟರ್ ಮುಂದಿನ ಮೈದಾನದಿಂದ ರ‍್ಯಾಲಿ ಹೊರಡುತ್ತದೆ. ಬೆಳಗಾವಿ ಜಿಲ್ಲೆ ನಿಪ್ಪಾಣಿಗೆ ರ‍್ಯಾಲಿ ತಲುಪಲಿದೆ. ನಿಪ್ಪಾಣಿಗೆ ತೆರಳುವ ಸಂದರ್ಭದಲ್ಲಿ ಡಾ.ಅಂಬೇಡರ್ ಅವರ ಪುತ್ಥಳಿ ಇರುವ ತಾಲ್ಲೂಕು ಕೇಂದ್ರ ಮತ್ತು ಎಲ್ಲ ಗ್ರಾಮಗಳಲ್ಲಿ ಅಂಬೇಡ್ಕರ್ ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡಲಿದ್ದೇವೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಭೀಮ ಹೆಜ್ಜೆ’ ರ‍್ಯಾಲಿಗೆ ಸಿದ್ಧವಾಗಿರುವ ರಥ

ಮಲ್ಲೇಶ್ವರ: ‘ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್’ ಮಳಿಗೆಗೆ ಚಾಲನೆ

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ 7ನೇ ಮಳಿಗೆಗೆ ನಟ ಸುದೀಪ್ ಚಾಲನೆ ನೀಡಿದರು. ವಿನಯ್ ಗುರೂಜಿ, ದಿನೇಶ್ ಗುಂಡೂರಾವ್, ಟಿ.ಎ.ಶರವಣ ಇದ್ದರು

ಬೆಂಗಳೂರು: ಮಲ್ಲೇಶ್ವರದ 11ನೇ ಅಡ್ಡರಸ್ತೆಯಲ್ಲಿ ನೂತನವಾಗಿ ಆರಂಭಿಸಿ ರುವ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ 7ನೇ ಮಳಿಗೆಯನ್ನು ಚಿತ್ರನಟ ಸುದೀಪ್ ಅವರು ಗುರುವಾರ ಉದ್ಘಾಟಿಸಿದರು.

ವಿಧಾನ ಪರಿಷತ್ ಸದಸ್ಯರೂ ಆದ ಸಾಯಿ ಗೋಲ್ಡ್ ಪ್ಯಾಲೇಸ್ ಮುಖ್ಯಸ್ಥ ಟಿ.ಎ. ಶರವಣ ಮಾತನಾಡಿ, ‘ಚಿನ್ನ ಮನೆಯಲ್ಲಿದ್ದರೆ ಸಂಕಷ್ಟದ ಕಾಲದಲ್ಲಿ ಕೈಹಿಡಿಯುವ ಅಮೂಲ್ಯ ವಸ್ತು. ಶುಭ ಸಮಾರಂಭಗಳಿಗೆ ಚಿನ್ನಾಭರಣ ಧರಿಸಲು ವಿಶಿಷ್ಟ, ವಿನ್ಯಾಸದ ಅಭರಣ, ವಜ್ರದ ಆಭರಣಗಳು ಲಭ್ಯವಿವೆ. ದುಬೈ ದರದಲ್ಲಿ ಚಿನ್ನ ಮಾರಾಟ ಸೇರಿ ಆಕರ್ಷಕ ಕೊಡುಗೆಗಳನ್ನು ನೀಡಲಾಗುತ್ತಿದೆ’ ಎಂದರು.

ವಿನಯ್ ಗುರೂಜಿ ಅವರ ಸಾನ್ನಿಧ್ಯ ವಹಿಸಿದ್ದರು. ಸಚಿವ ದಿನೇಶ್ ಗುಂಡೂರಾವ್, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ್, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್, ಎಡಿಜಿಪಿ ವಿ.ರಾಜ್ ಕುಮಾರ್, ಆರ್.ಪಿ ರವಿಶಂಕರ್, ಸತ್ಯನಾರಾಯಣ, ನಟಿ ಪ್ರೇಮಾ, ಗಾಯಕ ಚಂದನ್ ಶೆಟ್ಟಿ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್‌ಗೆ ₹19.49 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ 2024–25ನೇ ಸಾಲಿನಲ್ಲಿ ₹19.49 ಕೋಟಿ ಲಾಭ ಗಳಿಸಿದ್ದು, ನಿವ್ವಳ ಅನುತ್ಪಾದಕ ಸಾಲ(ಎನ್‌ಪಿಎ) ಶೂನ್ಯವಾಗಿದೆ.

ನಗರದಲ್ಲಿ ಐದು ಶಾಖೆಗಳನ್ನು ಹೊಂದಿರುವ ಬ್ಯಾಂಕ್‌ನಲ್ಲಿ ಒಟ್ಟು 13,961 ಷೇರುದಾರರಿದ್ದಾರೆ. ₹36.68 ಕೋಟಿಗಿಂತ ಹೆಚ್ಚು ಷೇರು ಬಂಡವಾಳವಿದೆ. ಷೇರುದಾರರಿಗೆ ಕಡಿಮೆ ಬಡ್ಡಿ ದರದಲ್ಲಿ ವಿವಿಧ ಸಾಲ ಸೌಲಭ್ಯಗಳನ್ನು ನೀಡುತ್ತಿದ್ದು, ₹726.20 ಕೋಟಿಗಳಷ್ಟು ಸಾಲ ಮತ್ತು ಮುಂಗಡಗಳನ್ನು ನೀಡಿದೆ.

ಸುಮಾರು 40 ಸಾವಿರ ಗ್ರಾಹಕರಿದ್ದು, ಎಲ್ಲ ಗ್ರಾಹಕರಿಗೂ ಡಿಜಿಟಲ್ ಬ್ಯಾಂಕಿಂಗ್ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಗ್ರಾಹಕರಿಗೆ ಠೇವಣಿಗಳ ಮೇಲೆ ಆಕರ್ಷಕ ಬಡ್ಡಿ ದರ ನೀಡಲಾಗುತ್ತಿದೆ. ಬ್ಯಾಂಕಿನಲ್ಲಿ ₹213.94 ಕೋಟಿಗೂ ಹೆಚ್ಚು ಆಪದ್ಧನ ಮತ್ತು ಇತರೆ ನಿಧಿಗಳಿವೆ. ಬ್ಯಾಂಕ್, ಷೇರು ಸಂಗ್ರಹ, ಸ್ವಂತ ನಿಧಿ ಕ್ರೋಢೀಕರಣ, ಠೇವಣಿ ಸಂಗ್ರಹಣೆ, ಸಾಲ ನೀಡಿಕೆ ಮತ್ತು ಲಾಭ ಗಳಿಕೆಯಲ್ಲಿ ರಾಜ್ಯದ ಎಲ್ಲ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಮುಂದಿದೆ ಎಂದು ಬ್ಯಾಂಕಿನ ಅಧ್ಯಕ್ಷ ಎಚ್.ಸಿ. ಗೋಪಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀಳದೆ ಇದ್ದರೆ ಬದುಕಿನಲ್ಲಿ ಮಜವಿಲ್ಲ

ಅಜಯ್ ರಾವ್ ನಟನೆಯ 'ಯುದ್ಧಕಾಂಡ' ಚಿತ್ರ ಏ.18 ರಂದು ತೆರೆ ಕಾಣುತ್ತಿದೆ. ತಮ್ಮದೇ ಬ್ಯಾನರ್‌ನಲ್ಲಿ ಈ ಚಿತ್ರವನ್ನು ನಿರ್ಮಿಸಿರುವ ಅವರು, ಚಿತ್ರ ಹಾಗೂ ಸಿನಿಪಯಣದ ಕುರಿತು ಮಾತನಾಡಿದ್ದಾರೆ.

ಅಜಯ್ ರಾವ್

ವಿನಾಯಕ ಕೆ.ಎಸ್

- **ಚಿತ್ರದಲ್ಲಿ ನಿಮ್ಮ ಪಾತ್ರದ ಬಗ್ಗೆ ಹೇಳಿ...**

ಪಾತ್ರದ ಹೆಸರು ಭರತ್. ವಕೀಲನ ಪಾತ್ರ. ಭರತಖಂಡವನ್ನು ಪ್ರತಿನಿಧಿಸುವವ. ಭರತ ಎಂದರೆ ಪುರುಷ, ಹೆಣ್ಣಿನ ರಕ್ಷಣೆಗಾಗಿ, ಧರ್ಮಕ್ಕಾಗಿ ಹೋರಾಡುವವನು. ಇಲ್ಲಿ ಹೆಣ್ಣು ಎಂದರೆ ಪ್ರಕೃತಿ ಎಂಬ ಅರ್ಥವೂ ಇದೆ. ನ್ಯಾಯಾಲಯದಲ್ಲಿ ನ್ಯಾಯ, ನೀತಿ, ಧರ್ಮಕ್ಕಾಗಿ ಹೋರಾಟ ಮಾಡುತ್ತೇನೆ.

- **ಹೆಣ್ಣಿನ ಶೋಷಣೆಯ ವಿರುದ್ಧ ಯುದ್ಧವೇ?**

ಏಳು ವರ್ಷದ ಪುಟಾಣಿ ಮೇಲೆ ಅತ್ಯಾಚಾರವಾಗುತ್ತದೆ. ನ್ಯಾಯಾಲಯದ ಮೆಟ್ಟಿಲು ಹತ್ತಿದ ಈ ಪ್ರಕರಣದಲ್ಲಿ ಎಷ್ಟು ವರ್ಷವಾದರೂ ನ್ಯಾಯ ಸಿಗುವುದಿಲ್ಲ. ಮಗುವಿನ ತಾಯಿ ಒಂಟಿಯಾಗಿ ನ್ಯಾಯಕ್ಕಾಗಿ ಹೋರಾಡುತ್ತಾಳೆ. ಕೊನೆಗೆ ನ್ಯಾಯ ಸಿಗದಿದ್ದಾಗ ಆಕೆಯೇ ಕಾನೂನನ್ನು ಕೈಗೆ ತೆಗೆದುಕೊಳ್ಳುತ್ತಾಳೆ. ಇಲ್ಲಿ ತಪ್ಪು ಕಾನೂನು ಕೈಗೆತ್ತಿಕೊಂಡ ತಾಯಿಯದ್ದಾ ಅಥವಾ ನ್ಯಾಯವನ್ನು ನೀಡಲು ವಿಫಲವಾದ ವ್ಯವಸ್ಥೆಯದ್ದಾ ಎಂಬುದೇ ಚಿತ್ರದ ಕಥೆ. ಎಷ್ಟೋ ಪ್ರಕರಣಗಳಿಗೆ ಎಷ್ಟು ವರ್ಷವಾದರೂ ಮುಕ್ತಿ ಸಿಗುವುದಿಲ್ಲ. ನಮ್ಮ ಜನಸಂಖ್ಯೆಗೆ ಅನುಗುಣವಾಗಿ ನ್ಯಾಯಾಲಯ, ನ್ಯಾಯಾಧೀಶರು ಇಲ್ಲ. ಹೀಗಾಗಿ ತೀರ್ಪು ನೀಡುವಲ್ಲಿ ವಿಳಂಬವಾಗುತ್ತಿದೆ. ಆದರೆ ಹಸಿವಿರುವಾಗಲೇ ಊಟ ಸಿಗಬೇಕು. ಆ ನಿಟ್ಟಿನಲ್ಲಿ ನ್ಯಾಯಾಲಯದ ವ್ಯವಸ್ಥೆಯತ್ತ ಬೆಳಕು ಚೆಲ್ಲುವ ಚಿತ್ರ.

- **ಇಂಥ ಗಂಭೀರ ವಿಷಯದ ಸಿನಿಮಾವನ್ನು ಜನ ಚಿತ್ರಮಂದಿರದಲ್ಲಿ ನೋಡುತ್ತಾರೆಂಬ ವಿಶ್ವಾಸವಿದೆಯಾ?**

ವಿಷಯ ಗಂಭೀರ. ಆದರೆ ಚಿತ್ರದಲ್ಲಿ ಮನರಂಜನೆ ಅಂಶಗಳು ಇವೆ. ಇಂಥ ಸಿನಿಮಾಗಳನ್ನು ಒಟಿಟಿಯಲ್ಲಿ ನೋಡೋಣ ಎಂಬ ಪರಿಸ್ಥಿತಿ ಬಂದಿದೆ. ಆದರೆ ಜನ ಇದನ್ನು ಚಿತ್ರಮಂದಿರದಲ್ಲಿ ನೋಡಿದರೆ ಮಾತ್ರ ನಿರ್ಮಾಪಕರು ಬದುಕಲು ಸಾಧ್ಯ. ಆಗ ಇನ್ನಷ್ಟು ಉತ್ತಮ ಕಂಟೆಂಟ್ ಸಿನಿಮಾಗಳು ಬರುತ್ತವೆ. ಬೇರೆ ಭಾಷೆಯ ಗಂಭೀರವಾದ ಕಥಾವಸ್ತುವಿನ ಸಿನಿಮಾಗಳನ್ನು ಪ್ರೋತ್ಸಾಹಿಸುವಂತೆ ಕನ್ನಡದ ಈ ರೀತಿಯ ಸಿನಿಮಾಗಳನ್ನು ಪ್ರೋತ್ಸಾಹಿಸಬೇಕು. ಜನರಲ್ಲಿ ನಾವು ಈ ಸಿನಿಮಾ ನೋಡಿ ಎಂದು ಮನವಿ ಮಾಡಿಕೊಳ್ಳಬಹುದಷ್ಟೆ. ಅದಕ್ಕಿಂತ ಹೆಚ್ಚು ಏನೂ ಹೇಳಲು ಸಾಧ್ಯವಿಲ್ಲ. ಸಿನಿಮಾ ಚೆನ್ನಾಗಿದೆ. ಹೀಗಾಗಿ ಪ್ರೇಕ್ಷಕರು ಈ ಚಿತ್ರಕ್ಕೆ ನ್ಯಾಯ ನೀಡುತ್ತಾರೆ ಎಂಬ ವಿಶ್ವಾಸವಿದೆ.

- **ಸಾಕಷ್ಟು ಏಳುಬೀಳಿನ ಕುರಿತು ಮಾತನಾಡಿದ್ದೀರಿ. ಚಿತ್ರರಂಗದಲ್ಲಿನ ಈತನಕದ ಪಯಣ ಹೇಗಿತ್ತು?**

ಬಹಳ ಖುಷಿಯಿದೆ. ಸಿನಿಮಾ ನೋಡುವಾಗ ಮುಂದೇನಾಗುತ್ತದೆ ಎಂಬ ಕುತೂಹಲ ಇರುತ್ತದೆ. ಇಲ್ಲದಿದ್ದರೆ ಸಿನಿಮಾ ಸಪ್ಪೆ ಎನ್ನಿಸುತ್ತದೆ. ಅದರಂತೆ ಬದುಕಿನಲ್ಲಿಯೂ ಏಳುಬೀಳುಗಳಿರಬೇಕು. ಬೀಳದೆ ಇದ್ದರೆ ಬದುಕಿನಲ್ಲಿ ಮಜವೇ ಇರುವುದಿಲ್ಲ. ಆರೋಗ್ಯಯುತವಾದ ರಿಸ್ಕ್ ತೆಗೆದುಕೊಳ್ಳಬೇಕು. ಶ್ರಮಿಸುವ ಶಕ್ತಿ, ಸಾಮರ್ಥ್ಯವನ್ನು ದೇವರು ನೀಡಿದ್ದಾನೆ. ಕೆಲಸ ಇಲ್ಲದೇ ಕೂರುವುದು ಬದುಕಿನ ವೈಫಲ್ಯ. ಸದಾ ಕೆಲಸದಲ್ಲಿ ಮಗ್ನರಾಗಿರುವುದು, ಸವಾಲುಗಳನ್ನು ಸ್ವೀಕರಿಸುವುದು ಒಂದು ರೀತಿಯ ಯಶಸ್ಸು.

- **ನಿಮ್ಮ ಮುಂದಿನ ಸಿನಿಮಾಗಳ ಬಗ್ಗೆ...**

ಮಂಜು ಸ್ವರಾಜ್ ನಿರ್ದೇಶನದ ರೆಟ್ರೊ ಶೈಲಿಯ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. 'ಫ್ಯಾಮಿಲಿ ಮ್ಯಾನ್' ಚಿತ್ರ ಅರ್ಧ ಮುಗಿದಿದೆ. ಮತ್ತೊಂದು ಸಿನಿಮಾ ಪ್ರಾರಂಭದ ಹಂತದಲ್ಲಿದೆ. 'ಯುದ್ಧಕಾಂಡ'ವನ್ನು ಜನ ಕೈಹಿಡಿದರೆ ನಮ್ಮ ನಿರ್ಮಾಣ ಸಂಸ್ಥೆಯಿಂದ ಇನ್ನಷ್ಟು ಸಿನಿಮಾ ಮಾಡುವ ಆಲೋಚನೆಯಿದೆ.

- **ನಿರ್ದೇಶಕ ಪವನ್ ಭಟ್, ಈ ಹಿಂದೆ ಅಚ್ಚುಕಟ್ಟಾದ ಬಜೆಟ್‌ನಲ್ಲಿ 'ಕಟಿಂಗ್ ಶಾಪ್' ಎಂಬ ಉತ್ತಮ ಸಿನಿಮಾ ಮಾಡಿದ್ದರು. ಅವರು ಓರ್ವ ನಿರ್ಮಾಪಕನನ್ನು ಸಾಲದ ಸುಳಿಯಲ್ಲಿ ಸಿಲುಕಿಸುವಷ್ಟು ದೊಡ್ಡ ಬಜೆಟ್‌ನಲ್ಲಿ ಸಿನಿಮಾ ಮಾಡಿದ್ದಾರಾ?**

ನಾನು ಶೋವೊಂದರಲ್ಲಿ ಮಾತನಾಡಿದ್ದನ್ನು ಸಾಮಾಜಿಕ ಜಾಲತಾಣಗಳಲ್ಲಿ ಅವರ ಕಲ್ಪನೆಗೆ ತಕ್ಕಂತೆ ಹಾಕುತ್ತಿದ್ದಾರೆ. ನಾನು ಎಲ್ಲಿಯೂ ಈ ಸಿನಿಮಾಗಾಗಿ ಸಾಲ ಮಾಡಿದ್ದೇನೆ ಎಂದು ಹೇಳಿಲ್ಲ. ನನಗೆ ಇಷ್ಟು ಸಾಲ ಸಿಗುತ್ತದೆ ಅಂದರೆ ಅಷ್ಟು ಆದಾಯ ತೆರಿಗೆ ಕಟ್ಟುತ್ತೇನೆ. ಅದರ ಬಗ್ಗೆ ಖುಷಿ ಇದೆ ಎಂದು ಹೇಳಿಕೊಂಡಿದ್ದೆ. ಮನೆ ಕಟ್ಟಿರುವೆ, ಬೇರೆ ಬೇರೆ ಕಾರಣಕ್ಕೆ ಸಾಲವಿದೆ. ಆ ಬಗ್ಗೆ ಬೇಸರವಿಲ್ಲ. ತೀರಿಸುವ ಶಕ್ತಿ ಭಗವಂತ ಕೊಟ್ಟಿದ್ದಾನೆ. ಖುಷಿಯ ಸಂಗತಿಗಳಿಗಾಗಿ ಸಾಲ ಮಾಡಿರುವೆ. ಕಾರು ಮಾರಿದ್ದಕ್ಕೆ ನನ್ನ ಮಗಳು ಕಣ್ಣೀರು ಹಾಕುತ್ತಿರುವ ವಿಡಿಯೊ ಮೊನ್ನೆಯಿಂದ ಹರಿದಾಡುತ್ತಿದೆ. ಅದು ಎರಡು ವರ್ಷಗಳ ಹಳೆಯ ವಿಡಿಯೊ. ಅದನ್ನು ಯಾರು ವಿಡಿಯೊ ಮಾಡಿದ್ದರು, ಈಗ ಯಾರು ಪೋಸ್ಟ್ ಮಾಡಿದರು ಎಂದು ಗೊತ್ತಿಲ್ಲ. ಯಾರ ಬಳಿಯೂ ಫೋಟೊ ತೆಗೆಸಿಕೊಳ್ಳಲು, ವಿಡಿಯೊಗೆ ಅವಕಾಶ ನೀಡಲು ಭಯವಾಗುತ್ತದೆ. ಯಾರು ಯಾವ ವಿಡಿಯೊ ಮಾಡುತ್ತಾರೆ ಗೊತ್ತಾಗುವುದಿಲ್ಲ. ಅವಕಾಶ ನೀಡದಿದ್ದರೆ ಇವನಿಗೆ ಎಷ್ಟು ದುರಹಂಕಾರ ಎನ್ನುತ್ತಾರೆ.

ಪ್ರೀತಿಯ ಹುಚ್ಚ ಶೀಘ್ರದಲ್ಲಿ ತೆರೆಗೆ

ಕುಂಕುಮ್

ತೊಂಬತ್ತರ ದಶಕದಲ್ಲಿ ನಡೆದ ನೈಜ ಘಟನೆಯನ್ನೇ ಕಥೆಯಾಗಿ ಹೊಂದಿರುವ 'ಪ್ರೀತಿಯ ಹುಚ್ಚ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿ. ಕುಮಾರ್ ಚಿತ್ರವನ್ನು ನಿರ್ದೇಶಿಸಿ, ನಿರ್ಮಿಸಿದ್ದಾರೆ.

'ಮುಂಬೈನಲ್ಲಿ ಹುಟ್ಟಿದ ಕಥೆಯಿದು. ಕೊರೊನಾಗಿಂತ ಮುಂಚೆ ಈ ಕಥೆಯನ್ನು ಬಹಳಷ್ಟು ನಿರ್ಮಾಪಕರಿಗೆ ಹೇಳಿದೆ. ಅರಸೀಕೆರೆ–ಶ್ರವಣಬೆಳಗೊಳ ನಡುವಿನ ಹಳ್ಳಿಯಲ್ಲಿ ನಡೆದ ನೈಜ ಘಟನೆಯೇ ಸಿನಿಮಾವಾಗಿದೆ. ದಲಿತ ಯುವತಿಯೊಬ್ಬಳನ್ನು ಮದುವೆಯಾದ ಬಳಿಕ ಆಕೆಯ ಪತಿಯ ಮನೆಯಲ್ಲಿ ಹೇಗೆ ನಡೆಸಿಕೊಂಡರು, ಆಕೆ ಹೇಗೆ ಮುಂಬೈನ ಕಾಮಾಟಿಪುರ ಸೇರುವಂತೆ ಆಯಿತು ಎಂಬ ಕರುಣಾಜನಕ ಕಥೆಯಿದೆ. ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ನಾಯಕ ವಿಜಯ್‌ಗೆ ಮುಂಬೈ ಮೂಲದ ಕುಂಕುಮ್ ಹರಿಹರ ಜೋಡಿಯಾಗಿದ್ದಾರೆ. ಚಿತ್ರದಲ್ಲಿ ಎರಡು ಹಾಡುಗಳಿದ್ದು, ಶಶಿ ರಂಗರಾಜನ್ ಸಂಗೀತವಿದೆ. ಸುನಿಲ್ ಕೆ.ಆರ್.ಎಸ್. ಛಾಯಾಚಿತ್ರಗ್ರಹಣ, ಪ್ರವೀಣ್ ವಿಷ್ಣು ಸಂಕಲನವಿದೆ. ಈ ಚಿತ್ರ ಬೆಂಗಳೂರು, ಮಂಡ್ಯ, ಚಿಕ್ಕಮಗಳೂರು, ಹಾಸನ, ಶ್ರವಣಬೆಳಗೊಳ ಹಾಗೂ ಮುಂಬೈನಲ್ಲಿ ಚಿತ್ರೀಕರಣಗೊಂಡಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಸಿನಿಮಾಗಳಿಗೆ ಆಹ್ವಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ 'ಸಿನಿ ಸಮ್ಮಾನ'ದ ಮೂರನೇ ಆವೃತ್ತಿಗೆ ವೇದಿಕೆ ಸಜ್ಜಾಗುತ್ತಿದೆ.

2023ರಲ್ಲಿ ತನ್ನ ಅಮೃತ ಸಂಭ್ರಮದ ಸಂದರ್ಭದಲ್ಲಿ 'ಪ್ರಜಾವಾಣಿ' ಪ್ರಾರಂಭಿಸಿದ ಈ ಕಾರ್ಯಕ್ರಮ ಕನ್ನಡ ಚಿತ್ರರಂಗದವರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಎರಡು ಆವೃತ್ತಿಗಳನ್ನು ಯಶಸ್ವಿಯಾಗಿ, ಅದ್ದೂರಿಯಾಗಿ ನಡೆಸಲಾಗಿದೆ.

ಇದೀಗ 2024ರಲ್ಲಿ ತೆರೆಕಂಡ ಸಿನಿಮಾಗಳನ್ನು ಮೂರನೇ ಆವೃತ್ತಿಗೆ ಪರಿಗಣಿಸಲಾಗುತ್ತಿದೆ. ಮೇಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಸಿನಿಮಾ ಸಲ್ಲಿಕೆಗೆ ಇಂದು ಸಂಜೆ ತನಕ ಅವಕಾಶವಿರುತ್ತದೆ

ಪುನೀತ್ ಅಭಿಮಾನಿಯ ಕಥೆ

ಪುನೀತ್ ರಾಜ್‌ಕುಮಾರ್ ನಿಧನದ ಬಳಿಕ ಅವರಿಗೆ ಸಂಬಂಧಿತ ಹೆಸರುಗಳನ್ನೇ ಶೀರ್ಷಿಕೆಯಾಗಿಸಿಕೊಂಡು ಹಲವು ಚಿತ್ರಗಳು ಸೆಟ್ಟೇರಿವೆ. ಇದೀಗ ಆ ಸಾಲಿಗೆ ಹೊಸ ಸೇರ್ಪಡೆ 'ಪವರ್ ಸ್ಟಾರ್ ಧರೆಗೆ ದೊಡ್ಡವನು'. ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ನಿರ್ದೇಶಕ ಶಶಾಂಕ್, ನಟ ಸುಚೇಂದ್ರ ಪ್ರಸಾದ್ ಚಿತ್ರದ ಮೊದಲ ದೃಶ್ಯಕ್ಕೆ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು.

ಸುಚೇಂದ್ರ ಪ್ರಸಾದ್

ಸೂರ್ಯ ಈ ಚಿತ್ರದ ನಾಯಕ ಮತ್ತು ನಿರ್ದೇಶಕ. 'ನಾನು ಸುಮಾರು ಹದಿನೈದು ಚಿತ್ರಗಳಲ್ಲಿ ಸಹಾಯಕ ಹಾಗೂ ಸಹ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಇದು ಪೂರ್ಣ ಪ್ರಮಾಣದ ನಿರ್ದೇಶನದಲ್ಲಿ ನನ್ನ ಮೊದಲ ಚಿತ್ರ. ಕಣ್ಣಿಲ್ಲದ ಮಗುವಿಗೆ ದೃಷ್ಟಿ ಬಂದಾಗ, ಆಕೆಯು ತನ್ನ ಒಂದು ಆಸೆ ನೆರವೇರಿಸಿಕೊಳ್ಳಲು ಹೊರಡುವ ಕಥೆ. ಈ ಚಿತ್ರದಲ್ಲಿ ವಿಶೇಷ ತಂತ್ರಜ್ಞಾನದ ಮೂಲಕ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಪರದೆಯ ಮೇಲೆ ಕಾಣಲಿದ್ದಾರೆ' ಎಂದರು ನಿರ್ದೇಶಕರು. ರಿಯಾಲಿಟಿ ಶೋಗಳ ಮೂಲಕ ಜನಪ್ರಿಯವಾಗಿರುವ ಪುಟಾಣಿ ಜ್ಞಾನ ಗುರುರಾಜ್, ಸುಚೇಂದ್ರ ಪ್ರಸಾದ್ ಮುಖ್ಯ ಪಾತ್ರದಲ್ಲಿದ್ದಾರೆ. ಶ್ರೀಧರ್ ಮೂರ್ತಿ ಸಂಗೀತ, ವಿಜಯ್ ಭಾಸ್ಕರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

'ಬಂಡೆ ಸಾಹೇಬ'ನಿಗೆ ಶರಣ್ ಸಾಥ್

ಕೆಲ ವರ್ಷಗಳ ಹಿಂದೆ ಕಲಬುರಗಿಯಲ್ಲಿ ಶೂಟೌಟ್‌ಗೆ ಬಲಿಯಾದ ಪೊಲೀಸ್ ಅಧಿಕಾರಿ ಮಲ್ಲಿಕಾರ್ಜುನ ಬಂಡೆ ಅವರ ಜೀವನಾಧಾರಿತ 'ಬಂಡೆ ಸಾಹೇಬ್' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಗೊಂಡಿದೆ. ನಟ ಶರಣ್ ಚಿತ್ರದ ಟೀಸರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ಈ ಕಥೆಯನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಮೊದಲು ತಂಡಕ್ಕೆ ಅಭಿನಂದನೆ ಸಲ್ಲಿಸಬೇಕು. ಟೀಸರ್ ಉತ್ತಮವಾಗಿದೆ. ನಾಯಕ ನಟ ಸಂತೋಷ್ ರಾಮ್ ಅವರ ನಟನೆ ಕೂಡ ಚೆನ್ನಾಗಿದೆ. ಚಿತ್ರವನ್ನು ತೆರೆಯ ಮೇಲೆ ನೋಡಲು ಕಾತುರನಾಗಿದ್ದೇನೆ' ಎಂದರು ಶರಣ್.

ಕಾವ್ಯ ಭಾರದ್ವಾಜ್

ಚಿನ್ಮಯ್ ರಾಮ್ ಚಿತ್ರದ ನಿರ್ದೇಶಕ. ಗೋಪ್ಪಣ್ಣ ದೊಡ್ಮನಿ ಬಂಡವಾಳ ಹೂಡಿದ್ದಾರೆ. 'ನಿರ್ಮಾಪಕರು ನನ್ನ ಬಳಿ ಈ ಚಿತ್ರದ ಬಗ್ಗೆ ಹೇಳಿದಾಗ ನೈಜಘಟನೆ ಆಧಾರಿತ ಚಿತ್ರವನ್ನು ನಿರ್ದೇಶಿಸುವುದು ಸುಲಭವಲ್ಲ ಎನಿಸಿತು. ನಂತರ ಕಥೆ ಇಷ್ಟವಾಗಿ ನಿರ್ದೇಶನಕ್ಕೆ ಮುಂದಾದೆ. ಇದು ನನ್ನ ಮೊದಲ ನಿರ್ದೇಶನದ ಚಿತ್ರ. ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಮುಗಿದಿದ್ದು, ಚಿತ್ರ ಸದ್ಯದಲ್ಲೇ ತೆರೆಗೆ ಬರಲಿದೆ ಎಂದರು' ನಿರ್ದೇಶಕರು.

ಕಾವ್ಯ ಭಾರದ್ವಾಜ್ ಚಿತ್ರದ ನಾಯಕಿ. ಮುಂಜಾನೆ ಮಂಜು ಛಾಯಾಚಿತ್ರಗ್ರಹಣ, ಎಂ.ಎಸ್. ತ್ಯಾಗರಾಜ್ ಸಂಗೀತ, ಶೇಷಾಚಲ ಸಂಕಲನ ಚಿತ್ರಕ್ಕಿದೆ.

ಮೂರು ಚಿತ್ರಗಳು ತೆರೆಗೆ

ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಮುಗಿದು, ರಜೆ ಶುರುವಾಗಿದ್ದರೂ ಚಿತ್ರ ಬಿಡುಗಡೆಗೆ ಕನ್ನಡ ಚಿತ್ರರಂಗ ಆಸಕ್ತಿ ತೋರುತ್ತಿಲ್ಲ. ಒಂದು ತಿಂಗಳಿನಿಂದ ಕನ್ನಡ ಚಿತ್ರ ಬಿಡುಗಡೆ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಈ ವಾರ ಮೂರು ಚಿತ್ರಗಳು ಮಾತ್ರ ತೆರೆಯಲ್ಲಿವೆ.

ರಂಗಾಯಣ ರಘು

ಅಜ್ಞಾತವಾಸಿ

ಟ್ರೇಲರ್‌ನಿಂದಲೇ ಕುತೂಹಲ ಹುಟ್ಟಿಸಿರುವ ಚಿತ್ರ. 'ಗುಲ್ಟು' ಸಿನಿಮಾ ಖ್ಯಾತಿಯ ಜನಾರ್ದನ್ ಚಿಕ್ಕಣ್ಣ ನಿರ್ದೇಶನ, ಜನಪ್ರಿಯ ನಿರ್ದೇಶಕ ಹೇಮಂತ್ ರಾವ್ ನಿರ್ಮಾಣದ ಸಿನಿಮಾವಿದು. ಹೀಗಾಗಿ ನಿರೀಕ್ಷೆ ಹೆಚ್ಚಿದೆ.

ಕನ್ನಡದಲ್ಲಿ ಸಾಕಷ್ಟು ಮರ್ಡರ್ ಮಿಸ್ಟರಿ ಸಿನಿಮಾಗಳು ಬಂದಿವೆ. ಅದೇ ಜಾನರ್‌ನ ಈ ಚಿತ್ರದಲ್ಲಿ ರಂಗಾಯಣ ರಘು ಮುಖ್ಯ ಪಾತ್ರದಲ್ಲಿದ್ದಾರೆ. 'ಮಲೆನಾಡಿನ ಸಣ್ಣಹಳ್ಳಿಯೊಂದರಲ್ಲಿ ನಡೆಯುವ ಕಾಲ್ಪನಿಕ ಕಥೆ ಇದು. ಹಳ್ಳಿಯಲ್ಲಿ ಪೊಲೀಸ್ ಸ್ಟೇಷನ್ ಸ್ಥಾಪನೆಯಾಗಿ 25 ವರ್ಷಗಳಾಗಿರುತ್ತವೆ. ಯಾವುದೇ ಸಣ್ಣ ಪ್ರಕರಣ ಕೂಡ ದಾಖಲಾಗಿರುವುದಿಲ್ಲ. 1997ರಲ್ಲಿ ಒಂದು ಕೊಲೆ ಪ್ರಕರಣ ದಾಖಲಾಗುತ್ತದೆ. ಅನುಭವ ಇಲ್ಲದ ಇನ್‌ಸ್ಪೆಕ್ಟರ್ ಈ ಪ್ರಕರಣವನ್ನು ಹೇಗೆ ಬಗೆಹರಿಸುತ್ತಾನೆ ಎಂಬುದೇ ಕಥೆ. 'ಗುಲ್ಟು' ಬಳಿಕ ಈ ಕಥೆ ನನ್ನ ಗಮನ ಸೆಳೆಯಿತು' ಎನ್ನುತ್ತಾರೆ ನಿರ್ದೇಶಕರು.

'ಗೋಧಿ ಬಣ್ಣ ಸಾಧಾರಾಣ ಮೈಕಟ್ಟು' ಬಳಿಕ ನಾನು ಮತ್ತು ರಕ್ಷಿತ್ ಒಳ್ಳೆ ಸಿನಿಮಾಗಳಿಗೆ, ಒಳ್ಳೆ ಕಥೆಗೆ ಬಂಡವಾಳ ಹಾಕಲು ತೀರ್ಮಾನ ಮಾಡಿಕೊಂಡಿದ್ದೆವು. ಅದರ ಪ್ರತಿಫಲವೇ 'ಅಜ್ಞಾತವಾಸಿ'. ನಿರ್ದೇಶಕ ಜನಾರ್ದನ್ ಚಿಕ್ಕಣ್ಣ ಒಳ್ಳೆ ಸಿನಿಮಾ ಮೇಕರ್. ಸಿನಿಮಾ ಚೆನ್ನಾಗಿ ಬಂದಿದೆ. ಜನರನ್ನು ನಂಬಿ ಈ ರೀತಿ ಸಿನಿಮಾ ಮಾಡಿದ್ದೇವೆ' ಎಂದಿದ್ದಾರೆ ಹೇಮಂತ್ ರಾವ್. ಪಾವನಾ ಗೌಡ, ಸಿದ್ದು ಮೂಲಿಮನೆ, ಶರತ್ ಲೋಹಿತಾಶ್ವ, ರವಿಶಂಕರ್ ಗೌಡ ಮುಂತಾದವರು ಚಿತ್ರದಲ್ಲಿದ್ದಾರೆ. ಚರಣ್‌ರಾಜ್ ಸಂಗೀತ, ಅದ್ವೈತ್ ಗುರುಮೂರ್ತಿ ಛಾಯಾಚಿತ್ರಗ್ರಹಣವಿದೆ.

ವಾಮನ

ಧನ್ವೀರ್, ರೀಷ್ಮಾ ನಾಣಯ್ಯ ಜೋಡಿಯಾಗಿ ನಟಿಸಿರುವ ಚಿತ್ರ 'ವಾಮನ'. ಶಂಕರ್ ರಾಮನ್ ಎಸ್. ಕಥೆ ಬರೆದು ನಿರ್ದೇಶಿಸಿದ್ದಾರೆ. 'ಇದು ನನ್ನ ನಾಲ್ಕನೆ ಚಿತ್ರ. ನಟ ದರ್ಶನ್ ಮತ್ತು ವಿಜಯಲಕ್ಷ್ಮಿ ಅವರು ಈ ಚಿತ್ರಕ್ಕೆ ನೀಡಿದ ಬೆಂಬಲಕ್ಕೆ ಕೃತಜ್ಞ. ಹಿಂದಿನ ಮೂರು ಸಿನಿಮಾಗಳಲ್ಲಿಯೂ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದೆ. ಅದೇ ರೀತಿ ಚಿತ್ರದಲ್ಲಿಯೂ ಮಾಸ್ ಆಗಿರುವ ಒಂದು ಭಿನ್ನ ಪಾತ್ರ ಮಾಡಿರುವೆ' ಎನ್ನುತ್ತಾರೆ ನಾಯಕ ಧನ್ವೀರ್. ಅಜನೀಶ್ ಲೋಕನಾಥ್ ಸಂಗೀತ ನೀಡಿದ್ದು, ಚೇತನ್ ಗೌಡ ಬಂಡವಾಳ ಹೂಡಿದ್ದಾರೆ. ಪೆಟ್ರೋಲ್ ಪ್ರಸನ್ನ, ಶಿವರಾಜ್ ಕೆ.ಆರ್. ಪೇಟೆ, ಕಾಕ್ರೋಜ್ ಸುಧೀ ಮುಂತಾದವರು ತಾರಾಗಣದಲ್ಲಿದ್ದಾರೆ.

ವಿದ್ಯಾಪತಿ

'ಟಗರು ಪಲ್ಯ' ಯಶಸ್ಸಿನ ಬಳಿಕ ಡಾಲಿ ಧನಂಜಯ ಮತ್ತು ನಾಗಭೂಷಣ್ ಜೊತೆಯಾಗಿ ಮಾಡಿರುವ ಚಿತ್ರವಿದು. ಇಶಾಂ ಹಾಗೂ ಹಸೀಂ ಖಾನ್ ನಿರ್ದೇಶನವಿದೆ. ಇವರೇ ಕಥೆ ಬರೆದು, ಸಂಕಲನವನ್ನೂ ಮಾಡಿದ್ದಾರೆ. ಇದೇ ಜೋಡಿ ಈ ಹಿಂದೆ ನಾಗಭೂಷಣ್‌ಗೆ 'ಇಕ್ಕಟ್ಟು' ಸಿನಿಮಾ ಮಾಡಿತ್ತು. ಈ ಎಲ್ಲ ಕಾಂಬಿನೇಷನ್‌ಗಳಿಂದಾಗಿ ಚಿತ್ರದ ಮೇಲೆ ನಿರೀಕ್ಷೆ ಹೆಚ್ಚಿದೆ.

ಡಾಲಿ ಪಿಕ್ಚರ್ಸ್ ಅಡಿಯಲ್ಲಿ ಧನಂಜಯ ಬಂಡವಾಳ ಹೂಡಿದ್ದಾರೆ. ನಾಗಭೂಷಣ್‌ಗೆ ಮಲೈಕಾ ಜೋಡಿಯಾಗಿದ್ದಾರೆ. ಕೆಆರ್‌ಜಿ ಸ್ಟುಡಿಯೊಸ್ ಚಿತ್ರವನ್ನು ವಿತರಣೆ ಮಾಡುತ್ತಿದೆ. 'ವಿದ್ಯಾಪತಿ ಫ್ಯಾಮಿಲಿ ನೋಡುವ ಸಿನಿಮಾ. ಮಕ್ಕಳ ಜೊತೆ ಬಂದು ಎಲ್ಲರೂ ಚಿತ್ರ ನೋಡಿ. ಪ್ರೇಕ್ಷಕರ ಪ್ರೋತ್ಸಾಹ ದೊರೆತರೆ ಇನ್ನೊಂದಷ್ಟು ಸಿನಿಮಾ ಮಾಡಬಹುದು' ಎಂದಿದ್ದಾರೆ ಧನಂಜಯ. 'ನಾನು ಇಂಡಸ್ಟ್ರಿಗೆ ಹೀರೊ ಆಗಬೇಕು ಎಂದು ಬಂದವನು ಅಲ್ಲ. ಒಳ್ಳೊಳ್ಳೆ ಸಿನಿಮಾಗಳಲ್ಲಿ ಸಣ್ಣ ಸಣ್ಣ ಪಾತ್ರಗಳನ್ನು ಮಾಡಿಕೊಂಡು ಹೋಗಬೇಕು ಎಂದುಕೊಂಡಿದ್ದೆ. ಇದು ನನಗೆ ಜೀವನದಲ್ಲಿ ಸಿಕ್ಕ ಬೋನಸ್. ನನ್ನ ನಂಬಿ ನಿರ್ದೇಶಕರು ವಿದ್ಯಾಪತಿ ಚಿತ್ರ ಕೊಟ್ಟರು' ಎನ್ನುತ್ತಾರೆ ನಾಗಭೂಷಣ್.

ಲವಿತ್ ಛಾಯಾಚಿತ್ರಗ್ರಹಣ, ಡಾಸ್ಮೋಡ್ ಸಂಗೀತ ಚಿತ್ರಕ್ಕಿದೆ.

ಯಕ್ಷಲೋಕದ 'ವೀರ ಚಂದ್ರಹಾಸ'

ರವಿ ಬಸ್ರೂರು ನಿರ್ದೇಶನದ 'ವೀರ ಚಂದ್ರಹಾಸ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಯಕ್ಷಗಾನ ಪ್ರಸಂಗವನ್ನೇ ಆಧರಿಸಿದ ಈ ಚಿತ್ರ ಏ.18ರಂದು ತೆರೆಗೆ ಬರಲಿದೆ. ಈ ಚಿತ್ರದ ಕುರಿತು ನಿರ್ದೇಶಕ ರವಿ ಬಸ್ರೂರು ಮಾತನಾಡಿದ್ದಾರೆ.

ಶಿವರಾಜ್‌ಕುಮಾರ್

ರವಿ ಬಸ್ರೂರು

'ನಾನು ಈತನಕ ನಿರ್ದೇಶನ ಮಾಡಿದ ಸಿನಿಮಾಗಳನ್ನು ದುಡ್ಡಿಗಾಗಿ ಮಾಡಿಲ್ಲ. ಹಾಕಿದ ಬಂಡವಾಳ ವಾಪಸ್ ಬರುತ್ತದೆ ಎಂಬ ಆಸೆಯೊಂದಿಗೂ ಮಾಡಿಲ್ಲ. ಕುಂದಾಪುರದ ಸಂಸ್ಕೃತಿ, ಭಾಷೆ, ಹಳ್ಳಿಗಾಡಿನ ಸೊಗಡನ್ನು ನಾಡಿಗೆ ಪರಿಚಯಿಸುವ ವಿಷಯಗಳನ್ನೇ ಕೈಗೆತ್ತಿಕೊಂಡಿದ್ದು. ಯಕ್ಷಗಾನವನ್ನು ವಿಶ್ವಮಾನ್ಯ ಮಾಡಬೇಕೆಂಬುದು ನನ್ನ ಸುಮಾರು ವರ್ಷಗಳ ಕನಸು. ಹೀಗಾಗಿ ಇದನ್ನು ಮಾಡಿರುವೆ. ಇದು ಯಕ್ಷ ಸಿನಿಮಾ. 'ವೀರ ಚಂದ್ರಹಾಸ' ಪ್ರಸಂಗವನ್ನೇ ಸಿನಿಮಾವಾಗಿಸಿದ್ದೇವೆ. ಪ್ರಸಂಗದಿಂದ ಹೊರತಾದ ಮಾತುಗಳು, ಹಾಡುಗಳು ಚಿತ್ರದಲ್ಲಿಲ್ಲ' ಎಂದರು ರವಿ ಬಸ್ರೂರು.

'ಚಿತ್ರದ ಎಲ್ಲಾ ಪ್ರಮುಖ ಪಾತ್ರಗಳನ್ನು ಯಕ್ಷಗಾನ ಕಲಾವಿದರೇ ಮಾಡಿದ್ದಾರೆ. ಶಿವರಾಜ್‌ಕುಮಾರ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದು ಪ್ರಮುಖವಾದ ಪಾತ್ರವೇ. ಆದರೆ ಇವರಿಗೆ ಕುಣಿತ ಹೆಚ್ಚಿಲ್ಲ. ಮಾತಿನ ಭಾಗವಷ್ಟೇ ಹೆಚ್ಚಿದೆ. ಚಂದನ್ ಶೆಟ್ಟಿ, ಪುನೀತ್, ಗರುಡರಾಮ್ ಮುಂತಾದ ಚಿತ್ರ ಕಲಾವಿದರು ಯಕ್ಷಗಾನದ ಪಾತ್ರಧಾರಿಗಳಾಗಿಯೇ ಕಾಣಿಸಿಕೊಂಡಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

'ಹಿನ್ನೆಲೆ ಸಂಗೀತಕ್ಕಾಗಿ 600ರಿಂದ 700 ಮ್ಯೂಸಿಕ್ ಟ್ರ್ಯಾಕ್ಸ್ ಬಳಸಿದ್ದೇವೆ. 400ರಿಂದ 500 ಯಕ್ಷಗಾನ ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಸಿನಿಮಾದಲ್ಲಿ ಸೆಟ್ ಲೈಟ್ ಬಳಸಿಲ್ಲ. ಸಹಜ ಬೆಳಕಿನಲ್ಲೇ ಚಿತ್ರೀಕರಣ ಮಾಡಿದ್ದೇವೆ. ಯಕ್ಷಗಾನ ಮತ್ತು ಸಿನಿಮಾದಲ್ಲಿ ಯಕ್ಷಗಾನ ಕಲಾವಿದರ ಬಳಕೆ ಹೆಚ್ಚಬೇಕು. ವೃತ್ತಿಪರ ಯಕ್ಷಗಾನ ಕಲಾವಿದರು ಮಳೆಗಾಲದಲ್ಲಿ ಕೆಲಸವಿಲ್ಲದೆ ಆರು ತಿಂಗಳು ಮನೆಯಲ್ಲಿ ಕುಳಿತಿರುತ್ತಾರೆ. ಆಗ ಅವರಿಗೆ ಕೆಲಸ ಸಿಗುವಂತಾಗಬೇಕು. ಈ ಸಿನಿಮಾದಿಂದ ಸಾಕಷ್ಟು ಜನರಿಗೆ ಉದ್ಯೋಗ ಸಿಕ್ಕಿದೆ. ದೊಡ್ಡ ನಾಯಕನನ್ನು ಹಾಕಿಕೊಂಡು ಕಮರ್ಷಿಯಲ್ ಸಿನಿಮಾ ಮಾಡಲು ಗೊತ್ತಿದೆ. ಆದರೆ ಕೆರೆಯ ನೀರನು ಕೆರೆಗೆ ಚೆಲ್ಲಿ ಎಂಬಂತೆ ನಾನು ಸಿನಿಮಾದಲ್ಲಿ ದುಡಿದಿರುವುದನ್ನು ಸಿನಿಮಾಗೆ ಹಾಕುತ್ತಿರುವೆ' ಎನ್ನುತ್ತಾರೆ ಅವರು.

ಬೆಂಗಳೂರಿನಲ್ಲಿ ಸೆಟ್ ಹಾಕಿ ಚಿತ್ರೀಕರಣ ಮಾಡಲಾಗಿದೆ. 2 ಗಂಟೆ 36 ನಿಮಿಷ ಅವಧಿಯ ಚಿತ್ರದಲ್ಲಿ 60–70 ಯಕ್ಷಗೀತೆಗಳನ್ನು ಬಳಸಿಕೊಳ್ಳಲಾಗಿದೆ. ಎಸ್.ಎಸ್ ರಾಜಕುಮಾರ್ ನಿರ್ಮಿಸಿರುವ ಈ ಚಿತ್ರವನ್ನು ಹೊಂಬಾಳೆ ಫಿಲ್ಮ್ಸ್ ಅರ್ಪಿಸುತ್ತಿದೆ.

ರೈತರಿಂದ–ಗ್ರಾಹಕರಿಗೆ ನೇರ ಮಾರಾಟ, ಪ್ರಾಯೋಗಿಕ ಪ್ರಯತ್ನ | ರೈತ ಸಂಘ–ಹಸಿರುಸೇನೆ ನಾಯಕತ್ವ

ಆರ್.ಆರ್.ನಗರದಲ್ಲಿ ನಾಳೆಯಿಂದ 'ರೈತ ಸಂತೆ'

● ಗಾಣಧಾಳು ಶ್ರೀಕಂಠ

ಬೆಂಗಳೂರು: ರೈತರು ತಾವು ಬೆಳೆದ ಕೃಷಿ ಉತ್ಪನ್ನಗಳಿಗೆ ತಾವೇ ಬೆಲೆ ನಿಗದಿಪಡಿಸಿ, ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲು ಮುಂದಾಗಿದ್ದಾರೆ. 'ರೈತ ಸಂತೆ'ಯ ಮೂಲಕ ಈ ಪ್ರಯೋಗ ಆರಂಭವಾಗಲಿದೆ.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಸಾಮೂಹಿಕ ನಾಯಕತ್ವದಲ್ಲಿ 'ನೇರ ಮಾರಾಟದ ಮೂಲಕ ನಮ್ಮ ಹೋರಾಟ' – 'ನಮ್ಮ ಬೆಳೆಗೆ ನಮ್ಮದೇ ಬೆಲೆ' ಶೀರ್ಷಿಕೆಯಡಿ ಈ ಕಾರ್ಯಕ್ರಮ ನಡೆಯುತ್ತಿದೆ. ಆರ್.ಆರ್ ನಗರದ ಐಡಿಯಲ್ ಹೋಮ್ಸ್ ಲೇಔಟ್‌ನಲ್ಲಿರುವ ಮುನಿವೆಂಕಟಯ್ಯ ಸ್ಮಾರಕ ಬಯಲು ರಂಗಮಂದಿರದಲ್ಲಿ ಏಪ್ರಿಲ್ 12 ರಿಂದ 14ರವರೆಗೆ ಆಯೋಜಿಸಿರುವ 'ರೈತ ಸಂತೆ'ಯಲ್ಲಿ ರೈತರೇ ತಮ್ಮ ಉತ್ಪನ್ನ-ಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲಿದ್ದಾರೆ.

ರಾಜ್ಯದ ವಿವಿಧ ಭಾಗಗಳಲ್ಲಿರುವ ರೈತರು ದವಸ- ಧಾನ್ಯ, ತರಕಾರಿ-ಹಣ್ಣು, ಜೇನು-ಹೈನು, ಅಡುಗೆ ಎಣ್ಣೆ, ಮೌಲ್ಯವರ್ಧಿತ ಉತ್ಪನ್ನಗಳೂ ಸೇರಿದಂತೆ ತಾವು ಬೆಳೆದ ಎಲ್ಲ ರೀತಿಯ ಉತ್ಪನ್ನಗಳನ್ನು ರೈತ ಸಂತೆಯಲ್ಲಿ ಮಾರಾಟ ಮಾಡುತ್ತಾರೆ. ಇದು ಮಧ್ಯವರ್ತಿಗಳಿಲ್ಲದೆ ಬೆಳೆದವರೇ ತಮ್ಮ ಬೆಳೆಗೆ ಬೆಲೆ ನಿಗದಿಪಡಿಸಿ ಮಾರಾಟ ಮಾಡುವ ವಿಶಿಷ್ಟ ಸಂತೆ.

ಸಾಂದರ್ಭಿಕ ಚಿತ್ರ

ಗ್ರಾಹಕರಿಗೆ ಆಹ್ವಾನ: ಸಂತೆಯಲ್ಲಿ ಪಾಲ್ಗೊಳ್ಳುವ ರೈತರು ತಾವು ಮಾರುಕಟ್ಟೆಗೆ ತರುವ ಉತ್ಪನ್ನಗಳು, ಬೆಳೆ ಬೆಳೆಯುವ ಹಿಂದಿನ ಶ್ರಮ, ಖರ್ಚು ವೆಚ್ಚದ ವಿಚಾರಗಳನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಈ ಮೂಲಕ ಗ್ರಾಹಕರನ್ನು ಸಂತೆಗೆ ಆಹ್ವಾನಿಸುತ್ತಿದ್ದಾರೆ.

'ನಾನು ಬೆಳೆದ ಬದನೆಕಾಯಿ ಮಾರಿದಾಗ ಕೆಜಿಗೆ ₹3, ಅದೇ ಬದನೆಕಾಯಿಯನ್ನು ಗ್ರಾಹಕ ಖರೀದಿಸುವಾಗ ₹30. ಮಧ್ಯೆ ₹27 ಎಲ್ಲಿ ಹೋಯಿತು? ಯಾರ ಕೈ ಸೇರಿತು? ಎಂದು ಯೋಚಿಸಿದಾಗ, ರೈತ- ಗ್ರಾಹಕ ಇಬ್ಬರಿಗೂ ಲಾಭವಿಲ್ಲ ಎನ್ನುವುದು ಅರಿವಾಯಿತು. ಹೀಗಾಗಿ ನಾನು ಬೆಳೆದ ಉತ್ಪನ್ನಗಳನ್ನು ರೈತ ಸಂತೆಯಲ್ಲಿ ಮಾರಾಟ ಮಾಡಲು ಬರುತ್ತಿದ್ದೇನೆ' ಎಂದು ತಿಪಟೂರಿನ ರೈತ ಜಯಚಂದ್ರ ಶರ್ಮಾ ಬದನೆಕಾಯಿ ಬೆಳೆದ ಜಮೀನಿನಿಂದಲೇ ವಿಡಿಯೊ ಮಾಡಿ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ದೇಶದ ಬೆನ್ನೆಲುಬು ಅನ್ನದಾತ - ಅನ್ನದಾತನ ಬೆನ್ನೆಲುಬು ಉತ್ಪನ್ನವನ್ನು ಕೊಂಡು ತಿನ್ನುವ ಗ್ರಾಹಕ. ಈ ಸರಳ ಸತ್ಯವನ್ನು ಜನರಿಗೆ ತಿಳಿಸುವ ಕಾರ್ಯಕ್ರಮವಿದು. ಎಲ್ಲರೂ ರೈತರ ಬೆಂಬಲಿಸಿ

ಚುಕ್ಕಿ ನಂಜುಂಡಸ್ವಾಮಿ
ರೈತ ಸಂತೆಯ ಆಯೋಜಕರು

ಪ್ರಾಯೋಗಿಕ ಪ್ರಯತ್ನ: 'ಎಲ್ಲ ಬೆಳೆಗಳ ಬೆಲೆ ನೆಲಕಚ್ಚಿದೆ. ರೈತರಿಂದ ಖರೀದಿಸುವ ಉತ್ಪನ್ನಗಳ ಬೆಲೆಗೂ, ಗ್ರಾಹಕರಿಗೆ ಮಾರಾಟವಾಗುವ ಬೆಲೆಯ ನಡುವೆ ಅಜಗಜಾಂತರವಿದೆ. ಸರ್ಕಾರಗಳಂತೂ ರೈತರ ನೋವಿಗೆ ಸ್ಪಂದಿಸುವುದಿಲ್ಲ. ಹೀಗೇ ಬಿಟ್ಟರೆ ಕಂಪನಿಗಳೇ ನಮ್ಮ ಹೊಲಕ್ಕಿಳಿಯುವ ಆಂತಕವೂ ಇದೆ. ಅದಕ್ಕಾಗಿ ಬೆಳೆದವರೇ ಬೆಳೆಗಳಿಗೆ ಬೆಲೆ ನಿಗದಿಪಡಿಸಿ ನೇರ ಮಾರಾಟ ಮಾಡಲು ಹೋರಾಟಕ್ಕಿಳಿದಿದ್ದೇವೆ. ಇದೊಂದು ಪ್ರಾಯೋಗಿಕ ಪ್ರಯತ್ನ, ರೈತರನ್ನು ಬೆಂಬಲಿಸಿ' ಎಂದು ಬಳ್ಳಾರಿ, ದೊಡ್ಡಬಳ್ಳಾಪುರ, ಮೈಸೂರು, ಚಾಮರಾಜನಗರ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಹಲವು ರೈತರು ವಿಡಿಯೊಗಳಲ್ಲಿ ಮನವಿ ಮಾಡಿದ್ದಾರೆ.

'ರೈತ ಸಂತೆ' ಕುರಿತ ಹೆಚ್ಚಿನ ಮಾಹಿತಿಗೆ- 90354 54365 ಸಂಪರ್ಕಿಸಬಹುದು.

ರೈತರನ್ನು ಹೇಗೆ ಬೆಂಬಲಿಸಬಹುದು ?

- ನಿಮ್ಮ ನಿಮ್ಮ ಬಡಾವಣೆಗಳಲ್ಲಿ/ ಅಪಾರ್ಟ್‌ಮೆಂಟ್‌ಗಳಲ್ಲಿ ಗ್ರಾಹಕ ವೇದಿಕೆ ರಚಿಸಿಕೊಂಡು ರೈತ ಸಂಘಟಕರೊಡನೆ ಚರ್ಚಿಸಿ ಸಂತೆಗಳನ್ನು ಏರ್ಪಡಿಸಬಹುದು. ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಖರೀದಿಸುವಂತೆ ಗ್ರಾಹಕರಿಗೆ ಅರಿವು ಮೂಡಿಸಬಹುದು.
- ಮಧ್ಯವರ್ತಿಗಳಿಂದ ರೈತರ ಮತ್ತು ಗ್ರಾಹಕರಿಗಾಗುತ್ತಿರುವ ಶೋಷಣೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬಹುದು.

ಸಾಹಿತಿ, ಕಲಾವಿದರ ಬೆಂಬಲ

'ನೇರ ಮಾರಾಟ- ನಮ್ಮ ಹೋರಾಟ'ಕ್ಕೆ ಸಾಹಿತಿ ಎಸ್. ಜಿ.ಸಿದ್ದರಾಮಯ್ಯ, ನಟ ರಂಗಾಯಣ ರಘು, ಕಿರುತೆರೆ ನಟ–ನಿರ್ದೇಶಕ ಟಿ.ಎನ್. ಸೀತಾರಾಂ ಸೇರಿದಂತೆ ಹಲವು ಸಾಹಿತಿ, ಲೇಖಕರು, ರೈತ ಪರ ಹೋರಾಟಗಾರರು, ರಂಗಭೂಮಿ, ಸಿನಿಮಾ ಕಲಾವಿದರು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಸಂದೇಶದ ಮೂಲಕ 'ರೈತ ಸಂತೆ'ಯಲ್ಲಿ ಪಾಲ್ಗೊಳ್ಳಲು ಗ್ರಾಹಕರಿಗೆ ಮನವಿ ಮಾಡಿದ್ದಾರೆ.

ಗಿರಿಜಾ ಕಲ್ಯಾಣೋತ್ಸವ ಸಂಪನ್ನ

ಕೋಟೆ ಶ್ರೀಸೋಮೇಶ್ವರಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ಧಾರಾ ಮಹೋತ್ಸವದಲ್ಲಿ ನೂರಾರು ಭಕ್ತರು ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಕೋಟೆ ಶ್ರೀಸೋಮೇಶ್ವರ-ಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವ ಹಾಗೂ ಧಾರಾ ಮಹೋತ್ಸವ ಕೆಂಗೇರಿಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಸೋಮೇಶ್ವರ ಸ್ವಾಮಿ ಮತ್ತು ಪಾರ್ವತಿ ಅಮ್ಮನವರ ಉತ್ಸವಮೂರ್ತಿಗಳನ್ನಿರಿಸಿ ರಾಜಾ ಹೋಮ, ಪ್ರಧಾನ ಹೋಮ, ಸಪ್ತಪದಿ, ಆರುಂಧತಿ ಪೂಜೆ ಸೇರಿ ಕಲ್ಯಾಣೋತ್ಸವದ ವಿವಿಧ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

ವಿದ್ಯುತ್ ದೀಪಾಲಂಕಾರದೊಂದಿಗೆ ಕಂಗೊಳಿಸುತ್ತಿದ್ದ ದೇವಾಲಯದಲ್ಲಿ ಕಲ್ಯಾಣ ಸಡಗರ ಕಳೆಗಟ್ಟಿತ್ತು. ಕಲ್ಯಾಣೋತ್ಸವದ ನಿಮಿತ್ತ ಸುಮಾರು 500ಕ್ಕೂ ಹೆಚ್ಚು ಮಹಿಳೆಯರು ಕೆಂಗೇರಿ ಯಲ್ಲಮ್ಮ ದೇವಾಲಯದಿಂದ ತಂಬಿಟ್ಟಿನ ಆರತಿಯನ್ನು ಮೆರವಣಿಗೆ ಮೂಲಕ ಕೋಟೆ ಸೋಮೇಶ್ವರ ದೇವಾಲಯಕ್ಕೆ ತಂದು ಪೂಜೆ ನೆರವೇರಿಸಿದರು.

ಬುಧವಾರವೇ ಆರಂಭವಾಗಿದ್ದ ಪೂಜಾ ಕೈಂಕರ್ಯದ ಭಾಗವಾಗಿ ಸೋಮೇಶ್ವರ ದೇವಾಲಯ ಆವರಣದಲ್ಲಿ ಮುತ್ತೈದೆಯರಿಗೆ ಬಳೆ ತೊಡಿಸಲಾಯಿತು. ಕಲ್ಯಾಣೋತ್ಸವದ ಬಳಿಕ ಕೆಂಗೇರಿಯ ರಾಜಬೀದಿಯಲ್ಲಿ ಸಂಚರಿಸಿದ ಗಿರಿಜಾ ಕಲ್ಯಾಣೋತ್ಸವ ರಥಕ್ಕೆ ನಮಿಸಿ ಭಕ್ತರು ಭಕ್ತಿ ಭಾವ ಮೆರೆದರು.

ಶಾಸಕ ಎಸ್.ಟಿ.ಸೋಮಶೇಖರ್, ಕ್ಷೇತ್ರದ 17 ಗ್ರಾ. ಪಂ ಅಧ್ಯಕ್ಷರು, ಉಪಾಧ್ಯಕ್ಷರು, ಬಿಬಿಎಂಪಿ ವಾರ್ಡ್ ಅಧ್ಯಕ್ಷರು, ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಹಾಗೂ ಅಪಾರ ಸಂಖ್ಯೆಯ ಭಕ್ತರು ಉಪಸ್ಥಿತರಿದ್ದರು.

ಬೋಧಕ ಹುದ್ದೆಗಳ ಭರ್ತಿಗೆ ಆಗ್ರಹ

ಬಿಸಿಯು ನಿರ್ಗಮಿತ ಕುಲಪತಿ ಪ್ರೊ. ಲಿಂಗರಾಜ ಗಾಂಧಿಗೆ ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿರುವ 1,213 ವಿಶ್ವ ವಿದ್ಯಾಲಯಗಳಲ್ಲಿ ಶೇಕಡ 60ಕ್ಕೂ ಹೆಚ್ಚು ಬೋಧಕ ಹುದ್ದೆಗಳು ಖಾಲಿ ಇವೆ. ಅವುಗಳನ್ನು ಶೀಘ್ರದಲ್ಲೇ ಭರ್ತಿ ಮಾಡಬೇಕು ಎಂದು ರಾಜೀವಗಾಂಧಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎಸ್. ಚಂದ್ರಶೇಖರ ಶೆಟ್ಟಿ ಅವರು ಸರ್ಕಾರವನ್ನು ಒತ್ತಾಯಿಸಿದರು.

ಜ್ಞಾನಜ್ಯೋತಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಬೆಂಗಳೂರು ನಗರ ವಿಶ್ವವಿದ್ಯಾಲಯದ (ಬಿಸಿಯು) ನಿರ್ಗಮಿತ ಕುಲಪತಿ ಪ್ರೊ. ಲಿಂಗರಾಜ ಗಾಂಧಿಯವರ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಸರ್ಕಾರ, ಉನ್ನತ ಶಿಕ್ಷಣದ ಮುನ್ನಡೆಗೆ ಆಯವ್ಯಯದಲ್ಲಿ ಹೆಚ್ಚಿನ ಹಣಕಾಸಿನ ಬೆಂಬಲ ಒದಗಿಸಬೇಕಾದ ಅಗತ್ಯವಿದೆ' ಎಂದು ಅವರು ಪ್ರತಿಪಾದಿಸಿದರು.

ಪ್ರೊ.ಲಿಂಗರಾಜಗಾಂಧಿ ಮತ್ತು ಸೌಮ್ಯ ಗಾಂಧಿ ದಂಪತಿಯನ್ನು ಸನ್ಮಾನಿಸಲಾಯಿತು

'ಲಿಂಗರಾಜ ಗಾಂಧಿಯವರು, ಬಿಸಿಯು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಅಗತ್ಯ ಮೂಲಸೌಕರ್ಯ ಒದಗಿಸುವ ಮೂಲಕ, ವಿಶ್ವವಿದ್ಯಾಲಯದ ಪ್ರಗತಿಗೆ ಶ್ರಮಿಸಿದ್ದಾರೆ' ಎಂದು ಶ್ಲಾಘಿಸಿದರು.

ಅಭಿನಂದನಾ ಭಾಷಣ ಮಾಡಿದ ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದ ಗೌಡ 'ಗ್ರಾಮೀಣ ಪ್ರದೇಶದಿಂದ ಬಂದ ಲಿಂಗರಾಜ ಗಾಂಧಿಯವರು, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಗಮನ ಹರಿಸಿದ್ದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ ಕೃಷ್ಣ ಮಾತನಾಡಿ, 'ಸರ್ಕಾರಿ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಿಗೆ ಶೀಘ್ರ ಕಾಯಂ ಬೋಧಕರನ್ನು ನೇಮಕ ಮಾಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

'ನಾಲ್ಕು ದಶಕಗಳಿಂದ ಉನ್ನತ ಶಿಕ್ಷಣ ಕ್ಷೇತ್ರದ ವಿವಿಧ ಹುದ್ದೆಗಳಲ್ಲಿ ಪ್ರೊ. ಲಿಂಗರಾಜ ಗಾಂಧಿಯವರು ಉತ್ತಮ ಕೆಲಸ ಮಾಡಿದ್ದಾರೆ' ಎಂದು ಶ್ಲಾಘಿಸಿದರು.

ಸಮಾರಂಭದಲ್ಲಿ ಪ್ರೊ.ಲಿಂಗರಾಜ ಗಾಂಧಿ ಮತ್ತು ಸೌಮ್ಯ ಗಾಂಧಿ ದಂಪತಿಯನ್ನು ಅಭಿನಂದಿಸಲಾಯಿತು.

ಮಾಜಿ ಶಿಕ್ಷಣ ಸಚಿವರಾದ ಪ್ರೊ. ಬಿ.ಕೆ. ಚಂದ್ರಶೇಖರ್, ವಿವಿಧ ವಿಶ್ವವಿ-ದ್ಯಾಲಯಗಳ ಕುಲಪತಿಗಳು, ಬಿಸಿಯು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಬಿಸಿಯು ಕುಲಸಚಿವ (ಮೌಲ್ಯಮಾಪನ) ಪ್ರೊ. ಬಿ.ರಮೇಶ್, ಕುಲಸಚಿವ ಟಿ. ಜವರೇಗೌಡರು, ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

'ವಿಗ್ಯಾನ್‌ರಂಗ್' ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: 'ಜಾಗತೀಕರಣ ಮತ್ತು ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಉನ್ನತ ದರ್ಜೆಗೆ ಏರುತ್ತಿರಬೇಕು' ಎಂದು ಮರ್ಸಿಡೆಸ್-ಬೆಂಜ್ ಇಂಡಿಯಾದ(ಸಂಶೋಧನೆ ಮತ್ತು ಅಭಿವೃದ್ಧಿ)ಕಾರ್ಯಕ್ರಮ ವ್ಯವಸ್ಥಾಪಕ ಶಿವ್‌ರತನ್ ಮಿಶ್ರ ಹೇಳಿದರು.

ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ವಿಗ್ಯಾನ್‌ರಂಗ್ ಮೂರುದಿನಗಳ ರಾಷ್ಟ್ರಮಟ್ಟದ ತಾಂತ್ರಿಕ ಮತ್ತು ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆನೀಡಿ ಅವರು ಮಾತನಾಡಿದರು.

ಗೂಗಲ್ ಆಕ್ಸೆಲೆರೇಟರ್ ಸಂಸ್ಥೆಯ ಕಾರ್ಯಕ್ರಮ ವ್ಯವಸ್ಥಾಪಕ(ಡೆವಲಪರ್ ಸಂಬಂಧಿತ) ಪೌಲ್ ರವೀಂದ್ರನಾಥ್. ಜಿ ಮಾತನಾಡಿ, ಕೃತಕ ಬುದ್ಧಿಮತ್ತೆಯು ಎಲ್ಲಾ ಕ್ಷೇತ್ರಗಳನ್ನೂ ಆವರಿಸಿಕೊಳ್ಳುತ್ತಿದೆ. ಇದರಿಂದ ಸಾಕಷ್ಟು ಹೊಸ ಅವಕಾಶಗಳನ್ನು ಸೃಷ್ಟಿಯಾಗುತ್ತಿದೆ. ಹೆಚ್ಚಿನ ಉದ್ಯೋಗಾವಕಾಶಗಳು ಲಭ್ಯವಾಗಲಿದೆ. ವಿದ್ಯಾರ್ಥಿಗಳು ಇಂಥ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದರು.

ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ವಿಗ್ಯಾನ್‌ರಂಗ್ ರಾಷ್ಟ್ರಮಟ್ಟದ ತಾಂತ್ರಿಕ ಮತ್ತು ಸಾಂಸ್ಕೃತಿಕ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಶಿವ್‌ರತನ್ ಮಿಶ್ರ, ಪೌಲ್ ರವೀಂದ್ರನಾಥ್‌ಜಿ, ವಿಶಾಲ್ ಬಿ.ಯು, ಮನೋಹರ್ ಪಟವರ್ಧನ್, ಡಾ.ಕೆ.ಆರ್‌ರವಿಚಂದ್ರ, ಡಾ.ರಾಜೇಶ.ಎಸ್, ಡಾ.ನಳಿನಾಕ್ಷಿ.ಎನ್ ಹಾಗೂ ಉತ್ಸವ ಸಮಿತಿ ತಂಡದ ಸದಸ್ಯರು ಉಪಸ್ಥಿತರಿದ್ದರು

ಪ್ರಾಂಶುಪಾಲ ಡಾ.ರಾಜೇಶ.ಎಸ್ ಮಾತನಾಡಿ, ಮೂರು ದಿನಗಳಕಾಲ ನಡೆಯುವ ಉತ್ಸವದಲ್ಲಿ ಪುಣೆ, ಮುಂಬೈ, ದೆಹಲಿ ಚೆನ್ನೈ ಸೇರಿ ದೇಶದಾದ್ಯಂತ 30 ಕಾಲೇಜುಗಳ 4 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ನೃತ್ಯ, ಸಂಗೀತ, ಫ್ಯಾಷನ್ ಶೋ, ಕ್ಯಾಮೆರಾ ಫೋಟೊಗ್ರಫಿ, ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ, ಸೂಪರ್ ಮಿನಿಟ್, ಏಕಪಾತ್ರಾಭಿನಯ, ಹ್ಯಾಕಥಾನ್, ಆಲ್‌ಮರ್ಡರ್ ಮಿಸ್ಟೆರಿ, ಟ್ರೆಷರ್ ಹಂಟ್, ವಾರ್ ಆಫ್ ಥಿಂಗ್ಸ್ ಮತ್ತಿತರ ಸ್ಪರ್ಧೆಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಎನ್‌ವಿಡಿಯ ಕಂಪನಿಯ ಹಿರಿಯ ಸಿಸ್ಟಂ ಸಾಫ್ಟ್‌ವೇರ್ ಎಂಜಿನಿಯರ್ ವಿಶಾಲ್.ಬಿ.ಯು, ಅಮಡಿಯಸ್ ಲ್ಯಾಬ್ಸ್‌ನ ವ್ಯಾಪಾರ ವಿಶ್ಲೇಷಕ ಮನೋಹರ್ ಪಟವರ್ಧನ್, ಶೈಕ್ಷಣಿಕ ಡೀನ್ ಡಾ.ಕೆ.ಆರ್.ರವಿಚಂದ್ರ, ಉಪಪ್ರಾಂಶುಪಾಲರಾದ ಡಾ.ನಳಿನಾಕ್ಷಿ. ಎನ್ ಉಪಸ್ಥಿತರಿದ್ದರು.

ಜೆಡಿಎಸ್ ಯುವ ಬ್ರಿಗೇಡ್ ಮುಖಂಡನ ಸೆರೆ

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ: ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಅವರನ್ನು ನಿಂದಿಸಿದ ಆರೋಪದ ಮೇಲೆ ಜೆಡಿಎಸ್ ಯುವ ಬ್ರಿಗೇಡ್ ರಾಜ್ಯ ಸಂಘಟನಾ ಕಾರ್ಯದರ್ಶಿ ಮುದ್ದಲಪಲ್ಲಿ ಎಂ.ಎನ್. ರಾಜಾರೆಡ್ಡಿ ಅವರನ್ನು ಬಾಗೇಪಲ್ಲಿ ಪೊಲೀಸರು ಬಂಧಿಸಿದ್ದಾರೆ.

ಸುಬ್ಬಾರೆಡ್ಡಿ ವಿರುದ್ಧ ಮುದ್ದಲಪಲ್ಲಿ ಎಂ.ಎನ್.ರಾಜಾರೆಡ್ಡಿ, ಕಡೇಹಳ್ಳಿ ಆನಂದ್ ಹಾಗೂ ನಾರೇಪಲ್ಲಿ ಶ್ರೀನಿವಾಸ್ ಅವಾಚ್ಯ ಶಬ್ದಗಳನ್ನು ಬಳಸಿರುವ ವಿಡಿಯೊಗಳು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ಸಂಬಂಧ ಶಾಸಕರ ಆಪ್ತಸಹಾಯಕ ಬಾಗೇಪಲ್ಲಿ ಠಾಣೆಗೆ ದೂರು ನೀಡಿದ್ದರು. ಪ್ರಕರಣ ಸಂಬಂಧ ಬಾಗೇಪಲ್ಲಿ ಸಿವಿಲ್ ನ್ಯಾಯಾಲಯದಿಂದ ಮೂರು ಬಾರಿ ಜಾಮೀನು ರಹಿತ ವಾರೆಂಟ್ ಜಾರಿ ಆಗಿತ್ತು. ಆದರೂ ಅವರು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ. ಆದ್ದರಿಂದ ಪೊಲೀಸರು ರಾಜಾರೆಡ್ಡಿ ಅವರನ್ನು ಬಂಧಿಸಿದ್ದಾರೆ.

ಚಿತ್ರಾವಳಿ

ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆ ಉಪ ಆಯುಕ್ತ ಸಿದ್ದಪ್ಪ ಕಲ್ಲೇರ, ಕರ್ನಾಟಕ ವಿಧಾನಸಭಾ (ಐ.ಟಿ.ವಿಭಾಗ) ನಿರ್ದೇಶಕ ಜೆ.ಈ.ಶಶಿಧರ್ ಅವರಿಗೆ ಜೈಭೀಮ್ ಜನಸೇವಾ ಕರ್ನಾಟಕ ಸಮಿತಿಯ ಅಧ್ಯಕ್ಷ ಎಂ.ಶಾಂತರಾಜು ಅವರು ಡಾ.ಬಿ.ಆರ್ ಅಂಬೇಡ್ಕರ್ ಗೌರವ ಪ್ರಶಸ್ತಿ ನೀಡಿದರು. ಕಾಂಗ್ರೆಸ್ ಮುಖಂಡ ಝುಲುದ್ದೀನ್ ಮತ್ತು ಪತ್ರಕರ್ತ ವೆಂಕಟೇಶ್ ಪೈ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಡೆಲ್ಲಿ ಕ್ಯಾಪಿಟಲ್ಸ್ (ಡಿಸಿ) ನಡುವೆ ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕ್ರಿಕೆಟ್ ಪಂದ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮತ್ತು ಸಹಕಾರ ಸಚಿವ ಕೆ. ಎನ್. ರಾಜಣ್ಣ ಜೊತೆ ವೀಕ್ಷಿಸಿದರು.

ಪಿಯುಸಿ: ಶೇ 95 ಅಂಕ ಪಡೆದ ಸಹೋದರಿಯರು

ಕಾಲೇಜು ಶುಲ್ಕ ಪಾವತಿಗಾಗಿ ಟೇಲರಿಂಗ್, ಸಾಧನೆಗೆ ಅಡ್ಡಿಯಾಗದ ಬಡತನ

● ಮಂಜುನಾಥ ಎನ್ ಬಳ್ಳಾರಿ

ಕವಿತಾಳ (ರಾಯಚೂರು ಜಿಲ್ಲೆ): ಟೇಲರಿಂಗ್ ಮಾಡಿ ಕಾಲೇಜಿನ ಶುಲ್ಕ ಪಾವತಿಸಿದ್ದ ಮಸ್ಕಿ ತಾಲ್ಲೂಕಿನ ಜಂಗಮರಹಳ್ಳಿ ಗ್ರಾಮದ ಅವಳಿ ಸಹೋದರಿಯರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಸಾಧನೆಗೆ ಬಡತನ ಅಡ್ಡಿಯಾಗದು ಎಂಬುದನ್ನು ಸಾಧಿಸಿ ತೋರಿಸಿದ್ದಾರೆ.

ಗ್ರಾಮದ ಲಕ್ಷ್ಮಿ ಹಾಗೂ ಅಯ್ಯಣ್ಣ ದಂಪತಿ ಅವಳಿ ಪುತ್ರಿಯರಲ್ಲಿ ಸ್ನೇಹಾ ಶೇ 95 ಅಂಕ ಪಡೆದು ಮಸ್ಕಿ ತಾಲ್ಲೂಕಿಗೆ ಪ್ರಥಮ ಸ್ಥಾನ ಗಳಿಸಿದರೆ, ಸಿಂಧು ಶೇ 94ರಷ್ಟು ಅಂಕ ಪಡೆದಿದ್ದಾರೆ.

ಜಂಗಮರಹಳ್ಳಿಯ ಸರ್ಕಾರಿ ಶಾಲೆಯಲ್ಲಿ 8ನೇ ತರಗತಿಯವರೆಗೆ ಹಾಗೂ 9, 10ನೇ ತರಗತಿಯನ್ನು ಮಸ್ಕಿಯ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಕಲಿತ ಸಹೋದರಿಯರು ಹತ್ತನೇ ತರಗತಿಯಲ್ಲೂ ಕ್ರಮವಾಗಿ ಶೇ 95 ಮತ್ತು ಶೇ 94 ಅಂಕ ಗಳಿಸಿದ್ದರು. ಇದೀಗ ದ್ವಿತೀಯ ಪಿಯುಸಿಯಲ್ಲೂ ಅದೇ ಪರಂಪರೆ ಮುಂದುವರಿಸಿದ್ದಾರೆ.

ಕವಿತಾಳ ಸಮೀಪದ ಜಂಗಮರಹಳ್ಳಿಯ ವಿದ್ಯಾರ್ಥಿನಿ ಸ್ನೇಹಾ ಹಾಗೂ ಅವರ ಪಾಲಕರನ್ನು ಗ್ರಾಮಸ್ಥರು ಸನ್ಮಾನಿಸಿದರು

ಕುಟುಂಬದ ಬಡತನ ಪರಿಸ್ಥಿತಿ, ಹಣಕಾಸಿನ ತೊಂದರೆಯಿಂದ ಹತ್ತನೇ ತರಗತಿ ಪೂರೈಸಿದ ನಂತರ ಶಿಕ್ಷಣ ಮೊಟಕುಗೊಳಿಸಿ ಮನೆಯಲ್ಲಿಯೇ ಟೇಲರಿಂಗ್ ಮಾಡುವ ಮೂಲಕ ಕುಟುಂಬಕ್ಕೆ ಆಸರೆಯಾಗಿದ್ದರು. ಬಾಲಕಿಯರ ಕಲಿಕಾ ಆಸಕ್ತಿ ಗುರುತಿಸಿದ ಹಾಲಾಪುರದ ಜನನಿ ಖಾಸಗಿ ಕಾಲೇಜಿನ ಪ್ರಾಚಾರ್ಯರು ಶುಲ್ಕದಲ್ಲಿ ರಿಯಾಯಿತಿ ನೀಡುವುದಾಗಿ ಪಾಲಕರ ಮನವೊಲಿಸಿ ಕಾಲೇಜಿಗೆ ಪ್ರವೇಶ ನೀಡಿದ್ದರು.

ಸ್ನೇಹಾ

ಸಿಂಧು

ಬಾಲಕಿಯರ ಸಾಧನೆಗೆ ಮೆಚ್ಚುಗೆ ಸೂಚಿಸಿರುವ ಪ್ರಾಚಾರ್ಯ ನಾಗೇಶ, 'ನಮ್ಮ ನಿರೀಕ್ಷೆಯನ್ನು ಮಕ್ಕಳು ಹುಸಿ-ಗೊಳಿಸಲಿಲ್ಲ' ಎಂದು ಸಂತಸ ವ್ಯಕ್ತಪಡಿ-ಸಿದರು.

ಮುಂದೆ ಬಿ.ಕಾಂ ಪದವಿ ಜತೆ ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಚಾರ್ಟೆಂಡ್ ಅಕೌಂಟೆಂಟ್ (ಸಿಎ)ಗೆ ತಯಾರಿ ನಡೆಸುವ ಗುರಿ ಇಟ್ಟುಕೊಂಡಿದ್ದಾಗಿ ಹೇಳುವ ಸ್ನೇಹಾ ಮತ್ತು ಸಿಂಧು ಅವರು, ಟೇಲರಿಂಗ್‌ನಿಂದ ಬರುವ ಹಣದಲ್ಲಿ ಶಿಕ್ಷಣ ಮುಂದುವರಿಸುವ ಇಚ್ಛೆ ವ್ಯಕ್ತಪಡಿಸಿದರು.

ಮಹಾಬಲೇಶ್ವರಗೆ 3 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಮಹಾಬಲೇಶ್ವರ ಭಟ್ಟ ಅವರು ನೇಪಾಳದ ಪೋಖರದಲ್ಲಿ ನಡೆದ ಅಂತರರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್ ಷಿಪ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದಾರೆ.

70 ವರ್ಷ ಮೇಲ್ಪಟ್ಟವರ ವಿಭಾಗದ 60 ಮೀ. (7.05 ಸೆಕೆಂಡ್), 100 ಮೀ. (15.04ಸೆ) ಮತ್ತು 200 ಮೀ. ಓಟದಲ್ಲಿ (33.42ಸೆ) ಮಹಾಬಲೇಶ್ವರ ಅವರು ಚಾಂಪಿಯನ್ ಆದರು.

ಕರ್ನಾಟಕದ ನಾಲ್ವರು ಮಹಿಳಾ ಈಜುಪಟುಗಳು ಕೂಟದಲ್ಲಿ ಸ್ಪರ್ಧಿ-ಸಿದ್ದರು. 40 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ವಿಂಧ್ಯಾ ಪ್ರಭು ಎರಡು ಚಿನ್ನ, ಸಂಧ್ಯಾ ಪ್ರಭು ಒಂದು ಚಿನ್ನ ಮತ್ತು ಒಂದು ಬೆಳ್ಳಿ ಮತ್ತು ಸುನೀತಾ ಒಂದು ಚಿನ್ನ ಗೆದ್ದಿದ್ದಾರೆ. 65 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಕನಕವಲ್ಲಿ ಒಂದು ಚಿನ್ನ ಜಯಿಸಿದ್ದಾರೆ. ಸಂಯುಕ್ತಾ ಭಾರತೀಯ ಖೇಲ್ ಫೌಂಡೇಷನ್ (ಎಸ್‌ಬಿಕೆಎಫ್) ಆತಿಥ್ಯದಲ್ಲಿ ಏ.3ರಿಂದ 7ರವರೆಗೆ ಕೂಟ ನಡೆಯಿತು.

ಮೂರು ಚಿನ್ನದ ಪದಕಗಳೊಂದಿಗೆ ಮಹಾಬಲೇಶ್ವರ ಭಟ್ಟ

ಬೈಕ್ ಮೇಲಿಂದ ಬಿದ್ದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ: ಕಣ್ಣಿನ ಸಮಸ್ಯೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುರುವಾರ ಮಗನೊಂದಿಗೆ ಬೈಕ್‌ನಲ್ಲಿ ಊರಿಗೆ ಮರಳುತ್ತಿದ್ದ ವೇಳೆ ಹಿಂಬದಿ ಕುಳಿತಿದ್ದ ಮಹಿಳೆ ಆಯ ತಪ್ಪಿ ಕೆಳಗೆ ಬಿದ್ದು ಸಾವಿಗೀಡಾಗಿದ್ದಾರೆ.

ಸಾತನೂರು ಹೋಬಳಿ ಮಲ್ಲೇಗೌಡನ ದೊಡ್ಡಿ ಗ್ರಾಮದ ಪುಟ್ಟೇಗೌಡರ ಪತ್ನಿ ದುಂಡಮ್ಮ(65) ಮೃತ ಮಹಿಳೆ. ಹಿರಿಯ ಪುತ್ರ ನವೀನ್ ಕುಮಾರ್ ಜೊತೆ ಬೈಕ್‌ನಲ್ಲಿ ದಯಾನಂದ ಸಾಗರ ಆಸ್ಪತ್ರೆಗೆ ಕಣ್ಣು ತಪಾಸಣೆಗೆ ಹೋಗಿದ್ದರು.

ಸೀನಿಯರ್ ರಾಷ್ಟ್ರೀಯ ಹಾಕಿ ಎಂಟರ ಘಟ್ಟಕ್ಕೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಝಾನ್ಸಿ (ಪಿಟಿಐ): ಶೇಷೆಗೌಡ ಅವರು ಗಳಿಸಿದ ಎರಡು ಗೋಲುಗಳ ಬಲದಿಂದ ಕರ್ನಾಟಕ ಪುರುಷರ ತಂಡವು ಇಲ್ಲಿ ನಡೆಯುತ್ತಿರುವ ಹಾಕಿ ಇಂಡಿಯಾ 15ನೇ ಸೀನಿಯರ್ ರಾಷ್ಟ್ರೀಯ ಎ ಡಿವಿಷನ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಎಂಟರ ಘಟ್ಟಕ್ಕೆ ಪ್ರವೇಶಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು 3-2ರಿಂದ ಲೀ ಪುದುಚೇರಿ ವಿರುದ್ಧ ಜಯಿಸಿತು.

ಕರ್ನಾಟಕ ತಂಡದ ನಾಯಕ ಮೊಹಮ್ಮದ್ ರಾಹೀಲ್ (12ನೇ ನಿಮಿಷ) ಮೊದಲ ಗೋಲು ಹೊಡೆದರು. ಪುದುಚೇರಿಯ ಟಿ. ಅರುಣಕುಮಾರ್ (27ನೇ ನಿ) ಮತ್ತು ಪಿ. ಮಹೇಂದ್ರನ್ (37ನೇ ನಿ) ಗೋಲು ಹೊಡೆದು ಮುನ್ನಡೆ ಸಾಧಿಸಿದರು.

ಮೂರನೇ ಕ್ವಾರ್ಟರ್ ರೋಚಕವಾಗಿತ್ತು. ಕರ್ನಾಟಕದ ಶೇಷೆ ಗೌಡ (58ನಿ, 60ನಿ) ಅವರು ಎರಡು ಗೋಲು ಹೊಡೆದರು. ಇದರಿಂದಾಗಿ ತಂಡಕ್ಕೆ ಜಯ ಸಾಧ್ಯವಾಯಿತು.

ಚೆಸ್ ಸ್ಪರ್ಧೆ

ನಗರದ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ 'ನಮ್ಮ ಬೆಂಗಳೂರು' ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ ಓಪನ್ ಚೆಸ್ ಟೂರ್ನಿ ಗುರುವಾರ ಆರಂಭಗೊಂಡಿದ್ದು, ಇದೇ 18ರವರೆಗೆ ನಡೆಯಲಿದೆ. 'ಎ' ಕೆಟಗರಿಯಲ್ಲಿ 317 ಮತ್ತು 'ಬಿ' ಕೆಟಗರಿಯಲ್ಲಿ 763 ಸ್ಪರ್ಧಿಗಳು ಭಾಗವಹಿಸಿದ್ದಾರೆ. ಒಟ್ಟು ₹55 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ.

ನಗರದಲ್ಲಿ ಇಂದು

25ನೇ ವರ್ಷದ ಪ್ರವಚನ ವಾಹಿನಿ: ಯೋಗ ಕ್ಷೇಮ-ಧ್ಯಾನ, ಉಪನ್ಯಾಸ: ರಶ್ಮಿ ಚಂದ್ರಶೇಖರ್, ಆಯೋಜನೆ ಮತ್ತು ಸ್ಥಳ:ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ: ಸಂಜೆ 6.30

ಬೆಂಗಳೂರು ಕರಗ ಮಹೋತ್ಸವ: ಪೊಂಗಲು ಸೇವೆ (ಪುರಾಣ ಕಥನ), ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 7.30

ಸಮಷ್ಟಿ ಕನ್ನಡ ರಂಗ ತಂಡ: ನಾಟಕ ಪ್ರದರ್ಶನ: ನೀರು ಕುಡಿಸಿದ ನೀರೆಯರು, ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ್, ಸ್ಥಳ: ರಂಗ ಶಂಕರ, ಸಂಜೆ : 7.30

ರಾಮನವಮಿ ಮಹೋತ್ಸವ ವಿಶೇಷ

87ನೇ ರಾಮೋತ್ಸವ ಸಮಾರಂಭ: ಕರ್ನಾಟಕ ಶಾಸ್ತ್ರೀಯ ಸಂಗೀತ: 'ವರ್ಲ್ಡ್ ಕೊನ್ನಕೋಲ್ ಅಕಾಡೆಮಿ' ವಿದ್ಯಾರ್ಥಿಗಳು, ನೇತೃತ್ವ: ಕೊನ್ನಕೋಲ್ ಸೋಮಶೇಖರ್ ಜೋಯಿಸ್, ಪ್ರವಚನ: ಪಾವಗಡ ಪ್ರಕಾಶ ರಾವ್, ವಿಷಯ: ರಾಮಾಯಣದಲ್ಲಿನ ಪಾತ್ರ ಪರಿಚಯ, ಹಿಂದೂಸ್ತಾನಿ ಸಂಗೀತ ಮತ್ತು ಭಕ್ತಿ ಗೀತೆಗಳು: ಗಾಯನ: ಎಚ್.ಜಿ.ಚೈತ್ರಾ, ತಬಲಾ: ಎಚ್.ಎಸ್.ಗೋಪಿನಾಥ್, ಹಾರ್ಮೋನಿಯಂ: ಉಮಾಕಾಂತ್ ಪುರಾಣಿಕ್, ಕೀ ಬೋರ್ಡ್: ಅಭಿಷೇಕ್, ರಿದಂ ಪ್ಯಾಡ್: ವಿನಯ್ ಎಂ.ನಾಗರಾಜನ್, ಆಯೋಜನೆ: ಎನ್.ಆರ್.ಕಾಲೊನಿ ಶ್ರೀರಾಮಮಂದಿರ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್.ಆರ್.ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

32ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಜೆ 5.15, ಗಾಯನ: ಶಾಂಭವಿ, ಭೂಷ ಲಾವತೆ, ವಯಲಿನ್: ಶ್ರಾವ್ಯ ಅಚಂತ, ಮೃದಂಗ: ಎಸ್.ಶ್ರೀಕರ, ಸಂಜೆ 6.30, ಗಾಯನ: ಅಭಿಷೇಕ್ ರಘುರಾಮ್, ವಯಲಿನ್: ಎಚ್.ಎಂ.ಸ್ಮಿತಾ, ಮೃದಂಗ: ತುಮಕೂರು ಬಿ.ರವಿಶಂಕರ್, ಖಂಜೀರ: ಸುನಾದ್ ಆನೂರು, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ

ಶ್ರೀರಾಮೋತ್ಸವ: ಗಾಯನ: ಪಂಡಿತ್ ನಾಗರಾಜ ಹವಾಲ್ದಾರ್, ಓಂಕಾರನಾಥ ಹವಾಲ್ದಾರ್, ತಬಲಾ: ಕೇದಾರನಾಥ ಹವಾಲ್ದಾರ್, ಹಾರ್ಮೋನಿಯಂ: ಸಮೀರ್ ಹವಾಲ್ದಾರ್, ಆಯೋಜನೆ ಮತ್ತು ಸ್ಥಳ: ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ, 8ನೇ ಬ್ಲಾಕ್, ಸಂಜೆ 6.30

71ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಸಂಜೆ 5.30: ಭರತನಾಟ್ಯ: ರಶ್ಮಿ ಕಾರ್ತಿಕ್, ಶ್ರೀಮತಿ, ಅನನ್ಯ, ಧನ್ಯ, ರಾತ್ರಿ 7, ಆರ್ಟ್ ಆಫ್ ಲಿವಿಂಗ್ 'ಭಜನೆ', ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ ಶಿಷ್ಯವೃಂದ, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ

87ನೇ ಶ್ರೀರಾಮನವಮಿ ಸಂಗೀತೋತ್ಸವ: ಕರ್ನಾಟಕ ಸಂಗೀತ: ಗಾಯನ: ರಾಮಕೃಷ್ಣನ್ ಮೂರ್ತಿ, ವಯಲಿನ್: ನಿಶಾಂತ್ ಚಂದ್ರ, ಮೃದಂಗ: ಎನ್. ಸಿ.ಭಾರದ್ವಾಜ್, ಖಂಜೀರ: ಜಿ.ಗುರುಪ್ರಸನ್ನ, ಆಯೋಜನೆ ಮತ್ತು ಸ್ಥಳ: ರಾಮಸೇವಾ ಮಂಡಲಿ, ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

ವಸಂತ ನವರಾತ್ರಿ ರಾಮೋತ್ಸವ: ಹರಿನಾಮ ಸಂಕೀರ್ತನೆ: ಸಂಧ್ಯಾ ಶ್ರೀನಾಥ್, ಸುಮಲತಾ ಮಂಜುನಾಥ್, ಕೀಬೋರ್ಡ್: ಅಮಿತ ಶರ್ಮಾ, ತಬಲಾ; ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಬ್ಯಾಸ್ಕೆಟ್‌ಬಾಲ್: ರಾಮಯ್ಯ ಕಾಲೇಜಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೊಶುವಾ, ಆದರ್ಶ್ ಅವರ ಅಮೋಘ ಆಟದ ನೆರವಿನಿಂದ ಬೆಂಗಳೂರು ರಾಮಯ್ಯ ತಾಂತ್ರಿಕ ಕಾಲೇಜಿನ ಪುರುಷರ ತಂಡವು ಗುರುವಾರ ಅಖಿಲ ಭಾರತ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ನಗರದ ಅಲೈಯನ್ಸ್ ವಿಶ್ವವಿ-ದ್ಯಾಲಯದ ಆತಿಥ್ಯದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ರಾಮಯ್ಯ ಕಾಲೇಜು ತಂಡವು 82-73ರಿಂದ ಪಿಇಎಸ್ ವಿಶ್ವ-ವಿದ್ಯಾಲಯ ತಂಡವನ್ನು ಮಣಿಸಿತು.

ಪ್ರಶಸ್ತಿಯೊಂದಿಗೆ ಬೆಂಗಳೂರು ರಾಮಯ್ಯ ತಾಂತ್ರಿಕ ಕಾಲೇಜಿನ ಬ್ಯಾಸ್ಕೆಟ್‌ಬಾಲ್ ತಂಡ

ರಾಮಯ್ಯ ತಂಡದ ಪರ ಜೊಶುವಾ 22, ಆದರ್ಶ್ 18 ಮತ್ತು ಪ್ರಾಣೇಶ್ 15 ಪಾಯಿಂಟ್ಸ್ ಗಳಿಸಿದರು. ಪಿಇಎಸ್‌ನ ಪೃಥ್ವಿ ಮತ್ತು ಅಲೆಕ್ಸ್ ಕ್ರಮವಾಗಿ 20 ಮತ್ತು 18 ಪಾಯಿಂಟ್ಸ್ ಕಲೆ ಹಾಕಿದರು.

ಹಣ ಕಳೆದುಕೊಳ್ಳುತ್ತಿರುವ ಸಾಫ್ಟ್‌ವೇರ್ ಉದ್ಯೋಗಿಗಳು, ಗೃಹಿಣಿಯರು

ಫುಡ್ ಡೆಲಿವರಿ ಆ್ಯಪ್ ಹೆಸರಲ್ಲೂ ವಂಚನೆ

• ಆದಿತ್ಯ ಕೆ.ಎ.

ಬೆಂಗಳೂರು: ದಟ್ಟಣೆಯ ಕಿರಿಕಿರಿ, ಕೆಲಸದ ಒತ್ತಡ ಹಾಗೂ ಸಮಯದ ಅಭಾವದಿಂದ ಅಗತ್ಯ ವಸ್ತುಗಳು ಹಾಗೂ ಆಹಾರ ಪದಾರ್ಥಗಳನ್ನು ಮನೆಗೇ ತರಿಸಿಕೊಳ್ಳುವವರ ಸಂಖ್ಯೆ ನಗರ ಪ್ರದೇಶಗಳಲ್ಲಿ ಹೆಚ್ಚಾಗುತ್ತಿದೆ. ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ ಕೆಲವೇ ಕ್ಷಣಗಳಲ್ಲಿ ಮನೆಗೆ ವಸ್ತುಗಳೂ ತಲುಪುತ್ತಿವೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ವಂಚಕರು, ವಿವಿಧ ಹೆಸರಿನಲ್ಲಿ ನೂತನ ಆ್ಯಪ್ ಸೃಷ್ಟಿಸಿಕೊಂಡು ಜನರ ಹಣವನ್ನು ದೋಚುತ್ತಿದ್ದಾರೆ.

ಕೃತಕ ಬುದ್ಧಿಮತ್ತೆಯ(ಎ.ಐ) ಮಿಮಿಕ್ರಿ, ಒಎಲ್‌ಎಕ್ಸ್, ಬ್ಯಾಂಕ್ ವಹಿವಾಟಿನ ಒನ್ ಟೈಂ ಪಾಸ್‌ವರ್ಡ್ (ಒಟಿಪಿ), 'ಡಿಜಿಟಲ್ ಅರೆಸ್ಟ್', ತಮ್ಮ ಹೆಸರಿನಲ್ಲಿ ಕೊರಿಯರ್ ಮೂಲಕ ಮಾದಕ ವಸ್ತುಗಳು ಪೂರೈಕೆ ಆಗುತ್ತಿವೆ ಎಂದು ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಬೆದರಿಸಿ ಹಣ ದೋಚುತ್ತಿದ್ದ ಸೈಬರ್ ವಂಚಕರು, ಇದೀಗ ಫುಡ್ ಡೆಲಿವರಿ ಆ್ಯಪ್ ಮೂಲಕವೂ ವಂಚನೆಗೆ ಇಳಿದಿದ್ದಾರೆ. ಇದು ಹೊಸದಾಗಿ ನಡೆಯುತ್ತಿರುವ ವಂಚನೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಬೆಳಿಗ್ಗೆಯೇ ತುರ್ತು ಕೆಲಸಕ್ಕೆ ಹೋಗಬೇಕಿತ್ತು. ತಿಂಡಿಗೆ ಆರ್ಡರ್ ಮಾಡಿದ್ದೆ. ತಿಂಡಿ ಸಕಾಲದಲ್ಲಿ ಬಾರದೇ ಇದ್ದಾಗ ಗ್ರಾಹಕರ ಸೇವಾ ಕೇಂದ್ರಕ್ಕೆ ಕರೆ ಮಾಡಿದ್ದೆ. ಅಲ್ಲಿದ್ದ ವ್ಯಕ್ತಿ ಯಾವುದೋ ಆ್ಯಪ್ ಕ್ಲಿಕ್ ಮಾಡುವಂತೆ ಹೇಳಿದ್ದ. ಅದನ್ನು ಕ್ಲಿಕ್ ಮಾಡಿದ ಬಳಿಕ ಬ್ಯಾಂಕ್ ಖಾತೆಯಲ್ಲಿದ್ದ ಹಣ ಕಡಿತವಾಯಿತು. ಇನ್ನೂ ಸಂಜೆ ಮನೆಗೆ ಬರುವುದು ತಡವಾಗಿತ್ತು. ಅಡುಗೆ ಮಾಡಲು ಮನೆಯಲ್ಲಿ ಯಾವುದೇ ಸಾಮಗ್ರಿ ಇರಲಿಲ್ಲ. ಆ್ಯಪ್‌ನಲ್ಲಿ ತರಕಾರಿ, ಹಾಲು, ಮೊಸರು ಆರ್ಡರ್ ಮಾಡಿದ್ದೆ. ಅದರಲ್ಲಿ ಕೆಲವು ಪದಾರ್ಥ ಇರಲಿಲ್ಲ. ಬಳಿಕ ಗ್ರಾಹಕರ ಸೇವಾ ಕೇಂದ್ರಕ್ಕೆ ಕರೆ ಮಾಡಿದ್ದೆ. ಆ ಕಡೆಯಿಂದ ವ್ಯಕ್ತಿ ನೀಡಿದ ಸೂಚನೆ ಪಾಲಿಸಿದ್ದರಿಂದ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ಕಳೆದುಕೊಳ್ಳುವಂತಾಯಿತು ಎಂದು ಹೇಳಿಕೊಂಡು ಠಾಣೆಗೆ ಬರುತ್ತಿರುವ ಸಾಫ್ಟ್‌ವೇರ್ ಉದ್ಯೋಗಿಗಳು, ಪೇಯಿಂಗ್ ಗೆಸ್ಟ್ ನಿವಾಸಿಗಳು ಹಾಗೂ ಗೃಹಿಣಿಯರ ಸಂಖ್ಯೆ ಹೆಚ್ಚಾಗಿದೆ' ಎಂದು ಸೈಬರ್ ಅಪರಾಧ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

> ಕರೆ ಮಾಡಿದ್ದ ವ್ಯಕ್ತಿ ನೀಡಿದ ಸೂಚನೆಯಂತೆ ಆ್ಯಪ್ ಮೇಲೆ ಕ್ಲಿಕ್ ಮಾಡಿದ ಕೆಲವೇ ಕ್ಷಣಗಳಲ್ಲಿ ಬ್ಯಾಂಕ್ ಖಾತೆಯಲ್ಲಿದ್ದ ₹40 ಸಾವಿರ ಡ್ರಾ ಆಗಿತ್ತು
>
> **ಸುನಿತಾ ಖುರಾನ,** ಹಣ ಕಳೆದುಕೊಂಡವರು

ಅಪರಾಧ ಸುದ್ದಿ

'ಹೊಸ ವಿಧಾನದ ವಂಚನೆಯಲ್ಲಿ ಹಣ ಕಳೆದುಕೊಂಡವರು ಸೈಬರ್ ಅಪರಾಧ ಹಾಗೂ ಕಾನೂನು ಸುವ್ಯವಸ್ಥೆ ಠಾಣೆಗಳಿಗೆ ದೂರು ನೀಡುತ್ತಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಹಣ ವಾಪಸ್ ನೀಡುವುದಾಗಿ ವಂಚನೆ: 'ಆ್ಯಪ್‌ವೊಂದರಲ್ಲಿ ಅಲಿ ಅಸ್ಗರ್ ರಸ್ತೆಯ ಕೃಷ್ಣ ಅಪಾರ್ಟ್‌ಮೆಂಟ್‌ನ ನಿವಾಸಿ ಸುನಿತಾ ಖುರಾನ ಅವರು ಎರಡು ಕೆ.ಜಿ. ಕಿತ್ತಳೆ ಹಣ್ಣು, 250 ಗ್ರಾಂ. ಕೊತ್ತಂಬರಿ ಸೊಪ್ಪು, ಒಂದು ಕೆ.ಜಿ ಐಸ್‌ಕ್ರೀಂಗೆ ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ್ದರು. ಎರಡು ಕೆ.ಜಿ ಕಿತ್ತಳೆ ಹಣ್ಣು, 250 ಗ್ರಾಂ. ಕೊತ್ತಂಬರಿ ಸೊಪ್ಪು ಅನ್ನು ಡೆಲಿವರಿ ಹುಡುಗ ಮನೆಗೆ ತಲುಪಿಸಿದ್ದ. ಆದರೆ, ಐಸ್ ಕ್ರೀಂ ಬಂದಿರಲಿಲ್ಲ. ಗೂಗಲ್‌ನಲ್ಲಿ ಹುಡುಕಾಟ ನಡೆಸಿದ್ದ ಅವರು ಅಲ್ಲಿ ಸಿಕ್ಕಿದ ಸೇವಾ ಕೇಂದ್ರದ ಹೆಸರಿನಲ್ಲಿದ್ದ ನಂಬರ್‌ಗೆ ಕರೆ ಮಾಡಿದ್ದರು. ಕರೆ ಸ್ವೀಕರಿಸಿದ ವ್ಯಕ್ತಿ ಆನ್‌ಲೈನ್ ಆರ್ಡರ್‌ಗೆ ಸಂಬಂಧಿಸಿದ ಆ್ಯಪ್ ನಿರ್ವಹಣೆಯ ಸಿಬ್ಬಂದಿ ಎಂಬುದಾಗಿ ಹೇಳಿಕೊಂಡಿದ್ದ. ಐಸ್ ಕ್ರೀಂ ಮನೆಗೆ ತಲುಪದ ಬಗ್ಗೆ ಮಹಿಳೆ ತಿಳಿಸಿದಾಗ ₹400 ವಾಪಸ್ ನೀಡುವುದಾಗಿ ಆತ ತಿಳಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆ್ಯಪ್ ಡೌನ್‌ಲೋಡ್‌ಗೆ ಸೂಚನೆ: 'ಮೊಬೈಲ್‌ನಲ್ಲಿ ಕೆಲವು ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ಕರೆ ಸ್ವೀಕರಿಸಿದ್ದ ವ್ಯಕ್ತಿ ಸೂಚನೆ ನೀಡಿದ್ದ. ಅದರಂತೆ ದೂರುದಾರ ಮಹಿಳೆ, ಆ್ಯಪ್ ಡೌನ್‌ಲೋಡ್ ಮಾಡಿಕೊಂಡು, ಅದರ ಮೇಲೆ ಕ್ಲಿಕ್ ಮಾಡಿದ್ದರು. ಕ್ಷಣಾರ್ಧದಲ್ಲಿ ಅವರ ಖಾತೆಯಲ್ಲಿದ್ದ ಹಣ ಖಾಲಿ ಆಗಿತ್ತು' ಎಂದು ಮೂಲಗಳು ತಿಳಿಸಿವೆ.

ಪ್ರತ್ಯೇಕ ಆ್ಯಪ್ ಸೃಷ್ಟಿಸಿ ಮೋಸ

'ಕೆಲಸದ ಒತ್ತಡದಲ್ಲಿ ಇರುವವರು ಆನ್‌ಲೈನ್ ಮೂಲಕ ಆಹಾರ ಪದಾರ್ಥಗಳನ್ನು ಮನೆಗೇ ತರಿಸಿಕೊಳ್ಳುತ್ತಿದ್ದಾರೆ. ನಂಬಿಕೆಗೆ ಅರ್ಹವಾದ ಆ್ಯಪ್‌ಗಳನ್ನೇ ಡೌನ್‌ಲೋಡ್ ಮಾಡಿಕೊಂಡು ಆರ್ಡರ್ ಮಾಡಬೇಕು. ಸಿಕ್ಕ ಸಿಕ್ಕ ಆ್ಯಪ್‌ನಲ್ಲಿ ಆರ್ಡರ್ ಮಾಡಿದರೆ ಹಣ ಕಳೆದುಕೊಳ್ಳುವ ಸಾಧ್ಯತೆಯಿದೆ. ಹಣ ಕಳೆದುಕೊಂಡಿರುವ ಸುನಿತಾ ಖುರಾನ ಅವರು ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಸೈಬರ್ ಅಪರಾಧ ತಡೆ ಘಟಕ ಆರಂಭ

ಬೆಂಗಳೂರು: ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ಆ ಪ್ರಕರಣಗಳನ್ನು ತಡೆಗಟ್ಟಲು ಸೈಬರ್ ಅಪರಾಧ ತಡೆ ಘಟಕವನ್ನು ಅಸ್ತಿತ್ವಕ್ಕೆ ತರಲಾಗಿದೆ. ದೇಶದಲ್ಲೇ ಮೊದಲ ಸೈಬರ್ ತನಿಖಾ ಘಟಕ ಇದಾಗಿದೆ.

ತಂತ್ರಜ್ಞಾನದ ಅತಿಯಾದ ಬಳಕೆ ಹಾಗೂ ಅವಲಂಬನೆಯಿಂದ ಹೆಚ್ಚು ಸೈಬರ್ ಅಪರಾಧ ಪ್ರಕರಣಗಳು ದಾಖಲಾಗುತ್ತಿವೆ. ಹಳೆಯ ವೃತ್ತಿಪರ ಅಪರಾಧಗಳಾದ ಡಕಾಯಿತಿ, ದರೋಡೆ ಹಾಗೂ ಇತರೆ ಭೌತಿಕ ಕಳ್ಳತನಗಳನ್ನು ಹಿಂದಿಕ್ಕಿ ಹೆಚ್ಚು ಸೈಬರ್ ಅಪರಾಧ ಪ್ರಕರಣಗಳು ವರದಿ ಆಗುತ್ತಿವೆ.

ಸೈಬರ್ ಅಪರಾಧ ತಡೆಗಟ್ಟಲು ರಾಜ್ಯದಲ್ಲಿ ಪ್ರತ್ಯೇಕ ಸೈಬರ್ ಅಪರಾಧ ತಡೆ ಘಟಕ ಸ್ಥಾಪಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಸರ್ಕಾರವು ಮನವಿಗೆ ಸ್ಪಂದಿಸಿ ಘಟಕವನ್ನು ಸ್ಥಾಪಿಸಿದೆ.

ಈ ಘಟಕಕ್ಕೆ 193 ಹುದ್ದೆಗಳನ್ನು ಮಂಜೂರು ಮಾಡುವಂತೆ ಹಾಗೂ ಘಟಕಕ್ಕೆ ₹75 ಕೋಟಿ ಅನುದಾನ ನೀಡುವಂತೆ ಕೋರಲಾಗಿತ್ತು. ಆದರೆ, ಇರುವ ಸಿಬ್ಬಂದಿಯನ್ನೇ ಬಳಸಿಕೊಂಡು ಪರಿಣಾಮಕಾರಿಯಾಗಿ ಸೈಬರ್ ಅಪರಾಧ ತಡೆಗಟ್ಟುವ ಕೆಲಸ ಮಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಸದ್ಯಕ್ಕೆ ₹5 ಕೋಟಿ ಅನುದಾನ ಮಂಜೂರು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿಐಡಿ ವಿಭಾಗದಲ್ಲಿನ ಡಿಜಿಪಿ ಮಾದಕ ವಸ್ತು ಮತ್ತು ಸೈಬರ್ ಅಪರಾಧ ಹುದ್ದೆಯನ್ನು ಬೇರ್ಪಡಿಸಿ ಡಿಜಿಪಿ ಸೈಬರ್ ಕಮಾಂಡ್ ಎಂದು ಪದನಾಮೀಕರಿಸಲಾಗಿದೆ. ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ಪ್ರಸ್ತುತವಿರುವ ಕಚೇರಿ ಹಾಗೂ ಮೂಲಸೌಕರ್ಯ ಬಳಸಿಕೊಂಡು ಕೆಲಸ ಮಾಡುವಂತೆ ಆದೇಶದಲ್ಲಿ ಸೂಚಿಸಲಾಗಿದೆ. ಐಜಿಪಿ, ಎಸ್‌.ಪಿ ಸೇರಿದಂತೆ ಇತರೆ ಸಿಬ್ಬಂದಿಯನ್ನು ಹಂತ ಹಂತವಾಗಿ ನೇಮಕ ಮಾಡಲು ಸರ್ಕಾರ ಉದ್ದೇಶಿಸಿದೆ.

ಸೈಬರ್ ಭದ್ರತೆ, ಸೈಬರ್ ಅಪರಾಧ, ಮಹಿಳೆಯರು ಮತ್ತು ಮಕ್ಕಳ ಮೇಲಿನ ಆನ್‌ಲೈನ್ ಅಪರಾಧಗಳು, ಡಿಜಿಟಲ್ ಅರೆಸ್ಟ್ ಸೇರಿದಂತೆ ಸೈಬರ್ ವಂಚನೆಗಳು, ಡೀಪ್ ಫೇಕ್ ಸಂಬಂಧಿಸಿದಂತೆ ದಾಖಲಾಗುವ ಪ್ರಕರಣಗಳ ಕುರಿತು ಈ ಘಟಕವು ತನಿಖೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಇಂದಿರಾನಗರ: ಮದ್ಯದ ಅಮಲಿನಲ್ಲಿ ಮನೆಗೆ ನುಗ್ಗಿದ ವ್ಯಕ್ತಿ

ಬೆಂಗಳೂರು: ಮದ್ಯದ ಅಮಲಿನಲ್ಲಿ ವ್ಯಕ್ತಿಯೊಬ್ಬ ಸಿಕ್ಕಸಿಕ್ಕ ಮನೆಗಳಿಗೆ ನುಗ್ಗಿ ಕಳ್ಳತನ ನಡೆಸಿರುವುದು ಇಂದಿರಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಆರೋಪಿಯ ಕೃತ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಇಂದಿರಾನಗರದ ಹಲವು ರಸ್ತೆಗಳಲ್ಲಿ ಓಡಾಟ ನಡೆಸಿ, ಮನೆಯ ಮಹಡಿ ಮೇಲೇರಿ ಭಯದ ವಾತಾವರಣ ಸೃಷ್ಟಿಸಿದ್ದಾನೆ. ಅಲ್ಲದೇ ಕಿಟಕಿಗಳನ್ನು ತೆರೆದು ಇಣುಕಿ ನೋಡಿ ಮನೆಯಲ್ಲಿ ಇದ್ದವರನ್ನು ಬೆಚ್ಚಿ ಬೀಳಿಸಿದ್ದಾನೆ. ಕೆಲವು ಮನೆಗಳಲ್ಲಿ ವಾಚ್, ಮೊಬೈಲ್ ಹಾಗೂ ನಗದು ಕಳ್ಳತನ ಮಾಡಿದ್ದಾನೆ ಎಂದು ಮೂಲಗಳು ತಿಳಿಸಿವೆ. ಆರೋಪಿಯ ಚಲನವಲನವು ಹಲವು ಮನೆಗಳಲ್ಲಿ ಅಳವಡಿಸಿರುವ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ.

ಇಂದಿರಾನಗರದ ಆರನೇ ಮುಖ್ಯರಸ್ತೆಯ ನಿವಾಸಿ ಕಾರ್ಲಟನ್ ಕೆನ್ನಿ ಅವರು ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 4ರಂದು ಮಧ್ಯಾಹ್ನ 3 ಗಂಟೆ ಸುಮಾರಿಗೆ ಕಾರ್ಲಟನ್ ಕೆನ್ನಿ ಅವರ ನಿವಾಸಕ್ಕೆ ಅಪರಿಚಿತ ವ್ಯಕ್ತಿ ಮನೆಗೆ ನುಗ್ಗಿದ್ದ. ದೂರುದಾರರ ತಾಯಿ ಮನೆಯಲ್ಲಿ ಒಬ್ಬರೇ ಇದ್ದರು. ಸೋಫಾದ ಮೇಲೆ ಇಡಲಾಗಿದ್ದ ಬ್ಯಾಗ್‌ನಲ್ಲಿದ್ದ ₹20 ಸಾವಿರ ನಗದು, ಮೊಬೈಲ್ ಹಾಗೂ ವಾಚ್ ಕಳ್ಳತನ ಮಾಡಿಕೊಂಡು ಆರೋಪಿ ಪರಾರಿ ಆಗಿದ್ದಾನೆ' ಎಂದು ತಿಳಿಸಿದರು.

ಬೆಟ್ಟಹಲಸೂರು ಗ್ರಾ.ಪಂ.ನಲ್ಲಿ ಮಹಿಳಾ ಗ್ರಾಮಸಭೆ

ಯಲಹಂಕ: ಪ್ರತಿ ಹೆಣ್ಣಿನ ಬಾಳಿನಲ್ಲಿ ತಾಯ್ತನ ಎಂಬುದು ಮಹತ್ವದ ಘಟ್ಟವಾಗಿದ್ದು, ಈ ಸಂದರ್ಭದಲ್ಲಿ ಕುಟುಂಬ ಸದಸ್ಯರು ಹಾಗೂ ಸಮಾಜ ಆಕೆಯನ್ನು ಪ್ರೀತಿಯಿಂದ ಕಾಣಬೇಕು ಎಂದು ಬೆಟ್ಟಹಲಸೂರು ಗ್ರಾಮಪಂಚಾಯಿತಿ ಅಧ್ಯಕ್ಷೆ ಹೇಮಾವತಿ ನಾಗರಾಜ ಬಾಬು ಹೇಳಿದರು.

ಬೆಟ್ಟಹಲಸೂರು ಗ್ರಾಮಪಂಚಾಯಿತಿ ವತಿಯಿಂದ ಬೆಟ್ಟಹಲಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಆಯೋಜಿಸಿದ್ದ 2024-25ನೇ ಸಾಲಿನ ಮಹಿಳಾ ಗ್ರಾಮಸಭೆಯಲ್ಲಿ ಗರ್ಭಿಣಿಯರಿಗೆ ಸೀಮಂತಕಾರ್ಯ ನೆರವೇರಿಸಿ ಮಾತನಾಡಿದರು.

ಕೆಲವು ಗರ್ಭಿಣಿಯರಿಗೆ ಪೋಷಕರು ಇರುವುದಿಲ್ಲ; ಮತ್ತೆ ಕೆಲವರು ಹೊರರಾಜ್ಯಗಳಿಂದ ಬಂದು ಕೂಲಿ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ. ಇಂತಹವರಿಗೆ ಸೀಮಂತಕಾರ್ಯ ಮಾಡಲು ಶಕ್ತಿಯಿರುವುದಿಲ್ಲ. ಈ ದಿಸೆಯಲ್ಲಿ ಪಂಚಾಯಿತಿ ವತಿಯಿಂದ ಸೀಮಂತಕಾರ್ಯ ಮಾಡಲಾಗಿದೆ. ಹೆರಿಗೆಯಾದ ನಂತರ ತಾಯಿ ಮತ್ತು ಮಗುವಿಗೆ ಉಪಯೋಗವಾಗುವಂತಹ ವಸ್ತುಗಳನ್ನು ಒಳಗೊಂಡ ಕಿಟ್ ಸಹ ನೀಡಲಾಗಿದೆ ಎಂದರು.

ಪಂಚಾಯಿತಿ ವತಿಯಿಂದ ಆಶಾ, ಅಂಗನವಾಡಿ ಶಿಕ್ಷಕರು ಹಾಗೂ ಸಹಾಯಕಿಯರಿಗೆ ಸಹಾಯಧನದ ಚೆಕ್ ಹಾಗೂ ಸರ್ಕಾರಿ ಆಸ್ಪತ್ರೆಗೆ ಚೇರ್, ಟೇಬಲ್, ಯುಪಿಎಸ್ ಹಾಗೂ ಗೀಸರ್ ವಿತರಿಸಲಾಯಿತು. ಗರ್ಭಕೋಶ ಕಾಯಿಲೆಗೆ ಸಂಬಂಧಿಸಿದಂತೆ ಸ್ಕ್ರೀನಿಂಗ್ ಮತ್ತು ಆರೋಗ್ಯ ತಪಾಸಣೆ ಮತ್ತು ನಡೆಸಲಾಯಿತು. ಮಹಿಳೆಯರಿಗಾಗಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪೌರಕಾರ್ಮಿಕರಿಗೆ ನೆನಪಿನ ಕಾಣಿಕೆ ವಿತರಿಸಲಾಯಿತು.

ಹಣದ ಆಸೆಗೆ ವ್ಯಕ್ತಿಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರದ ವಿಕಾಸ್ ಕುಮಾರ್ ಮಾಚೋತ್(25) ಎಂಬುವರ ಕೊಲೆ ಪ್ರಕರಣದ ಸಂಬಂಧ ಪೀಣ್ಯ ಠಾಣೆ ಪೊಲೀಸರು ಮೂವರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಕೀರ್ತಿ ಹಾಗೂ ಆತನ ಸಹಚರರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಏಪ್ರಿಲ್ 6ರಂದು ಬಿಹಾರದ ವಿಕಾಸ್ ಕುಮಾರ್ ಮಾಚೋತ್ ಕೊಲೆ ನಡೆದಿತ್ತು. ಆರಂಭದಲ್ಲಿ ಕೊಲೆಯಾದ ವ್ಯಕ್ತಿಯ ಗುರುತು ಪತ್ತೆ ಆಗಿರಲಿಲ್ಲ. ಗುರುತು ಪತ್ತೆಯಾದ ನಂತರ ಪೊಲೀಸರು ತನಿಖೆ ಚುರುಕುಗೊಳಿಸಿದ್ದರು.

ಮಾಗಡಿ ರಸ್ತೆಯ ಕಡಬಗೆರೆಯಲ್ಲಿ ವಾಸವಾಗಿದ್ದ ವಿಕಾಸ್ ಅವರು ಕಟ್ಟಡ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದರು. ಶನಿವಾರ ಅಂದ್ರಹಳ್ಳಿಯಲ್ಲಿ ಕಟ್ಟಡ ನಿರ್ಮಾಣ ಕೆಲಸ ಮುಗಿಸಿಕೊಂಡು ಮನೆಗೆ ಹೊರಟಿದ್ದರು. ಬಸ್ ಟಿಕೆಟ್‌ಗೆ ₹15 ವೆಚ್ಚವಾಗುತ್ತದೆ ಎಂಬ ಕಾರಣದಿಂದ ನಡೆದು ಮನೆಯತ್ತ ಹೊರಟಿದ್ದರು ಎಂದು ಗೊತ್ತಾಗಿದೆ.

'ವಿಕಾಸ್ ಅವರ ಕೈಯಲ್ಲಿ ಬ್ಯಾಗ್ ಇತ್ತು. ಅದನ್ನು ಗಮನಿಸಿದ್ದ ಆರೋಪಿಗಳು ಬ್ಯಾಗ್‌ನಲ್ಲಿ ಹಣ ಇರಬಹುದು ಎಂದು ಭಾವಿಸಿ ಹಲ್ಲೆ ನಡೆಸಿ ಅಪಹರಿಸಿದ್ದರು. ಬಳಿಕ ಪೀಣ್ಯದ ಬಳಿ ಕರೆದೊಯ್ದು ಮತ್ತೆ ಥಳಿಸಿದ್ದರು. ಆತನ ಬಳಿ ಹಣ ಇಲ್ಲ ಎಂಬುದು ಆರೋಪಿಗಳಿಗೆ ಗೊತ್ತಾಗಿ ಅಲ್ಲಿಂದ ತೆರಳಲು ಮುಂದಾಗಿದ್ದರು. ಅಷ್ಟರಲ್ಲಿ ವಿಕಾಸ್ ಮೃತಪಟ್ಟಿದ್ದರು. ಗಾಬರಿಗೊಂಡ ಆರೋಪಿಗಳು, ಮೃತದೇಹವನ್ನು ಮಾರ್ಗ ಮಧ್ಯೆ ಕರಿಓಬನಹಳ್ಳಿಯ ಪೊದೆಯಲ್ಲಿ ಎಸೆದು ಪರಾರಿ ಆಗಿದ್ದರು' ಎಂದು ಮೂಲಗಳು ತಿಳಿಸಿವೆ.

ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿದ್ದ ಪೀಣ್ಯ ಠಾಣೆ ಪೊಲೀಸರು, ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ದಾಬಸ್‌ಪೇಟೆ ಬಳಿಯ ಹೆದ್ದಾರಿಯಲ್ಲಿ ಕಾರು ಅಪಘಾತ: ಮೂವರ ಸಾವು

ನಾಮಕರಣಕ್ಕೆ ಹೊರಟವರು ಸಾವಿನ ಮನೆಗೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಬೆಂಗಳೂರು–ತುಮಕೂರು ರಾಷ್ಟ್ರೀಯ ಹೆದ್ದಾರಿ -48ರ ದಾಬಸ್‌ಪೇಟೆಯ ಲಕ್ಕೂರು ಸೇತುವೆ ಬಳಿ ಗುರುವಾರ ಕಾರೊಂದು ಅಪಘಾತಕ್ಕೀಡಾಗಿ ಮೂವರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಮಲ್ಲೇಶ್ವರದ ಎಂಟನೇ ಕ್ರಾಸ್‌ನ ತೆಂಗಿನಮರದ ರಸ್ತೆಯ ನಿವಾಸಿಗಳಾದ ಗೋಪಾಲ್ (60), ಅವರ ಪತ್ನಿ ಶಶಿಕಲಾ (55) ಹಾಗೂ ಪುತ್ರಿ ದೀಪಾ (30) ಮೃತಪಟ್ಟವರು. ಮಕ್ಕಳಾದ ಭುವನ್(5) ಹಾಗೂ ಆದ್ಯ ಅವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಶಿಕಲಾ ಹಾಗೂ ದೀಪಾ ಸ್ಥಳದಲ್ಲೇ ಮೃತಪಟ್ಟರೆ, ಗೋಪಾಲ್ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ತುಮಕೂರು ಸಮೀಪದ ಗ್ರಾಮವೊಂದರ ಸಂಬಂಧಿಕರ ಮನೆಯಲ್ಲಿ ಆಯೋಜಿಸಿದ್ದ ನಾಮಕರಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಾರುತಿ ಸೆಲೆರಿಯೊ ಕಾರಿನಲ್ಲಿ ತೆರಳುತ್ತಿದ್ದರು.

ಅಪಘಾತದಲ್ಲಿ ಮೃತಪಟ್ಟ ಗೋಪಾಲ್, ದೀಪಾ ಹಾಗೂ ಶಶಿಕಲಾ

ಲಕ್ಕೂರು ಸೇತುವೆ ಬಳಿ ಕಾರು ನಿಯಂತ್ರಣ ಕಳೆದುಕೊಂಡು ರಸ್ತೆಯ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ.

'ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಬೆಂಗಳೂರು ಕಡೆಯಿಂದ ತುಮಕೂರು ಕಡೆ ಕಾರು ಚಲಿಸುತ್ತಿತ್ತು. ಅದೇ ಮಾರ್ಗವಾಗಿ ಹೋಗುತ್ತಿದ್ದ ಲಾರಿ ಚಾಲಕ ಅಡ್ಡಾದಿಡ್ಡಿಯಾಗಿ ಚಾಲನೆ ಮಾಡುತ್ತಿದ್ದ. ಲಾರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಕಾರು ರಸ್ತೆಯ ವಿಭಜಕ್ಕೆ ಡಿಕ್ಕಿಯಾಗಿದೆ ಎಂಬುದು ಗೊತ್ತಾಗಿದೆ. ಘಟನೆ ನಡೆದ ಸ್ಥಳದಲ್ಲಿನ ಸಿಸಿಟಿವಿ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಅಪಘಾತ ನಡೆದ ಸ್ಥಳಕ್ಕೆ ಬೆಂಗಳೂರು ಗ್ರಾಮಾಂತರ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ.ಬಾಬಾ ಹಾಗೂ ನೆಲಮಂಗಲ ಸಂಚಾರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು

ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್‌ಪಿ ಸಿ.ಕೆ.ಬಾಬಾ ಹಾಗೂ ನೆಲಮಂಗಲ ಸಂಚಾರ ಠಾಣೆಯ ಪೊಲೀಸರು ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಲಾಯಿತು.

ಸಂಚಾರ ದಟ್ಟಣೆ: ಅಪಘಾತದಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ನೆಲಮಂಗಲ ಸಂಚಾರ ಠಾಣೆಯ ಪೊಲೀಸರು, ಅಪಘಾತಕ್ಕೀಡಾದ ಕಾರನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

ಬಿಡದಿ: ಅಕ್ರಮ ಅಂಗಡಿಗಳ ತೆರವು

ರಾಮನಗರ: ತಾಲ್ಲೂಕಿನ ಬಿಡದಿ ಪುರಸಭೆ ಸಿಬ್ಬಂದಿ ಬುಧವಾರ ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡು ನಿರ್ಮಾಣ ಮಾಡಿದ್ದ ಅನಧಿಕೃತ ಅಂಗಡಿ ಹಾಗೂ ಪಾದಚಾರಿ ಮಾರ್ಗದ ವ್ಯಾಪಾರಿಗಳನ್ನು ತೆರವುಗೊಳಿಸಿದರು.

ಬೆಳಗ್ಗೆ 6ಕ್ಕೆ ಬೃಹತ್ ನಿರ್ಮಾಣ ಯಂತ್ರಗಳ ಮೂಲಕ ಒತ್ತುವರಿ ತೆರವು ಕಾರ್ಯಾಚರಣೆಗೆ ಪುರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿ ಮುಂದಾದರು. ಮುನ್ಸೂಚನೆ ನೀಡದೆ ಆರಂಭವಾದ ಕಾರ್ಯಾಚರಣೆಯನ್ನು ಬೀದಿಬದಿ ವ್ಯಾಪಾರಿಗಳು ವಿರೋಧಿಸಿದರು. ಸ್ಥಳದಲ್ಲಿದ್ದ ಅಧಿಕಾರಿಗಳು ಹಾಗೂ ಪುರಸಭೆ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು. ಯಾವುದೇ ಸೂಚನೆ ನೀಡದೆ ದೌರ್ಜನ್ಯ ಮಾಡಲಾಗುತ್ತಿದೆ. ಇದು ಕಾನೂನುಬಾಹಿರ. ನ್ಯಾಯಸಮ್ಮತವಲ್ಲದ ನಡೆ ಎಂದು ಆರೋಪಿಸಿದರು. ಇದಕ್ಕೆ ಕಿವಿಗೊಡದ ಸಿಬ್ಬಂದಿ ತೆರವು ಕಾರ್ಯಾಚರಣೆ ಮುಂದುವರೆಸಿದರು.



ಆನೇಕಲ್ ತಾಲ್ಲೂಕಿನ ಎಲೆಕ್ಟ್ರಾನಿಕ್ ಸಿಟಿಯ ಫ್ಲೈಓವರ್ ಮೇಲೆ ಸರಣಿ ಅಪಘಾತದಿಂದ ರಸ್ತೆ ದಟ್ಟಣೆ ಉಂಟಾಗಿತ್ತು

ಸರಣಿ ಅಪಘಾತ: 10 ಕಾರು ಜಖಂ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಎಲೆಕ್ಟ್ರಾನಿಕ್ ಸಿಟಿಯ ಫ್ಲೈಓವರ್ ಮೇಲೆ ಗುರುವಾರ ಸರಣಿ ಅಪಘಾತ ಸಂಭವಿಸಿದೆ. ಅಪಘಾತದಿಂದಾಗಿ 10ಕ್ಕೂ ಹೆಚ್ಚು ಕಾರು ಜಖಂಗೊಂಡಿವೆ.

ಅಪಘಾತದಿಂದಾಗಿ, ರಸ್ತೆಯಲ್ಲಿ ಎರಡು–ಮೂರು ತಾಸು ದಟ್ಟಣೆ ಉಂಟಾಗಿತ್ತು. ಎರಡು ಕಿ.ಮೀ.ಗೂ ಹೆಚ್ಚು ದೂರ ವಾಹನಗಳ ಸಾಲು ಕಂಡು ಬಂತು. ಅತಿ ವೇಗವಾಗಿ ಹೋಗುತ್ತಿದ್ದ ಕಾರೊಂದು ಏಕಾಏಕಿ ಬ್ರೇಕ್ ಹಾಕಿದ್ದರಿಂದ ಸರಣಿ ಅಪಘಾತ ಸಂಭವಿಸಿದೆ ಎಂದು ಪ್ರತ್ಯದರ್ಶಿಗಳು ತಿಳಿಸಿದ್ದಾರೆ.

4.10 ಕೋಟಿ ಮಂದಿ ಪ್ರಯಾಣ • ಐದು ಲಕ್ಷ ಟನ್ ಸರಕು ಸಾಗಣೆ

ಪ್ರಯಾಣಿಕರ ಸಂಖ್ಯೆ: ಕೆಐಎ ಮೈಲುಗಲ್ಲು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ 2024-25 ಹಣಕಾಸು ವರ್ಷದಲ್ಲಿ 4.10 ಕೋಟಿ ಪ್ರಯಾಣಿಕರು ಪ್ರಯಾಣಿಸಿದ್ದಾರೆ. ಈ ವಿಮಾನ ನಿಲ್ದಾಣದಿಂದ ಐದು ಲಕ್ಷ ಟನ್ ಸರಕು ಸಾಗಣೆ ಮಾಡಲಾಗಿದೆ.

ದೇಶೀಯ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ10ರಷ್ಟು ಏರಿಕೆಯಾಗುವ ಮೂಲಕ 3.60 ಕೋಟಿ ತಲುಪಿದೆ. ಅಂತರ ರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 25ರಷ್ಟು ಹೆಚ್ಚಳವಾಗುವ ಮೂಲಕ 50.83 ಲಕ್ಷ ತಲುಪಿದೆ.

2023–24ರಲ್ಲಿ 3.75 ಕೋಟಿ ಪ್ರಯಾಣಿಕರು ಪ್ರಯಾಣಿಸಿದ್ದರು. ಅದಕ್ಕೆ ಹೋಲಿಸಿದರೆ 2024-25 ಹಣಕಾಸು ವರ್ಷದಲ್ಲಿ ಪ್ರಯಾಣಿಕರ ಸಂಖ್ಯೆ ಶೇ 11.6ರಷ್ಟು ಹೆಚ್ಚಳವಾಗಿದೆ.

ಈ ಮೂಲಕ ಹೊಸ ದಾಖಲೆ ಸೃಷ್ಟಿಯಾಗಿದ್ದು, ಪ್ರಯಾಣಿಕರ ಸಂಚಾರ ಮತ್ತು ಸರಕು ಸಾಗಣೆಯಲ್ಲಿ ಮೈಲುಗಲ್ಲು ಸೃಷ್ಟಿಸಿದೆ ಎಂದು ವಿಮಾನ ನಿಲ್ದಾಣದ ಪ್ರಕಟಣೆ ತಿಳಿಸಿದೆ.

ನಾಲ್ಕು ತಿಂಗಳಲ್ಲಿ ಅಂತರ ರಾಷ್ಟ್ರೀಯ ಪ್ರಯಾಣಿಕರ ಪ್ರಯಾಣ ಸಂಖ್ಯೆಯಲ್ಲಿ ಭಾರತದ ಮೂರನೇ ಅತ್ಯಂತ ಜನನಿಬಿಡ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆ ಪಾತ್ರವಾಗಿದೆ.

ಇಂಡಿಗೊ ವಿಮಾನಯಾನ ಸಂಸ್ಥೆ ಜಾಗತಿಕವಾಗಿ ಜಾಲ ವಿಸ್ತರಿಸಿರುವುದು, ಲಂಡನ್‌ನ ಹೀಥ್ರೊಗೆ ದೈನಂದಿನ ಹೆಚ್ಚುವರಿ ವಿಮಾನ ಹಾರಾಟ ಆರಂಭ ಆಗಿರುವುದು ಅಂತರರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿದೆ.

ಕ್ಯಾಥೆ ಪೆಸಿಫಿಕ್, ಕೆಎಲ್‌ಎಂ, ಜಪಾನ್ ಏರ್‌ಲೈನ್ಸ್, ಕ್ವಾಂಟಾಸ್ ಸೇರಿ ಹಲವು ವಿದೇಶಿ ವಿಮಾನಯಾನ ಸಂಸ್ಥೆಗಳ ವಿಮಾನ ಸಂಚಾರ ಪ್ರಮಾಣ ಹೆಚ್ಚಳವಾಗಿರುವುದು ಅಂತರ ರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ ಹೆಚ್ಚಳಕ್ಕೆ ಕಾರಣ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಅಂಕಿ ಅಂಶಗಳು

4.10 ಕೋಟಿ	3.60 ಕೋಟಿ	50.83 ಲಕ್ಷ	5 ಲಕ್ಷ ಟನ್	3.21 ಲಕ್ಷ ಟನ್	1.81 ಟನ್
2024–25ರಲ್ಲಿ ಬೆಂಗಳೂರು ವಿಮಾನ ನಿಲ್ದಾಣದಿಂದ ಪ್ರಯಾಣಿಸಿದವರ ಸಂಖ್ಯೆ	ದೇಶಿ ಪ್ರಯಾಣಿಕರು	ಅಂತರರಾಷ್ಟ್ರೀಯ ಪ್ರಯಾಣಿಕರು	ಸರಕು ಸಾಗಣೆ	ಅಂತರರಾಷ್ಟ್ರೀಯ ಸರಕು ಸಾಗಣೆ	ದೇಶೀಯ ಸರಕು ಸಾಗಣೆ

ಮಾವು, ಕೊತ್ತಂಬರಿ ರಫ್ತಿನಲ್ಲಿ ಮುಂಚೂಣಿ

ಬೆಂಗಳೂರು ವಿಮಾನ ನಿಲ್ದಾಣವು ಮಾವು ಮತ್ತು ಕೊತ್ತಂಬರಿ ಸೊಪ್ಪು ರಫ್ತಿನಲ್ಲಿ ಮುಂಚೂಣಿಯಲ್ಲಿದೆ.

ಸಿದ್ಧ ಉಡುಪು, ಔಷಧ ಮತ್ತು ಯಂತ್ರೋಪಕರಣ, ಬಿಡಿ ಭಾಗಗಳ ಸಾಗಣೆ ಹೆಚ್ಚಳವಾಗಿದೆ. ಸರಕು ಸಾಗಣೆಗೆ ಮೀಸಲಾದ 12 ವಿಮಾನಯಾನ ಸಂಸ್ಥೆಗಳು ಬೆಂಗಳೂರಿನಿಂದ ಸಿಂಗಾಪುರ, ಲಂಡನ್, ಫ್ರಾಂಕ್‌ಫರ್ಟ್, ಷಿಕಾಗೊ ಮತ್ತು ಮಸ್ಕತ್‌ನಂತಹ ಪ್ರಮುಖ ರಫ್ತು ಕೇಂದ್ರಿತ ನಗರಗಳನ್ನು ಸಂಪರ್ಕಿಸುತ್ತದೆ.

ಸಿಂಗಾಪುರ, ಶಾಂಘೈ, ಹಾಂಗ್‌ಕಾಂಗ್ ಮತ್ತು ಫ್ರಾಂಕ್‌ಫರ್ಟ್ ನಗರಗಳು ಕೆಂಪೇಗೌಡ ಅಂತಾರಾಷ್ಟ್ರೀಯ ನಿಲ್ದಾಣಕ್ಕೆ ಸರಕುಗಳು ಆಮದಾಗುವ ಪ್ರಮುಖ ತಾಣಗಳಾಗಿವೆ.

ಹನೋಯಿಗೆ ನೇರ ವಿಮಾನ

33 ಅಂತರರಾಷ್ಟ್ರೀಯ ನಿಲ್ದಾಣಗಳಿಗೆ ಬೆಂಗಳೂರಿನಿಂದ ತಡೆ ರಹಿತ ವಿಮಾನ ಸಂಚರಿಸುತ್ತವೆ. ಇದೇ ಮೇ ತಿಂಗಳಿನಿಂದ ವಿಯೆಟ್ನಾಂ ರಾಜಧಾನಿ ಹನೋಯಿಗೆ ನೇರ ವಿಮಾನ ಸಂಚಾರ ಆರಂಭವಾಗಲಿದೆ.

ಅದರೊಂದಿಗೆ 34ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆಂಗಳೂರಿನಿಂದ ತಡೆರಹಿತ ವಿಮಾನ ಸಂಚಾರ ಆರಂಭವಾದಂತಾಗುತ್ತದೆ.

ಪಿಟಿಸಿಎಲ್: ಹಕ್ಕು ಪುನರ್‌ಸ್ಥಾಪನೆ ಕೋರಿಕೆ

ಮೇಲ್ಮನವಿದಾರರಿಗೆ ₹25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯ (ಎಸ್‌ಸಿ) ವ್ಯಕ್ತಿಗೆ ಸರ್ಕಾರದಿಂದ ಮಂಜೂರಾಗಿದ್ದ ಜಮೀನನ್ನು ಮತ್ತೊಬ್ಬರಿಗೆ ನೋಂದಣಿ ಮಾಡಿಕೊಟ್ಟ ಸಂಗತಿಯನ್ನು ಮರೆಮಾಚಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಮೀನುಗಳ ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆ–1978ರ ಅಡಿಯಲ್ಲಿ, ಜಮೀನಿನ ಹಕ್ಕು ಪುನರ್ ಸ್ಥಾಪಿಸಲು ನ್ಯಾಯಾಲಯದ ಮೆಟ್ಟಿಲೇರಿದ್ದ ಕುಟುಂಬಕ್ಕೆ ಹೈಕೋರ್ಟ್ ₹25 ಸಾವಿರ ದಂಡ ವಿಧಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಸಿಂಗೇನ ಅಗ್ರಹಾರ ವ್ಯಾಪ್ತಿಯಲ್ಲಿ ಚಿಕ್ಕವೆಂಕಟಮ್ಮ ಅವರಿಗೆ ಸರ್ಕಾರದಿಂದ ಜಮೀನು ಮಂಜೂರಾಗಿತ್ತು. ಇದನ್ನು ಅವರು ಮಾರಾಟ ಮಾಡಿದ್ದರು. ತದನಂತರ ಜಮೀನನ್ನು ಪುನಃ ಪಡೆಯಲು ಕಾನೂನು ಹೋರಾಟ ನಡೆಸಿದ್ದ ಚಿಕ್ಕವೆಂಕಟಮ್ಮ ಕುಟುಂಬದ ವಾರಸುದಾರರು ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾ. ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ಪೀಠ ಈ ಬಗ್ಗೆ ಆದೇಶಿಸಿದೆ.

'ದಂಡದ ಮೊತ್ತವನ್ನು ಆರು ವಾರಗಳಲ್ಲಿ, 'ಕರ್ನಾಟಕ ರಾಜ್ಯ ವಕೀಲರ ಕಲ್ಯಾಣ ನಿಧಿ'ಗೆ ಪಾವತಿ ಮಾಡಬೇಕು. ತಪ್ಪಿದಲ್ಲಿ ಹೈಕೋರ್ಟ್ ರಿಜಿಸ್ಟ್ರಾರ್ ಈ ಮೊತ್ತವನ್ನು ಮೇಲ್ಮನವಿದಾರರಿಂದ ವಸೂಲಿ ಮಾಡಬೇಕು' ಎಂದು ನಿರ್ದೇಶಿಸಿದೆ.

'ಪಿಟಿಸಿಎಲ್ ಕಾಯ್ದೆಯನ್ನು ಸಾಮಾಜಿಕ ಮತ್ತು ಆರ್ಥಿಕ ತುಳಿತಕ್ಕೆ ಒಳಗಾದವರ ನೆರವಿಗಾಗಿ ಅನುಷ್ಠಾನಗೊಳಿಸಲಾಗಿದೆ. ಈ ಕಾಯ್ದೆಯಡಿ ಮಂಜೂರಾದ ಜಮೀನನ್ನು ಪರಭಾರೆ ಮಾಡುವುದಕ್ಕೆ ನಿಷೇಧವಿದೆ. ಆದರೂ, ಶ್ರೀಮಂತರು ಹಾಗೂ ಪ್ರಬಲರು ಇಂತಹ ಜಮೀನಗಳನ್ನು ಪಡೆಯಲು ಅನುದಾನಿತರ ಬಡತನ ಮತ್ತು ಅನಕ್ಷರತೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ' ಎಂದು ನ್ಯಾಯಪೀಠ ವಿಷಾದಿಸಿದೆ.

ಯೋಗೀಶ್‌ಗೌಡ ಗೌಡ ಕೊಲೆ ಪ್ರಕರಣ 15ರಿಂದ ವಿಚಾರಣೆ



ಧಾರವಾಡ ಜಿಲ್ಲಾ ಪಂಚಾಯಿತಿಯ ಹೆಬ್ಬಳ್ಳಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯ ಇದೇ 15ರಿಂದ ಮುಂದುವರಿಸಲಿದೆ.

ಪ್ರಕರಣದ ಮೊದಲ ಆರೋಪಿ ಬಸವರಾಜ ಶಿವಪ್ಪ ಮುತ್ತಗಿಯನ್ನು, ಮೂರನೇ ಬಾರಿಗೆ ಮಾಫಿ ಸಾಕ್ಷಿಯಾಗಿ ಪರಿಗಣಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಮಾನಿಸಿದ್ದನ್ನು ಪ್ರಕರಣದ ಆರೋಪಿ ವಿನಯ ಕುಲಕರ್ಣಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಈ ಕುರಿತಾದ ಎಲ್ಲ ರಿಟ್ ಅರ್ಜಿಗಳನ್ನು ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಇತ್ತೀಚೆಗಷ್ಟೇ ವಜಾಗೊಳಿಸಿತ್ತು. ಅಂತೆಯೇ, ನಾಲ್ಕು ವಾರಗಳಲ್ಲಿ ವಿಚಾರಣೆ ಮುಕ್ತಾಯಗೊಳಿಸುವಂತೆ ವಿಶೇಷ ನ್ಯಾಯಾಲಯಕ್ಕೆ ಆದೇಶಿಸಿತ್ತು.

ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಆರೋಪಿಗಳಾದ ಚಂದ್ರಶೇಖರ ಇಂಡಿ, ದಿನೇಶ್ ಮತ್ತು ಅಶ್ವತ್ಥ್ ಸುಪ್ರೀಂ ಕೋರ್ಟ್ ಕದತಟ್ಟಿದ್ದು, ಈ ವಿಶೇಷ ಮೇಲ್ಮನವಿ ಸುಪ್ರೀಂ ಕೋರ್ಟ್‌ನಲ್ಲಿ 15ರಂದು ವಿಚಾರಣೆಗೆ ನಿಗದಿಯಾಗಿದೆ.

ಇದರ ಬೆನ್ನಲ್ಲೇ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ಸೆಷನ್ಸ್ ನ್ಯಾಯಾಲಯ'ದ ನ್ಯಾಯಾಧೀಶ ಸಂತೋಷ ಗಜಾನನ ಭಟ್; ಪ್ರಕರಣದ ವಿಚಾರಣೆ ಈವರೆಗೂ ಎಲ್ಲಿಗೆ ಸ್ಥಗಿತಗೊಂಡಿತ್ತೋ ಅಲ್ಲಿಂದ ಮುಂದುವರಿಸುವುದಾಗಿ ಇದೇ 9ರಂದು ಪ್ರಕಟಿಸಿದ್ದಾರೆ. ಅಂತೆಯೇ, ಪ್ರಕರಣದ 8 ಜನ ಪ್ರತ್ಯಕ್ಷ ಸಾಕ್ಷಿಗಳಿಗೆ ಸಮನ್ಸ್ ಜಾರಿಗೊಳಿಸಿ ಆದೇಶಿಸಿದ್ದಾರೆ.

ಬಹುಮಾನಗಳಿಗೆ ಆಯ್ಕೆಯಾದ ಪುಸ್ತಕ, ಲೇಖಕರ ಹೆಸರು ಘೋಷಣೆ

3 ವರ್ಷಗಳ 'ಪುಸ್ತಕ ಸೊಗಸು' ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು 2022, 2023 ಮತ್ತು 2024ನೇ ಸಾಲಿನ 'ಪುಸ್ತಕ ಸೊಗಸು' ಹಾಗೂ 'ಮುದ್ರಣ ಸೊಗಸು' ಬಹುಮಾನಗಳಿಗೆ ಆಯ್ಕೆಯಾದ ಪುಸ್ತಕ ಹಾಗೂ ಲೇಖಕರ ಹೆಸರನ್ನು ಪ್ರಕಟಿಸಿದೆ.

2022ನೇ ವರ್ಷದ ಬಹುಮಾನ: 'ಪುಸ್ತಕ ಸೊಗಸು' ಬಹುಮಾನಕ್ಕೆ 'ಗೇಬ್ರಿಯಲ್ ಗಾರ್ಸಿಯ ಮಾರ್ಕೇಸ್ ಗದ್ಯ ಗಾರುಡಿ'- ಕೇಶವ ಮಳಗಿ (ದೀಪಂಕರ ಪುಸ್ತಕ ಪ್ರಕಾಶನ ಸಂಸ್ಥೆ, ತುಮಕೂರು). 'ಅಧಿಷ್ಠಾನ ಬಾಯಿಪಾಠ ಪುಸ್ತಕ' –ಜಿ.ಕೆ.ದೇವರಾಜಸ್ವಾಮಿ (ಯುವಸಾಧನೆ ಪ್ರಕಾಶನ, ಬೆಂಗಳೂರು), 'ಅರಸು ಕುರನ್ಗರಾಯ' – ರವಿಕುಮಾರ್ ನೀಹ (ಜಲಜಂಬೂ ಲಿಂಕ್ಸ್ ಪ್ರಕಾಶನ, ತುಮಕೂರು) ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಕ್ಕೆ ಆಯ್ಕೆಯಾಗಿವೆ.

ಮಕ್ಕಳ ಪುಸ್ತಕ ಸೊಗಸು ಬಹುಮಾನಕ್ಕೆ 'ಮಲ್ಲಿಗೆ' – ಕುರುವ ಬಸವರಾಜ್ (ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು) ಮುಖಪುಟ ವಿನ್ಯಾಸ ಬಹುಮಾನಕ್ಕೆ 'ಅಮೂಲ್ಯ ಮತ್ತು ಡಾ.ರಾಜಕುಮಾರ್ ಕುರಿತ ನೂರಾರು ಚುಕ್ಕಿ ಚಿತ್ರ ಸಂಪುಟ'–ಎಚ್.ಎಚ್.ಮ್ಯಾದಾರ್ (ಬಹುಮಾನಿತ ಕಲಾವಿದ: ರಾಯಚೂರಿನ ಎಚ್.ಎಚ್. ಮ್ಯಾದಾರ್), ಮುಖಪುಟ ಚಿತ್ರಕಲೆ ಬಹುಮಾನಕ್ಕೆ 'ಮಾಧವಿ ಕಥನ– ಕಥನ ಕಾವ್ಯ'–ಪಾರ್ವತಿ ಜಿ.ಐತಾಳ್ (ಬಹುಮಾನಿತ ಕಲಾವಿದೆ: ಮಣಿಪಾಲದ ರೇವತಿ ನಾಡಿಗೇರ್), ಪುಸ್ತಕ ಮುದ್ರಣ ಸೊಗಸು ಬಹುಮಾನಕ್ಕೆ ಚಿಟ್ಟೆ–ಏಕವ್ಯಕ್ತಿ ಮಕ್ಕಳ ನಾಟಕ – ಬೇಲೂರು ರಘುನಂದನ್ (ಯಂತ್ರೋದ್ಧಾರಕ, ಬೆಂಗಳೂರು) ಕೃತಿ ಆಯ್ಕೆಯಾಗಿದೆ.

2023ನೇ ವರ್ಷದ ಬಹುಮಾನ: 'ಪುಸ್ತಕ ಸೊಗಸು' ಬಹುಮಾನಕ್ಕೆ 'ದೃಶ್ಯಕಲಾ ಕಮಲ'–'ಡಾ. ಆರ್.ಎಚ್.ಕುಲಕರ್ಣಿ ಹಾಗೂ ಎಚ್.ಎ.ಅನಿಲ್ ಕುಮಾರ್ (ಬೆಂಗಳೂರು ಆರ್ಟ್ ಫೌಂಡೇಷನ್ ಪ್ರಕಾಶನ, ಬೆಂಗಳೂರು), 'ಕಾಡುಗೊಲ್ಲ ಬುಡಕಟ್ಟು ಕುಲಕಥನ' –ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ (ಗೀತಾಂಜಲಿ ಪ್ರಕಾಶನ, ಶಿವಮೊಗ್ಗ), 'ಚಿತ್ರ ಭಿತ್ತಿ'–ಡಾ.ಮಲ್ಲಿಕಾರ್ಜುನ ಸಿ. ಬಾಗೋಡಿ (ಸರಚಂದ್ರ ಪ್ರಕಾಶನ, ಕಲಬುರಗಿ) ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಕ್ಕೆ ಆಯ್ಕೆಯಾಗಿವೆ.

'ಮಕ್ಕಳ ಪುಸ್ತಕ ಸೊಗಸು' ಬಹುಮಾನಕ್ಕೆ 'ಬಾಲ ಮಂದಾರ'–ಪರವೀನ್ ಬಾನು ಎಂ. ಶೇಖ (ಕಥಾಬಿಂದು ಪ್ರಕಾಶನ, ಮಂಗಳೂರು), ಮುಖಪುಟ ವಿನ್ಯಾಸ ಬಹುಮಾನಕ್ಕೆ 'ಬ್ಯೂಟಿ ಬೆಳ್ಳಕ್ಕಿ ಮಕ್ಕಳ ಕಥೆಗಳು'–ಡಾ. ಲಲಿತಾ ಕೆ. ಹೊಸಪ್ಯಾಟಿ (ಬಹುಮಾನಿತ ಕಲಾವಿದ ಸಂತೋಷ್ ಸಸಿಹಿತ್ಲು), ಮುಖಪುಟ ಚಿತ್ರಕಲೆಯ ಬಹುಮಾನಕ್ಕೆ 'ಬಿಡಾರ ಆತ್ಮಕಥೆ'–ಚಂದ್ರಕಾಂತ ಪೋಕಳೆ (ಬಹುಮಾನಿತ ಕಲಾವಿದ ಡಿ.ಕೆ.ರಮೇಶ್), ಪುಸ್ತಕ ಮುದ್ರಣ ಸೊಗಸು ಬಹುಮಾನಕ್ಕೆ 'ಕಂಬದಹಳ್ಳಿ ಕಂಬಾಪುರಿಯ ಪಂಚಕೂಟ ಬಸದಿ'– ಡಾ.ಎಸ್. ಗುರುಮೂರ್ತಿ (ಜ್ವಾಲಾಮುಖಿ ಮುದ್ರಣಾಲಯ ಪ್ರೈ.ಲಿ. ಬೆಂಗಳೂರು) ಕೃತಿ ಆಯ್ಕೆಯಾಗಿವೆ.

2024ನೇ ವರ್ಷದ ಬಹುಮಾನ: 'ಪುಸ್ತಕ ಸೊಗಸು'ಬಹುಮಾನಕ್ಕೆ 'ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಸಮಗ್ರ ಕೃತಿ ಜಗತ್ತು ಸಂಪುಟಗಳು'– ಪ್ರೊ. ಕೆ.ಸಿ.ಶಿವಾರೆಡ್ಡಿ (ಎಂ.ಮುನಿಸ್ವಾಮಯ್ಯ ಆ್ಯಂಡ್ ಸನ್ಸ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು), 'ಶಕ್ತಿನದಿ ಶರಾವತಿ'–ಕೆ.ಸಿ.ಶ್ರೀನಾಥ್ (ಅನಿಮಿಷ ಪ್ರಕಾಶನ, ದಾವಣಗೆರೆ), 'ಕಾಡು ಹುಡುಗನ ಹಾಡು ಪಾಡು'–ಸ್ವಾಮಿ ಪೊನ್ನಾಚಿ (ಅಮೂಲ್ಯ ಪ್ರಕಾಶನ, ಬೆಂಗಳೂರು) ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಕ್ಕೆ ಆಯ್ಕೆಯಾಗಿವೆ.

'ಮಕ್ಕಳ ಪುಸ್ತಕ ಸೊಗಸು' ಬಹುಮಾನಕ್ಕೆ 'ಕನ್ನಡ ನುಡಿ ಚಂದ ಚಿಲಿಪಿಲಿ ಶ್ರೀಗಂಧ'– ಚಂದ್ರಗೌಡ ಕುಲಕರ್ಣಿ (ಚಿಲಿಪಿಲಿ ಪ್ರಕಾಶನ, ಧಾರವಾಡ), ಮುಖಪುಟ ಚಿತ್ರವಿನ್ಯಾಸ ಬಹುಮಾನಕ್ಕೆ 'ಮಾತಿಗಿಳಿದ ಚಿತ್ರ'– ಲಕ್ಷ್ಮಣ ಬಾದಾಮಿ (ಬಹುಮಾನಿತ ಕಲಾವಿದ: ಬಾಗಲಕೋಟೆಯ ಲಕ್ಷ್ಮಣ ಬಾದಾಮಿ), ಮುಖಪುಟ ಚಿತ್ರಕಲೆಯ ಬಹುಮಾನಕ್ಕೆ 'ಬಣಮಿ'– ಕಪಿಲ.ಪಿ.ಹುಮನಾಬಾದೆ (ಬಹುಮಾನಿತ ಕಲಾವಿದ ಮದನ್ ಸಿ.ಪಿ) ಮತ್ತು 'ಪುಸ್ತಕ ಮುದ್ರಣ ಸೊಗಸು' ಬಹುಮಾನಕ್ಕೆ 'ಮತ್ತೆ ಮತ್ತೆ ಶಂಕರಗೌಡ ತಲೆಮಾರಿನಂತರದ ಮನಸುಗಳ ಇಣುಕು–ನೋಟ'– ಡಾ. ಶ್ರೀನಿವಾಸಯ್ಯ ಎನ್. ವೈ ಮತ್ತು ಎಂ.ಯು.ಶ್ವೇತ (ಅವಿನಾಶ್ ಗ್ರಾಫಿಕ್ಸ್, ಮಂಡ್ಯ) ಕೃತಿ ಆಯ್ಕೆಯಾಗಿವೆ.

ಪ್ರಥಮ ಬಹುಮಾನ ₹25 ಸಾವಿರ

'ಪುಸ್ತಕ ಸೊಗಸು' ಪ್ರಥಮ ₹25 ಸಾವಿರ, ದ್ವಿತೀಯ ₹ 20 ಸಾವಿರ ಮತ್ತು ತೃತೀಯ ಬಹುಮಾನ ₹10 ಸಾವಿರ ನಗದು ಒಳಗೊಂಡಿದೆ. ಮಕ್ಕಳ ಪುಸ್ತಕ ಸೊಗಸು ₹8 ಸಾವಿರ, ಮುಖಪುಟ ಚಿತ್ರ ವಿನ್ಯಾಸ ₹10 ಸಾವಿರ, ಮುಖಪುಟ ಚಿತ್ರಕಲೆ ₹8 ಸಾವಿರ ಮತ್ತು ಪುಸ್ತಕ ಮುದ್ರಣ ಸೊಗಸು ಬಹುಮಾನ ₹5 ಸಾವಿರ ನಗದು ಒಳಗೊಂಡಿದೆ

ಸತ್ಯಶೋಧನಾ ಸಮಿತಿ ರಚಿಸದ ಸರ್ಕಾರಗಳ ಧೋರಣೆ ವಿರುದ್ಧ ಹೈಕೋರ್ಟ್ ಗರಂ

ಕೆಪಿಎಸ್‌ಸಿ ಸದಸ್ಯರ ನೇಮಕ: ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎರಡು ದಶಕಗಳಿಂದ ಈಚೆಗೆ ನಡೆದಿರುವ ಕರ್ನಾಟಕ ಲೋಕಸೇವಾ ಆಯೋಗದಲ್ಲಿನ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆಗಳು ಅದರ ಗೌರವವನ್ನು ಅಧೋಗತಿಗೆ ತಂದು ನಿಲ್ಲಿಸಿವೆ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಕೆಪಿಎಸ್‌ಸಿ ಸದಸ್ಯರ ನೇಮಕಾತಿಗೆ ಈವರೆಗೂ ಸತ್ಯಶೋಧನಾ ಸಮಿತಿಯನ್ನೇ ರಚಿಸದ ರಾಜ್ಯ ಸರ್ಕಾರಗಳ ಧೋರಣೆಯನ್ನು ಕಟು ಪದಗಳಲ್ಲಿ ಖಂಡಿಸಿದೆ.

ಎಂಜಿನಿಯರ್‌ಗಳ ನೇಮಕಾತಿಗೆ ಸಂಬಂಧಿಸಿದ ಪ್ರಕರಣದಲ್ಲಿ, ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) ಆದೇಶ ಪ್ರಶ್ನಿಸಿ

ಎಂಜಿನಿಯರ್‌ಗಳಾದ ವಿಶ್ವಾಸ್ ಮತ್ತಿತರರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ರಾಮಚಂದ್ರ ಡಿ.ಹುದ್ದಾರ ಅವರ ವಿಭಾಗೀಯ ನ್ಯಾಯಪೀಠ, 'ಕೆಪಿಎಸ್‌ಸಿ ನೇಮಕಾತಿಯಲ್ಲಿ, ಅಭ್ಯರ್ಥಿಗಳು ತಮಗಿಂತಲೂ ಕೆಳಮಟ್ಟದ ಜ್ಞಾನ ಹೊಂದಿದವರ ಮುಂದೆ ಸಂದರ್ಶನಕ್ಕೆ ಹಾಜರಾಗುವಂತಹ ಸನ್ನಿವೇಶ ದಿಗ್ಭ್ರಮೆ ಹುಟ್ಟಿಸುತ್ತದೆ' ಎಂದು ನುಡಿದಿದೆ.

'ಇಲ್ಲಿಯತನಕ ಯಾವುದೇ ಶೋಧನಾ ಸಮಿತಿ ಇರಲಿಲ್ಲ ಮತ್ತು ಸತ್ಯಶೋಧನಾ ಸಮಿತಿ ರಚಿಸಿ, ಅದರ ನೆರವು ಪಡೆಯದೆ ಕೆಪಿಎಸ್‌ಸಿಗೆ ಸದಸ್ಯರನ್ನು ನೇಮಿಸಲಾಗುತ್ತಿದೆ' ಎಂಬ ಅಂಶವನ್ನು ಗಂಭೀರವಾಗಿ ಒರೆಗೆ ಹಚ್ಚಿರುವ ನ್ಯಾಯಪೀಠ, 'ಅನರ್ಹರನ್ನು ಕೆಪಿಎಸ್‌ಸಿ ಸದಸ್ಯರನ್ನಾಗಿ ನೇಮಿಸಿದರೆ, ಅಂಥವರು ವಿವಿಧ ಜ್ಞಾನಶಾಖೆಗಳಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ಅರ್ಹ ಅಭ್ಯರ್ಥಿಗಳಿಗೆ ಹೇಗೆ ತಾನೆ ಸಂದರ್ಶನ ನಡೆಸಲು, ಸಂವಾದಿಸಲು ಸಾಧ್ಯವಾಗುತ್ತದೆ' ಎಂದು ಪ್ರಶ್ನಿಸಿದೆ.

ರಾಜ್ಯ ಸರ್ಕಾರದ ಪರ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, 'ಕೆಪಿಎಸ್‌ಸಿ ಸದಸ್ಯರ ಆಯ್ಕೆ ಮತ್ತು ನೇಮಕಾತಿಗೆ ನೆರವು ನೀಡಲು ಶೋಧನಾ ಸಮಿತಿಯ ರಚನೆಗೆ ತುರ್ತಾಗಿ ಕೆಲವು ಪ್ರಕ್ರಿಯೆಗಳನ್ನು ರೂಪಿಸಲಾಗುತ್ತಿದೆ. ಇದರ ಪ್ರಗತಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿರುವ ನ್ಯಾಯಪೀಠ, 'ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡಂತಿದೆ. ಸದಸ್ಯರ ನೇಮಕಾತಿಗೆ ಅರ್ಹರ ಹೆಸರು ಶಿಫಾರಸು ಮಾಡಲು ಶೋಧನಾ ಸಮಿತಿಯನ್ನು ರಚಿಸಲು ಆಸಕ್ತಿ ತೋರಿಸುತ್ತಿರುವುದು ಶ್ಲಾಘನೀಯ. ಆದರೆ, ಈ ಕಾರ್ಯವನ್ನು ಯುದ್ಧೋಪಾದಿಯಲ್ಲಿ ನಡೆಸಬೇಕಿದೆ. ಮುಂದಿನ ವಿಚಾರಣೆಯ ವೇಳೆಗೆ ಕೆಲ ನಿಯಮಗಳನ್ನು ಸರ್ಕಾರ ಹೊರತರುತ್ತದೆ' ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದೆ.

'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ (ಆರ್‌ಡಿಪಿಆರ್) ಕುಡಿಯುವ ನೀರು ಪೂರೈಕೆ ವಿಭಾಗದ ಸಹಾಯಕ ಕಾರ್ಯಕಾರಿ ಎಂಜಿನಿಯರ್‌ಗಳ (ಎಇಇ) ನೇಮಕದಲ್ಲಿ ಅಕ್ರಮ ನಡೆದಿರುವುದು ಸಾಬೀತಾಗಿರುವ ಕಾರಣ ಅವರನ್ನು ಕೆಲಸದಿಂದ ವಜಾಗೊಳಿಸುವಂತೆ ಕೆಪಿಎಸ್‌ಸಿ ಮಾಡಿರುವ ಶಿಫಾರಸಿಗೆ ತಡೆ ನೀಡಬೇಕು' ಎಂಬ ಅರ್ಜಿದಾರರ ಮನವಿಯನ್ನು ಕೆಎಸ್‌ಎಟಿ ತಿರಸ್ಕರಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಸಿಬಿಐ ಅಥವಾ ಎಸ್‌ಐಟಿಗೆ...

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, 'ಈಗಾಗಲೇ ಕೆಪಿಎಸ್‌ಸಿ ಹಗರಣಗಳ ಬಗ್ಗೆ ಸಿಐಡಿ ತನಿಖೆ ತೃಪ್ತಿಕರವಾಗಿ ನಡೆದಿದೆ. ಹೀಗಾಗಿ, ಇದನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ' ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಯಾಗಿ, ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರಾದ ವಿ.ಲಕ್ಷ್ಮಿನಾರಾಯಣ ಮತ್ತು ಎಂ.ಎಸ್.ಭಾಗವತ್ ಅವರು, 'ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಿದರೆ ತಮ್ಮದೇನೂ ಅಭ್ಯಂತರವಿಲ್ಲ' ಎಂದು ನ್ಯಾಯಪೀಠಕ್ಕೆ ಒಪ್ಪಿಗೆ ಸೂಚಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಈಚೆಗೆ ಸಮನ್ವಯ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಭೋವಿ ಅಭಿವೃದ್ಧಿ ನಿಗಮದ ಅವ್ಯವಹಾರದಲ್ಲಿ ಆರೋಪಿಯಾಗಿದ್ದ ವಕೀಲೆ ಎಸ್.ಜೀವಾ ಆತ್ಮಹತ್ಯೆ ಪ್ರಕರಣವನ್ನು ಸಿಬಿಐನ ಎಸ್‌ಪಿ ನೇತೃತ್ವದಲ್ಲಿ ತನಿಖೆ ನಡೆಸಲು ಎಸ್‌ಐಟಿ ರಚಿಸಿರುವಂತೆ; ಈ ಪ್ರಕರಣದಲ್ಲೂ ರಚಿಸಿದರೆ ಹೇಗೆ' ಎಂಬ ಜಿಜ್ಞಾಸೆ ವ್ಯಕ್ತಪಡಿಸಿತು.

ಅಂತಿಮವಾಗಿ ಎಲ್ಲರ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ, 'ಮೈಸೂರು ಮತ್ತು ಕಲಬುರಗಿಗಳಲ್ಲಿ ನೇಮಕಾತಿ ಪಡೆದವರ ತರಬೇತಿಗೆ ಯಾವುದೇ ಕಾನೂನಾತ್ಮಕ ಬಾಧೆ ಇಲ್ಲ ಎಂಬ ಮಧ್ಯಂತರ ಆದೇಶ ಮುಂದುವರಿಯಲಿದೆ' ಎಂದು ಸ್ಪಷ್ಟಪಡಿಸಿ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿದೆ. ಕೆಪಿಎಸ್‌ಸಿ ಪರ ಪದಾಂಕಿತ ಹಿರಿಯ ವಕೀಲ ಪಿ.ಎಸ್.ರಾಜಗೋಪಾಲ ಮತ್ತು ಪ್ರಕಾಶ್ ಹಾಜರಿದ್ದರು.

ಹೈಕೋರ್ಟ್‌ನಲ್ಲಿ ಜನ್ಮದಿನದ ಮೋಜು-ಮಸ್ತಿ: ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ನೆಲಮಾಳಿಗೆಯ ಲೋಕೋಪಯೋಗಿ ವಿಶೇಷ ಕಟ್ಟಡಗಳ ಉಪ ವಿಭಾಗದಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಆಫ್ ಮಾಡಿಸಿ ಜನ್ಮದಿನ ಆಚರಿಸಿಕೊಂಡು ಮೋಜು-ಮಸ್ತಿ ಮಾಡಿದ ಆರೋಪದಡಿ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಎ.ಟಿ.ಮೀನಾ ಸೇರಿದಂತೆ ಒಟ್ಟು ಐವರನ್ನು ಸೇವೆಯಿಂದ ಅಮಾನತುಗೊಳಿಸಿ ಲೋಕೋಪಯೋಗಿ ಇಲಾಖೆ ಆದೇಶಿಸಿದೆ.

ದೂರಿನ ಕುರಿತಂತೆ ವಿಚಾರಣೆ ನಡೆಸಿದ್ದ, ಶಿವಮೊಗ್ಗದ ಸಂಪರ್ಕ ಮತ್ತು ಕಟ್ಟಡ ವಿಭಾಗದ ಇಲಾಖಾ ಮುಖ್ಯ ಎಂಜಿನಿಯರ್ ಸಲ್ಲಿಸಿದ ವರದಿಯನ್ನು ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ.

'2025ರ ಫೆಬ್ರುವರಿ 22ರಂದು ಜನ್ಮದಿನ ಆಚರಿಸಿಕೊಂಡಿರುವ ಎ.ಟಿ. ಮೀನಾ ಹಾಗೂ ಈ ಸಂದರ್ಭದಲ್ಲಿ ಇವರ ಜೊತೆ ಪಾಲ್ಗೊಂಡಿದ್ದ ಸಿಬ್ಬಂದಿ ಸಿ.ಸಿ.ಟಿ.ವಿ. ಕ್ಯಾಮೆರಾ ಆಫ್ ಮಾಡಿಸಿರುವುದು ಭದ್ರತೆ ಮತ್ತು ಕರ್ತವ್ಯ ಲೋಪವಾಗಿದೆ. ಕಚೇರಿಯ ಘನತೆ ಹಾಗೂ ಗೌರವ ಕಾಪಾಡಿಕೊಳ್ಳುವಲ್ಲಿ ಇವರೆಲ್ಲಾ ವಿಫಲವಾಗಿದ್ದಾರೆ. ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿದ್ದಾರೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ಮೀನಾ ಸೇರಿದಂತೆ ಪ್ರಥಮ ದರ್ಜೆ ಸಹಾಯಕ ಜಿ.ಎಚ್. ಚಿಕ್ಕೇಗೌಡ, ಸಹಾಯಕ ಎಂಜಿನಿಯರ್‌ಗಳಾದ ಲಾವಣ್ಯ, ನವೀನ್ ಮತ್ತು ಅಮೀನ್ ಎಸ್.ಅನ್ನದಿನ್ನಿ ಅವರು ಕರ್ನಾಟಕ ರಾಜ್ಯ ನಾಗರಿಕ (ನಡತೆ) ನಿಯಮಗಳು-2012 ಅನ್ನು ಸ್ಪಷ್ಟವಾಗಿ ಉಲ್ಲಂಘಿಸಿರುತ್ತಾರೆ' ಎಂದು ಉಲ್ಲೇಖಿಸಿ ಅಮಾನತುಗೊಳಿಸಲಾಗಿದೆ.

ಆನ್‌ಲೈನ್ ಸೇವೆ ವಂಚನೆ: ದಂಡ

ಯುಎಸ್‌ಬಿ, ಬ್ಲೂ ಟೂತ್ ಅಡಾಪ್ಟರ್ ಖರೀದಿಸಲು ಆನ್‌ಲೈನ್ ಮೂಲಕ ₹399 ಪಾವತಿ ಮಾಡಿದ್ದರೂ ಉತ್ಪನ್ನವನ್ನು ಸರಬರಾಜು ಮಾಡದೆ, ಹಣವನ್ನೂ ವಾಪಸು ಮಾಡದ ಅಪರಾಧಕ್ಕೆ ಸಂಬಂಧಿಸಿದಂತೆ ದೆಹಲಿಯ 'ಮೆಸರ್ಸ್ ವಿಎಲ್‌ಇ ಬಜಾರ್ ಪ್ರೈವೆಟ್ ಲಿಮಿಟೆಡ್ ಕಂಪನಿ'ಗೆ, ಬೆಂಗಳೂರು ನಗರ ಜಿಲ್ಲೆಯ 2ನೇ ಹೆಚ್ಚುವರಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ₹10 ಸಾವಿರ ದಂಡ ವಿಧಿಸಿದೆ.

ಶ್ರೀನಗರದ ರಾಘವೇಂದ್ರ ಬ್ಲಾಕ್ ನಿವಾಸಿ ಕೆ.ಧನಂಜಯ ಸಲ್ಲಿಸಿದ್ದ ದೂರಿನ ವಿಚಾರಣೆ ನಡೆಸಿದ ಆಯೋಗದ ಸದಸ್ಯೆಯರಾದ ರೇಣುಕಾದೇವಿ ದೇಶಪಾಂಡೆ ಮತ್ತು ವಿ.ಅನೂರಾಧ ಅವರು, 'ಎದುರುದಾರರು (ಕಂಪನಿ) ದಂಡದ ಮೊತ್ತವನ್ನು ಆಯೋಗದ ಗ್ರಾಹಕರ ಕಾನೂನು ನೆರವು ಖಾತೆಗೆ ಜಮಾವಣೆ ಮಾಡಬೇಕು' ಎಂದು ಆದೇಶಿಸಿದ್ದಾರೆ.

'ಕಂಪನಿಯು ವಂಚನೆ ಮಾಡಿರುವುದು ಸಾಬೀತಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಆಯೋಗ, 'ಗ್ರಾಹಕರ ರಕ್ಷಣಾ ಕಾಯ್ದೆ-2019ರ ಅನ್ವಯ, ಫಿರ್ಯಾದುದಾರರಿಗೆ ನ್ಯಾಯಾಲಯದ ಖರ್ಚು ₹2 ಸಾವಿರ ಮತ್ತು ಮಾನಸಿಕ ಹಿಂಸೆಗೆ ಪರಿಹಾರ ರೂಪದಲ್ಲಿ ₹3 ಸಾವಿರ ಮೊತ್ತವನ್ನು ದೂರು ದಾಖಲಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ವಾರ್ಷಿಕ ಶೇ 6ರ ಬಡ್ಡಿಯಂತೆ ಪಾವತಿಸಬೇಕು. ತಪ್ಪಿದರೆ, ಒಟ್ಟು ₹5 ಸಾವಿರ ಮೊತ್ತಕ್ಕೆ ಶೇ 8ರ ಬಡ್ಡಿಯಂತೆ ಮರು ಪಾವತಿ ಆಗುವತನಕ ಪಾವತಿ ಮಾಡಬೇಕು' ಎಂದು ಆದೇಶಿಸಿದೆ.

'ಕಂಪನಿಯು, ಆನ್‌ಲೈನ್ ಅಥವಾ ಇ-ಕಾಮರ್ಸ್ ಮೂಲಕ ವ್ಯಾಪಾರ ವಹಿವಾಟು ನಡೆಸುವ ಗ್ರಾಹಕರಿಗೆ ಉದ್ದೇಶಪೂರ್ವಕವಾಗಿ ವಂಚಿಸುವ ಮತ್ತು ಅನುಚಿತ ರೀತಿಯಲ್ಲಿ ವ್ಯಾಪಾರ ನಡೆಸುತ್ತಿರುವುದು ಕಂಡುಬಂದಿದೆ' ಎಂದು ಆದೇಶ ವಿವರಿಸಿದೆ.

ಚನ್ನರಾಯಪಟ್ಟಣ: ವಿಷ ಬೆರೆಸಿದ ಅನ್ನ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ರೈತ

ವಿಕೋಪಕ್ಕೆ ತಿರುಗಿದ ರೈತರ ಹೋರಾಟ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಸಾವಿರ ದಿನಗಳಿಂದ ಶಾಂತಿಯುತವಾಗಿ ನಡೆಯುತ್ತಿದ್ದ ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಹೋರಾಟ ಗುರುವಾರ ವಿಕೋಪಕ್ಕೆ ತಿರುಗಿತು.

ಸರ್ಕಾರದ ನಿರ್ಧಾರದಿಂದ ಬೇಸತ್ತ ರೈತ ವೆಂಕಟೇಶ್, ಪ್ರತಿಭಟನ ಸ್ಥಳದಲ್ಲಿ ತಯಾರಿಸಿದ್ದ ಅನ್ನಕ್ಕೆ ವಿಷ ಬೆರೆಸಿ ಸೇವಿಸಿ ಅಸ್ವಸ್ಥಗೊಂಡರು. ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಚೇತರಿಸಿಕೊಂಡಿದ್ದಾರೆ.

ಚನ್ನರಾಯಪಟ್ಟಣದಲ್ಲಿ ಭೂ ಸ್ವಾಧೀನ ನಿರ್ಧಾರಕ್ಕೆ ಸಂಬಂಧಿಸಿದಂತೆ ವಾರದೊಳಗೆ ರೈತರಿಗೆ ಪೂರಕವಾದ ನಿರ್ಧಾರ ಪ್ರಕಟಿಸುವುದಾಗಿ ಭರವಸೆ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಹೋರಾಟ ಕೈ ಬಿಡುವಂತೆ ರೈತರಿಗೆ ಮನವಿ ಮಾಡಿದ್ದರು.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಹೊರಡಿಸಿದ್ದ ಭೂಸ್ವಾಧೀನ ಶಿಫಾರಸು ಪತ್ರ ರೈತರಲ್ಲಿ ಆತಂಕ ಮೂಡಿಸಿತ್ತು. ಬೇಸತ್ತ ರೈತರು ಏ.10ರಂದು ಸಚಿವ ಮುನಿಯಪ್ಪ ಅವರ ಮನೆಗೆ ತೆರಳಿ ಚರ್ಚಿಸಲು ನಿರ್ಧರಿಸಿದ್ದರು.

ಗುರುವಾರ ಬೆಳಗ್ಗೆ ಚನ್ನರಾಯಪಟ್ಟಣ ಹೋಬಳಿ ರೈತರು ಮತ್ತು ಹೋರಾಟಗಾರರು ಸಚಿವರ ಭೇಟಿಗೆ ಬೆಂಗಳೂರಿನತ್ತ ಹೊರಟಿದ್ದರು. ಪೊಲೀಸರು ಅವರನ್ನು ತಡೆದರು. ಇಬ್ಬರ ಮಧ್ಯೆ ಶುರುವಾದ ಮಾತು, ವಾಗ್ವಾದಕ್ಕೆ ತಿರುಗಿತು. ರೈತರು ಸ್ಥಳದಲ್ಲೇ ಪ್ರತಿಭಟನೆ ಆರಂಭಿಸಿದರು.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣದಲ್ಲಿ ರೈತ ಹೋರಾಟಗಾರರು ಅನ್ನಕ್ಕೆ ವಿಷ ಬೆರೆಸಿ ಸೇವಿಸಲು ಮುಂದಾದಾಗ ಪೊಲೀಸರು ಅದನ್ನು ಕಿತ್ತು ಬಿಸಾಡಿದರು

'ಸಚಿವರ ಭೇಟಿಗೆ ಹೊರಟಿದ್ದ ರೈತರನ್ನು ತಡೆದು ಪೊಲೀಸರು ದರ್ಪ ತೋರುತ್ತಿದ್ದಾರೆ. ಕೆಲ ಮುಖಂಡರನ್ನು ಗೃಹ ಬಂಧನದಲ್ಲಿಟ್ಟು ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದಾರೆ' ಎಂದು ಹರಿಹಾಯ್ದರು.

ಧರಣಿ ಸ್ಥಳದಲ್ಲೇ ಅನ್ನ ತಯಾರಿಸಿ ಅದರಲ್ಲಿ ವಿಷ ಬೆರೆಸಿ ಸೇವಿಸಲು ಮುಂದಾದರು. ಈ ವೇಳೆ ಮಧ್ಯ ಪ್ರವೇಶಿಸಿದ ಪೊಲೀಸರು ಅನ್ನದ ಪಾತ್ರೆ ಕಿತ್ತು ಬಿಸಾಡಿದರು. ಆಗ ರೈತರು ಮತ್ತು ಪೊಲೀಸರ ನಡುವೆ ತಳ್ಳಾಟ ನಡೆಯಿತು.

ಗಲಾಟೆ ಮಧ್ಯೆಯೇ ವೆಂಕಟೇಶ ಎಂಬ ರೈತ ವಿಷ ಬೆರೆಸಿದ್ದ ಅನ್ನ ಸೇವಿಸಿದರು. ಅಸ್ವಸ್ಥಗೊಂಡ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಪೊಲೀಸರು ಹೋರಾಟಗಾರರನ್ನು ತಡೆದು ನಿಲ್ಲಿಸಿದ ಚನ್ನರಾಯಪಟ್ಟಣ ಮುಖ್ಯ ರಸ್ತೆಯಲ್ಲಿಯೇ ರೈತರು ಆಹೋರಾತ್ರಿ ಧರಣಿ ಆರಂಭಿಸಿದ್ದಾರೆ. ಈ ಮೂಲಕ, ಶಾಂತಿಯುತ ಭೂಸ್ವಾಧೀನ ವಿರೋಧಿ ಹೋರಾಟ ವಿಕೋಪಕ್ಕೆ ತಿರುಗಿದೆ.

ಚನ್ನರಾಯಪಟ್ಟಣದ 13 ಹಳ್ಳಿಗಳಲ್ಲಿ 1,777 ಎಕರೆ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆ ಕೆಐಎಡಿಬಿ ಸ್ವಾಧೀನ ಪಡಿಸಿಕೊಳ್ಳುವುದನ್ನು ವಿರೋಧಿಸಿ 1,103 ದಿನಗಳಿಂದ ರೈತರು ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ.

12ರಂದು ನಗರಸಭೆ, ಪುರಸಭೆ ನೌಕರರ ಹೋರಾಟ

ಬೆಂಗಳೂರು: ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ನೌಕರರಿಗೆ 7ನೇ ವೇತನ ಆಯೋಗದ ಸೌಲಭ್ಯಗಳ ಅನುದಾನವನ್ನು ಹಣಕಾಸು ಇಲಾಖೆಯಿಂದಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ, ಏಪ್ರಿಲ್ 12ರಂದು ಹೋರಾಟ ನಡೆಸಲು ಸಂಘ ನಿರ್ಧರಿಸಿದೆ.

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಪದಾಧಿಕಾರಿಗಳು, ಪೌರನೌಕರರ ಸಂಘದ ಪದಾಧಿಕಾರಿಗಳು ಗುರುವಾರ ನಡೆಸಿದ ಸಭೆಯಲ್ಲಿ ಹೋರಾಟದ ನಿರ್ಧಾರ ಕೈಗೊಳ್ಳಲಾಯಿತು. ಏಪ್ರಿಲ್ 12ರಂದು ಬಲತೋಳಿಗೆ ಕಪ್ಪು ಪಟ್ಟಿ ಧರಿಸಿ ಹೋರಾಟ ನಡೆಸಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

'ಮುಖ್ಯಮಂತ್ರಿ, ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮನವಿಪತ್ರಗಳನ್ನು ಈಗಾಗಲೇ ನೀಡಲಾಗಿದೆ. ಮತ್ತೊಮ್ಮೆ ಮನವಿ ಮಾಡಿಕೊಳ್ಳಲಾಗುತ್ತದೆ. ಆದರೂ ಬೇಡಿಕೆ ಈಡೇರಿಸದಿದ್ದರೆ, ಮೇ 26ರಂದು ಸಾಮೂಹಿಕವಾಗಿ ಸಾಂದರ್ಭಿಕ ರಜೆ ಹಾಕಲು ನಿರ್ಧರಿಸಲಾಗಿದೆ' ಎಂದರು.

ಕೆಐಒಸಿಎಲ್ ಗಣಿ ಅನ್ವೇಷಣೆ: ರಾಜ್ಯ ಅಸ್ತು

• ಮಂಜುನಾಥ ಹೆಬ್ಬಾರ್

ಮುಖ್ಯಾಂಶಗಳು

- 125 ಎಕರೆಯಲ್ಲಿ ಕಬ್ಬಿಣ, ಮ್ಯಾಂಗನೀಸ್ ಅದಿರು ಅನ್ವೇಷಣೆಗೆ ಒಪ್ಪಿಗೆ
- ನಿಬಂಧನೆ ಪಾಲಿಸಿದರಷ್ಟೇ ಅನುಮತಿ ಎಂದು ಷರತ್ತು ವಿಧಿಸಿದ್ದ ರಾಜ್ಯ ಸರ್ಕಾರ

ನವದೆಹಲಿ: ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತುಂಬರಗುಡ್ಡಿ ರಾಜ್ಯ ಅರಣ್ಯದ 125 ಎಕರೆಯಲ್ಲಿ ಕಬ್ಬಿಣದ ಹಾಗೂ ಮ್ಯಾಂಗನೀಸ್ ಅದಿರು ಅನ್ವೇಷಣೆ ನಡೆಸಲು ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ (ಕೆಐಒಸಿಎಲ್) ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿದೆ.

ಸಂಡೂರಿನ ದೇವದಾರಿಯಲ್ಲಿ ಈ ಕಂಪನಿಗೆ ಕಬ್ಬಿಣದ ಅದಿರು ಗಣಿಗಾರಿಕೆ ನಡೆಸಲು ಕೇಂದ್ರ ಉಕ್ಕು ಸಚಿವಾಲಯ ಕಳೆದ ವರ್ಷ ಅನುಮತಿ ನೀಡಿತ್ತು. ಆದರೆ, ರಾಜ್ಯ ಸರ್ಕಾರ ಇದಕ್ಕೆ ಒಪ್ಪಿಗೆ ನೀಡಿರಲಿಲ್ಲ. 'ಈ ಕಂಪನಿಯು ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗೆ ಕೊಳವೆ ಮಾರ್ಗ ಅಳವಡಿಸುವುದೂ ಸೇರಿ 465.73 ಹೆಕ್ಟೇರ್ ಪ್ರದೇಶವನ್ನು ಅನುಮತಿ ಇಲ್ಲದೇ ಅರಣ್ಯೇತರ ಉದ್ದೇಶಕ್ಕೆ ಬಳಕೆ ಮಾಡಿದೆ. ಎನ್‌ಪಿವಿ ಶುಲ್ಕ ₹628 ಕೋಟಿ ಹಾಗೂ ಬಡ್ಡಿ ಸೇರಿ ಒಟ್ಟಾರೆ ₹3,000 ಕೋಟಿಯನ್ನು ರಾಜ್ಯ ಸರ್ಕಾರಕ್ಕೆ ಕೊಡಬೇಕಾಗಿದೆ. ಈ ಎಲ್ಲ ನಿಬಂಧನೆಗಳನ್ನು ಪಾಲಿಸಿದರೆ ಗಣಿಗಾರಿಕೆಗೆ ಅನುಮತಿ ನೀಡಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದ್ದರು. ಕೆಐಒಸಿಎಲ್ ಈ ಮೊತ್ತ ಪಾವತಿಸದೇ ಇದ್ದರೂ ಗಣಿ ಅನ್ವೇಷಣೆಗೆ ರಾಜ್ಯ ಸರ್ಕಾರ ಒಪ್ಪಿಗೆ ಕೊಟ್ಟಿರುವುದು ಚರ್ಚೆಗೆ ಗ್ರಾಸವಾಗಿದೆ.

ಈ ಅರಣ್ಯದಲ್ಲಿ ಭವಿಷ್ಯದಲ್ಲಿ ಗಣಿಗಾರಿಕೆ ನಡೆಸಲು ಕಂಪನಿ ಉದ್ದೇಶಿಸಿದೆ. ಇದಕ್ಕಾಗಿ ಅನ್ವೇಷಣೆ ನಡೆಸಲು ಅರಣ್ಯ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಬಳ್ಳಾರಿ ಡಿಸಿಎಫ್ ಅವರು ಸ್ಥಳ ಪರಿಶೀಲನೆ ನಡೆಸಿ ಶಿಫಾರಸು ಮಾಡಿದ್ದರು. ಈ ಕಾರ್ಯಾಚರಣೆ ಸಂದರ್ಭದಲ್ಲಿ 966 ಮರಗಳ ಹನನ ಮಾಡಲಾಗುತ್ತದೆ ಎಂದೂ ತಿಳಿಸಿದ್ದರು. ಈ ಅರಣ್ಯವು ರಾಷ್ಟ್ರೀಯ ಉದ್ಯಾನದ ಭಾಗವಲ್ಲ ಎಂದೂ ಸ್ಪಷ್ಟಪಡಿಸಿದ್ದರು. ಈ ಪ್ರಸ್ತಾವಕ್ಕೆ ಬಳ್ಳಾರಿ ಸಿಸಿಎಫ್ ಅನುಮೋದನೆ ನೀಡಿದ್ದರು. ಈ ಪ್ರಸ್ತಾವವನ್ನು ಶಿಫಾರಸು ಮಾಡಿ ಅರಣ್ಯ ಪಡೆಯ ಮುಖ್ಯಸ್ಥರು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಮಾರ್ಚ್ 13ರಂದು ಪತ್ರ ಬರೆದಿದ್ದರು. ಇದಕ್ಕೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಹಮತ ಸೂಚಿಸಿ ಕೇಂದ್ರಕ್ಕೆ ಶಿಫಾರಸು ಮಾಡಿದ್ದಾರೆ. ಕೇಂದ್ರದ ಈ ಪ್ರಸ್ತಾವಕ್ಕೆ ಇನ್ನಷ್ಟೇ ಅನುಮೋದನೆ ಸಿಗಬೇಕಿದೆ.

'ಕೆಐಒಸಿಎಲ್ ವಿಷಯದಲ್ಲಿ ರಾಜ್ಯ ಸರ್ಕಾರ ನಿಲುವು ಬದಲಿಸಿರುವುದು ಅನುಮಾನಕ್ಕೆ ಕಾರಣವಾಗಿದೆ. ಇದು ರಾಜ್ಯ ಸರ್ಕಾರದ ದ್ವಂದ್ವ ನಿಲುವು. ಗಣಿಗಾರಿಕೆಯಿಂದ ಸಂಡೂರಿನ ಅರಣ್ಯ ಪ್ರದೇಶಗಳಿಗೆ ಈಗಾಗಲೇ ಸಾಕಷ್ಟು ಹಾನಿಯಾಗಿದೆ. ಹೊಸದಾಗಿ ಗಣಿಗಾರಿಕೆಗೆ ಅವಕಾಶ ನೀಡದೆ ಅಳಿದುಳಿದ ಅರಣ್ಯ ಪ್ರದೇಶಗಳನ್ನು ಸಂರಕ್ಷಿಸಲು ರಾಜ್ಯ ಸರ್ಕಾರ ಕ್ರಮ ವಹಿಸಬೇಕು' ಎಂದು ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಆಗ್ರಹಿಸಿದರು.

ಕೇಂದ್ರದ ಆರ್‌ಡಿಎಸ್‌ಎಸ್ ಯೋಜನೆ ಅಡಿ ಒಪ್ಪಿಗೆ ಪಡೆಯದೆ ಜಾರಿ • ಗ್ರಾಹಕರಿಗೆ ಹೊರೆ

ಸ್ಮಾರ್ಟ್ ಮೀಟರ್‌ಗೆ ಸಹಾಯಧನ ಖೋತಾ

• ಜಯಸಿಂಹ ಆರ್.

ಬೆಂಗಳೂರು: ಕೇಂದ್ರ ಸರ್ಕಾರದ ಅನುಮೋದನೆ ಪಡೆಯದೇ ಸ್ಮಾರ್ಟ್ ಮೀಟರ್ ಅಳವಡಿಕೆಗೆ ರಾಜ್ಯ ಸರ್ಕಾರ ಮುಂದಾಗಿದ್ದರಿಂದಾಗಿ, ಕೇಂದ್ರದ ಸಹಾಯಧನ ಖೋತಾ ಆಗಿದೆ. ಮೀಟರ್ ಬೆಲೆಯ ಸಂಪೂರ್ಣ ಹೊರೆ ಗ್ರಾಹಕರ ಮೇಲೆ ಬಿದ್ದಿದೆ.

ವಿದ್ಯುತ್ ಸೋರಿಕೆ ಶೂನ್ಯವಾಗಿಸುವ ಮತ್ತು ನಷ್ಟವನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಇಂಧನ ಸಚಿವಾಲಯವು 2021–22ರಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ ಯೋಜನೆ ಜಾರಿಗೆ ತಂದಿತ್ತು. ಇದನ್ನು 'ರೀ–ಮ್ಯಾಪ್ಡ್ ಡಿಸ್ಟ್ರಿಬ್ಯೂಷನ್ ಸೆಕ್ಟರ್ ಸ್ಕೀಂ–ಆರ್‌ಡಿಎಸ್‌ಎಸ್' ಎಂದು ಕರೆಯಲಾಗಿತ್ತು.

ಆರ್‌ಡಿಎಸ್‌ಎಸ್ ಯೋಜನೆಯಂತೆ ದೇಶದ ಎಲ್ಲ ರಾಜ್ಯಗಳಲ್ಲಿ, ಎಲ್ಲ ಸ್ವರೂಪದ ವಿದ್ಯುತ್ ಸಂಪರ್ಕಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯ ಮಾಡಿತ್ತು. ಯೋಜನೆ ಜಾರಿ ಸಂಬಂಧ ರಾಜ್ಯಗಳು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕಿತ್ತು. ಕರ್ನಾಟಕ ಸರ್ಕಾರವೂ 2022ರಲ್ಲಿ ಈ ಸಂಬಂಧ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ತಾಂತ್ರಿಕ ಕಾರಣವೊಡ್ಡಿದ್ದ ಕೇಂದ್ರವು, ಪ್ರಸ್ತಾವಕ್ಕೆ ಒಪ್ಪಿಗೆ ನೀಡಿರಲಿಲ್ಲ.

2025ರಲ್ಲೂ ರಾಜ್ಯಕ್ಕೆ ಅಂತಹ ಅನುಮೋದನೆ ಸಿಕ್ಕಿಲ್ಲ ಎಂಬುದನ್ನು ಕೇಂದ್ರ ಸರ್ಕಾರವೇ ದೃಢಪಡಿಸಿದೆ. ಈ ಯೋಜನೆ ಸಂಬಂಧ ಲೋಕಸಭೆಯಲ್ಲಿ ಈಚೆಗೆ ಕೇಂದ್ರ ವಿದ್ಯುತ್ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಶ್ರೀಪಾದ ನಾಯಕ್, 'ಯೋಜನೆ ಅಡಿ ಸೂಚಿಸಲಾಗಿದ್ದ ಷರತ್ತುಗಳನ್ನು ಪೂರೈಸದ ಕಾರಣಕ್ಕೆ, ಕರ್ನಾಟಕಕ್ಕೆ ಅನುಮೋದನೆ ಸಿಕ್ಕಿಲ್ಲ' ಎಂದು ಮಾಹಿತಿ ನೀಡಿದ್ದಾರೆ.

ಈ ಯೋಜನೆ ಅಡಿಯಲ್ಲಿ ಅಳವಡಿಸಲಾಗುವ ಪ್ರತಿ ಸ್ಮಾರ್ಟ್ ಮೀಟರ್‌ಗೆ ಕೇಂದ್ರವು ₹900 ಸಹಾಯಧನ ನೀಡುತ್ತದೆ. ಕೇಂದ್ರದ ಒಪ್ಪಿಗೆ ಪಡೆದು ಯೋಜನೆ ಅನುಷ್ಠಾನಕ್ಕೆ ತಂದಿರುವ ರಾಜ್ಯಗಳಲ್ಲಿ ಈ ಸಹಾಯಧನ ಸಿಗುತ್ತಿದೆ. ಆದರೆ ನಮ್ಮ ರಾಜ್ಯದ ಗ್ರಾಹಕರಿಗೆ ಈ ಸಹಾಯಧನ ಸಿಗುತ್ತಿಲ್ಲ.

ಕೇಂದ್ರದ ಅನುಮೋದನೆ ಇಲ್ಲದಿದ್ದರೂ ಸ್ಮಾರ್ಟ್ ಮೀಟರ್ ಅಳವಡಿಕೆ ಸಂಬಂಧ ರಾಜ್ಯದ ಎಸ್ಕಾಂಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಪ್ರಸ್ತಾವ ಬರೆದಿದ್ದವು. ಈ ಪ್ರಸ್ತಾವಕ್ಕೆ ಕೆಇಆರ್‌ಸಿ ಆಕ್ಷೇಪ ವ್ಯಕ್ತಪಡಿಸಿತ್ತು. 2024ನೇ ಸಾಲಿನ ದರ ಪರಿಷ್ಕರಣೆ ಆದೇಶದಲ್ಲಿ ಈ ಬಗ್ಗೆ ಉಲ್ಲೇಖಿಸಿದ್ದ ಕೆಇಆರ್‌ಸಿ, 'ಆರ್‌ಡಿಎಸ್‌ಎಸ್ ಅಡಿಯಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಕೇಂದ್ರ ಸರ್ಕಾರವು ಒಪ್ಪಿಗೆ ಸೂಚಿಸಿಲ್ಲ. ಇದನ್ನು ಈಗಾಗಲೆ ತಿಳಿಸಿದ್ದರೂ, ಎಸ್ಕಾಂಗಳು ಮತ್ತೆ–ಮತ್ತೆ ಪ್ರಸ್ತಾವ ಸಲ್ಲಿಸಿವೆ' ಎಂದು ಉಲ್ಲೇಖಿಸಿತ್ತು.

ಹೀಗೆ ಆಕ್ಷೇಪ ವ್ಯಕ್ತಪಡಿಸಿದ್ದ ಕೆಇಆರ್‌ಸಿಯೇ, ನಂತರದ ಕೆಲವೇ ದಿನಗಳಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಒಪ್ಪಿಗೆ ನೀಡಿತ್ತು. ಅದರ ಬೆನ್ನಲ್ಲೇ ರಾಜ್ಯ ಸರ್ಕಾರವೂ ಅಧಿಸೂಚನೆ ಹೊರಡಿಸಿ, ಸ್ಮಾರ್ಟ್ ಮೀಟರ್ ಅಳವಡಿಕೆಗೆ ಕ್ರಮ ತೆಗೆದುಕೊಂಡಿತ್ತು.

ಬಿಜೆಪಿ ಅವಧಿಯ ಬಾಕಿ: ಸಿಗದ ಸಹಾಯಧನ

'ಆರ್‌ಡಿಎಸ್‌ಎಸ್ ಯೋಜನೆ ಅಡಿ ಕೇಂದ್ರದ ಅನುಮೋದನೆ ಮತ್ತು ಸಹಾಯಧನ ಸಿಗಬೇಕಾದರೆ, ರಾಜ್ಯ ಸರ್ಕಾರ ಮತ್ತು ರಾಜ್ಯ ಸರ್ಕಾರದ ಯಾವ ಸಂಸ್ಥೆಯೂ ಎಸ್ಕಾಂಗಳಿಗೆ ಬಾಕಿ ಉಳಿಸಿಕೊಂಡಿರುವಂತಿಲ್ಲ. 2022ರಲ್ಲಿ ಪ್ರಸ್ತಾವ ಸಲ್ಲಿಸಿದಾಗ, ಅಂದು ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಎಸ್ಕಾಂಗಳಿಗೆ ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಶುಲ್ಕ ಸೇರಿ ₹8,400 ಕೋಟಿಗೂ ಹೆಚ್ಚು ಬಿಲ್ ಬಾಕಿ ಉಳಿಸಿಕೊಂಡಿತ್ತು. ರಾಜ್ಯದ ಪ್ರಸ್ತಾವಕ್ಕೆ ಅನುಮೋದನೆ ದೊರೆಯದೇ ಇರಲು ಇದೇ ಪ್ರಧಾನ ಕಾರಣ ಎನ್ನುತ್ತಾರೆ' ಎನ್ನುತ್ತಾರೆ ಕೆಪಿಟಿಸಿಎಲ್‌ನ ಉನ್ನತ ಅಧಿಕಾರಿಗಳು.

'ರಾಜ್ಯದ ಎಲ್ಲ ಮೀಟರ್‌ಗಳನ್ನು ಸ್ಮಾರ್ಟ್ ಮೀಟರ್‌ಗೆ ಬದಲಿಸಬೇಕು ಎಂಬುದು ಕೇಂದ್ರ ಸರ್ಕಾರದ ಆದೇಶವಾಗಿತ್ತು. ಕರ್ನಾಟಕದಲ್ಲಿ ಅದಾಗಲೇ ಡಿಜಿಟಲ್ ಮೀಟರ್ ಬಳಕೆಯಲ್ಲಿತ್ತು. ಹೊಸ ಸಂಪರ್ಕಗಳಿಗೆ ಮಾತ್ರ ಸ್ಮಾರ್ಟ್ ಮೀಟರ್ ಅಳವಡಿಸುತ್ತೇವೆ ಎಂಬ ಪ್ರಸ್ತಾವವೂ ಆರ್‌ಡಿಎಸ್‌ಎಸ್ ಅಡಿ ಒಪ್ಪಿಗೆಯಾಗಲಿಲ್ಲ' ಎಂದು ಅಧಿಕಾರಿಗಳು ತಿಳಿಸಿದರು.

ಗ್ರಾಹಕನಿಗಾಗುವ ನಷ್ಟವೆಷ್ಟು..?

ಆರ್‌ಡಿಎಸ್‌ಎಸ್ ಯೋಜನೆ ಅಡಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಒಡಿಶಾ ರಾಜ್ಯ ಆಯ್ಕೆಯಾಗಿದೆ. ಒಡಿಶಾಕ್ಕೆ ಕೇಂದ್ರದ ಸಹಾಯಧನ ದೊರೆಯುತ್ತಿದ್ದು, ಅಲ್ಲಿ ಸಿಂಗಲ್ ಫೇಸ್‌ನ ಸ್ಮಾರ್ಟ್ ಮೀಟರ್‌ಗೆ ₹5,035 (₹4,267ಮೀಟರ್ ಬೆಲೆ ಮತ್ತು ₹768 ಜಿಎಸ್‌ಟಿ) ಬೆಲೆ ನಿಗದಿ ಮಾಡಲಾಗಿದೆ.

ಒಡಿಶಾದಲ್ಲಿ ಸ್ಮಾರ್ಟ್ ಮೀಟರ್ ಸಂಪರ್ಕ ಪಡೆದುಕೊಳ್ಳುವಾಗಲೇ, ಅದರ ಪೂರ್ಣ ವೆಚ್ಚವನ್ನು ಪಾವತಿಸಬೇಕಿಲ್ಲ. ಬದಲಿಗೆ ಎಸ್ಕಾಂಗಳು ಮೀಟರ್ ಅಳವಡಿಸುತ್ತವೆ. ಅದಕ್ಕೆ ಕೇಂದ್ರ ಸರ್ಕಾರವು ನೀಡುವ ₹900 ಸಹಾಯಧನ ಕಡಿತ ಮಾಡಿಕೊಂಡು, ₹4,267 ಅನ್ನು ಹತ್ತು ವರ್ಷಗಳಲ್ಲಿ ತಿಂಗಳ ಕಂತಿನಂತೆ ವಸೂಲಿ ಮಾಡುತ್ತದೆ. ಇದಕ್ಕೆ ವಾರ್ಷಿಕ ಶೇ 12ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಇದರ ಜತೆಗೆ, ಸಂಪರ್ಕ ಪಡೆಯುವಾಗಲೇ ಗ್ರಾಹಕ ಮೀಟರ್‌ಗೆ ₹4,267 (₹3,367 ಮತ್ತು ₹768 ಜಿಎಸ್‌ಟಿ) ಪಾವತಿ ಮಾಡುವ ಆಯ್ಕೆಯೂ ಇದೆ.

ಕರ್ನಾಟಕದಲ್ಲಿ ಸಂಪರ್ಕ ಪಡೆಯುವಾಗಲೇ ಮೀಟರ್‌ನ ಪೂರ್ಣ ವೆಚ್ಚವನ್ನು ಗ್ರಾಹಕ ಭರಿಸಬೇಕು. ಇಲ್ಲಿ ಸಿಂಗಲ್ ಫೇಸ್‌ನ ಪ್ರತಿ ಮೀಟರ್‌ಗೆ ₹4,998 ನಿಗದಿ ಮಾಡಲಾಗಿದೆ. ಕೇಂದ್ರದ ಸಹಾಯಧನ ಸಿಕ್ಕಿದ್ದರೆ, ಗ್ರಾಹಕ ₹4,098 ಪಾವತಿ ಮಾಡಬೇಕಾಗುತ್ತಿತ್ತು. ಸಹಾಯಧನ ಇಲ್ಲದ ಕಾರಣ ಗ್ರಾಹಕನಿಗೆ ₹900 ಹೆಚ್ಚುವರಿ ಹೊರೆ ಬಿದ್ದಿದೆ.

ಸುದ್ದಿ 2 ನಿಮಿಷ

ನೈಜ ಕಾಯಕಯೋಗಿಗಳು ಮುಸ್ಲಿಮರು: ಸಂಸದ ತುಕಾರಾಂ

ಹೊಸಪೇಟೆ (ವಿಜಯನಗರ): 'ಮುಸ್ಲಿಮರು ನೈಜ ಕಾಯಕ ಯೋಗಿಗಳು. ಅವರು ದಾನ ನೀಡುವವರೇ ಹೊರತು ಪಡೆಯುವವರಲ್ಲ' ಎಂದು ಸಂಸದ ಇ.ತುಕಾರಾಂ ಹೇಳಿದರು.

ರಾಜ್ಯ ಹಜ್ ಸಮಿತಿ ಗುರುವಾರ ಇಲ್ಲಿ ಹಜ್ ಯಾತ್ರಿಗಳಿಗೆ ಏರ್ಪಡಿಸಿದ್ದ ತರಬೇತಿ ಶಿಬಿರದಲ್ಲಿ ಮಾತನಾಡಿದ ಅವರು, 'ಮನುಷ್ಯ ಧರ್ಮವನ್ನು ಪಾಲಿಸಲು ಎಲ್ಲ ಶರಣರು, ಸಂತರು, ಪ್ರವಾದಿಗಳು ಹೇಳಿದ್ದಾರೆ' ಎಂದರು.

'ನನಗೆ ಜನ್ಮ ನೀಡಿದ್ದು ತಂದೆ, ತಾಯಿ. ಆದರೆ ನನ್ನ ರಾಜಕೀಯ ಜೀವನಕ್ಕೆ ನೀವೆಲ್ಲ ತಂದೆ, ತಾಯಿ. ನಿಮ್ಮ ಒಲುಮೆ, ಬೆಂಬಲದಿಂದ ನಾನು ಸಂಸದನಾಗಿದ್ದು, ಪತ್ನಿ ಶಾಸಕಿ ಆಗಿದ್ದಾಳೆ. ನಿಮ್ಮ ಪರ ನಾನು ಸದಾ ಧ್ವನಿ ಎತ್ತುವೆ' ಎಂದರು.

ಸಭಿಕರೊಬ್ಬರು ವಕ್ಫ್ ತಿದ್ದುಪಡಿ ಕಾಯ್ದೆ ವಿರುದ್ಧ ಧ್ವನಿ ಎತ್ತಬೇಕು ಎಂದಾಗ, 'ಮಸೂದೆ ವಿರುದ್ಧ ನಾನೂ ಮತ ಚಲಾಯಿಸಿದ್ದೇನೆ, ಅರ್ಥವಾಯಿತೇ?' ಎಂದರು.

ಮಾತು ಮುಂದುವರಿಸಿದ ಅವರು, 'ರಾಷ್ಟ್ರೀಯ ಪಕ್ಷ ಎಂದಾಗ ಕೆಲ ನಿರ್ದಿಷ್ಟ ವ್ಯಕ್ತಿಗಳಿಗಷ್ಟೇ ಮಾತನಾಡುವ ಅವಕಾಶ ಇರುತ್ತದೆ. ಹೀಗಿದ್ದರೂ ನಿಮ್ಮ ಹಿತಾಸಕ್ತಿಗೆ ಧಕ್ಕೆ ತರುವ ಕೆಲಸ ನಾನು ಮಾಡುವುದಿಲ್ಲ. ನಿಮ್ಮ ಪರ ನಾನು ಸದಾ ಇರುತ್ತೇನೆ' ಎಂದರು.

ಕುಡಿತಕ್ಕೆ ಹಣ ಕೊಡದ ತಾಯಿಯನ್ನು ಕೊಂದ ಮಗ

ದಾವಣಗೆರೆ: ಮದ್ಯ ಕುಡಿಯಲು ಹಣ ನೀಡದ ತಾಯಿಯನ್ನು ದೊಣ್ಣೆಯಿಂದ ಹೊಡೆದು ಮಗ ಕೊಲೆ ಮಾಡಿದ ಘಟನೆ ತಾಲ್ಲೂಕಿನ ಐಗೂರು ಗೊಲ್ಲರಹಟ್ಟಿಯಲ್ಲಿ ನಡೆದಿದೆ. ರತ್ನಾಬಾಯಿ (62) ಮೃತ ಮಹಿಳೆ. ರಾಘವೇಂದ್ರ ನಾಯ್ಕ (41) ಕೊಲೆ ಆರೋಪಿ.

'ರಾಘವೇಂದ್ರ ನಾಯ್ಕನ ಪತ್ನಿ, ಮಕ್ಕಳ ಜೊತೆ ತವರು ಮನೆಗೆ ಹೋಗಿದ್ದರು. ಮನೆಯಲ್ಲಿ ರತ್ನಾಬಾಯಿ ಹಾಗೂ ಮಗ ಇದ್ದರು. ಹಣ ನೀಡುವಂತೆ ಬುಧವಾರ ರಾತ್ರಿ ತಾಯಿಯನ್ನು ಪೀಡಿಸಿದ್ದಾನೆ. ತಾಯಿ ಸ್ಪಂದಿಸಲಿಲ್ಲ ಎಂದು ಕುಪಿತಗೊಂಡ ಪುತ್ರ ದೊಣ್ಣೆಯಿಂದ ಹೊಡೆದು ಸಾಯಿಸಿದ್ದಾನೆ. ಆರೋಪಿಯನ್ನು ಬಂಧಿಸಲಾಗಿದೆ' ಎಂದು ಗ್ರಾಮಾಂತರ ಠಾಣೆಯ ಪೊಲೀಸರು ಮಾಹಿತಿ ನೀಡಿದ್ದಾರೆ.

'₹54 ಸಾವಿರ ಸಂಬಳ; ಡ್ರಿಲ್ ಮಾಡಕ್ಕೂ ಬರಲ್ಲ'

ಹಾಸನ: 'ನಿಮಗೆ ₹54 ಸಾವಿರ ಸಂಬಳ. ಕೆಲಸ ಮಾಡದೇ ತರಬೇತಿಯಲ್ಲಿ ಅಷ್ಟು ಸಂಬಳ ಪಡೆಯುತ್ತಿದ್ದೀರಿ. ಆದರೆ, ಡ್ರಿಲ್ ಮಾಡಲೂ ಬರುವುದಿಲ್ಲ' ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದ ಘಟನೆ ತಾಲ್ಲೂಕಿನ ಶಾಂತಿಗ್ರಾಮದ ಪೊಲೀಸ್ ತರಬೇತಿ ಶಾಲೆಯಲ್ಲಿ ಬುಧವಾರ ನಡೆಯಿತು.

ಭೇಟಿ ನೀಡಿದ ವೇಳೆ, ಕಾನ್‌ಸ್ಟೆಬಲ್ ನೇಮಕಾತಿ ಹೊಂದಿ ತರಬೇತಿಗೆ ಹಾಜರಾಗಿರುವ ಸಿಬ್ಬಂದಿಯ ಡ್ರಿಲ್ ಪರೀಕ್ಷಿಸಿ, '3 ತಿಂಗಳು ತರಬೇತಿ ಆಗಿದೆ. ಅಟೆನ್ಷನ್ ಕೂಡ ಮಾಡಲು ಬರುತ್ತಿಲ್ಲ. ಏನ್ರಿ ಕಲ್ತಿದ್ದೀರಾ? ನಿಮ್ಮ ಮೇಲೆ ಕ್ರಮ ಆಗಬೇಕು' ಎಂದರು. 'ಅಧಿಕಾರಿಗಳೂ ತರಬೇತಿ ನೀಡಿಲ್ಲ' ಎಂದೂ ಹೇಳಿದರು.

ನಂತರ, ಖುದ್ದು ಡ್ರಿಲ್ ಕಾಷನ್ ಕೊಡಿಸಿ, ಅಟೆನ್ಷನ್ ಮಾಡಿ ತೋರಿಸಿದರು. 'ಸರಿಯಾಗಿ ತರಬೇತಿ ಪಡೆಯದಿದ್ದರೆ ಔಟ್ ಪಾಸ್ ಕೊಡಬೇಡಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಬೇರೆ ರಾಜ್ಯಗಳಲ್ಲಿ ತರಬೇತಿ ವೇಳೆ ಭತ್ಯೆ ಮಾತ್ರ ನೀಡುತ್ತಾರೆ. ಆದರೆ ಕರ್ನಾಟಕ ಸರ್ಕಾರ ತರಬೇತಿ ಅವಧಿಯಲ್ಲೂ ಪೊಲೀಸರನ್ನು ಒಳ್ಳೆಯ ರೀತಿಯಲ್ಲಿ ನೋಡಿಕೊಳ್ಳುತ್ತಿದೆ' ಎಂದರು.

'2 ವರ್ಷದಲ್ಲಿ ಎಲ್ಲ ಗ್ರಾಮ ಪೋಡಿ ಮುಕ್ತ'

'ಪರವಾನಗಿ ಹೊಂದಿದ 1,227 ಭೂಮಾಪಕರ ಕಾಯಂಗೆ ಕ್ರಮ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲ ಗ್ರಾಮಗಳ ಸರ್ವೆ ನಡೆಸಿ, ಪೋಡಿ ಮುಕ್ತ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದರು.

ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆ ಹಾಗೂ ನೌಕರರ ಸಂಘಗಳು ಗುರುವಾರ ಆಯೋಜಿಸಿದ್ದ 36ನೇ ರಾಷ್ಟ್ರೀಯ ಭೂಮಾಪನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ರೈತರು ನೆಮ್ಮದಿಯಾಗಿ ಕೃಷಿ ಉತ್ಪಾದನೆಯಲ್ಲಿ ತೊಡಗಬೇಕಾದರೆ ಸರ್ವೆ ಕಾರ್ಯ ಸರಿಯಾಗಿ ಪೂರ್ಣಗೊಳ್ಳಬೇಕು. ಕೆರೆ ಕಟ್ಟೆಗಳ ಒತ್ತುವರಿ ತೆರವುಗೊಳಿಸಬೇಕು. ಪೋಡಿ ಮುಕ್ತ ಗ್ರಾಮಗಳಾಗಬೇಕು. ಇಲ್ಲವಾದರೆ ಗ್ರಾಮಗಳಲ್ಲಿ ಜಮೀನಿಗೆ ಸಂಬಂಧಿಸಿದ ವ್ಯಾಜ್ಯಗಳು, ಅಪರಾಧಗಳು ಹೆಚ್ಚಾಗುತ್ತವೆ, ಇದಕ್ಕಾಗಿ ಇಲಾಖೆಯ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಶ್ರಮಿಸಿ, ಧ್ವನಿ ಇಲ್ಲದವರ ಪರವಾಗಿ ಕೆಲಸ ಮಾಡಬೇಕು. ಇದುವೇ ನಿಜವಾದ ಪುಣ್ಯದ ಕಾರ್ಯ' ಎಂದು ಅವರು ಹೇಳಿದರು.

ವಿಧಾನಸೌಧ ಆವರಣದಲ್ಲಿ ಕಂದಾಯ ಇಲಾಖೆಯು ಆಯೋಜಿಸಿದ್ದ 36ನೇ ರಾಷ್ಟ್ರೀಯ ಭೂಮಾಪನ ದಿನಾಚರಣೆಯಲ್ಲಿ ಸಿದ್ದರಾಮಯ್ಯ ಅವರು ಆಧುನಿಕ ತಂತ್ರಜ್ಞಾನದ ಭೂಮಾಪನ ಉಪಕರಣವನ್ನು ಭೂಮಾಪಕ ಅಧಿಕಾರಿಗಳಿಗೆ ನೀಡಿದರು. ಕೃಷ್ಣ ಬೈರೇಗೌಡ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ಪರವಾನಗಿ ಹೊಂದಿದ 1,227 ಭೂಮಾಪಕರನ್ನು ಕಾಯಂ ಮಾಡಲಾಗುವುದು ಅಲ್ಲದೇ, 36 ಎಡಿಎಲ್‌ಆರ್ (ಭೂ ದಾಖಲೆಯ ಸಹಾಯಕ ನಿರ್ದೇಶಕ) ಹುದ್ದೆಗಳಿಗೆ ನೇಮಕ ಮಾಡಲಾಗುವುದು. ಕಂದಾಯ ಇಲಾಖೆ ರೈತರಿಗೆ ಸಂಬಂಧಿಸಿದ ಕೆಲಸಗಳನ್ನೇ ಮಾಡುತ್ತದೆ. ಇದಕ್ಕೆ ಹಣ ಕೊರತೆ ಇಲ್ಲ. ಅಗತ್ಯವಿರುವಷ್ಟು ಹಣ ಕೊಟ್ಟಿದ್ದೇವೆ. ಮುಂದೆಯೂ ಕೊಡುತ್ತೇವೆ' ಎಂದು ಹೇಳಿದರು.

'ಖಾಲಿ ಇರುವ ಎಲ್ಲಾ ಸರ್ವೆಯರ್ ಹುದ್ದೆಗಳ ನೇಮಕಾತಿ ಪಾರದರ್ಶಕವಾಗಿ ನಡೆದಿದೆ. ಸದ್ಯದಲ್ಲೇ ನೇಮಕಾತಿ ಪತ್ರವನ್ನೂ ಕೊಡುತ್ತೇವೆ. ಹಿಂದೆ ಗೋವಿಂದೇಗೌಡರು ಪ್ರಾಮಾಣಿಕವಾಗಿ ಒಂದು ಲಕ್ಷ ಶಿಕ್ಷಕರ ನೇಮಕಾತಿ ಮಾಡಿದ ರೀತಿಯಲ್ಲೇ ಕೃಷ್ಣಬೈರೇಗೌಡರು ಸರ್ವೆಯರ್‌ಗಳ ನೇಮಕಾತಿ ಮಾಡಿದ್ದಾರೆ' ಎಂದು ಸಿದ್ದರಾಮಯ್ಯ ಶ್ಲಾಘಿಸಿದರು.

'ಭೂಮಾಪನಾ: ವರ್ಷದೊಳಗೆ ಡಿಜಿಟಲೀಕರಣ'

'ಒಂದು ವರ್ಷದಲ್ಲಿ ಭೂಮಾಪನಾ ಇಲಾಖೆಯನ್ನು ಸಂಪೂರ್ಣ ಡಿಜಿಟಲೀಕರಣ ಮಾಡಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಇನ್ನು ಮುಂದೆ ಯಾವುದೇ ಕೆಲಸವೂ ಮ್ಯಾನ್ಯುವಲ್ ಆಗಿ ನಡೆಯುವುದಿಲ್ಲ. ಕಂಪ್ಯೂಟರೀಕರಣ ಮತ್ತು ಡಿಜಿಟಲೀಕರಣ ಮಾಡಲಾಗುತ್ತದೆ. ಒಂದು ವರ್ಷದಲ್ಲಿ ಪೂರ್ಣಗೊಳಿಸಬೇಕು ಎಂದು ಗುರಿ ನೀಡಿದ್ದೇನೆ. ಆದರೆ, ಆರು ತಿಂಗಳಲ್ಲಿ ಈ ಕಾರ್ಯ ಮುಗಿಸುವುದಾಗಿ ಆಯುಕ್ತರು ಭರವಸೆ ನೀಡಿದ್ದಾರೆ' ಎಂದರು.

'1802ರಲ್ಲಿ ಸರ್ವೆ ಕಾರ್ಯವನ್ನು ಯಾವ ವಿಧಾನದಲ್ಲಿ ಆರಂಭಿಸಲಾಗಿತ್ತೋ ಅದೇ ವಿಧಾನ ಈಗಲೂ ನಡೆಯುತ್ತಿದೆ. ಆಧುನಿಕ ತಂತ್ರಜ್ಞಾನ ಯುಗದಲ್ಲೂ ಯಾವುದೇ ಬದಲಾವಣೆ ಆಗಿಲ್ಲ. ಈ ಪದ್ಧತಿಯನ್ನು ಬದಲಿಸಿ ಸರ್ವೆ ಕಾರ್ಯಕ್ಕೆ ರೋವರ್ ಬಳಸಲಾಗುತ್ತಿದೆ. ಈಗಾಗಲೇ 475 ರೋವರ್ ಖರೀದಿಗೆ ಮುಖ್ಯಮಂತ್ರಿಯವರು ಒಪ್ಪಿಗೆ ನೀಡಿದ್ದಾರೆ. ಮ್ಯಾನ್ಯುವಲ್ ವ್ಯವಸ್ಥೆಯಲ್ಲಿ ಒಂದು ಸುತ್ತು ಸರ್ವೆಗೆ 70 ನಿಮಿಷ ಬೇಕಾದರೆ, ರೋವರ್ ಮೂಲಕ 8 ನಿಮಿಷದಲ್ಲಿ ಮುಗಿಸಬಹುದು. ರಾಜ್ಯಕ್ಕೆ 5,000 ರೋವರ್‌ಗಳ ಅಗತ್ಯವಿದ್ದು, ಹಂತ ಹಂತವಾಗಿ ಖರೀದಿಸಲಾಗುವುದು' ಎಂದರು.

ಸಂಚುಕೋರ ರಾಣಾ ಎನ್‌ಐಎ ವಶ

ಒಂದನೇ ಪುಟದಿಂದ...

ವಿಮಾನ ನಿಲ್ದಾಣದಿಂದ ಪಟಿಯಾಲ ಹೌಸ್ ನ್ಯಾಯಾಲಯದವರೆಗಿನ ಮಾರ್ಗದ ಉದ್ದಕ್ಕೂ ದೆಹಲಿ ಪೊಲೀಸರು ಬಿಗಿ ಭದ್ರತೆ ಏರ್ಪಡಿಸಿದ್ದರು. ಪೊಲೀಸರು ಭದ್ರತಾ ಕಾರಣ ನೀಡಿ ಮಾಧ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರನ್ನು ನ್ಯಾಯಾಲಯದ ಆವರಣದಿಂದ ಹೊರಕ್ಕೆ ಕಳುಹಿಸಿದರು.

ನ್ಯಾಯಾಲಯದ ಆವರಣದಲ್ಲಿ ಅಗತ್ಯ ಭದ್ರತಾ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳಲು ಡಿಸಿಪಿ (ನವದೆಹಲಿ) ದೇವೇಶ್ ಮೆಹ್ತಾ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದರು. ಸಿಐಎಸ್‌ಎಫ್ ಮತ್ತು ಅರೆಸೇನಾ ಪಡೆಯ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಹಸ್ತಾಂತರವನ್ನು ಪ್ರಶ್ನಿಸಿ 64 ವರ್ಷದ ರಾಣಾ ಸಲ್ಲಿಸಿದ್ದ ಅರ್ಜಿಯನ್ನು ಅಮೆರಿಕದ ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು. ಅದಾದ ಕೆಲವೇ ದಿನಗಳಲ್ಲಿ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡಿದೆ.

> ರಾಣಾ ಹಸ್ತಾಂತರವು ಮೋದಿ ಸರ್ಕಾರ ಮತ್ತು ದೇಶದ ಭದ್ರತಾ ಏಜೆನ್ಸಿಗಳ 'ದೊಡ್ಡ ಸಾಧನೆ'. ಯುಪಿಎ ಸರ್ಕಾರ ಭಯೋತ್ಪಾದನೆ ಬಗ್ಗೆ ಮೃದು ಧೋರಣೆ ಹೊಂದಿತ್ತು
> **ಶೆಹಜಾದ್ ಪೂನಾವಾಲಾ**
> ಬಿಜೆಪಿ ರಾಷ್ಟ್ರೀಯ ವಕ್ತಾರ

> ಹಸ್ತಾಂತರ ಪ್ರಕ್ರಿಯೆ ಯುಪಿಎ ಅವಧಿಯಲ್ಲೇ ಆರಂಭವಾಗಿದೆ. ಆದರೆ ನರೇಂದ್ರ ಮೋದಿ ಸರ್ಕಾರ ಅದರ ಶ್ರೇಯವನ್ನು ತನ್ನದಾಗಿಸಿಕೊಳ್ಳಲು ಪ್ರಯತ್ನಿಸುತ್ತಿದೆ
> **ಪಿ.ಚಿದಂಬರಂ,** ಕಾಂಗ್ರೆಸ್ ನಾಯಕ

'ಅಮೆರಿಕದ ನ್ಯಾಯಾಂಗ ಇಲಾಖೆ ಮತ್ತು ಸ್ಕೈ ಮಾರ್ಷಲ್ ಅವರ ನೆರವಿನೊಂದಿಗೆ ಎನ್‌ಐಎಯು ಭಾರತದ ಇತರ ಗುಪ್ತಚರ ಸಂಸ್ಥೆಗಳು, ಎನ್‌ಎಸ್‌ಜಿಯೊಂದಿಗೆ ಇಡೀ ಹಸ್ತಾಂತರ ಪ್ರಕ್ರಿಯೆಗೆ ನಿಕಟವಾಗಿ ಕೆಲಸ ಮಾಡಿದೆ ಎಂದು' ಎನ್‌ಐಎ ಪ್ರಕಟಣೆ ತಿಳಿಸಿದೆ.

'ಯತ್ನಾಳ ಉಚ್ಚಾಟನೆ ಸಂತೋಷ ತರದು'

ಉಡುಪಿ: 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಉಚ್ಚಾಟಿಸಿದ್ದು, ಪಕ್ಷದಲ್ಲಿ ಯಾರಿಗೂ ಸಂತೋಷ ತರುವ ವಿಚಾರವಲ್ಲ. ಅದರಿಂದ ಪಕ್ಷಕ್ಕೆ ಲಾಭವಾಗಿದೆ ಎನ್ನುವ ಮೂರ್ಖನೂ ನಾನಲ್ಲ' ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಒಬ್ಬ ಸಾಮಾನ್ಯ ಕಾರ್ಯಕರ್ತ ಬಿಜೆಪಿಯಿಂದ ಹೊರ ಹೋದರೂ ಪಕ್ಷಕ್ಕೆ ಹಾನಿಯಾಗುತ್ತದೆ' ಎಂದರು. 'ಯತ್ನಾಳ ಈಚೆಗೆ ಇತಿ–ಮಿತಿ ದಾಟಿದರು. ನಾಲಗೆ ಮೇಲೆ ಹಿಡಿತ ಹೊಂದಲು ವಿಫಲರಾದರು. ಅದರ ಪರಿಣಾಮ ಇಂದು ಈ ಪರಿಸ್ಥಿತಿ ಎದುರಿಸುತ್ತಿದ್ದಾರೆ' ಎಂದರು.

'ಕೆಪಿಸಿಸಿ: ಯಾವುದೇ ಬದಲಾವಣೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಪಿಸಿಸಿಯಲ್ಲಿ ಯಾವುದೇ ಬದಲಾವಣೆ ಇಲ್ಲ. ಕೆಲವು ಪದಾಧಿಕಾರಿಗಳನ್ನು ವರಿಷ್ಠರು ನೇಮಕ ಮಾಡುತ್ತಾರೆ. ಕೆಲವು ಜಿಲ್ಲಾ ಅಧ್ಯಕ್ಷರನ್ನು ಬದಲಾವಣೆ ಮಾಡಲಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಅಹಮದಾಬಾದ್ ಎಐಸಿಸಿ ಅಧಿವೇಶನದ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಕೇಳಿದಾಗ ಪ್ರತಿಕ್ರಿಯಿಸಿದ ಅವರು, 'ಈ ವಿಚಾರ ಹೊರತಾಗಿ ಯಾರೂ ಯಾವುದೇ ವಿಷಯವನ್ನು ನನ್ನ ಬಳಿ ಚರ್ಚಿಸಿಲ್ಲ' ಎಂದರು.

ಪ್ರತ್ಯೇಕ ಪ್ರಕರಣ: ಕೃಷಿ ಹೊಂಡ, ಕೆರೆಯಲ್ಲಿ ಮುಳುಗಿ 9 ಸಾವು

ಪ್ರಜಾವಾಣಿ ವಾರ್ತೆ

ಜಗಳೂರು/ಕೆಜಿಎಫ್/ಬಳ್ಳಾರಿ: ರಾಜ್ಯದ ವಿವಿಧೆಡೆ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ ಗುರುವಾರ ಕೆರೆ, ಕೃಷಿಹೊಂಡದಲ್ಲಿ ಈಜಲು ತೆರಳಿದ್ದ 9 ಮಂದಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಜಗಳೂರು (ದಾವಣಗೆರೆ) ವರದಿ: ತಾಲ್ಲೂಕಿನ ಭರಮಸಮುದ್ರ ಗ್ರಾಮದ ಕೆರೆಯಲ್ಲಿ ಈಜಲು ತೆರಳಿದ್ದ ಇಬ್ಬರು ಯುವಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಗ್ರಾಮದ ಬಿ.ಅಜಯ್ (18), ಟಿ. ಓಬಳೇಶ್ (19) ಸಾವಿಗೀಡಾದವರು. 2 ದಶಕಗಳಿಂದ ಬರಿದಾಗಿದ್ದ ಕೆರೆ ಈ ವರ್ಷ ಮಳೆಗೆ ತುಂಬಿತ್ತು. ಇಬ್ಬರೂ ಸ್ನೇಹಿತರೊಂದಿಗೆ ತೆರಳಿದ್ದರು. ಈಜಲು ಬಾರದ ಓಬಳೇಶ್ ಮುಳುಗುತ್ತಿದ್ದನ್ನು ಕಂಡ ಅಜಯ್ ರಕ್ಷಣೆಗೆ ಧಾವಿಸಿದ್ದ. ಆದರೆ, ಇಬ್ಬರೂ ಆಳವಾದ ಗುಂಡಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಜಗಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಜಿಎಫ್ ವರದಿ: ತಾಲ್ಲೂಕಿನ ವಡ್ಡರಹಳ್ಳಿ ಕೆರೆಗೆ ಈಜಲು ಇಳಿದ ಇಬ್ಬರು ಬಾಲಕರು ಮತ್ತು ರಕ್ಷಿಸಲು ಹೋಗಿದ್ದ ಬಾಲಕನ ತಂದೆ ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ವಡ್ಡರಹಳ್ಳಿಯ ರಮೇಶ್ (35), ಅವರ ಎಂಟು ವರ್ಷದ ಮಗ ಅಗಸ್ತ್ಯ ಮತ್ತು ಚರಣ್ (15) ಮೃತರು. ಚರಣ್ ಮತ್ತು ಅಗಸ್ತ್ಯನನ್ನು ಈಜಾಡಲು ಬಿಟ್ಟು ಕೆರೆಯ ಅಂಚಿನಲ್ಲಿ ಕುಳಿತು ರಮೇಶ್ ನೋಡುತ್ತಿದ್ದರು. ಮಕ್ಕಳು ಕೆಸರಿನಲ್ಲಿ ಸಿಲುಕಿ ಮುಳಗ ತೊಡಗಿದರು. ಅವರನ್ನು ರಕ್ಷಿಸಲು ರಮೇಶ್ ಕೆರೆ ಧುಮುಕಿದರು. ಆದರೆ, ಈಜಲು ಬಾರದ ಅವರೂ ಮೃತಪಟ್ಟರು. ಬೇತಮಂಗಲ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಬಳ್ಳಾರಿ ವರದಿ: ಬಳ್ಳಾರಿ ತಾಲ್ಲೂಕಿನ ಶಿಡಿಗಿನಮೊಳ ಗ್ರಾಮದ ಹೊಲದ ಕೃಷಿ ಹೊಂಡದಲ್ಲಿ ಮುಳುಗಿ ಬಾಲಕರಾದ ರಾಜೇಶ್ (13) ಮತ್ತು ಶಿವಶಂಕರ್ (13) ಮೃತಪಟ್ಟಿದ್ದಾರೆ.

'ನಾಲ್ವರು ಬಾಲಕರು ಈಜಲು ಕೃಷಿ ಹೊಂಡಕ್ಕೆ ಹೋಗಿದ್ದರು. ಒಬ್ಬ ನೀರಿಗಿಳಿದ ಕೂಡಲೇ ಮುಳುಗಿದರೆ, ಆತನ ರಕ್ಷಣೆಗೆ ಇನ್ನೊಬ್ಬ ಬಾಲಕ ನೀರಿಗಿಳಿದ. ಇಬ್ಬರೂ ಮುಳುಗಿದರು' ಎಂದು ಪರಮದೇವನಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಶಿವಪುರ ಗೊಲ್ಲರಹಟ್ಟಿಯ ಗೋಕಟ್ಟೆಯಲ್ಲಿ ಶಶಿಕುಮಾರ್ (15) ಮೃತಪಟ್ಟಿದ್ದಾನೆ ಎಂದು ಕೂಡ್ಲಿಗಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಶವ ಪತ್ತೆ: ಸ್ನೇಹಿತರ ಜೊತೆಗೆ ಹುಬ್ಬಳ್ಳಿಯ ಉಣಕಲ್ ಕೆರೆಗೆ ಬುಧವಾರ ಈಜಲು ಹೋಗಿದ್ದ ಬಾಲಕ ಬೆಂಗೇರಿ ಚೇತನ ಕನಕಣ್ಣವರ (17)ಶವ ಶವ ಗುರುವಾರ ಪತ್ತೆಯಾಗಿದೆ' ಎಂದು ವಿದ್ಯಾನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಉತ್ಸವ... ಹಾಸನ ಜಿಲ್ಲೆಯ ಬೇಲೂರು ಚನ್ನಕೇಶವ ಸ್ವಾಮಿ ಬ್ರಹ್ಮ ರಥೋತ್ಸವ ಗುರುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಪ್ರಜಾವಾಣಿ ಚಿತ್ರ/ಮಲ್ಲೇಶ

'ರಾಯರಡ್ಡಿ ಮಾತು ಪಕ್ಷ ಗಮನಿಸಲಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರದಲ್ಲಿ ಕರ್ನಾಟಕ ನಂಬರ್ ಒನ್ ಆಗಿದೆ ಎಂದು ಬಸವರಾಜ ರಾಯರಡ್ಡಿ ಯಾವ ಅರ್ಥದಲ್ಲಿ ಹೇಳಿದ್ದಾರೆಂದು ಅವರೇ ವಿವರಣೆ ನೀಡಬೇಕು. ಭ್ರಷ್ಟಾಚಾರದಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ ಎನ್ನುವುದನ್ನೂ ಅವರು ಹೇಳಬೇಕಿತ್ತು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಯರಡ್ಡಿ ಅವರ ಮಾತಿನಿಂದ ಸರ್ಕಾರಕ್ಕೆ ಮುಜುಗರವಾಗಿದೆ. ಅವರ ಹೇಳಿಕೆಯನ್ನು ಪಕ್ಷವು ಗಮನಿಸಿದೆ. ಯಾರೂ ಪಕ್ಷಕ್ಕಿಂತ ದೊಡ್ಡವರಿಲ್ಲ' ಎಂದರು.'ರಾಯರಡ್ಡಿ ಹಿರಿಯರು. ಯಾರು ಎಷ್ಟೆಷ್ಟು ಹಣ ಪಡೆದಿದ್ದಾರೆ ಎಂದೂ ಹೇಳಬೇಕಲ್ಲವೇ' ಎಂದೂ ಅಸಮಾಧಾನ ಹೊರಹಾಕಿದರು.

'ಭ್ರಷ್ಟಾಚಾರ ನಡೆದಿದೆ ಎಂದಿಲ್ಲ': 'ಭ್ರಷ್ಟಾಚಾರ ನಡೆದಿದೆ ಎಂದು ಮಾಧ್ಯಮಗಳ ಮುಂದೆ ರಾಯರಡ್ಡಿ ಹೇಳಿಲ್ಲ. ಅವರು ಸಾಮಾನ್ಯವಾಗಿ ಚರ್ಚೆ ಮಾಡಿರಬಹುದು. ಹೀಗಿರುವಾಗ ಕ್ರಮ ತೆಗೆದುಕೊಳ್ಳುವ ವಿಚಾರ ಎಲ್ಲಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಶ್ನಿಸಿದರು.

> ಶಾಸಕ ಬಸವರಾಜ ರಾಯರಡ್ಡಿ ಅವರನ್ನು ಕರೆದು ಚರ್ಚೆ ಮಾಡುತ್ತೇನೆ. ನಾನು ಆ ರೀತಿ ಹೇಳಿಲ್ಲ ಎಂದು ಅವರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ
> **ಡಿ.ಕೆ. ಶಿವಕುಮಾರ್**
> ಕೆಪಿಸಿಸಿ ಅಧ್ಯಕ್ಷ

> ಗಾಂಧೀಜಿ ಅವರ 'ಸತ್ಯಮೇವ ಜಯತೇ' ಘೋಷ ವಾಕ್ಯವನ್ನು ಕಾಂಗ್ರೆಸ್ ನಾಯಕರು ಶ್ರದ್ಧಾಭಕ್ತಿಯಿಂದ ಪರಿಪಾಲಿಸುತ್ತಿದ್ದಾರೆ ಎನ್ನುವುದಕ್ಕೆ ರಾಯರಡ್ಡಿ ಹೇಳಿಕೆಯೇ ಸಾಕ್ಷಿ
> **ಎಚ್‌.ಡಿ. ಕುಮಾರಸ್ವಾಮಿ**
> ಕೇಂದ್ರ ಸಚಿವ

ಸಂಕ್ಷಿಪ್ತ ಸುದ್ದಿ

₹10 ಕೋಟಿ ಮೌಲ್ಯದ ಅಂಬರ್‌ಗ್ರೀಸ್ ವಶ

ಮಡಿಕೇರಿ: 'ಜಿಲ್ಲೆಯ ವಿರಾಜಪೇಟೆ ಸಮೀಪದ ಬೆಟೋಳಿ ಗ್ರಾಮದ ಹೆಗ್ಗಳ ಜಂಕ್ಷನ್ ಬಳಿ ₹ 10 ಕೋಟಿ ಮೌಲ್ಯದ, 10 ಕೆ.ಜಿ 390 ಗ್ರಾಂ ತಿಮಿಂಗಲದ ವಾಂತಿ (ಅಂಬರ್‌ಗ್ರೀಸ್) ಯನ್ನು ಗುರುವಾರ ವಶಕ್ಕೆ ಪಡೆದ ಪೊಲೀಸರು 10 ಮಂದಿಯನ್ನು ಬಂಧಿಸಿದ್ದಾರೆ.

'ಬಂಧಿತರ ಪೈಕಿ ಒಬ್ಬರು ಶಿವಮೊಗ್ಗ ಜಿಲ್ಲೆಯವರು. ಉಳಿದವರೆಲ್ಲರೂ ಕೇರಳದವರು. ಬೆಂಗಳೂರು ಅಥವಾ ಆಂಧ್ರಪ್ರದೇಶದಲ್ಲಿ ಮಾರುವ ಉದ್ದೇಶ ಹೊಂದಿದ್ದರು. ನೋಟು ಎಣಿಸುವ 2 ಯಂತ್ರಗಳನ್ನೂ ವಶಪಡಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಟ್ಟಡದಿಂದ ಜಿಗಿದು ರೋಗಿ ಆತ್ಮಹತ್ಯೆ

ಹುಬ್ಬಳ್ಳಿ: ಇಲ್ಲಿನ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಕೆಎಂಸಿಆರ್‌ಐ) ಮೂರನೇ ಮಹಡಿಯಿಂದ ಜಿಗಿದು ಆದರ್ಶ ಗೋಂದಕರ್ (18) ಗುರುವಾರ ಬೆಳಗಿನ ಜಾವ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ನೇಕಾರ ನಗರದ ನಿವಾಸಿ ಆದರ್ಶ ಜ್ವರದಿಂದ ಬಳಲುತ್ತಿದ್ದರು. ಮಂಗಳವಾರ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗಿದ್ದರು. ರಕ್ತದಲ್ಲಿ ಪ್ಲೇಟ್‌ಲೆಟ್ ಕಡಿಮೆಯಾಗಿತ್ತು. ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ' ಎಂದು ಕೆಎಂಸಿಆರ್‌ಐ ನಿರ್ದೇಶಕ ಡಾ.ಎಸ್.ಎಫ್.ಕಮ್ಮಾರ ತಿಳಿಸಿದರು.

'ಶೌಚಕ್ಕೆ ಹೋಗುವುದಾಗಿ ಹೇಳಿ, ಬೆಳಗಿನಜಾವ 4.30ಕ್ಕೆ ಸಿಬ್ಬಂದಿ ಕಣ್ತಪ್ಪಿಸಿ ಮುಖ್ಯ ಕಟ್ಟಡದ 303ನೇ ವಾರ್ಡ್ ಕಿಟಕಿಯಿಂದ ಜಿಗಿದಿದ್ದಾರೆ. ತಲೆ, ಯಕೃತ್ತಿಗೆ ಪೆಟ್ಟಾಗಿತ್ತು' ಎಂದು ವಿದ್ಯಾನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಉಡುಪಿ ಮಠ: ವೆಡ್ಡಿಂಗ್ ಫೋಟೊಶೂಟ್‌ಗೆ ನಿಷೇಧ

ಉಡುಪಿ: ಇಲ್ಲಿನ ಶ್ರೀ ಕೃಷ್ಣ ಮಠದ ರಥ ಬೀದಿಯಲ್ಲಿ ವಿವಾಹಪೂರ್ವ (ಪ್ರಿ ವೆಡ್ಡಿಂಗ್) ಮತ್ತು ವಿವಾಹ ನಂತರದ (ಪೋಸ್ಟ್ ವೆಡ್ಡಿಂಗ್) ಫೋಟೊ ಶೂಟ್ ನಡೆಸುವುದನ್ನು ಪರ್ಯಾಯ ಪುತ್ತಿಗೆ ಮಠ ನಿರ್ಬಂಧಿಸಿದೆ.

'ರಥ ಬೀದಿಯಲ್ಲಿ ಪಾರಂಪರಿಕ ಕಟ್ಟಡಗಳಿವೆ. ಫೋಟೋಶೂಟ್ ಹೆಸರಿನಲ್ಲಿ ಅಲ್ಲಿ ಅಸಭ್ಯ ವರ್ತನೆ ಕಾಣಿಸುತ್ತಿದೆ, ಪ್ರೇಮ ಸಲ್ಲಾಪ ನಡೆಯುತ್ತಿದೆ. ಕೇರಳ, ಬೆಂಗಳೂರು ಮೊದಲಾದ ಕಡೆಯಿಂದ ಬರುವ ಫೋಟೋಗ್ರಾಫರ್‌ಗಳ ಹಾವಳಿ ಹೆಚ್ಚಾಗಿದೆ. ಹೀಗಾಗಿ ಈ ಕ್ರಮವನ್ನು ಕೈಗೊಳ್ಳಲಾಗುತ್ತಿದೆ' ಎಂದು ಮಠದ ಅಧಿಕಾರಿಗಳು ತಿಳಿಸಿದ್ದಾರೆ.

ಟಿಕೆಟ್ ರಹಿತ ಪ್ರಯಾಣ ₹11.83 ಕೋಟಿ ದಂಡ ವಸೂಲಿ

ಸೊಲ್ಲಾಪುರ (ಮಹಾರಾಷ್ಟ್ರ): ಟಿಕೆಟ್ ರಹಿತ ಪ್ರಯಾಣ ಸೇರಿದಂತೆ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಮಧ್ಯ ರೈಲ್ವೆ ವಲಯದ ಸೊಲ್ಲಾಪುರ ವಿಭಾಗ ವ್ಯಾಪ್ತಿಯಲ್ಲಿ ಒಂದು ವರ್ಷದಲ್ಲಿ 2 ಲಕ್ಷ ಪ್ರಕರಣ ದಾಖಲಿಸಿದ್ದು, ₹ 11.83 ಕೋಟಿ ದಂಡ ವಸೂಲಿ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

ಪತ್ನಿ ಸಾವಿನ ಖಿನ್ನತೆ: ಮಕ್ಕಳ ಕೊಂದು ತಂದೆ ಆತ್ಮಹತ್ಯೆ

ದಾವಣಗೆರೆ: ಪತ್ನಿ ಸಾವಿನಿಂದಾಗಿ ಖಿನ್ನತೆಗೆ ಒಳಗಾಗಿದ್ದ ವ್ಯಕ್ತಿಯೊಬ್ಬರು ಗುರುವಾರ ಇಬ್ಬರು ಮಕ್ಕಳನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಾಜೀವಗಾಂಧಿ ಬಡಾವಣೆಯ ನಿವಾಸಿ ಉದಯ್ (35) ಆತ್ಮಹತ್ಯೆ ಮಾಡಿಕೊಂಡವರು. ಪುತ್ರಿ ಸಿಂಧುಶ್ರೀ (4) ಹಾಗೂ ಪುತ್ರ ಶ್ರೀಜಯ್ (3) ಅವರ ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ.

'ಆತ್ಮಹತ್ಯೆಗೂ ಮುನ್ನ ಉದಯ್ ಬರೆದಿಟ್ಟಿದ್ದ ಮರಣ ಪತ್ರ ಲಭ್ಯವಾಗಿದೆ. ಮಕ್ಕಳೊಂದಿಗೆ ಪತ್ನಿಯ ಬಳಿಗೆ ತೆರಳುತ್ತಿರುವುದಾಗಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ತಲವಾರ್ ಹಿಡಿದ ಇಬ್ಬರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ

ಪುತ್ತೂರು (ದಕ್ಷಿಣ ಕನ್ನಡ): ತಲವಾರ್ ಹಿಡಿದಿದ್ದ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ ಕಾನೂನು ಉಲ್ಲಂಘಿಸಿದ ಆರೋಪದಡಿ ಇಬ್ಬರು ಯುವಕರ ವಿರುದ್ಧ ಸಂಪ್ಯ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಬಂಧಿಸಿದ್ದಾರೆ.

ತಾಲ್ಲೂಕಿನ ಆರ್ಯಾಪು ಗ್ರಾಮದ ಸಂಟ್ಯಾರು ನಿವಾಸಿ ಸುಜಿತ್ ಬಂಗೇರ (36) ಮತ್ತು ಮರಿಕೆ ನಿವಾಸಿ ಪುಟ್ಟಣ್ಣ (32) ಬಂಧಿತರು.

ನೆಲಕ್ಕುರುಳಿದ ಬಾಳೆಗಿಡಗಳು; ಲಕ್ಷಾಂತರ ರೂಪಾಯಿ ನಷ್ಟ

ಬೀದರ್, ಕೊಪ್ಪಳದಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೀದರ್: ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಗುರುವಾರ ಮಧ್ಯಾಹ್ನ ಬಿರುಸಿನ ಮಳೆ ಆಗಿದೆ. ನಗರದಲ್ಲಿ ಮನ್ನಳ್ಳಿ ರಸ್ತೆ ಜಲಾವೃತವಾಗಿದ್ದು, ವಾಹನ ಸವಾರರು ಪರದಾಡಿದರು.

ಮಧ್ಯಾಹ್ನ 2.30ರಿಂದ 3ರವರೆಗೆ ಬಿರುಗಾಳಿ ಬೀಸಿದ್ದು, ಕಸ ಗಾಳಿಯಲ್ಲಿ ತೇಲಾಡಿತು. ಬಳಿಕ ಶುರುವಾದ ಮಳೆಯ ಆರ್ಭಟ ಸಂಜೆಯವರೆಗೆ ಇತ್ತು.

ಜಿಲ್ಲೆಯ ಔರಾದ್, ಚಿಟಗುಪ್ಪದ ಹಲವೆಡೆ ಮರಗಳು ಧರೆಗುರುಳಿವೆ. ಹುಮನಾಬಾದ್, ಭಾಲ್ಕಿ ತಾಲ್ಲೂಕಿನಲ್ಲೂ ಮಳೆಯಾಗಿದೆ. ಚಿಟಗುಪ್ಪದಲ್ಲಿ ಪಪ್ಪಾಯ ಗಿಡಗಳು ನೆಲಕ್ಕೊರಗಿವೆ.

ಕೊಪ್ಪಳದಲ್ಲಿ ಜಿಲ್ಲಾ ಕೇಂದ್ರ, ಗಂಗಾವತಿ ಮತ್ತು ಕಾರಟಗಿಯಲ್ಲಿ ಆಲಿಕಲ್ಲು ಮಳೆಯಾಗಿದೆ. ಬಿರು ಬೇಸಿಗೆಯಲ್ಲೂ ಸುರಿದ ಜೋರು ಮಳೆ ಇದಾಗಿದೆ.

ಕೊಪ್ಪಳ ತಾಲ್ಲೂಕಿನ ಮೆಳ್ಳಿಕೇರಿಯಲ್ಲಿ ಬಾಳೆ ಬೆಳೆ ನೆಲಕ್ಕೊರಗಿದವು. ಮುದ್ದಾಬಳ್ಳಿ ಗ್ರಾಮದಲ್ಲಿ ಸಿಡಿಲಿಗೆ ಒಂದು ಎತ್ತು ಹಾಗೂ ಒಂದು ಹಸು ಬಲಿಯಾಗಿದೆ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಜವಳಗೇರಾ ಶ್ರೀನಿವಾಸ್ ಕ್ಯಾಂಪ್ ಹಾಗೂ ಸಿರವಾರ ತಾಲ್ಲೂಕಿನ ಉಟಕನೂರು ಗ್ರಾಮದಲ್ಲಿ ಸಾಧಾರಣ ಮಳೆಯಾಗಿದೆ.

ಯಾದಗಿರಿ ನಗರದಲ್ಲಿ ಕೆಲ ಕಾಲ ಗಾಳಿ ಮಳೆ ಸುರಿಯಿತು.

ಕೊಪ್ಪಳದಲ್ಲಿ ಗುರುವಾರ ಸುರಿದ ಮಳೆಯಿಂದಾಗಿ ಜಲಾವೃತಗೊಂಡ ರಸ್ತೆಯಲ್ಲಿ ವಸ್ತುಗಳನ್ನು ಹೊತ್ತು ಹೊರಟ ವೃದ್ಧೆ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಸಿಡಿಲು ಬಡಿದು ಬಾಲಕ ಸಾವು

ಹುಬ್ಬಳ್ಳಿ: ಬಳ್ಳಾರಿ, ವಿಜಯನಗರ ಜಿಲ್ಲೆಯ ಕೆಲವೆಡೆ ಧಾರಾಕಾರ ಮಳೆ ಸುರಿಯಿತು.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಬಂಡೇಬಸಾಪುರ ತಾಂಡಾದಲ್ಲಿ ಗುರುವಾರ ಸಂಜೆ ಸಿಡಿಲು ಬಡಿದು ಪಾಂಡು ನಾಯ್ಕ (16) ಮೃತಪಟ್ಟರು.

ಕೂಡ್ಲಿಗಿ ಸುತ್ತಮುತ್ತ ಗುಡುಗು, ಸಿಡಿಲು ಸಹಿತ ಅರ್ಧ ಗಂಟೆ ಬಿರುಸಿನ ಮಳೆಯಾಯಿತು. ಹೊಸಪೇಟೆ ಸುತ್ತಮುತ್ತ ತುಂತುರು ಮಳೆ ಸುರಿಯಿತು. ಬಳ್ಳಾರಿ ಜಿಲ್ಲೆಯ ಕೆಲವೆಡೆ ಆಲಿಕಲ್ಲು ಮಳೆಯಾಯಿತು. ಕಟಾವು ಮಾಡಿ, ರಾಶಿ ಹಾಕಿದ್ದ ಭತ್ತಕ್ಕೆ ಹಾನಿಯಾಯಿತು. ಜಿಲ್ಲೆಯಲ್ಲಿ ಗುರುವಾರ 38.8 ಡಿಗ್ರಿ ಉಷ್ಣಾಂಶ ದಾಖಲಾಗಿತ್ತು.

ದೇಶದಾದ್ಯಂತ ಏ.20ರಿಂದ 15 ದಿನ ಅಭಿಯಾನ • ಕಾಯ್ದೆಯ ಪ್ರಯೋಜನಗಳ ಪ್ರಚಾರ

ವಕ್ಫ್: ಬಿಜೆಪಿ ಜಾಗೃತಿ ಅಭಿಯಾನ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಕಾಯ್ದೆಯ ಪ್ರಯೋಜನಗಳನ್ನು ಪ್ರಚಾರ ಮಾಡಲು ಹಾಗೂ ಕಾಯ್ದೆ ಕುರಿತು ವಿಪಕ್ಷಗಳ ಟೀಕೆಗಳಿಗೆ ತಿರುಗೇಟು ನೀಡಲು, ಬಿಜೆಪಿಯು ರಾಷ್ಟ್ರದಾದ್ಯಂತ ಏ.20ರಿಂದ 15 ದಿನ ಸಾರ್ವಜನಿಕ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದೆ. ವಿಶೇಷವಾಗಿ ಮುಸ್ಲಿಮರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲು ಯೋಜಿಸಲಾಗಿದೆ ಎಂದು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಗುರುವಾರ ತಿಳಿಸಿದರು.

ಇಲ್ಲಿ ನಡೆದ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ ನಡ್ಡಾ, 'ಬಡ ಮುಸ್ಲಿಮರು ಮತ್ತು ಮಹಿಳೆಯರ ಕಲ್ಯಾಣಕ್ಕಾಗಿ ವಕ್ಫ್ ಆಸ್ತಿಗಳನ್ನು ಬಳಸಿಕೊಳ್ಳಲು ತಿದ್ದುಪಡಿ ಮಾಡಲಾದ ಕಾಯ್ದೆಯಿಂದ ಅನುಕೂಲ ಆಗಲಿದೆ. ಅಲ್ಲದೇ, ಕೆಲವಷ್ಟೇ ಪ್ರಭಾವಿ ಜನರು ವಕ್ಫ್ ಆಸ್ತಿಯ ನಿಯಂತ್ರಣ ಹೊಂದುವುದು ತಪ್ಪಲಿದೆ. ಆಸ್ತಿಯು ಅಲ್ಪಸಂಖ್ಯಾತ ಸಮುದಾಯದ ಒಟ್ಟಾರೆ ಪ್ರಯೋಜನಕ್ಕಾಗಿ ಬಳಕೆಯಾಗುತ್ತದೆ' ಎಂದು ಹೇಳಿದರು.

ಮೇ.5ರಂದು ಮುಕ್ತಾಯಗೊಳ್ಳಲಿರುವ ಅಭಿಯಾನದ ನೇತೃತ್ವವನ್ನು ಪಕ್ಷದ ಪ್ರಧಾನ ಕಾರ್ಯದರ್ಶಿ ರಾಧಾ ಮೋಹನ್ ದಾಸ್ ಅಗರವಾಲ್ ಹಾಗೂ ಅಲ್ಪಸಂಖ್ಯಾತ ಮೋರ್ಚಾದ ಅಧ್ಯಕ್ಷ ಜಮಾಲ್ ಸಿದ್ದೀಕ್ ಅವರು ವಹಿಸಿಕೊಳ್ಳಲಿದ್ದಾರೆ. ಮುಸ್ಲಿಂ ಸಮುದಾಯದವರೊಂದಿಗೆ ಸಭೆ ಹಾಗೂ ಸುದ್ದಿಗೋಷ್ಠಿಗಳನ್ನು ನಡೆಸಲು ಬಿಜೆಪಿ ಯೋಜಿಸಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ವಿರೋಧ ಪಕ್ಷಗಳು ತಮ್ಮ ಮತ ಬ್ಯಾಂಕ್ ರಾಜಕಾರಣದ ಭಾಗವಾಗಿ, ವಕ್ಫ್ ಮಸೂದೆ ವಿಚಾರದಲ್ಲಿ ಮುಸ್ಲಿಮರ ದಾರಿ ತಪ್ಪಿಸುತ್ತಿವೆ
ಜೆ.ಪಿ ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಮುಸ್ಲಿಮರ ಧಾರ್ಮಿಕ ವ್ಯವಹಾರಗಳಲ್ಲಿ ವಕ್ಫ್ (ತಿದ್ದುಪಡಿ) ಕಾಯ್ದೆಯು ಹಸ್ತಕ್ಷೇಪ ಮಾಡುತ್ತದೆ ಎಂಬ ಆರೋಪವನ್ನು ರಿಜಿಜು ಹಾಗೂ ನಡ್ಡಾ ಸಂಪೂರ್ಣವಾಗಿ ಅಲ್ಲಗಳೆದರು.

ಬಿಜೆಪಿಆಡಳಿತವಿರುವರಾಜ್ಯಗಳಲ್ಲಿನ ವಕ್ಫ್ ಮಂಡಳಿಯ ಸದಸ್ಯರು ಹಾಗೂ ಅಲ್ಪಸಂಖ್ಯಾತ ವಿಭಾಗ ಸೇರಿದಂತೆ ಪಕ್ಷದ ಪದಾಧಿಕಾರಿಗಳು ಒಂದು ದಿನದ ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

ವಕ್ಫ್ ಕಲ್ಯಾಣ ಕಾರ್ಯಕ್ರಮಗಳಲ್ಲಿ ಹಾಗೂ ಅದರ ಆಸ್ತಿಯ ಪಾರದರ್ಶಕ ಮತ್ತು ಸಮರ್ಥ ನಿರ್ವಹಣೆಯಲ್ಲಿ ಪಸ್ಮಂದಾ (ಹಿಂದುಳಿದ) ಮುಸ್ಲಿಮರು ಮತ್ತು ಮಹಿಳೆಯರು ಒಳಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ನಿಶ್ಚಯಿಸಿದೆ ಎನ್ನಲಾಗಿದೆ.

ಆಕ್ಷೇಪ ಮರುಪರಿಶೀಲನೆಗೆ ಆಗ್ರಹ

ಮಾಯಾವತಿ

ಲಖನೌ (ಪಿಟಿಐ): 'ವಕ್ಫ್ ಕಾಯ್ದೆಯ ಅಂಶಗಳನ್ನು ಮರು-ಪರಿಶೀಲಿಸಬೇಕು ಹಾಗೂ ಅಲ್ಲಿಯವರೆಗೂ ಕಾಯ್ದೆಯನ್ನು ಅಮಾನತಿನಲ್ಲಿ ಇಡಬೇಕು' ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಕೇಂದ್ರ ಸರ್ಕಾರಕ್ಕೆ ಕೋರಿದ್ದಾರೆ.

ರಾಜ್ಯಗಳ ವಕ್ಫ್ ಮಂಡಳಿಗೆ ಮುಸ್ಲಿಂ ಅಲ್ಲದವರನ್ನು ಸದಸ್ಯರಾಗಿ ಸೇರ್ಪಡೆಗೊಳಿಸುವುದು ಸೇರಿ ಕೆಲ ಅಂಶಗಳು ಮೇಲ್ನೋಟಕ್ಕೆ ಸರಿ ಎನಿಸುವುದಿಲ್ಲ ಎಂದು ಹೇಳಿದ್ದಾರೆ.

ಕಾಯ್ದೆಗೆ ಸಂಬಂಧಿಸಿ ವ್ಯಕ್ತವಾಗಿರುವ ಆಕ್ಷೇಪಗಳನ್ನು ಕೇಂದ್ರ ಸರ್ಕಾರ ಮರು ಪರಿಶೀಲಿಸುವುದು ಉತ್ತಮ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಸುಪ್ರೀಂ' ಮೊರೆಹೋದ ಮಹುವಾ

ಮಹುವಾ ಮೊಯಿತ್ರ

ನವದೆಹಲಿ (ಪಿಟಿಐ): ವಕ್ಫ್ ತಿದ್ದುಪಡಿ ಕಾಯ್ದೆ–2025ರ ಸಿಂಧುತ್ವ ಪ್ರಶ್ನಿಸಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದೆ ಮಹುವಾ ಮೊಯಿತ್ರ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

'ವಕ್ಫ್ ತಿದ್ದುಪಡಿ ವಿಧೇಯಕ ಸಂಬಂಧಿಸಿದಂತೆ ಜಂಟಿ ಸಂಸದೀಯ ಸಮಿತಿ ರಚಿಸಿದ್ದ ಕರಡು ವರದಿಯನ್ನು ಪರಿಗಣಿಸುವ ಹಂತದಲ್ಲಿ ಹಾಗೂ ಸಂಸತ್ತಿನಲ್ಲಿ ಅಂಗೀಕಾರ ನೀಡುವಾಗ ಸಂಸದೀಯ ಕಾರ್ಯವಿಧಾನಗಳಲ್ಲಿ ಲೋಪವಾಗಿದೆ. ಜತೆಗೆ ಸಂವಿಧಾನದಲ್ಲಿ ನೀಡಲಾದ ಹಲವು ಮೂಲಭೂತ ಹಕ್ಕುಗಳನ್ನು ಕಾಯ್ದೆ ಉಲ್ಲಂಘಿಸಿದೆ' ಎಂದು ಅರ್ಜಿಯಲ್ಲಿ ಉಲ್ಲೇಖಿಸಿ, ಕಾಯ್ದೆಯನ್ನು ರದ್ದುಗೊಳಿಸುವಂತೆ ಮಹುವಾ ಮನವಿ ಮಾಡಿದ್ದಾರೆ.

ಏ.16ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ವಕ್ಫ್ ತಿದ್ದುಪಡಿ ಕಾಯ್ದೆ–2025ರ ಸಿಂಧುತ್ವ ಪ್ರಶ್ನಿಸಿ ಎಐಎಂಐಎಂ ನಾಯಕ ಅಸಾದುದ್ದೀನ್ ಓವೈಸಿ ಸೇರಿದಂತೆ 10 ಮಂದಿ ಸಲ್ಲಿಸಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ನ್ಯಾಯಪೀಠ ಏ.16ರಂದು ವಿಚಾರಣೆ ನಡೆಸಲಿದೆ.

ನ್ಯಾಯಮೂರ್ತಿ ಸಂಜಯ್ ಕುಮಾರ್, ನ್ಯಾಯಮೂರ್ತಿ ಕೆ.ವಿ. ವಿಶ್ವನಾಥ ಅವರನ್ನೂ ಸಿಜೆಐ ನೇತೃತ್ವದ ಪೀಠ ಒಳಗೊಂಡಿರಲಿದೆ. ಓವೈಸಿ ಅವರ ಅರ್ಜಿ ಹೊರತಾಗಿ ಆಪ್ ನಾಯಕ ಅಮಾನತ್ ಉಲ್ಲಾ ಖಾನ್, ಆರ್‌ಜೆಡಿಯ ಮನೋಜ್ ಕುಮಾರ್ ಜ್ಞಾ, ಕಾಂಗ್ರೆಸ್ ನಾಯಕ ಇಮ್ರಾನ್ ಪ್ರತಾಪ್‌ಗಢಿ ಅವರ ಅರ್ಜಿಗಳೂ ಈ 10ರಲ್ಲಿ ಸೇರಿವೆ.

ಇತ್ತ ಕೇಂದ್ರ ಸರ್ಕಾರವೂ ಏ.8ರಂದು ಸುಪ್ರೀಂ ಕೋರ್ಟ್‌ನಲ್ಲಿ ಕೇವಿಯಟ್ ಅರ್ಜಿ ಸಲ್ಲಿಸಿದ್ದು, ವಕ್ಫ್ ಕಾಯ್ದೆ ವಿಚಾರವಾಗಿ ಯಾವುದೇ ಆದೇಶ ಹೊರಡಿಸುವುದಕ್ಕೆ ಮುನ್ನ ತನ್ನ ವಾದ ಆಲಿಸುವಂತೆ ಕೋರಿದೆ.

ಪ್ರತಿಭಟನೆ ಕೋಲ್ಕತ್ತದಲ್ಲಿ ಗುರುವಾರ ಮುಸ್ಲಿಂ ಸಮುದಾಯದವರು ವಕ್ಫ್ ತಿದ್ದುಪಡಿ ಮಸೂದೆ ವಿರೋಧಿಸಿ ಪ್ರತಿಭಟನೆ ನಡೆಸಿದಾಗ ಉಂಟಾದ ಸಂಚಾರ ದಟ್ಟಣೆಯಲ್ಲಿ ವಾಹನಗಳು ಸಿಲುಕಿದವು – ಪಿಟಿಐ ಚಿತ್ರ

ಮುಟ್ಟು: ತರಗತಿ ಆಚೆ ಕೂರಿಸಿ ಪರೀಕ್ಷೆ ಬರೆಸಿದರು

ಕೊಯಮತ್ತೂರು (ಪಿಟಿಐ): ತಮಿಳುನಾಡಿನ ಕೊಯಮತ್ತೂರಿನಲ್ಲಿ ಮುಟ್ಟಾದ 8ನೇ ತರಗತಿ ವಿದ್ಯಾರ್ಥಿನಿಯನ್ನು ಶಾಲಾ ತರಗತಿ ಹೊರಗೆ ಕೂರಿಸಿ ವಾರ್ಷಿಕ ಪರೀಕ್ಷೆ ಬರೆಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಹೀಗಾಗಿ, ಖಾಸಗಿ ಶಾಲೆಯ ಪ್ರಾಂಶುಪಾಲರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಗುರುವಾರ ತಿಳಿಸಿದೆ.

ಪೊಲ್ಲಾಚಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬುಧವಾರ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ ಬಾಲಕಿಯನ್ನು ಬುಧವಾರ ಶಾಲಾ ತರಗತಿ ಹೊರಗೆ ಕೂರಿಸಿ ಪರೀಕ್ಷೆ ಬರೆಸಲಾಗಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಇದರಿಂದಾಗಿ ಪೊಲೀಸರು ಶಾಲೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದರು. ಅಲ್ಲದೆ, ಈ ಕುರಿತು ಸ್ಪಷ್ಟನೆ ನೀಡುವಂತೆ ಶಾಲಾ ಆಡಳಿತ ಮಂಡಳಿಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ಸೂಚಿಸಿದ್ದರು.

'ಈ ಘಟನೆ ಸಂಬಂಧ ಖಾಸಗಿ ಶಾಲೆ ವಿರುದ್ಧ ತನಿಖೆ ಕೈಗೊಳ್ಳಲಾಗಿದೆ. ಶಾಲೆಯ ಪ್ರಾಂಶುಪಾಲರನ್ನು ಅಮಾನತು ಮಾಡಲಾಗಿದೆ. ಮಕ್ಕಳ ಮೇಲೆ ನಡೆಯುವ ಯಾವುದೇ ಬಲವಂತದ ಕ್ರಮವನ್ನು ಸಹಿಸಲಾಗದು. ಪ್ರೀತಿಯ ವಿದ್ಯಾರ್ಥಿ, ಇಲ್ಲಿ ನೀನು ಏಕಾಂಗಿಯಲ್ಲ! ನಿನ್ನೊಂದಿಗೆ ನಾವಿದ್ದೇವೆ' ಎಂದು ಶಿಕ್ಷಣ ಸಚಿವರು 'ಎಕ್ಸ್' ನಲ್ಲಿ ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಬಾಲಕಿಯ ತಂದೆ, 'ಕಳೆದ ವಾರ ನನ್ನ ಮಗಳು ಋತುಮತಿಯಾಗಿದ್ದಳು. ಈ ವಾರ ನಿಗದಿಯಾಗಿದ್ದ ಪರೀಕ್ಷೆ ಬರೆಯಲು ಹೋಗುತ್ತೇನೆ ಎಂದಿದ್ದಳು. ಹೀಗಾಗಿ, ಮಗಳು ಪರೀಕ್ಷೆ ಬರೆಯಲು ಅನುಕೂಲವಾಗುವಂತೆ ಪ್ರತ್ಯೇಕ ಮೇಜು ಮತ್ತು ಕುರ್ಚಿ ವ್ಯವಸ್ಥೆ ಮಾಡುವಂತೆ ಶಾಲಾ ಆಡಳಿತ ಮಂಡಳಿಗೆ ಮನವಿ ಮಾಡಿದ್ದೆ. ಆದರೆ, ಇದಕ್ಕೆ ಸಹಕರಿಸದ ಶಾಲಾ ಆಡಳಿತ ಮಂಡಳಿಯು ತರಗತಿ ಹೊರಗಿರುವ ಮೆಟ್ಟಿಲಿನ ಮೇಲೆ ಕುಳಿತು ಪರೀಕ್ಷೆ ಬರೆಸಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಕೇರಳದ ಶ್ರೀ ಕೂಡಲ್ಮಾಣಿಕ್ಯಂ ದೇವಾಲಯದ ಕಳಕಮ್ ಹುದ್ದೆ ನೇಮಕಾತಿ ಪ್ರಕರಣ

ದೇಗುಲದಲ್ಲಿ ಜಾತಿ ತಾರತಮ್ಯ ಕಾನೂನು ಹೋರಾಟಕ್ಕೆ ಸಜ್ಜು

ತಿರುವನಂತಪುರ: ಕೇರಳದ ತ್ರಿಶ್ಶೂರ್ ಜಿಲ್ಲೆಯ ಶ್ರೀ ಕೂಡಲ್ಮಾಣಿಕ್ಯಂ ದೇವಾಲಯದಲ್ಲಿ ನಡೆದಿದೆ ಎನ್ನಲಾಗಿದ್ದ ಜಾತಿ ತಾರತಮ್ಯ ವಿಚಾರವು ಸಿಬ್ಬಂದಿಯ ರಾಜೀನಾಮೆಯಲ್ಲಿ ಕೊನೆಗೊಳ್ಳದೆ ಇದೀಗ ನ್ಯಾಯಾಲಯದ ಮೆಟ್ಟಿಲೇರುವ ಹಂತಕ್ಕೆ ತಲುಪಿದೆ.

ದೇವಾಲಯದಕಳಕಮ್(ಹೂವಿನಹಾರತಯಾರಿಕೆಮತ್ತುಅದಕ್ಕೆಸಂಬಂಧಿಸಿದ ಕಾರ್ಯ) ಹುದ್ದೆಗೆ ಹಿಂದೂ–ಎಳವ ಒಬಿಸಿ ಸಮುದಾಯದ ಅಭ್ಯರ್ಥಿಯನ್ನು ನೇಮಿಸುವ ದೇವಸ್ವಂ ಮಂಡಳಿ ನಿರ್ಧಾರದ ವಿರುದ್ಧ ಕಾನೂನಾತ್ಮಕ ಹೋರಾಡುವುದಾಗಿ ಮೇಲ್ಜಾತಿಯ ಹಿಂದೂ–ವಾರಿಯರ್ ಸಮುದಾಯ ಹೇಳಿದೆ.

ಇತ್ತೀಚೆಗಷ್ಟೇ ತಿರುವನಂತಪುರದ ನಿವಾಸಿ, ಎಳವ ಸಮುದಾಯದ ಬಾಲು ಬಿ.ಎ ಎಂಬುವವರನ್ನು ಕಳಕಮ್ ಹುದ್ದೆಗೆ ನೇಮಕ ಮಾಡಲಾಗಿತ್ತು. ಆದರೆ, ಈ ಹುದ್ದೆಯು ಮೇಲ್ಜಾತಿಯ ವಾರಿಯರ್ ಸಮುದಾಯಕ್ಕೆ ಪಾರಂಪರಿಕವಾಗಿ ಮೀಸಲಿದೆ. ಹೀಗಾಗಿ ಅವರನ್ನೇ ನೇಮಕಗೊಳಿಸಬೇಕು ಎಂದು ದೇವಾಲಯದ ತಂತ್ರಿಗಳು (ಬ್ರಾಹ್ಮಣ ಸಮುದಾಯ) ಒತ್ತಡ ಹೇರಿದ್ದರು.

ತಂತ್ರಿಗಳ ಒತ್ತಡಕ್ಕೆ ಮಣಿದು ಬಾಲು ಅವರನ್ನು ದೇವಸ್ವಂ ಮಂಡಳಿಯು ಕಚೇರಿ ಕೆಲಸಕ್ಕೆ ನೇಮಿಸಿತ್ತು. ಇದು ವಿವಾದಕ್ಕೀಡಾಗುತ್ತಿದ್ದಂತೆಯೇ ಬಾಲು ವೈಯಕ್ತಿಕ ಕಾರಣ ನೀಡಿ, ಹುದ್ದೆಗೆ ರಾಜೀನಾಮೆ ನೀಡಿದ್ದರು.

ಇದೀಗ ಈಳವ ಸಮುದಾಯದ ಮತ್ತೋರ್ವ ಅಭ್ಯರ್ಥಿ ಕೆ.ಎಸ್.ಅನುರಾಗ್ ಎಂಬುವವರನ್ನು ಹುದ್ದೆಗೆ ಆಯ್ಕೆ ಮಾಡಲಾಗಿದೆ. ಆದರೆ, ಅವರು ಸೇವೆಗೆ ಸೇರುವ ಮುನ್ನವೇ 'ಸಮಸ್ತ ಕೇರಳ ವಾರಿಯರ್ ಸಮಾಜಂ'ನ ಪ್ರಧಾನ ಕಾರ್ಯದರ್ಶಿ ವಿ.ವಿ.ಮುರುಳೀಧರನ್ ಕಾನೂನು ಹೋರಾಟ ಮಾಡುವುದಾಗಿ ಹೇಳಿದ್ದಾರೆ.

'ಡ್ರೋನ್‌ಗಳ ಪಾತ್ರ ನಿರ್ಣಾಯಕ'

ಆಧುನಿಕ ಯುದ್ಧ ಸ್ವರೂಪ ಬಗ್ಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಿಶ್ಲೇಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಉಪಗ್ರಹಗಳು, ಡ್ರೋನ್ ಸೇರಿದಂತೆ ಭೂಮಿಯ ಕೆಳ ಕಕ್ಷೆಯಲ್ಲಿ (ಎಲ್‌ಇಒ) ಕಾರ್ಯಾಚರಣೆ ನಡೆಸುವ 'ಬಾಹ್ಯಾಕಾಶ ಸಂಪನ್ಮೂಲ'ಗಳು ಭಾರತದ ಯುದ್ಧ ಸಾಮರ್ಥ್ಯ ಹೆಚ್ಚಿಸಿವೆ. ಅದರಲ್ಲೂ, ಆಧುನಿಕ ಯುದ್ಧದಲ್ಲಿ ಡ್ರೋನ್‌ಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಹೇಳಿದ್ದಾರೆ.

ತಮಿಳುನಾಡಿನ ನೀಲಗಿರಿ ಜಿಲ್ಲೆ ವೆಲ್ಲಿಂಗ್ಟನ್‌ನಲ್ಲಿರುವ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜಿನಲ್ಲಿ ನಡೆದ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

'ಭಾರತವು ಸೇನೆಗೆ ಸಂಬಂಧಿಸಿದ ಬಾಹ್ಯಾಕಾಶ ನೀತಿಯೊಂದನ್ನು 2–3 ತಿಂಗಳಲ್ಲಿ ಸಿದ್ಧಪಡಿಸಲಿದೆ' ಎಂದು ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಜನರಲ್ ಅನಿಲ್ ಚೌಹಾಣ್ ಇತ್ತೀಚೆಗೆ ಹೇಳಿದ್ದರು.

ತಮಿಳುನಾಡಿನ ನೀಲಗಿರಿ ಜಿಲ್ಲೆ ವೆಲ್ಲಿಂಗ್ಟನ್‌ನಲ್ಲಿರುವ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜಿನಲ್ಲಿ ಗುರುವಾರ ನಡೆದ ಘಟಿಕೋತ್ಸವದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪದವಿ ಪ್ರದಾನ ಮಾಡಿದರು –ಪಿಟಿಐ ಚಿತ್ರ

ಇದರ ಬೆನ್ನಲ್ಲೇ, ಸಚಿವ ರಾಜನಾಥ್ ಸಿಂಗ್ ನೀಡಿರುವ ಈ ಹೇಳಿಕೆಗೆ ಮಹತ್ವ ಬಂದಿದೆ.

'ಆಧುನಿಕ ಯುದ್ಧಗಳ ಸ್ವರೂಪ ಬದಲಾಗಿದೆ. ಹೊಸದಾದ ತಂತ್ರಗಾರಿಕೆ ಹಾಗೂ ಸಾಧನಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ, ಡ್ರೋನ್‌ಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ' ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ.

'ಗುಪ್ತಚರ ಸೇವೆ, ಕಣ್ಗಾವಲು, ಗುರಿ ನಿರ್ದೇಶಿತ ಕಾರ್ಯಾಚರಣೆ ಹಾಗೂ ಸಂವಹನ ಕ್ಷೇತ್ರಕ್ಕೆ ಸಂಬಂಧಿಸಿ ಬಾಹ್ಯಾಕಾಶ ಸಂಪನ್ಮೂಲಗಳು ನಮ್ಮ ಭದ್ರತಾ ಪಡೆಗಳ ಸಾಮರ್ಥ್ಯವನ್ನು ಹೊಸ ಎತ್ತರಕ್ಕೆ ಒಯ್ದಿವೆ' ಎಂದು ಹೇಳಿದ್ದಾರೆ.

'ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧದಲ್ಲಿ ಡ್ರೋನ್‌ಗಳು ಹೊಸ ಮಾದರಿಯ ಆಯುಧವಾಗಿ ಹೊರಹೊಮ್ಮಿವೆ. ಈ ದೇಶಗಳ ನಡುವಿನ ಯುದ್ಧದಲ್ಲಿ ಸಾಕಷ್ಟು ಸಂಖ್ಯೆಯ ಯೋಧರು ಪ್ರಾಣ ಕಳೆದುಕೊಂಡಿದ್ದಾರೆ. ಯೋಧರ ಸಾವಿನ ಸಂಖ್ಯೆಯಲ್ಲಿನ ಹೆಚ್ಚಳಕ್ಕೆ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಬದಲಾಗಿ ಡ್ರೋನ್‌ಗಳೇ ಕಾರಣ ಎಂಬುದು ಗಮನಾರ್ಹ' ಎಂದು ಹೇಳಿದ್ದಾರೆ.

'ಈಗ ಏನಿದ್ದರೂ ಹೈಬ್ರೀಡ್ ಯುದ್ಧಗಳ ಯುಗ. ಸೈಬರ್ ದಾಳಿ, ದೇಶವೊಂದರ ಕುರಿತು ತಪ್ಪು ಮಾಹಿತಿಗಳ ಪ್ರಸಾರ ಹಾಗೂ ಆರ್ಥಿಕತೆ ಮೇಲಿನ ದಾಳಿಗಳೇ ಈ ಹೈಬ್ರೀಡ್ ಯುದ್ಧದ ತಂತ್ರಗಳಾಗಿವೆ. ಒಂದೇ ಒಂದು ಗುಂಡು ಹಾರಿಸದೆಯೇ ತಮ್ಮ ರಾಜಕೀಯ ಹಾಗೂ ಮಿಲಿಟರಿ ಗುರಿ ಸಾಧನೆ ಇಂತಹ ತಂತ್ರಗಾರಿಕೆ ಉದ್ದೇಶ' ಎಂದೂ ಹೇಳಿದ್ದಾರೆ.

ದತ್ತಾಂಶ ಸುರಕ್ಷತಾ ಕಾಯ್ದೆ ಸೆಕ್ಷನ್ 44 (3) ತೆರವಿಗೆ 'ಇಂಡಿಯಾ' ಆಗ್ರಹ

ನವದೆಹಲಿ (ಪಿಟಿಐ): ಡಿಜಿಟಲ್ ವೈಯಕ್ತಿಕ ದತ್ತಾಂಶ ಸುರಕ್ಷತಾ ಕಾಯ್ದೆ (ಡಿಪಿಡಿಪಿ) ಸೆಕ್ಷನ್ 44 (3) ಅನ್ನು ರದ್ದುಗೊಳಿಸುವಂತೆ 'ಇಂಡಿಯಾ' ಒಕ್ಕೂಟ ಗುರುವಾರ ಆಗ್ರಹಿಸಿದೆ.

ಕಾಂಗ್ರೆಸ್, ಡಿಎಂಕೆ, ಉದ್ಧವ್ ಶಿವಸೇನೆ, ಸಿಪಿಐ–ಎಂ, ಎಸ್‌ಪಿ, ಆರ್‌ಜೆಡಿ ಸೇರಿದಂತೆ 'ಇಂಡಿಯಾ' ಕೂಟದ ಹಲವು ನಾಯಕರು ದೆಹಲಿಯಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ಈ ಆಗ್ರಹ ಮುಂದಿಟ್ಟಿದ್ದಾರೆ. ಜತೆಗೆ 'ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅನ್ನು ಡಿಪಿಡಿಪಿಯ ಸೆಕ್ಷನ್ 44(3) ನಾಶಗೊಳಿಸುತ್ತಿದೆ' ಎಂದೂ ಆರೋಪಿಸಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ಗೌರವ್ ಗೊಗೋಯಿ ಮಾತನಾಡಿ, 'ಡಿಪಿಡಿಪಿ ಕಾಯ್ದೆಯ ಸೆಕ್ಷನ್ 44 (3) ಅನ್ನು ರದ್ದುಗೊಳಿಸಲು ಕೋರಿ ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಎಸ್ಪಿ ನಾಯಕ ಅಖಿಲೇಶ್ ಯಾದವ್ ಸೇರಿದಂತೆ ಇಂಡಿಯಾ ಒಕ್ಕೂಟದ 120 ಸಂಸದರು ಮನವಿ ಪತ್ರಕ್ಕೆ ಸಹಿ ಮಾಡಿದ್ದೇವೆ. ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಈ ಮನವಿಪತ್ರ ಸಲ್ಲಿಸಲಾಗುವುದು' ಎಂದಿದ್ದಾರೆ.

ಅಲ್ಲದೇ, '2023ರಲ್ಲಿ ಕಾಯ್ದೆ ಅಂಗೀಕಾರಗೊಂಡಿತ್ತು. ಅದಕ್ಕೂ ಮುನ್ನ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿ ಪರಿಶೀಲಿಸಿತ್ತು. ಆ ಸಮಿತಿಯಲ್ಲಿ ನಾನೂ ಇದ್ದೆ. ಪರಿಶೀಲನೆ ವೇಳೆ, ಆರ್‌ಟಿಐ ಕಾಯ್ದೆಯ ಸೆಕ್ಷನ್ 8(1) (ಜೆ)ಗೆ ಪರ್ಯಾಯವಾಗಿ, ಡಿಪಿಡಿಪಿಯಲ್ಲಿ ಸೆಕ್ಷನ್ 44 (3) ಅನ್ನು ಸೇರಿಸುವ ಯಾವುದೇ ಪ್ರಸ್ತಾಪ ಇರಲಿಲ್ಲ. ಆದರೆ, ವಿಧೇಯಕಕ್ಕೆ ಅನುಮೋದನೆ ನೀಡುವಾಗ ಕೊನೆಯ ಹಂತದಲ್ಲಿ ಸರ್ಕಾರ ಈ ಬದಲಾವಣೆ ತಂದಿದೆ. ಈ ಮೂಲಕ ನಾಗರಿಕರ ಹಕ್ಕನ್ನು ಡಿಪಿಡಿಪಿ ಕಾಯ್ದೆ ಕಸಿದಿದೆ' ಎಂದೂ ದೂಷಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ರಾಜ್ಯಪಾಲ ಕೇವಲ ಪೋಸ್ಟ್‌ಮ್ಯಾನ್'

ಎಂ.ಕೆ. ಸ್ಟಾಲಿನ್

ಚೆನ್ನೈ: ರಾಜ್ಯಪಾಲರ ಅಧಿಕಾರ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ರಾಜ್ಯದ ಸ್ವಾಯತ್ತತೆಯ ಹೋರಾಟಕ್ಕೆ ಸಿಕ್ಕ ಆರಂಭಿಕ ಜಯ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಗುರುವಾರ ಹೇಳಿದ್ದಾರೆ.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ರಾಜ್ಯಪಾಲರು ಕೇವಲ ಪೋಸ್ಟ್‌ಮ್ಯಾನ್ ಎಂಬ ಡಿಎಂಕೆಯ ದೀರ್ಘಕಾಲಿಕ ನಿಲುವನ್ನು ಸುಪ್ರೀಂ ಕೋರ್ಟ್‌ನ ಈ ತೀರ್ಪು ಎತ್ತಿಹಿಡಿದಿದೆ. ರಾಜ್ಯಪಾಲರ ಅತಿಕ್ರಮಣ ಮೊಟಕುಗೊಳಿಸಿ ರಾಜ್ಯಗಳ ಹಕ್ಕು ರಕ್ಷಿಸುವ ಐತಿಹಾಸಿಕ ತೀರ್ಪನ್ನು ಕೋರ್ಟ್ ನೀಡಿದೆ' ಎಂದರು.

ಪಿಎಂಕೆ ಅಧಿಕಾರ ರಾಮದಾಸ್‌ಗೆ

ವಿಲ್ಲುಪುರ(ತಮಿಳುನಾಡು) (ಪಿಟಿಐ): ಪಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ) ಸಂಸ್ಥಾಪಕ ಎಸ್. ರಾಮದಾಸ್ ಅವರು ಪಕ್ಷದ ಸಂಪೂರ್ಣ ಅಧಿಕಾರ ವಹಿಸಿಕೊಳ್ಳುವುದಾಗಿ ಗುರುವಾರ ದಿಢೀರನೆ ಘೋಷಿಸಿದ್ದಾರೆ.

ಪಕ್ಷದ ಅಧ್ಯಕ್ಷರಾಗಿದ್ದ ತಮ್ಮ ಪುತ್ರ ಅನ್ಬುಮಣಿ ಅವರನ್ನು ಕಾರ್ಯಕಾರಿ ಅಧ್ಯಕ್ಷರಾಗಿ ನೇಮಿಸಿದ್ದಾರೆ.

'ನಾನು ತುಂಬು ಹೃದಯದಿಂದ ಈ ಘೋಷಣೆ ಮಾಡುತ್ತಿದ್ದೇನೆ. ಪಿಎಂಕೆ ಸಂಸ್ಥಾಪಕನಾಗಿ ನಾನು ಅದರ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುತ್ತಿದ್ದೇನೆ. ಅನ್ಬುಮಣಿ ರಾಮದಾಸ್‌ನನ್ನು ಕಾರ್ಯಕಾರಿ ಅಧ್ಯಕ್ಷನಾಗಿ ನೇಮಿಸುತ್ತಿದ್ದೇನೆ. 2026ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಗೆಲುವಿಗಾಗಿ ಪುತ್ರ ಶ್ರಮಿಸಲಿದ್ದಾನೆ' ಎಂದು ರಾಮದಾಸ್ ತಿಳಿಸಿದರು.

ಶಸ್ತ್ರಾಸ್ತ್ರ ಪತ್ತೆ: ಉಗ್ರನ ಬಂಧನ

ಇಂಫಾಲ್(ಪಿಟಿಐ): ಮಣಿಪುರದ ಕಾಕ್ಚಿಂಗ್ ಮತ್ತು ಇಂಫಾಲ್ ಜಿಲ್ಲೆಗಳಲ್ಲಿ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಹಾಗೂ ಇತರ ಯುದ್ಧ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಇಂಫಾಲ್ ಪಶ್ಚಿಮ ಜಿಲ್ಲೆಯ ನಿಷೇಧಿತ ಉಗ್ರ ಸಂಘಟನೆ ಕಾಂಗ್ಲಿಪಾಕ್ ಕಮ್ಯುನಿಸ್ಟ್ ಪಾರ್ಟಿಗೆ (ಪಿಡಬ್ಲ್ಯುಜಿ) ಸೇರಿದ 45 ವರ್ಷದ ಸದಸ್ಯನನ್ನು ಲಮ್ಸಾಂಗ್ ಬಜಾರ್‌ನಿಂದ ಬುಧವಾರ ಬಂಧಿಸಲಾಗಿದೆ. ಸರ್ಕಾರಿ ಅಧಿಕಾರಿಗಳಿಂದ ಹಣ ವಸೂಲಿ ಮಾಡುತ್ತಿದ್ದ ಆರೋಪ ಈತನ ಮೇಲಿದೆ.

ಕಾಕ್ಚಿಂಗ್ ಜಿಲ್ಲೆಯ ಟೋಕ್‌ಪಾಚಿಂಗ್ ಮೊಯಿರಂಗ್‌ಖೋಮ್ ಗಿರಿ ಶ್ರೇಣಿ ಪ್ರದೇಶದಲ್ಲಿ ಮ್ಯಾಗಜಿನ್‌ಗಳಿಲ್ಲದ ಎರಡು ಎಸ್‌ಎಂಜಿ ಕಾರ್ಬೈನ್‌ಗಳು, ಮ್ಯಾಗಜಿನ್ ಸಹಿತ ಒಂದು ಪಾಯಿಂಟ್ 303 ರೈಫಲ್, ಒಂದು ಒಂಟಿ ನಳಿಕೆ ಬಂದೂಕು, ಎರಡು ಜೋಡಿ ನಳಿಕೆ ಬಂದೂಕುಗಳು, ಒಂದು ಮಾರ್ಪಡಿಸಿದ ಸ್ನೈಪರ್ ರೈಫಲ್, ಮ್ಯಾಗಜಿನ್ ಸಹಿತ ಒಂದು ಮಾರ್ಪಡಿಸಿದ 9 ಎಂಎಂ ಪಿಸ್ತೂಲ್, ಮೂರು ಮಾರ್ಟರ್ ಶೆಲ್‌ಗಳು, ಎರಡು ಕಚ್ಚಾ ಬಾಂಬ್‌ಗಳು, ಎರಡು ಗ್ರೆನೇಡ್‌ಗಳು ಹಾಗೂ ಮದ್ದುಗುಂಡುಗಳು ಪತ್ತೆಯಾಗಿವೆ.

ತಮಿಳುನಾಡು ಬಿಜೆಪಿ ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಚೆನ್ನೈ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಲ್ಲಿಗೆ ರಾಜಕೀಯ ಭೇಟಿಗೆ ಬರುವ ಕೆಲವೇ ಗಂಟೆಗಳ ಮೊದಲು, ತಮಿಳುನಾಡು ಬಿಜೆಪಿ ಹೊಸ ರಾಜ್ಯ ಅಧ್ಯಕ್ಷರ ಆಯ್ಕೆಗೆ ಚುನಾವಣೆಯನ್ನು ಗುರುವಾರ ಪ್ರಕಟಿಸಿದ್ದು, ಈ ಹುದ್ದೆಗೆ ಸ್ಪರ್ಧಿಸಲು ಪಕ್ಷದ ಪ್ರಾಥಮಿಕ ಸದಸ್ಯತ್ವ ಪಡೆದು 10 ವರ್ಷ ತುಂಬಿರುವವರಿಗೆ ಮಾತ್ರ ಅವಕಾಶ ನೀಡಿದೆ.

ಎಐಎಡಿಎಂಕೆ ಮತ್ತು ಆರ್‌ಎಸ್‌ಎಸ್ ಜತೆಗೂ ಉತ್ತಮ ಸಂಬಂಧ ಹೊಂದಿರುವ ಬಿಜೆಪಿಯ ಹಿರಿಯ ನಾಯಕರೊಬ್ಬರನ್ನು ರಾಜ್ಯ ಘಟಕದ ಅಧ್ಯಕ್ಷರಾಗಿ ಆಯ್ಕೆ ಮಾಡುವ ಸಾಧ್ಯತೆಯಿದೆ ಹೆಚ್ಚಿವೆ ಎಂದು ನಂಬಲಾಗಿದೆ. ನಾಗೇಂದ್ರನ್ ಮತ್ತು ಅಣ್ಣಾಮಲೈ ಮಾತ್ರವಲ್ಲ, ಬಿಜೆಪಿಯ ಅನೇಕ ಹಿರಿಯರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹವಿಲ್ಲ ಎಂಬುದನ್ನು ಈ ಅರ್ಹತಾ ಮಾನದಂಡಗಳು ಸೂಚಿಸಿವೆ.

'ಗುತ್ತಿಗೆ ವಿಚಾರ- ತಾರತಮ್ಯ ಸಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಯೋಗಕ್ಕೆ ಸಂಬಂಧಿಸಿದಂತೆ ಗುತ್ತಿಗೆಯು ಕಾನೂನುಬದ್ಧ ಒಪ್ಪಂದವಾಗಿದ್ದು, ಇದಕ್ಕೆ ಉದ್ಯೋಗದಾತರು ಮತ್ತು ಉದ್ಯೋಗಿಗಳು ಬದ್ಧವಾಗಿರಬೇಕು. ಈ ವಿಚಾರದಲ್ಲಿ ತಾರತಮ್ಯಕ್ಕೆ ಅವಕಾಶ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ದೀಪಾಂಕರ ದತ್ತ ಹಾಗೂ ಮನಮೋಹನ್ ಅವರು ಇದ್ದ ನ್ಯಾಯಪೀಠ, 'ಗುತ್ತಿಗೆ ವಿಚಾರದಲ್ಲಿ ಸಮಾನತೆ ಮುಖ್ಯವಾಗುತ್ತದೆ. ಗುತ್ತಿಗೆ ಒಪ್ಪಂದದ ಭಾಗವಾಗಿರುವ ಕಕ್ಷಿದಾರರ/ವ್ಯಕ್ತಿಗಳ ಪದವಿ ಅಥವಾ ಯೋಗ್ಯತೆ ಆಧಾರದಲ್ಲಿ ಪಕ್ಷಪಾತ ಮಾಡಕೂಡದು. ಹೀಗೆ ಮಾಡುವುದು ಸಮಾನತೆ ತತ್ವದ ಉಲ್ಲಂಘನೆಯಾಗುತ್ತದೆ' ಎಂದಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಉದ್ಯೋಗಿಗಳಾಗಿದ್ದ ರಾಕೇಶಕುಮಾರ್ ವರ್ಮಾ ಹಾಗೂ ದೀಪ್ತಿ ಭಾಟಿಯಾ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿ, ನೀಡಿದ ತೀರ್ಪಿನಲ್ಲಿ ಪೀಠ ಈ ಮಾತು ಹೇಳಿದೆ.

'ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಒಪ್ಪಂದದ ಭಾಗವಾಗಿರುವ ವ್ಯಕ್ತಿಗಳ ಪದವಿ, ಸಾಮರ್ಥ್ಯ ಅಥವಾ ಪ್ರಭಾವದ ಮೇಲೆ ಅವಲಂಬಿತವಾಗಿರಬಾರದು' ಎಂದು ಏ. 8ರಂದು ಪ್ರಕಟಿಸಿರುವ ತೀರ್ಪಿನಲ್ಲಿ ಪೀಠ ಸ್ಪಷ್ಟಪಡಿಸಿದೆ.

ವರ್ಮಾ ಹಾಗೂ ಭಾಟಿಯಾ ಅವರನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ಉದ್ಯೋಗಕ್ಕೆ ಸಂಬಂಧಿಸಿದ ಯಾವುದೇ ವ್ಯಾಜ್ಯಗಳನ್ನು ಮುಂಬೈನ ಕೋರ್ಟ್‌ನಲ್ಲಿ ನಡೆಸಬೇಕು ಎಂಬುದು ಈ ಇಬ್ಬರ ನೇಮಕಾತಿಗೆ ಸಂಬಂಧಿಸಿದ ಆದೇಶದಲ್ಲಿನ ನಿಬಂಧನೆಯಾಗಿತ್ತು.

ತಮ್ಮನ್ನು ಉದ್ಯೋಗದಿಂದ ತೆಗೆದು ಹಾಕಿದ್ದನ್ನು ಪ್ರಶ್ನಿಸಿದ್ದ ವರ್ಮಾ ಹಾಗೂ ಭಾಟಿಯಾ, ತಮ್ಮ ದೂರಿಗೆ ಸಂಬಂಧಿಸಿದ ವಿಚಾರಣೆಯನ್ನು ಕ್ರಮವಾಗಿ ಪಟ್ನಾ ಹಾಗೂ ದೆಹಲಿ ನ್ಯಾಯಾಲಯಗಳಲ್ಲಿ ನಡೆಸುವಂತೆ ಕೋರಿ ಮೇಲ್ಮನವಿ ಸಲ್ಲಿಸಿದ್ದರು.

ಈ ಇಬ್ಬರ ಮೇಲ್ಮನವಿಗಳನ್ನು ತಿರಸ್ಕರಿಸಿರುವ ಪೀಠ, 'ನೇಮಕಾತಿಗೆ ಸಂಬಂಧಿಸಿದ ನಿಬಂಧನೆಗಳನ್ನು ಒಪ್ಪಿಕೊಂಡು, ತಮಗೆ ನೀಡಿರುವ ಹುದ್ದೆಗೆ ಸೇರಿದ ಮೇಲೆ ಅದರಂತೆ ಕಾರ್ಯ ನಿರ್ವಹಿಸಬೇಕು. ಮುಂದೊಂದು ದಿನ, ನೇಮಕಾತಿಗೆ ಸಂಬಂಧಿಸಿದ ನಿಯಮವೊಂದು ತಮಗೆ ಅನುಕೂಲಕರವಾಗಿಲ್ಲ ಎಂಬ ಕಾರಣ ನೀಡಿ, ಒಪ್ಪಂದವನ್ನು ಉಲ್ಲಂಘಿಸುವಂತಿಲ್ಲ' ಎಂದೂ ಹೇಳಿದೆ.

'ತಮಗಿಷ್ಟವಾಗದ್ದನ್ನು ಅಳಿಸಲು ನ್ಯಾಯಾಧೀಶರು ಹೇಳುವಂತಿಲ್ಲ'

ನವದೆಹಲಿ: 'ಏಷ್ಯನ್ ನ್ಯೂಸ್ ಇಂಟರ್‌ನ್ಯಾಷನಲ್ ವಿಕಿಮೀಡಿಯಾ ಫೌಂಡೇಶನ್' ಶೀರ್ಷಿಕೆಯ ವಿಕಿಪೀಡಿಯ ಪುಟವನ್ನು ತೆಗೆದುಹಾಕುವಂತೆ ನಿರ್ದೇಶಿಸಿದ ದೆಹಲಿ ಹೈಕೋರ್ಟ್ ನೀಡಿದ್ದ ಆದೇಶದ ವಿರುದ್ಧ ವಿಕಿಮೀಡಿಯಾ ಫೌಂಡೇಶನ್ ಸಲ್ಲಿಸಿದ್ದ ಅರ್ಜಿಯ ಕುರಿತು ತನ್ನ ತೀರ್ಪನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು, 'ತಮಗೆ ಇಷ್ಟವಾಗದ ಕಾರಣ ನೀಡಿ ವಿಷಯವನ್ನು ತೆಗೆದುಹಾಕುವಂತೆ ನ್ಯಾಯಾಧೀಶರು ಆದೇಶ ನೀಡಲು ಆಗದು. ಯಾವುದೇ ವಿಷಯವು ಚರ್ಚೆಯಾಗಬಾರದೆಂದು ಹೇಳಲು ಸಾಧ್ಯವಿಲ್ಲ. ಹಾಗೆ ಮಾಡಿದರೆ, ಅದು ಬೆಚ್ಚಿಬೀಳಿಸುವ ಪರಿಣಾಮವನ್ನು ಬೀರುತ್ತದೆ. ನಾವು ಮುಕ್ತ ನ್ಯಾಯ ವ್ಯವಸ್ಥೆಯನ್ನು ಹೊಂದಿದ್ದೇವೆ' ಎಂದು ಹೇಳಿದೆ.

'ಕಾಮ್ರಾಗೆ ಶಿವಸೇನಾ ಶೈಲಿಯಲ್ಲಿ ಸ್ವಾಗತ'

ಮುಂಬೈ (ಪಿಟಿಐ): 'ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಮುಂಬೈಗೆ ಕಾಲಿಟ್ಟರೆ, ಅವರನ್ನು ಶಿವಸೇನಾ ಶೈಲಿಯಲ್ಲಿ ಸ್ವಾಗತ ಮಾಡಲಾಗುವುದು' ಎಂದು ಶಿವಸೇನಾ ಮುಖಂಡ ರಾಹುಲ್ ಕನಾಲ್ ಎಚ್ಚರಿಕೆ ನೀಡಿದ್ದಾರೆ.

'ಶಿವಸೈನಿಕರು ಪ್ರತಿ ಸೋಮವಾರ ಹಾಗೂ ಗುರುವಾರ ಪೊಲೀಸ್ ಠಾಣೆ ಮುಂದೆ ಬರುತ್ತಿದ್ದಾರೆ. ಪ್ರಕರಣದ ಸ್ಥಿತಿಗತಿ ಕುರಿತು ವಿಚಾರಿಸುತ್ತಿದ್ದೇವೆ. ಆದಷ್ಟು ಬೇಗ ಅವರನ್ನು ಮುಂಬೈ ಪೊಲೀಸರು ಕರೆತರಲಿದ್ದಾರೆ' ಎಂದರು.

'ಕಾಮ್ರಾ ಅವರು ಮುಂಬೈಗೆ ಬಂದರೆ ನಾವು ಶಿವಸೇನಾ ಶೈಲಿಯಲ್ಲಿಯೇ, ಅವರನ್ನು ಸ್ವಾಗತಿಸಲಿದ್ದೇವೆ' ಎಂದು ಕನಾಲ್ ತಿಳಿಸಿದರು.

ಸಾಲಮನ್ನಾ ಪರಿಗಣಿಸಿ: ಕೇಂದ್ರಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ವಯನಾಡ್‌ನಲ್ಲಿ ಕಳೆದ ವರ್ಷ ಸಂಭವಿಸಿದ್ದ ಭೂಕುಸಿತದ ಸಂತ್ರಸ್ತರಿಗೆ ಸಾಲಮನ್ನಾ ಮಾಡುವುದನ್ನು ಪರಿಗಣಿಸುವಂತೆ ಕೇರಳ ಹೈಕೋರ್ಟ್ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ (ಎನ್‌ಡಿಎಂಎ) ಗುರುವಾರ ನಿರ್ದೇಶನ ನೀಡಿದೆ.

'ಭಾರತೀಯ ರಿಸರ್ವ್ ಬ್ಯಾಂಕ್ ಸಾಲಮನ್ನಾ ಮಾಡುವಂತೆ ಬ್ಯಾಂಕುಗಳಿಗೆ ನಿರ್ದೇಶಿಸಲು ಸಾಧ್ಯವಾಗದಿದ್ದರೂ, ವಿಪತ್ತಿನ ಗಂಭೀರತೆಯನ್ನು ಗಣನೆಗೆ ತೆಗೆದುಕೊಂಡು ಕೇಂದ್ರ ಸರ್ಕಾರ ಮತ್ತು ಎನ್‌ಡಿಎಂಎ ಈ ಕುರಿತು ನಿರ್ದೇಶಿಸಬಹುದು' ಎಂದು ಹೈಕೋರ್ಟ್ ವಿಭಾಗೀಯ ಪೀಠ ಹೇಳಿದೆ.

'ಸಾಲಗಳ ಅವಧಿಯನ್ನು ಮರು ಹೊಂದಾಣಿಕೆ ಮಾಡಲು ಮಾತ್ರ ಅವಕಾಶವಿದೆಯೇ ಹೊರತು ಮನ್ನಾ ಮಾಡಲು ಅವಕಾಶವಿಲ್ಲ' ಎಂದು ಕೇಂದ್ರ ಸರ್ಕಾರ ಬುಧವಾರ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಿಳಿಸಿತ್ತು. ಕೇಂದ್ರ ಸರ್ಕಾರದ ಈ ನಿಲುವಿಗೆ ವ್ಯಾಪಕ ವಿರೋಧ ಮತ್ತು ಪ್ರತಿಭಟನೆ ವ್ಯಕ್ತವಾಗಿತ್ತು.

₹30.62 ಕೋಟಿ ಸಾಲ: ಭೂಕುಸಿತದಿಂದ 779 ಕುಟುಂಬಗಳಿಗೆ ಹಾನಿಯಾಗಿದೆ. ಈ ಕುಟುಂಬಗಳು ₹30.62 ಕೋಟಿ ಸಾಲ ಹೊಂದಿವೆ ಎಂದು ಕೇರಳದ ಕಂದಾಯ ಸಚಿವ ಕೆ. ರಾಜನ್ ಹೇಳಿದ್ದಾರೆ. ಕೇರಳ ರಾಜ್ಯ ಸಹಕಾರಿ ಬ್ಯಾಂಕ್ (ಕೇರಳ ಬ್ಯಾಂಕ್) ಈಗಾಗಲೇ ಭೂಕುಸಿತ ಸಂತ್ರಸ್ತರ ಸಾಲವನ್ನು ಮನ್ನಾ ಮಾಡಿದೆ ಎಂದು ಅವರು ವಿವರಿಸಿದ್ದಾರೆ.

ಕೇಂದ್ರದಿಂದ ದ್ರೋಹ: ಪ್ರಿಯಾಂಕಾ

ಪ್ರಿಯಾಂಕಾ ಗಾಂಧಿ

'ವಯನಾಡ್‌ನ ಭೂಕುಸಿತದ ಸಂತ್ರಸ್ತರಿಗೆ ನೆರವಾಗುವಂತಹ ಸಾಲಮನ್ನಾ ಸೌಲಭ್ಯ ಕಲ್ಪಿಸದೆ ಕೇಂದ್ರ ಸರ್ಕಾರವು 'ದ್ರೋಹ' ಎಸಗಿದೆ' ಎಂದು ಸಂಸದೆ ಪ್ರಿಯಾಂಕಾ ಗಾಂಧಿ ಟೀಕಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯೂ ಆದ ಅವರು, 'ವಯನಾಡ್‌ನ ಭೂಕುಸಿತದ ಸಂತ್ರಸ್ತರು ಮನೆ, ಭೂಮಿ, ಬದುಕು ಎಲ್ಲವನ್ನೂ ಕಳೆದುಕೊಂಡಿದ್ದಾರೆ. ಆದರೂ ಸರ್ಕಾರ ಅವರ ಸಾಲಮನ್ನಾ ಮಾಡಲು ನಿರಾಕರಿಸಿದೆ' ಎಂದು ಆರೋಪಿಸಿದರು.

'ಸಾಲದ ಅವಧಿ ಮರು ಹೊಂದಾಣಿಕೆ ಮಾಡಿಕೊಳ್ಳುವುದು ಪರಿಹಾರವಲ್ಲ, ವಂಚನೆ. ಸಂತ್ರಸ್ತರ ನೋವನ್ನು ಕಡೆಗಣಿಸಬಾರದು. ಅವರಿಗೆ ನ್ಯಾಯ ಒದಗಿಸಲು ನಾವು ಧ್ವನಿ ಎತ್ತಲಿದ್ದೇವೆ' ಎಂದು ಅವರು ಫೇಸ್‌ಬುಕ್‌ನಲ್ಲಿ ಈ ಕುರಿತು ಹಂಚಿಕೊಂಡಿರುವ ಪೋಸ್ಟ್‌ನಲ್ಲಿ ಹೇಳಿದ್ದಾರೆ.

STATE BANK OF INDIA
Regional Manager, State Bank of India, Regional Business Office Region-5, HSR Layout (AO-1), No. 241, 19th Main Road, 4th Sector, HSR Layout, Bengaluru - 560 102

NOTICE
VOLUNTARY VACATION OF SERVICE

Ms. Namrta Lakra, Main Road Opp ECC Flats, Bhatia Basti, Kadma Jamshedpur, Jharkhand - 831005.

It is observed that you have been absenting from duty, despite your leave being refused/beyond the period of sanctioned leave, since 05.06.2024. In this connection, we refer to the Registered A. D. notice RM/V/II/HR/422 dated 27.09.2024, issued by the Regional Manager, RBO-5 HSR Layout, instructing you to report for duty and explain the reasons for your absence within 30 days of the notice. It is, however, observed that you have so far not complied with the instructions contained therein.

2. Now that you have failed to report for duty in spite of the above said notice, it is deemed that you have voluntarily vacated your service amounting to voluntary resignation from service of the Bank with effect from 27.10.2024.

3. You are hereby requested to pay three months emoluments within 15 days of the receipt of this notice, failing which the Bank will be constrained to set off the same against your terminal dues and any other amount payable to you without prejudice to recovering the full amount or part thereof by suit.

Sd/- General Manager, NW-I
Appointing Authority

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ದೂರವಾಣಿ ಸಂ: 08338/ 273859 ಇ–ಮೇಲ್:eepwdckd@gmail.com
ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2025–26/124 ದಿನಾಂಕ:07/04/2025

ಅವಧಿ ವಿಸ್ತರಣೆ–1/ತಿದ್ದುಪಡಿ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2024–25/6309 ದಿನಾಂಕ:24/03/2025 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕ್ರ.ಸಂ. 1 ರಲ್ಲಿನ ಕಾಮಗಾರಿಗೆ ಹೆಚ್ಚಿನ ಬಿಡ್‌ಗಳನ್ನು ಆಕರ್ಷಿಸುವ ಸಲುವಾಗಿ ಈ ಕೆಳಗಿನಂತೆ ಅವಧಿ ವಿಸ್ತರಣೆ–1/ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1.ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:15–04–2025 (ಸಾಯಂಕಾಲ 5.30 ಗಂಟೆಯವರೆಗೆ), 2.ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:17–04–2025 (ಸಾಯಂಕಾಲ 5.00 ಗಂಟೆಯವರೆಗೆ), 3.ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):19–04–2025 (ಸಾಯಂಕಾಲ 4.30 ಗಂಟೆಗೆ), 4.ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5.ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂ ಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-65/KSMCA/2025-26

ಕರ್ನಾಟಕ ಸರ್ಕಾರ
Government of Karnataka
ಆಡಳಿತ ತರಬೇತಿ ಸಂಸ್ಥೆ
Administrative Training Institute
ಲಲಿತ ಮಹಲ್ ರಸ್ತೆ, ಮೈಸೂರು – 570011
Lalitha Mahal Road, Mysore - 570011
ಸಂಖ್ಯೆ:ಆತಸಂ/1/ಟೆ/ಟೆಂಡರ್/2025–ಜನಿ–ಆತಸಂ ದಿನಾಂಕ: 08.04.2025

ಟೆಂಡರ್ ಪ್ರಕಟಣೆ

ಆಡಳಿತ ತರಬೇತಿ ಸಂಸ್ಥೆ, ಮೈಸೂರು ಮತ್ತು ಸಂಸ್ಥೆಯ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು ಇಲ್ಲಿಗೆ ಒಂದು ವರ್ಷದ ಅವಧಿ ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ 03 ತಿಂಗಳ ಅವಧಿಯ ವಿಸ್ತರಣೆಗೆ ಒಳಪಟ್ಟು ಹೌಸ್–ಕೀಪಿಂಗ್ ನಿರ್ವಹಣಾ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸಿದ್ದು, ನೋಂದಾಯಿತ, ಅರ್ಹ, ಉತ್ತಮ ಸೇವೆ ಒಗಿಸುವ ಆಸಕ್ತ ಟೆಂಡರ್–ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ Website: htpp:// kppp.karnataka.gov.in ಮೂಲಕ ತಮ್ಮ ಬಿಡ್ಡನ್ನು ನಿಯಮಾನುಸಾರ ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಕ್ರ.ಸಂ	ಸೇವಾ ವಿವರ	ಅಂದಾಜು ಮೊತ್ತ	ಇ.ಎಂ.ಡಿ ಮೊತ್ತ
01	ಆಡಳಿತ ತರಬೇತಿ ಸಂಸ್ಥೆ, ಮೈಸೂರು ಮತ್ತು ಸಂಸ್ಥೆಯ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು ಇಲ್ಲಿಗೆ ಒಂದು ವರ್ಷದ ಅವಧಿ ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ 03 ತಿಂಗಳ ಅವಧಿಯ ವಿಸ್ತರಣೆಗೆ ಒಳಪಟ್ಟು ಹೌಸ್–ಕೀಪಿಂಗ್ ನಿರ್ವಹಣಾ ಸೇವೆಯನ್ನು ಪಡೆಯಲು.	ರೂ.2,93,26,517 /–	ರೂ.5,86,530/–

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ದಿ: 09.04.2025 ಬೆಳಗ್ಗೆ 11.30 ರಿಂದ ವೀಕ್ಷಿಸಬಹುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿ: 08.05.2025 ಸಂಜೆ 05.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿ: 12.05.2025 ರಂದು ಬೆಳಗ್ಗೆ 11.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/– ಜಂಟಿ ನಿರ್ದೇಶಕರು (ಆಡಳಿತ), ಆಡಳಿತ ತರಬೇತಿ ಸಂಸ್ಥೆ, ಮೈಸೂರು
DIPR-DD-MYS/049/KSMCA-040/2025-26

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಅದೃಷ್ಟದ ಮೇಲೆ ಎಂದಿಗೂ ನಂಬಿಕೆ ಇಡಬೇಡಿ. ನೀವು ನಂಬಿಕೆ ಇಡಬೇಕಾದುದು ನಿಮ್ಮ ಕಠಿಣ ಶ್ರಮದ ಮೇಲೆ. ಆಗ ಯಶಸ್ಸು ನಿಮ್ಮದಾಗುತ್ತದೆ. -ಎ.ಪಿ.ಜೆ. ಅಬ್ದುಲ್ ಕಲಾಂ

ರೆಪೊ ದರ ಕಡಿತ: ಅನಿಶ್ಚಿತ ಸ್ಥಿತಿ ಎದುರಿಸುವತ್ತ ಆರ್‌ಬಿಐ ಚಿತ್ತ

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ನಿರೀಕ್ಷೆಯಂತೆ ರೆಪೊ ದರವನ್ನು ಶೇಕಡ 0.25ರಷ್ಟು ಕಡಿತ ಮಾಡಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ನಡೆದ ಎಂಪಿಸಿಯ ಮೊದಲ ಸಭೆಯಲ್ಲಿಯೇ ರೆಪೊ ದರ ಇಳಿಕೆಗೆ ಸರ್ವಾನುಮತದ ಒಪ್ಪಿಗೆ ನೀಡಲಾಗಿದೆ. ತಟಸ್ಥ ನಿಲುವನ್ನು ಬಿಟ್ಟುಕೊಟ್ಟಿರುವ ಆರ್‌ಬಿಐ, ಅದಕ್ಕೆ ಬದಲಾಗಿ ಹೊಂದಾಣಿಕೆಗೆ ಇರುವ ಅವಕಾಶಗಳನ್ನು ಬಳಸಿಕೊಳ್ಳಲು ನಿರ್ಧರಿಸಿರುವುದು ಕೂಡ ಮಹತ್ವದ ವಿದ್ಯಮಾನ. ಸದ್ಯದ ಭವಿಷ್ಯದಲ್ಲಿ ರೆಪೊ ದರ ಮತ್ತೆ ಏರಿಕೆ ಆಗುವುದಿಲ್ಲ ಎಂಬುದರ ಸ್ಪಷ್ಟ ಸಂದೇಶವೂ ಇದಾಗಿದೆ. ಆರ್‌ಬಿಐ ನಿಲುವಿನಲ್ಲಿ ಆಗಿರುವ ಈ ಬದಲಾವಣೆಯು ಆರ್ಥಿಕ ಪ್ರಗತಿಯ ದಾರಿಗಳತ್ತ ಅದು ಕಣ್ಣು ನೆಟ್ಟಿರುವುದಕ್ಕೆ ದ್ಯೋತಕ. ಸತತ ಎರಡನೇ ಅವಧಿಗೆ ರೆಪೊ ದರವನ್ನು ಕಡಿತ ಮಾಡಲಾಗಿದೆ. ಈ ವರ್ಷದ ಫೆಬ್ರುವರಿಯಲ್ಲೂ ದರ ಕಡಿತ ಮಾಡಲಾಗಿತ್ತು. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಆಡಿರುವ ಮಾತು, ಮುಂದಿನ ದಿನಗಳಲ್ಲೂ ಕೇಂದ್ರೀಯ ಬ್ಯಾಂಕ್ ದರ ಕಡಿತ ಮಾಡಲು ಹಿಂಜರಿಯುವುದಿಲ್ಲ ಎಂಬ ಮುನ್ಸೂಚನೆಯನ್ನು ನೀಡುತ್ತದೆ. ರೆಪೊ ದರ ಕಡಿತದಿಂದ ಸಾಲ ಮರುಪಾವತಿ ಕಂತಿನ ಪ್ರಮಾಣವೂ ಕಡಿಮೆ ಆಗಲಿದ್ದು, ಹಣಕಾಸು ಸಂಸ್ಥೆಗಳು ಆರ್‌ಬಿಐನಿಂದ ಸಾಲ ಪಡೆಯುವ ಪ್ರಮಾಣವು ಹೆಚ್ಚಲಿದೆ. ಸಾಲದ ಮೇಲಿನ ಬಡ್ಡಿಯ ಹೊರೆ ಕಡಿಮೆ ಆಗುವುದರಿಂದ ಆರ್ಥಿಕ ಚಟುವಟಿಕೆಗಳು ಗರಿಗೆದರಲಿದ್ದು, ಪ್ರಗತಿಯ ಚಕ್ರ ವೇಗ ಪಡೆದುಕೊಳ್ಳಲಿದೆ ಎಂದು ನಿರೀಕ್ಷಿಸಲಾಗಿದೆ.

ಸಾಲದ ಮೇಲಿನ ಬಡ್ಡಿಯ ಹೊರೆ ಕಡಿಮೆ ಆಗುವುದರಿಂದ ಆರ್ಥಿಕ ಚಟುವಟಿಕೆಗಳು ಗರಿಗೆದರಲಿವೆ ಎಂದು ನಿರೀಕ್ಷಿಸಲಾಗಿದೆ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾರಿರುವ ಪ್ರತಿಸುಂಕ ಸಮರದಿಂದಾಗಿ ಜಾಗತಿಕ ಅರ್ಥವ್ಯವಸ್ಥೆ ಹಾಗೂ ಭಾರತದ ಆರ್ಥಿಕತೆಯ ಬೆಳವಣಿಗೆ ಮೇಲೆ ಬೀರಬಹುದಾದ ಪರಿಣಾಮಗಳೇ ಆರ್‌ಬಿಐನ ಬದಲಾದ ನಿಲುವಿಗೆ ಕಾರಣ. 2025–26ನೇ ಸಾಲಿನ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ದರವನ್ನೂ ಎಂಪಿಸಿ ಪರಿಷ್ಕರಿಸಿದೆ. ಫೆಬ್ರುವರಿಯಲ್ಲಿ ನಡೆದ ಸಭೆಯಲ್ಲಿ ಜಿಡಿಪಿ ಬೆಳವಣಿಗೆ ದರ ಶೇ 6.7ರಷ್ಟು ಇರಲಿದೆ ಎಂದು ಅಂದಾಜಿಸಲಾಗಿತ್ತು. ಈಗ ಅದರ ಪ್ರಮಾಣವನ್ನು ಶೇ 6.5ಕ್ಕೆ ಪರಿಷ್ಕರಿಸಲಾಗಿದೆ. ವ್ಯಾಪಾರ ಸಂಘರ್ಷ ಮತ್ತು ಅದು ಬಂಡವಾಳ ಹೂಡಿಕೆ ಹಾಗೂ ಹಣ ವ್ಯಯ ಮಾಡುವ ನಿರ್ಧಾರದ ಮೇಲೆ ಬೀರಬಹುದಾದ ಪ್ರಭಾವವೇ ಇದಕ್ಕೆ ಕಾರಣ. ಪರಿಷ್ಕೃತ ಬೆಳವಣಿಗೆ ದರ ಕೂಡ ಹೆಚ್ಚಿನ ಆಶಾವಾದದಿಂದ ಕೂಡಿದ್ದು, ಈ ಗುರಿಯನ್ನು ಮುಟ್ಟುವುದೂ ಸದ್ಯದ ಸನ್ನಿವೇಶದಲ್ಲಿ ಸವಾಲಾಗಿದೆ. ಅಮೆರಿಕದೊಂದಿಗೆ ನಡೆದಿರುವ ವ್ಯಾಪಾರ ವಹಿವಾಟಿನ ಸ್ವರೂಪದ ಚರ್ಚೆ, ಪ್ರತಿಸುಂಕದಿಂದ ರಫ್ತು ಕ್ಷೇತ್ರದಲ್ಲಾಗುವ ಬದಲಾವಣೆ ಮತ್ತು ಬೆಲೆ ಸಮರಕ್ಕೆ ಭಾರತೀಯ ರಫ್ತು ಉದ್ಯಮ ಕ್ಷೇತ್ರದ ಹೊಂದಿಕೊಳ್ಳುವ ಶಕ್ತಿ– ಈ ಅಂಶಗಳು ಭವಿಷ್ಯದ ಆರ್ಥಿಕ ಬೆಳವಣಿಗೆ ದರದ ಮೇಲೆ ದೊಡ್ಡ ಪ್ರಭಾವವನ್ನು ಬೀರಲಿವೆ ಎಂಬುದು ಆರ್‌ಬಿಐ ಗವರ್ನರ್ ಹೇಳಿಕೆಯಲ್ಲಿ ಢಾಳಾಗಿ ಪ್ರತಿಬಿಂಬಿತವಾಗಿದೆ. ಮೇಲಿನ ಮೂರೂ ಅಂಶಗಳು ಯಾವ ರೀತಿಯಲ್ಲಿ ಪರಿಣಾಮ ಬೀರಬಹುದು ಎಂಬುದನ್ನು ಈಗಲೇ ಊಹಿಸುವುದು ಅವಸರದ ಕ್ರಮ ಆಗುತ್ತದೆ. ಮುಂದೆ ಎದುರಾಗಬಹುದಾದ ಕೆಟ್ಟ ಸನ್ನಿವೇಶಗಳ ಸವಾಲನ್ನು ಮೆಟ್ಟಿ ನಿಲ್ಲಬಲ್ಲ ಸುರಕ್ಷಿತ ನೀತಿಗಳು ಇಂದಿನ ಅಗತ್ಯವಾಗಿವೆ. ಚೀನಾ ಹೊರತುಪಡಿಸಿ ಉಳಿದ ದೇಶಗಳಿಂದ ಆಮದು ಆಗುವ ಸರಕುಗಳ ಮೇಲೆ ಪ್ರತಿಸುಂಕ ಆಕರಣೆಯನ್ನು ಟ್ರಂಪ್ ಅವರು 90 ದಿನಗಳವರೆಗೆ ತಡೆಹಿಡಿದಿರುವುದು ನಿಜವಾದರೂ ಪ್ರತಿಸುಂಕದ ಹಿಡಿತದಿಂದ ಜಗತ್ತು ಇನ್ನೂ ಹೊರಬಂದಿಲ್ಲ. ಎಲ್ಲ ರಾಷ್ಟ್ರಗಳ ಹಣಕಾಸು ನಿರ್ಧಾರಗಳ ಮೇಲೆ ಈ ಅನಿಶ್ಚಿತತೆ ಪ್ರಭಾವ ಬೀರಲಿದೆ. ಅಮೆರಿಕ-ಚೀನಾ ಪ್ರತಿಸುಂಕ ಸಮರ ಕೂಡ ಜಗತ್ತಿನ ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಈಗಾಗಲೇ ತಗ್ಗಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಅದು ಶೇ 4.2ರಿಂದ ಶೇ 4ಕ್ಕೆ ಇಳಿಯಲಿದೆ ಎಂದೂ ಅಂದಾಜಿಸಲಾಗಿದೆ. ಮುಂದಿನ ದಿನಗಳಲ್ಲಿ ರೆಪೊ ದರವನ್ನು ಇನ್ನಷ್ಟು ಕಡಿತಗೊಳಿಸಲು ಇದರಿಂದ ಸಾಧ್ಯವಾಗಬಹುದು. ಆದರೆ, ಆರ್‌ಬಿಐನ ಭವಿಷ್ಯದ ನಿರ್ಧಾರಗಳು ಜಾಗತಿಕ ವಿದ್ಯಮಾನವನ್ನೇ ಅವಲಂಬಿಸಿವೆ.

ದಿನದ ಟ್ವೀಟ್

ಮುದ ನೀಡುವ ಕೈತೋಟ

ಮೈಸೂರಿನ ಅಪಾರ್ಟ್‌ಮೆಂಟ್ ಸಂಕೀರ್ಣವೊಂದು ಪ್ರತಿ ಫ್ಲ್ಯಾಟ್‌ಗೂ ತಾರಸಿ ತೋಟಕ್ಕೆ ಸ್ಥಳಾವಕಾಶ ಕಲ್ಪಿಸಿದೆ. ಅವರು ತಮ್ಮದೇ ಆದ ಪುಟ್ಟ ತಾರಸಿ ತೋಟವನ್ನು ಅಲ್ಲಿ ನಿರ್ಮಿಸಿಕೊಳ್ಳಬಹುದು. ಎಲ್ಲ ಫ್ಲ್ಯಾಟ್‌ಗಳಿಗೂ ವಾಹನ ನಿಲುಗಡೆಗೆ ಸ್ಥಳ ನೀಡುವಂತೆ ತಾರಸಿ ತೋಟದ ಈ ಮಾದರಿಯೂ ಫ್ಲ್ಯಾಟ್ ನಿವಾಸಿಗಳಿಗೆ ಖುಷಿ ಕೊಡಬಲ್ಲದು!

#Innovative

ಕಿರಣ್ ಕುಮಾರ್ ಎಸ್.

ಕಿಡಿನುಡಿ

ಕಾವೇರಿ ಆನ್‌ಲೈನ್ ಸೇವೆಗಳಿಗೆ ಯಾವಾಗಲೂ ಸರ್ವರ್ ಡೌನ್ ಸಮಸ್ಯೆ ಕಾಡುತ್ತಲೇ ಇರುತ್ತದೆ. ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ದಿನನಿತ್ಯ ಕೋಟ್ಯಂತರ ರೂಪಾಯಿ ಸಂಗ್ರಹಿಸುವ ಕರ್ನಾಟಕದ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ವೆಬ್‌ಸೈಟೊಂದನ್ನು ನಿರ್ವಹಿಸುವುದು ಅಷ್ಟೊಂದು ಕಷ್ಟದ ಕೆಲಸವೇ? ಋಣಭಾರರಾಹಿತ್ಯ ಪ್ರಮಾಣಪತ್ರಕ್ಕೆ ಸಂಬಂಧಿಸಿದ ಸರಳವಾದ ಕೆಲಸಕ್ಕೂ ನಾವು ದಲ್ಲಾಳಿಗಳನ್ನು ಅವಲಂಬಿಸಬೇಕೇ?

ನವೀನ್ ಕೊಪ್ಪಾರಂ, ಟಿಕೆ

25 ವರ್ಷಗಳ ಹಿಂದೆ

ಮಂಗಳವಾರ, 11-4-2000

• 'ಅಸಹಾಯಕ ನಿಧಿ'ಯಾಗುತ್ತಿರುವ ಸಹಾಯ ನಿಧಿ

ಬೆಂಗಳೂರು, ಏ. 8– ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ 'ಮರಣ– ನಿವೃತ್ತಿ ಸಹಾಯ ನಿಧಿ'ಯು (ಡಿಆರ್‌ಬಿಎಫ್) ಸರ್ಕಾರದ ಹಸ್ತಕ್ಷೇಪದಿಂದಾಗಿ ಈಗ ಡೋಲಾಯಮಾನ ಸ್ಥಿತಿಗೆ ಬಂದಿದೆ.

ಸರ್ಕಾರವಾಗಲಿ ಅಥವಾ ಕೆಎಸ್‌ಆರ್‌ಟಿಸಿಯಾಗಲಿ ಈ ನಿಧಿಗೆ ಒಂದು ಪೈಸೆ ನೆರವು ನೀಡದಿದ್ದರೂ ಸಹಾಯ ನಿಧಿ ಈಗ ಸಾರಿಗೆ ಸಂಸ್ಥೆಯ ಆಡಳಿತ ಮಂಡಳಿಯ ವಶದಲ್ಲಿರುವುದರಿಂದ ನೌಕರರು ತಮ್ಮ ಹಣ ಪಡೆಯಲು ಪರದಾಡಬೇಕಾಗಿದೆ.

ವಿಳಂಬ, ಉದಾಸೀನ ಧೋರಣೆ, ಅನಗತ್ಯ ಕಿರಿಕಿರಿ ಹಾಗೂ ಪಾರದರ್ಶಕತೆ ಇಲ್ಲದ ಆಡಳಿತ ವ್ಯವಸ್ಥೆಯಿಂದಾಗಿ ತಮ್ಮ ಬೆವರಿನ ಶ್ರಮದಿಂದ ಕೂಡಿಹಾಕಿದ ನಿಧಿಗೆ ಸಂಚಕಾರ ಬಂದೊದಗಿದೆ ಎಂಬುದು ನೌಕರರ ಆತಂಕವಾಗಿದೆ.

• ಮೋಸದ ಆಟ: ಮಧ್ಯವರ್ತಿಯ ಮೇಲೆ ಪೊಲೀಸರ ಬೆಳಕು

ನವದೆಹಲಿ, ಏ. 10– 'ನಮ್ಮ ಕ್ರಿಕೆಟ್ ಆಟಗಾರರು ಮುಗ್ಧರು' ಎಂಬ ದಕ್ಷಿಣ ಆಫ್ರಿಕಾದ ವಾದ, 'ಕಾನೂನು ತನ್ನದೇ ಕ್ರಮ ಕೈಗೊಳ್ಳಲಿದೆ' ಎಂಬ ಭಾರತದ ಪ್ರತಿವಾದ. ಈ ನಡುವೆ ಕಳೆದ ಮಾರ್ಚ್ 9ರಂದು ನಡೆದ ಮೊದಲ ಒಂದು ದಿನದ ಕ್ರಿಕೆಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ರಾಷ್ಟ್ರೀಯನೊಬ್ಬ 'ಮೋಸದ ಆಟ' (ಮ್ಯಾಚ್ ಫಿಕ್ಸಿಂಗ್) ಜಾಲದ ಪ್ರಮುಖ ಆರೋಪಿ ಸಂಜೀವ್ ಚಾವ್ಲಾ ಹಾಗೂ ದಕ್ಷಿಣ ಆಫ್ರಿಕಾ ತಂಡದ ನಾಯಕ ಹ್ಯಾನ್ಸಿ ಕ್ರೊನಿಯೆ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡಿದ್ದಾನೆ ಎಂಬ ಅಂಶವನ್ನು ದೆಹಲಿ ಪೊಲೀಸರು ಈಗ ಬಹಿರಂಗ ಪಡಿಸಿದ್ದಾರೆ.

ಇದರೊಂದಿಗೆ ಮೋಸದ ಆಟದ ಹಗರಣ ಕುತೂಹಲಕಾರಿ ತಿರುವು ಪಡೆದಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 11-4-1975

• ಮೊರಾರ್ಜಿ ತೂಕ 4 ಕೆ.ಜಿ. ಕಡಿಮೆ

ನವದೆಹಲಿ, ಏ. 10– ಸೋಮವಾರದಿಂದ ಉಪವಾಸ ನಡೆಸುತ್ತಿರುವ ಮೊರಾರ್ಜಿ ದೇಸಾಯಿ ಅವರ ಮೈ ತೂಕ ಇಂದು ಮಧ್ಯಾಹ್ನದ ಹೊತ್ತಿಗೆ ಒಟ್ಟು 4 ಕಿಲೊ ಗ್ರಾಂ (ಎಂಟೂ ಮುಕ್ಕಾಲು ಪೌಂಡ್‌ಗೂ ಸ್ವಲ್ಪ ಹೆಚ್ಚು) ಇಳಿಯಿತೆಂದು ವೈದ್ಯರು ತಿಳಿಸಿದ್ದಾರೆ.

ಕಳೆದ 24 ಗಂಟೆಗಳಲ್ಲಿ ಅವರು ಒಂದು ಕಿಲೊ ಗ್ರಾಂನಷ್ಟು (ಸುಮಾರು ಎರಡು ಪೌಂಡ್ ಮೂರು ಔನ್ಸ್) ಇಳಿದುಹೋದರು.

ಮೊರಾರ್ಜಿಯವರು ಇಂದು ಸ್ವಲ್ಪ ಬಳಲಿದಂತೆ ಕಂಡರು. ಆದರೂ ಅವರು ಹಸನ್ಮುಖರಾಗಿದ್ದರು.

ಮೇ ಅಂತ್ಯದೊಳಗಾಗಿ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಸುವಂತೆ ಹಾಗೂ ತುರ್ತು ಪರಿಸ್ಥಿತಿ ರದ್ದುಗೊಳಿಸುವಂತೆ ಒತ್ತಾಯಿಸಿ ಮೊರಾರ್ಜಿ ಅವರು ಈ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ಪರಿಹಾರ ಸಾಧ್ಯ: ಸಂಸ್ಥಾ ಕಾಂಗ್ರೆಸ್ ನಾಯಕ ಮೊರಾರ್ಜಿ ದೇಸಾಯಿ 'ಹಟ ಹಿಡಿಯದಿರುವಂತೆ' ವಿರೋಧಿ ನಾಯಕರು ಅವರ ಮನಸ್ಸನ್ನು ಒಲಿಸಿಕೊಳ್ಳುವುದಾದರೆ ಮೊರಾರ್ಜಿ ಅವರ ನಿರಶನ ಸತ್ಯಾಗ್ರಹ ನಿಲ್ಲಿಸುವ ಮಾರ್ಗ ಹುಡುಕಲು ಸಾಧ್ಯವೆನ್ನುವ ಸೂಚನೆಯನ್ನು ಕೇಂದ್ರ ಗೃಹಮಂತ್ರಿ ಬ್ರಹ್ಮಾನಂದ ರೆಡ್ಡಿ ಅವರು ಇಂದು ಲೋಕಸಭೆಯಲ್ಲಿ ನೀಡಿದರು.

18ರ ಐಪಿಎಲ್‌ನಲ್ಲಿ ಅನುಭವಿ– ನವತರುಣರ ಪೈಪೋಟಿ; ಪ್ರಿಯಾಂಶ್, ವಿಘ್ನೇಶ್ ಆಕರ್ಷಣೆ

ಕ್ರಿಕೆಟ್ ಕಣದಲ್ಲಿ ಹೊಸ ಹೊನಲು

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ದೆಹಲಿ ಹೊರವಲಯದಲ್ಲಿರುವ ಆ ಮನೆಯಂಗಳದಲ್ಲಿ ಸದಾಕಾಲ ಕ್ರಿಕೆಟ್ ಆಟದ್ದೇ ಕಲರವ. ಅದು ಬಿಟ್ಟರೆ ಊಟ, ನಿದ್ದೆ ಮತ್ತು ಓದು ಅಷ್ಟೇ. ಮೊಬೈಲ್ ಫೋನ್ ಬಳಸುವಂತಿಲ್ಲ. ಗೆಳೆಯರೊಂದಿಗೆ ಮೋಜು, ಮಸ್ತಿಗಾಗಿ ಹೋಗುವಂತಿಲ್ಲ. ಅದು, ಕೋಚ್ ಸಂಜಯ್ ಭಾರದ್ವಾಜ್ ಅವರ ಮನೆ. ಅಲ್ಲಿರುವ ಕಠಿಣ ನಿಯಮಗಳನ್ನು ಪಾಲಿಸುವ ಹುಡುಗರ ದಂಡಿನಲ್ಲಿ ಒಬ್ಬರು ಪ್ರಿಯಾಂಶ್ ಆರ್ಯ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಪಂಜಾಬ್ ಕಿಂಗ್ಸ್ ತಂಡದ ಪರವಾಗಿ 39 ಎಸೆತಗಳಲ್ಲಿ ಶತಕ ಬಾರಿಸಿದ ಪ್ರಿಯಾಂಶ್, ಕ್ರಿಕೆಟ್‌ಪ್ರಿಯರ ಕಣ್ಮಣಿಯಾಗಿಬಿಟ್ಟಿದ್ದಾರೆ. ಚೆನ್ನೈ ಸೂಪರ್‌ಕಿಂಗ್ಸ್ ಎದುರಿನ ಆ ಪಂದ್ಯದಲ್ಲಿ 24 ವರ್ಷದ ಎಡಗೈ ಬ್ಯಾಟರ್ ಆಟವು ಯುವರಾಜ್ ಸಿಂಗ್ ಆಟವನ್ನು ನೆನಪಿಗೆ ತಂದಿತ್ತು. ದೆಹಲಿ ಮೂಲದ ಈ ಯುವಕನನ್ನು ಕಳೆದ ಮೆಗಾ ಹರಾಜಿನಲ್ಲಿ ಪಂಜಾಬ್ ಫ್ರಾಂಚೈಸಿಯು ₹ 3.8 ಕೋಟಿಗೆ ಖರೀದಿಸಿದಾಗ ಬಹಳಷ್ಟು ಜನ ಹುಬ್ಬೇರಿಸಿದ್ದರು. 'ಪ್ರಥಮ ದರ್ಜೆಯ ಒಂದೂ ಪಂದ್ಯವನ್ನು ಆಡದ ಯುವಕನಿಗೆ ಇಷ್ಟು ಬೆಲೆಯೇ' ಎಂಬ ಚರ್ಚೆಯೂ ನಡೆದುಹೋಯಿತು. ಟೂರ್ನಿಯ ಮೊದಲ ಮೂರು ಪಂದ್ಯಗಳಲ್ಲಿ ಪ್ರಿಯಾಂಶ್ ಕ್ರಮವಾಗಿ ಗಳಿಸಿದ್ದು 47, 8 ಮತ್ತು 0.

ಆದರೂ ನಾಲ್ಕನೇ ಪಂದ್ಯದಲ್ಲಿ ತಂಡದ ನಾಯಕ ಶ್ರೇಯಸ್ ಅಯ್ಯರ್ ಇಟ್ಟ ವಿಶ್ವಾಸವನ್ನು ಪ್ರಿಯಾಂಶ್ ಹುಸಿಗೊಳಿಸಲಿಲ್ಲ. ಅವರು ಹೊಡೆದ 9 ಸಿಕ್ಸರ್‌ಗಳನ್ನು ಚೆನ್ನೈ ತಂಡದ ನುರಿತ ಬೌಲರ್‌ಗಳು (ಆರ್. ಅಶ್ವಿನ್ ಸೇರಿ) ಎಂದಿಗೂ ಮರೆಯುವುದಿಲ್ಲ. ಅಪ್ಪ ಪವನ್ ಆರ್ಯ ಮತ್ತು ಅಮ್ಮ ರಾಧಾ ಬಾಲಾ ಅವರಿಬ್ಬರೂ ಶಿಕ್ಷಕರು. ಮಗನ ಕ್ರಿಕೆಟ್ ಪ್ರೀತಿಗೆ ಅಡ್ಡಿ ಬರಲಿಲ್ಲ. ಆದರೆ ವಿದ್ಯಾಭ್ಯಾಸವನ್ನು ಕಡೆಗಣಿಸುವಂತಿಲ್ಲ ಎಂಬ ಷರತ್ತು ವಿಧಿಸಿದರು. ಎರಡನ್ನೂ ನಿಭಾಯಿಸುವ ವಾಗ್ದಾನದೊಂದಿಗೆ ಪ್ರಿಯಾಂಶ್ ಕಣಕ್ಕಿಳಿದರು.

ಎಳನೇ ವಯಸ್ಸಿನಲ್ಲಿಯೇ ಈ ಹುಡುಗನನ್ನು 'ಖಡಕ್ ಕೋಚ್' ಎಂದೇ ಹೆಸರುವಾಸಿಯಾಗಿರುವ ಸಂಜಯ್ ಭಾರದ್ವಾಜ್ ಅವರಲ್ಲಿ ತರಬೇತಿಗೆ ಸೇರಿಸಲಾಯಿತು. ಗೌತಮ್ ಗಂಭೀರ್, ಜೋಗಿಂದರ್ ಶರ್ಮಾ, ಅಮಿತ್ ಮಿಶ್ರಾ ಮತ್ತು ಉನ್ಮುಕ್ತ್ ಚಾಂದ್ ಅವರು ಕೂಡ ಸಂಜಯ್ ಮಾರ್ಗದರ್ಶನದಲ್ಲಿ ಬೆಳೆದವರು. ಕಡುಶಿಸ್ತಿನ ತರಬೇತಿಯಲ್ಲಿ ತನ್ನ ವಯೋಸಹಜ ಅಭಿಲಾಷೆಗಳನ್ನು ಬದಿಗಿಟ್ಟ ಪ್ರಿಯಾಂಶ್‌ಗೆ ಈಗ ಫಲ ಸಿಗುತ್ತಿದೆ. ಅವರ ಹೆಸರು ಈಗ ಕ್ರಿಕೆಟ್‌ಪ್ರೇಮಿಗಳಿಗೆ ಅತ್ಯಂತ ಪ್ರಿಯವಾಗಿದೆ. ಅದರಲ್ಲೂ ಹೊಡಿ-ಬಡಿ ಶೈಲಿಯ ಆಟದ ಆರಾಧಕರಿಗಂತೂ ಪ್ರಿಯಾಂಶ್ ಅತ್ಯಂತ ಅಚ್ಚುಮೆಚ್ಚು. ಆದರೆ ಇದು ಭಾರದ್ವಾಜ್ ಅವರಿಗೆ ತೃಪ್ತಿ ತಂದಿಲ್ಲವಂತೆ!

'ಇದು ಆರಂಭ ಅಷ್ಟೇ. ಸಾಗಬೇಕಾದ ಹಾದಿ ದೂರ ಇದೆ. ಐಪಿಎಲ್ ಮುಗಿಯುತ್ತಿದ್ದಂತೆ ರೆಡ್ ಬಾಲ್ ಕ್ರಿಕೆಟ್ ತರಬೇತಿ ಶುರು. ಭಾರತ ತಂಡದಲ್ಲಿ ಆಡಬೇಕು. ಪ್ರಿಯಾಂಶ್‌ಗೆ ಆ ತಾಕತ್ತು ಇದೆ' ಎಂದು ಭಾರದ್ವಾಜ್ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡದಿದ್ದರೂ ಐಪಿಎಲ್‌ನಂತಹ ದೊಡ್ಡ ವೇದಿಕೆಯಲ್ಲಿ ಧೈರ್ಯದಿಂದ ತಮ್ಮ ಪ್ರತಿಭೆಯನ್ನು ಪಣಕ್ಕೊಡ್ಡುವ ಯುವ ಆಟಗಾರರು ಆಟದ ಸೊಬಗನ್ನು ಹೆಚ್ಚಿಸುತ್ತಿದ್ದಾರೆ. ಅದರಲ್ಲೂ ಈ ಬಾರಿ ಪ್ರಿಯಾಂಶ್ ಅವರಂತೆಯೇ ಗಮನ ಸೆಳೆದ ಹಲವರಿದ್ದಾರೆ.

ಘಟಾನುಘಟಿ ಬ್ಯಾಟರ್‌ಗಳ ಜೊತೆಯಾಟ ಮುರಿಯುತ್ತಿರುವ ವಿಘ್ನೇಶ್ ಪುತ್ತೂರ್, ದಿಗ್ವೇಶ್ ರಾಠಿ, ಪದಾರ್ಪಣೆ ಪಂದ್ಯದಲ್ಲಿಯೇ ದೂಳೆಬ್ಬಿಸಿದ ವೇಗಿ ಅಶ್ವಿನಿಕುಮಾರ್, ಉಪಯುಕ್ತ ಕಾಣಿಕೆ ನೀಡುತ್ತಲೇ ಸಾಗುತ್ತಿರುವ ವಿಪ್ರಜ್ ನಿಗಂ ಅವರ ಹೆಸರುಗಳು ಈಗ ಕ್ರಿಕೆಟ್‌ಪ್ರಿಯರ ನಾಲಿಗೆ ಮೇಲೆ ನಲಿಯುತ್ತಿವೆ.

ಟೂರ್ನಿ ಆರಂಭವಾಗಿ 18 ದಿನಗಳು ಕಳೆಯುವುದರಲ್ಲಿಯೇ ಆರು ಜನ 'ಅನ್‌ಕ್ಯಾಪ್ಡ್' ಆಟಗಾರರು 'ಪಂದ್ಯದ ಆಟಗಾರ' ಗೌರವಕ್ಕೆ ಪಾತ್ರರಾಗಿದ್ದಾರೆ. ನವಪೀಳಿಗೆಯ ಕ್ರಿಕೆಟಿಗರು ಐಪಿಎಲ್ ಟೂರ್ನಿಯಲ್ಲಿ ಆಡುವುದನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ ಎಂಬುದಕ್ಕೆ ಈ ಸಾಧನೆ ಸಾಕ್ಷಿಯಾಗುತ್ತದೆ. ಮಕ್ಕಳನ್ನು ಎಳವೆಯಿಂದಲೇ ಐಪಿಎಲ್ ಟೂರ್ನಿಗಾಗಿ ಸಿದ್ಧಗೊಳಿಸುವ ಅತ್ಯಾಧುನಿಕ ತರಬೇತಿ ವ್ಯವಸ್ಥೆಗಳು ದೇಶದ ಗ್ರಾಮಾಂತರ ಭಾಗಗಳಿಗೂ ವ್ಯಾಪಿಸಿರುವುದನ್ನು ಇದು ತೋರಿಸುತ್ತದೆ. ಇದರಿಂದಾಗಿ ಮಧ್ಯಮ ವರ್ಗದ ಕುಟುಂಬಗಳ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ಹೊರ ಹೊಮ್ಮುತ್ತಿದ್ದಾರೆ.

ಕೇರಳದಲ್ಲಿ ಆಟೊ ಡ್ರೈವರ್ ಆಗಿರುವ ಸುನಿಲ್ ಕುಮಾರ್ ಅವರ ಪುತ್ರ ವಿಘ್ನೇಶ್ ಪುತ್ತೂರ್ ಅವರು ಚೈನಾಮೆನ್ ಬೌಲರ್ ಕುಲದೀಪ್ ಯಾದವ್ ಅವರಷ್ಟೇ ಪರಿಣಾಮಕಾರಿಯಾಗಿ ಬೌಲಿಂಗ್ ಮಾಡುತ್ತಿದ್ದಾರೆ. ಅವರು ದೇಶಿ ಕ್ರಿಕೆಟ್‌ನಲ್ಲಿ ಕೇರಳದ ಪರವಾಗಿ ಆಡಿದ್ದು ನಾಲ್ಕು ಟಿ20 ಪಂದ್ಯಗಳಲ್ಲಿ ಮಾತ್ರ. 24 ವರ್ಷದ ಎಡಗೈ ಸ್ಪಿನ್ನರ್ ಹೆಚ್ಚು ರನ್‌ಅಪ್‌ನೊಂದಿಗೆ ಬಂದು ಬೌಲಿಂಗ್ ಮಾಡುವುದು ವಿಶೇಷ. ಪ್ರತಿಭೆಯಿದ್ದರೂ ತಮ್ಮ ರಾಜ್ಯದಲ್ಲಿ ಹೆಚ್ಚು ಆಡುವ ಅವಕಾಶವನ್ನು ವಿಘ್ನೇಶ್ ಪಡೆಯಲಿಲ್ಲ. ಸ್ಥಳೀಯ ಟೂರ್ನಿಗಳಲ್ಲಿ ಬೌಲಿಂಗ್ ಮಾಡುತ್ತಿದ್ದ ಈ ಯುವಕ ಮುಂಬೈ ಇಂಡಿಯನ್ಸ್ ಕಣ್ಣಿಗೆ ಬಿದ್ದಿದ್ದೇ ತಡ ಅವಕಾಶದ ಬಾಗಿಲು ತೆರೆಯಿತು. ವಿಘ್ನೇಶ್‌ಗೆ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿಯುವ ಅವಕಾಶ ಸಿಕ್ಕಿತು. ಚೆನ್ನೈ ತಂಡದ ನಾಯಕ ಋತುರಾಜ್ ಗಾಯಕವಾಡ್ ಸೇರಿದಂತೆ ಮೂವರು ಪ್ರಮುಖ ಬ್ಯಾಟರ್‌ಗಳ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿ ಆಡುತ್ತಿರುವ ದಿಗ್ವೇಶ್ ರಾಠಿ ಅವರ ಕಥೆ ಸ್ವಲ್ಪ ವಿಭಿನ್ನ. ಇವರಿಗೆ ವೆಸ್ಟ್ ಇಂಡೀಸ್ ಆಲ್‌ರೌಂಡರ್ ಸುನಿಲ್ ನಾರಾಯಣ್ ಅವರೆಂದರೆ ಅಚ್ಚುಮೆಚ್ಚು. ಆಟ ಮತ್ತು ಹಾವಭಾವಗಳಲ್ಲಿಯೂ ಸುನಿಲ್ ಅವರನ್ನು ಅನುಕರಿಸುತ್ತಾರೆ. ಎರಡು ಪಂದ್ಯಗಳಲ್ಲಿ ತಮ್ಮ ಎದುರಾಳಿ ಬ್ಯಾಟರ್‌ಗಳನ್ನು ಔಟ್ ಮಾಡಿ 'ನೋಟ್‌ಬುಕ್ ಸಂಭ್ರಮ' ಆಚರಿಸಿ ರೆಫರಿಗಳ ಕೆಂಗಣ್ಣಿಗೆ ಗುರಿಯಾದರು. ಎರಡು ಡಿ–ಮೆರಿಟ್ ಪಾಯಿಂಟ್ ಕೂಡ ಇವರ ಖಾತೆ ಸೇರಿದವು. ದಂಡ ಕೂಡ ಭರಿಸಿದರು. ಮಾಜಿ ಕ್ರಿಕೆಟಿಗ ಸೈಮನ್ ಡೂಲ್ ಸೇರಿದಂತೆ ಕೆಲವರು ದಿಗ್ವೇಶ್ ಪರ ಬ್ಯಾಟಿಂಗ್ ಮಾಡಿದರು. ಬಿಸಿಸಿಐ ದಂಡ ವಿಧಿಸಬಾರದಿತ್ತು, ದಿಗ್ವೇಶ್ ಅವರ ಸಂಭ್ರಮ ಅಸಭ್ಯವಾಗಿರಲಿಲ್ಲ, ಒಳ್ಳೆಯ ಅಭಿರುಚಿಯಿಂದ ಕೂಡಿತ್ತು ಎಂದು ಸಮರ್ಥಿಸಿದ್ದಾರೆ. ದಿಗ್ವೇಶ್ ಅವರಿಗೆ ಮಾತ್ರ ಇದಾವುದರ ಪರಿವೆಯೂ ಇಲ್ಲ. ಅವರು ತಮ್ಮದೇ ಲೋಕದಲ್ಲಿ ವಿಹರಿಸುತ್ತಿದ್ದಾರೆ. ಇತ್ತೀಚೆಗೆ ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ತಮ್ಮ 'ಗುರು' ಸುನಿಲ್ ನಾರಾಯಣ್ ವಿಕೆಟ್ ಪಡೆದ ದಿಗ್ವೇಶ್, ಪಿಚ್ ಪಕ್ಕದ ಹುಲ್ಲಿನಂಕಣದ ಮೇಲೆ ಸಹಿ ಗೀಚುವಂತೆ ನಟಿಸಿದರು. ಇನ್ನೊಂದು ಪಂದ್ಯದಲ್ಲಿ ಅವರು ಕಡಿಮೆ ರನ್ ನೀಡಿ ಒಂದು ವಿಕೆಟ್ ಪಡೆದು ಪಂದ್ಯಶ್ರೇಷ್ಠರೂ ಆದರು.

ಮುಂಬೈ ತಂಡದ ಎಡಗೈ ವೇಗಿ ಅಶ್ವಿನಿಕುಮಾರ್ ತಮ್ಮ ಚೊಚ್ಚಲ ಪಂದ್ಯದಲ್ಲಿಯೇ 4 ವಿಕೆಟ್ ಗಳಿಸಿದರು. ಇದರೊಂದಿಗೆ ಅನ್‌ಕ್ಯಾಪ್ಡ್ ಆಟಗಾರನೊಬ್ಬ ಮೊದಲ ಬಾರಿ ಇಂತಹ ಸಾಧನೆ ಮಾಡಿದ ಹೆಗ್ಗಳಿಕೆಗೆ ಪಾತ್ರರಾದರು. ಡೆಲ್ಲಿ ಕ್ಯಾಪಿಟಲ್ಸ್‌ನ ವಿಪ್ರಜ್ ನಿಗಂ, ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್, ಸನ್‌ರೈಸರ್ಸ್ ತಂಡದ ಅನಿಕೇತ್ ವರ್ಮಾ ಸೇರಿದಂತೆ ಹಲವರು ಈಗ ಗಮನ ಸೆಳೆದಿದ್ದಾರೆ. ಆರ್‌ಸಿಬಿ ತಂಡದ ಮನೋಜ್ ಬಾಂಢಗೆ ಸೇರಿದಂತೆ ಇನ್ನೂ ಹಲವರು ಅವಕಾಶಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ.

ಇದೆಲ್ಲದರ ನಡುವೆ, ಹೊಸ ಹುಡುಗರ ಭರಾಟೆಯಲ್ಲಿ ತಮ್ಮ ಸ್ಥಾನ ಉಳಿಸಿಕೊಳ್ಳಲು ಅನುಭವಿ ತಾರೆಗಳೂ ಬೆವರುಹರಿಸುತ್ತಿದ್ದಾರೆ. ವಿರಾಟ್ ಕೊಹ್ಲಿ, ಮಹೇಂದ್ರ ಸಿಂಗ್ ಧೋನಿ, ಅಜಿಂಕ್ಯ ರಹಾನೆ, ಇಶಾಂತ್ ಶರ್ಮಾ, ಭುವನೇಶ್ವರ್ ಕುಮಾರ್ ಸೇರಿದಂತೆ ಹಲವು ಆಟಗಾರರು ತಾವಿನ್ನೂ ಪ್ರಸ್ತುತ ಎಂದು ತೋರಿಸುವ ಪ್ರಯತ್ನದಲ್ಲಿ ಇದ್ದಾರೆ. ಇದರಿಂದಾಗಿ 'ಹೊಸ ಚಿಗುರು, ಹಳೆ ಬೇರು ಸೇರಿರಲು ಮರ ಸೊಬಗು...' ಎಂಬಂತೆ ಐಪಿಎಲ್ ಆಕರ್ಷಣೆ ಹೆಚ್ಚುತ್ತಲೇ ಇದೆ.

ಚುರುಮುರಿ



ಬೆರಕೆ– ಕಲಬೆರಕೆ!

• ಬಿ.ಎನ್.ಮಲ್ಲೇಶ್

'ಮಂಜಮ್ಮ ನೀನು ಚಾ ಮಾಡ್ತೀಯಲ್ಲ, ಚಾ ಪುಡಿ ಒರಿಜಿನಲ್ಲಾ?' ಗುಡ್ಡೆ ಕೇಳಿದ.

'ನನ್ ಚಾ ಪುಡಿ ಯಾವಾಗ್ಲೂ ಬ್ರ್ಯಾಂಡೆಡ್ಡು, ನಾನು ಲೂಸ್ ತರಲ್ಲ' ಮಂಜಮ್ಮ ಮಸಿ ಬಟ್ಟೆ ಕೊಡವಿ ಹೇಳಿದಳು.

'ಅಲ್ಲ, ಈಗ ಒರಿಜಿನಲ್ ಎಲ್ಲದಾವೆ? ಎಣ್ಣೆ, ತುಪ್ಪ, ಬೇಕರಿ ತಿಂಡಿ ಎಲ್ಲ ಕಲಬೆರಕೆ ಅಂತ ರಿಪೋರ್ಟೇ ಬಂದೇತಲ್ಲ. ಚಾ ಪುಡಿಗೆ ಮರದ ಹೊಟ್ಟು, ಸಾಸಿವೆಗೆ ರಾಗಿ, ಹಾಲಿಗೆ ನೀರು, ಅದ್ಯಾಕೆ ಔಷಧಗಳೂ ಕಲಬೆರಕೆಯಂತೆ ನೋಡು' ದುಬ್ಬೀರ ತಲೆ ಕೊಡವಿದ.

'ಹಾಲಲ್ಲ, ಈಗ ನೀರೂ ಕಲಬೆರಕೆ ಅಂತೆ, ಬಾಟ್ಲಿ ನೀರು ಕುಡೀಬಾರದಂತೆ, ಪೇಪರ್ ನೋಡಿಲ್ವಾ?' ತೆಪರೇಸಿ ನಕ್ಕ.

'ಮಜಾ ಗೊತ್ತಾ? ಈ ಕಲಬೆರಕೆ ತಿಂಡಿಗಳೇ ಬಾಳ ಟೇಸ್ಟು. ದಾವಣಗೆರೆ ಬೆಣ್ಣೆ ದೋಸೆ ಗೊತ್ತಲ್ಲ, ಬೆಣ್ಣೆಗೆ ಏನೇನೋ ಮಿಕ್ಸ್ ಮಾಡ್ತಾರೆ ಅಂತ ಪೊಲೀಸ್ರು ಕೇಸಾಕಿದ್ರಂತೆ. ಸ್ವಲ್ಪ ದಿನ ಹೋಟ್ಲುನೋರು ಹಳ್ಳಿಯಿಂದ ಒರಿಜಿನಲ್ ಬೆಣ್ಣೆ ತಂದು ದೋಸೆ ಮಾಡಿದ್ರೆ ಜನ 'ಯಾಕೋ ಟೇಸ್ಟ್ ಕೆಡಿಸಿಬಿಟ್ಟಿದ್ದೀರಿ ಅಂದ್ರಂತೆ'.

'ಆಮೇಲೆ?'

'ಮತ್ತದೇ ಕಲಬೆರಕೆ ಬೆಣ್ಣೆ ಹಾಕಿ ದೋಸೆ ಕೊಟ್ಟಾಗ ಜನ 'ಇದಪ್ಪಾ ಟೇಸ್ಟು' ಅಂದ್ರಂತೆ!' ಗುಡ್ಡೆ ನಕ್ಕ.

'ಹೌದಾ? ಅದಿರ್ಲಿ, ಈ ಬೆರಕೆ, ಕಲಬೆರಕೆ ಎರಡೂ ಒಂದೇನಾ?' ಕೊಟ್ರೇಶಿ ಕೊಕ್ಕೆ.

'ಒಂದೇ ಅಲ್ಲ... ಈಗ ಈ ತೆಪರ ಬಾಳ ಬೆರಕಿ ಅದಾನೆ ಅಂದ್ರೆ ಅರ್ಥ ಬೇರೆ ಆಕ್ಕತಿ'.

'ಹಂಗಲ್ಲ, ಬೆರಕೆ ಅಂದ್ರೆ ಮಿಕ್ಸ್ ಮಾಡೋದು, ಕಲಬೆರಕೆ ಅಂದ್ರೆ ಕೆಟ್ಟದ್ದನ್ನ ಮಿಕ್ಸ್ ಮಾಡೋದು' ದುಬ್ಬೀರ ತನ್ನ ಪಾಂಡಿತ್ಯ ಪ್ರದರ್ಶನ ಮಾಡಿದ.

'ಎರಡೂ ಒಂಥರಾ ಹಂಗೇ ಬಿಡ್ರಪ್ಪ, ಈಗ ಈ ರಾಜಕಾರಣ ಅನ್ನೋದು ಬೆರಕೆನೋ ಕಲಬೆರಕೆನೋ?' ಮಂಜಮ್ಮ ಕೇಳಿದಳು.

'ಎರಡೂ ಅಲ್ಲ, ಅದು ರಾಡಿ' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಪರೀಕ್ಷೆ: ಅಸಮಾನರ ನಡುವಿನ ಸ್ಪರ್ಧೆ?

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ಫಲಿತಾಂಶದ ಸ್ಥಾನವಾರು ಪಟ್ಟಿಯಲ್ಲಿ ಕೊನೆಯಲ್ಲಿರುವ ಜಿಲ್ಲೆಗಳ ಆರ್ಥಿಕ ಸ್ಥಿತಿಗತಿಯನ್ನು ಅವಲೋಕಿಸಬೇಕಾಗುತ್ತದೆ

• ಸದಾಶಿವ್ ಸೊರಟೂರು

ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶ ಹೊರಬಿದ್ದಾಗ ಪ್ರತಿ ಜಿಲ್ಲೆಯೂ ತನ್ನ ಪಾಲಿನ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಅದರ ಜೊತೆಗೆ 'ಆ ಜಿಲ್ಲೆ ಯಾಕೆ ಹಾಗೆ?' 'ಈ ಜಿಲ್ಲೆ ಯಾಕೆ ಅಷ್ಟು ಕೆಳಗಿನ ಸ್ಥಾನದಲ್ಲಿದೆ?' ಎಂಬಂತಹ ಚರ್ಚೆಗಳೂ ಶುರುವಾಗುತ್ತವೆ. ಇಂತಹ ಚರ್ಚೆಗಳು ನಡೆಯುವಾಗಲೆಲ್ಲಾ ಕೆಲವು ವರ್ಷಗಳ ಹಿಂದೆ ನಡೆದ ಪ್ರಕರಣವೊಂದು ನೆನಪಾಗುತ್ತದೆ.

ನಮ್ಮ ಮನೆಯ ಬೀದಿಯ ಅಂಚಿನಲ್ಲಿ, ಎಂಟನೇ ತರಗತಿಯಲ್ಲಿ ಪರಸ್ಪರ ಪೈಪೋಟಿಯಿಂದ ತುಂಬಾ ಚೆನ್ನಾಗಿ ಓದುತ್ತಿದ್ದ ಇಬ್ಬರು ಮಕ್ಕಳಿದ್ದರು. ಎಂಟನೇ ತರಗತಿ ಇನ್ನೇನು ಮುಗಿಯಿತು ಅನ್ನುವಷ್ಟರಲ್ಲಿ ಒಬ್ಬ ಹುಡುಗನ ತಂದೆ ತೀರಿಹೋದರು. ಮನೆಯಲ್ಲಿ ಬಡತನ. ಅವನ ತಾಯಿ ಮಗುವಿನ ಶಾಲೆ ಬದಲಿಸಿದರು. ಈ ಹುಡುಗ ಆಗಾಗ ರಜೆಯಲ್ಲಿ ಸಣ್ಣಪುಟ್ಟ ಕೆಲಸಕ್ಕೂ ಹೋಗಲು ಶುರು ಮಾಡಿದ. ಎಸ್‌ಎಸ್‌ಎಲ್‌ಸಿಯಲ್ಲಿ ಇವನು ತನಗೆ ಪೈಪೋಟಿ ಒಡ್ಡುತ್ತಿದ್ದ ಗೆಳೆಯನಿಗಿಂತ 210 ಕಡಿಮೆ ಅಂಕಗಳನ್ನು ತೆಗೆದುಕೊಂಡ. ಎಲ್ಲವೂ ಸರಿ ಇದ್ದಿದ್ದರೆ ಬಹುಶಃ ಇವನೂ ಅವನಷ್ಟೇ ಅಥವಾ ಅವನಿಗಿಂತ ಹೆಚ್ಚೇ ಅಂಕಗಳನ್ನು ತೆಗೆಯುತ್ತಿದ್ದನೇನೊ.

ಬಡತನ ಒಂದು ನೆಪ ಅಷ್ಟೇ, ಆ ಹುಡುಗ ಓದಬಹುದಿತ್ತು, ಎಷ್ಟು ಜನ ಓದಿಲ್ಲ ಹೇಳಿ ಎಂದು ಕೆಲವರು ಮಾತನಾಡಬಹುದು. ಒಂದು ತಾಲ್ಲೂಕಿನಲ್ಲಿ ಒಬ್ಬ ಬಡ ಹುಡುಗ ಹೇಗೋ ಕಷ್ಟಪಟ್ಟು ಓದಿ ಮೆಡಿಕಲ್ ಸೀಟ್ ತೆಗೆದುಕೊಂಡ ಅಂದಮಾತ್ರಕ್ಕೆ ಎಲ್ಲ ಬಡ ಮಕ್ಕಳೂ ಹೀಗೇ ಓದಿಬಿಡಬಹುದು ಎಂಬ ನಿರ್ಧಾರಕ್ಕೆ ಬರಬಾರದು. ಅದೇ ತಾಲ್ಲೂಕಿನಲ್ಲಿ ಎಲ್ಲಾ ಸವಲತ್ತು ಪಡೆದು ಓದಿದ ಹತ್ತಾರು ಹುಡುಗರು ಆ ಸೀಟ್‌ಗಳನ್ನು ಗಿಟ್ಟಿಸಿಕೊಂಡಿರುತ್ತಾರೆ.

ಸ್ಥಾನವಾರು ಪಟ್ಟಿಯಲ್ಲಿ ಮೇಲಿರುವ ಕೆಲವು ಜಿಲ್ಲೆಗಳಲ್ಲಿ ಎಲ್ಲವೂ ಸರಿಯಿರುತ್ತವೆ ಮತ್ತು ಕೊನೆಯಲ್ಲಿರುವ ಕೆಲವು ಜಿಲ್ಲೆಗಳಲ್ಲಿ ಎಲ್ಲವೂ ಸರಿ ಇರುವುದಿಲ್ಲವೇ? ಅಲ್ಲಿ ಬುದ್ಧಿವಂತ ಮಕ್ಕಳಿದ್ದಾರೆ, ಇಲ್ಲಿ ದಡ್ಡ ಮಕ್ಕಳಿದ್ದಾರೆ, ಅಲ್ಲಿ ಬೋಧಿಸಲು ಉತ್ತಮ ಶಿಕ್ಷಕರಿದ್ದಾರೆ, ಇಲ್ಲಿ ಇಲ್ಲ, ಅಲ್ಲಿನ ಅಧಿಕಾರಿಗಳು ದಕ್ಷರು, ಇಲ್ಲಿನವರು ಅಲ್ಲ ಎಂಬಂತಹ ಅರ್ಥ ಬರುತ್ತದೆಯೇ? ಯಾವುದೇ ಜಿಲ್ಲೆ ಆಗಿರಲಿ, ಯಾವ ಮಗು ತಾನು ಫೇಲಾಗಬೇಕು ಎಂದುಕೊಂಡು ಶಾಲೆಗೆ ಬರುತ್ತದೆ? ಫಲಿತಾಂಶದ ಮೇಲೇ ಶಿಕ್ಷಕನ ದಕ್ಷತೆಯನ್ನು ಅಳೆಯುತ್ತಿರುವ ಈ ಸಂದರ್ಭದಲ್ಲಿ, ಯಾವ ಶಿಕ್ಷಕ ತಾನೆ ಸುಮ್ಮನೆ ಕೂರುತ್ತಾನೆ? ಯಾವ ಅಧಿಕಾರಿಗೆ ತನ್ನ ಜಿಲ್ಲೆಯ ಫಲಿತಾಂಶ ಹೇಗೆ ಬಂದರೂ ನಡೆಯುತ್ತದೆ ಎಂಬ ಇರಾದೆ ಇರುತ್ತದೆ? ಇವೆಲ್ಲದರ ಹೊರತಾಗಿಯೂ ಬೇರೆ ಏನೋ ಕಾರಣ ಇರಬಹುದು ಎಂದು ನಾವು ಚಿಂತಿಸಬೇಕಿದೆ.

ಪಟ್ಟಿಯಲ್ಲಿ ಕೊನೆಯಲ್ಲಿರುವ ಜಿಲ್ಲೆಗಳ ಆರ್ಥಿಕ ಸ್ಥಿತಿಗತಿಯನ್ನು ಅವಲೋಕಿಸಬೇಕಾಗುತ್ತದೆ. ಅಲ್ಲಿನ ಜನರ ಬಡತನವು ಮಕ್ಕಳ ಶಿಕ್ಷಣದ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ಊಟವೇ, ಅಕ್ಷರವೇ ಎನ್ನುವ ಪ್ರಶ್ನೆ ಬಂದಾಗ, ಪೋಷಕರು ಅನ್ನದ ಕಡೆ ಗಮನ ಕೊಡುತ್ತಾರೆ. ಅದು ಸಹಜ ಕೂಡ. ಯಾವ ಜಿಲ್ಲೆಯಲ್ಲಿ ಫಲಿತಾಂಶ ಕಡಿಮೆ ಇದೆಯೋ ಅಲ್ಲಿನ ಸಾಕ್ಷರತೆಯ ಪ್ರಮಾಣವೂ ಕಡಿಮೆ ಇರುವುದು ಗಮನಾರ್ಹ. ಈ ವರ್ಷ ಪಿಯುಸಿಯಲ್ಲಿ ಕೊನೆಯ ಸ್ಥಾನ ಪಡೆದ ಯಾದಗಿರಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇ 51.83 ಇದ್ದರೆ, ಮೊದಲ ಸ್ಥಾನ ಪಡೆದ ಉಡುಪಿ ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ 86.29.

ಮನೆಯಲ್ಲಿ ಒದಗುವ ಶೈಕ್ಷಣಿಕ ವಾತಾವರಣವೂ ಮಗು ಓದುವಂತೆ ಮಾಡುತ್ತದೆ. ಶಿಕ್ಷಣವೇ ಮುಖ್ಯ ಅನ್ನುವ ಪೋಷಕರ ಅರಿವೇ ಮಕ್ಕಳಿಗೆ ಓದಿನ ಮೊದಲ ಬೆಳಕು. ಒಂದು ಸಮೀಕ್ಷೆಯ ಪ್ರಕಾರ, ಶಿಕ್ಷಣ ಪಡೆದ ತಂದೆ-ತಾಯಿಯುಳ್ಳ ಮಕ್ಕಳ ಓದು ಹೆಚ್ಚು ಉತ್ತಮವಾಗಿರುತ್ತದೆ. ಕಾರಣ, ಆ ಪೋಷಕರಿಗೆ ಓದಿನ ಬೆಲೆ ಗೊತ್ತಿರುತ್ತದೆ. 'ಓದಿದರೆ ಕೆಲಸ ಸಿಗುತ್ತದೆ, ಜೀವನ ಚೆನ್ನಾಗಿರುತ್ತದೆ' ಎಂಬ ನಂಬಿಕೆಯು ಕುಟುಂಬದೊಳಗೆ ಹರಡಿರುತ್ತದೆ. ಆದರೆ ಶೈಕ್ಷಣಿಕವಾಗಿ ಹಿಂದೆ ಇರುವ ಮನೆಗಳಲ್ಲಿ ಮೊದಲ ಪೀಳಿಗೆಯವರು ವಿದ್ಯೆಯ ಅನ್ವಯಿಕತೆಯನ್ನು ಅರಿಯದೇ ಉಳಿದಿದ್ದಾರೆ. ಇದು ನಿಜಕ್ಕೂ ಮಕ್ಕಳ ಮೇಲೆ ನೇರ ಪರಿಣಾಮ ಬೀರುತ್ತದೆ.

ಅದು ಮಾತ್ರವಲ್ಲ, ಕೆಲವು ಜಿಲ್ಲೆಗಳಲ್ಲಿ ಶಿಕ್ಷಕರ ಕೊರತೆ ಇದೆ, ಕೆಲವು ಕಡೆ ಶಾಲೆಗಳಲ್ಲಿ ಮೂಲಸೌಕರ್ಯಗಳ ಅಭಾವವಿದೆ. ಕೆಲವು ಹಳ್ಳಿಗಳ ಮಕ್ಕಳಿಗೆ ಪ್ರತಿದಿನವೂ ಶಾಲೆಗೆ ಹೋಗುವುದು ಒಂದು ದೊಡ್ಡ ಸವಾಲು. ಬಸ್ ಸಿಗುತ್ತದೋ ಇಲ್ಲವೋ ಎಂಬುದು ಪ್ರಶ್ನೆ. ಮಳೆ ಬಂದರೆ ಶಾಲೆಗೆ ಹೋಗುವುದು ಕಷ್ಟ. ಮಗು ಶಾಲೆಗೆ ಹೋಗುವುದಕ್ಕೆ ಮುನ್ನ ಮನೆಯ, ಹೊಲದ ಎಷ್ಟೋ ಕೆಲಸಗಳನ್ನು ಮುಗಿಸಿ ಬರುತ್ತದೆ.

ಎಲ್ಲ ಮಕ್ಕಳಿಗೂ ಸಮಾನ ಅವಕಾಶ ಸಿಕ್ಕಾಗ ಮಾತ್ರ ಈ ಸ್ಥಾನವಾರು ಪಟ್ಟಿಗೆ ಬೆಲೆ ಬರುತ್ತದೆ. ಓಟದ ಸ್ಪರ್ಧೆಗೆ ನಿಂತ ಎಲ್ಲರ ಕಾಲುಗಳೂ ಸರಿ ಇರಬೇಕು. ಒಬ್ಬನ ಕಾಲಿಗೆ ಗಾಯವಾಗಿದ್ದರೆ, ಇನ್ನೊಬ್ಬನದು ಮುರಿದುಹೋಗಿದ್ದರೆ ಅದು ನಿಜಕ್ಕೂ ಸ್ಪರ್ಧೆ ಎನಿಸಿಕೊಳ್ಳುವುದಿಲ್ಲ ಮತ್ತು ಗೆದ್ದವರದು ನಿಜವಾದ ಗೆಲುವಾಗಿರುವುದಿಲ್ಲ. ಅದು, ಈ ವ್ಯವಸ್ಥೆಯು ಒದಗಿಸುವ, ಅಸಮಾನತೆಯಿಂದ ಕೂಡಿದ ಅವಕಾಶಗಳ ಫಲ ಮಾತ್ರ ಆಗಿರುತ್ತದೆ!

ವಾಚಕರ ವಾಣಿ

ಜಾತಿ ಜನಗಣತಿ: ಎಚ್ಚರಿಕೆ ಬೇಕು

ಜಾತಿ ಜನಗಣತಿ ವರದಿಯು ರಾಜ್ಯ ಸಚಿವ ಸಂಪುಟದ ಸಭೆಯಲ್ಲಿ ಮಂಡನೆ ಆಗಲಿದೆ ಎಂದು ವರದಿಯಾಗಿದೆ. ಕರ್ನಾಟಕದಲ್ಲಿ ಜಾತಿ ಜನಗಣತಿಯ ವಿಚಾರವು ಮತ್ತೆ ಮತ್ತೆ ಮುನ್ನೆಲೆಗೆ ಬಂದು ಹಿಂದೆ ಸರಿಯುತ್ತಿದ್ದದ್ದು ಈಗ ಒಂದು ನಿರ್ಣಾಯಕ ಹಂತಕ್ಕೆ ಬಂದಿದೆ. ಇದಕ್ಕಾಗಿ ರಾಜ್ಯ ಸರ್ಕಾರವನ್ನು ಅಭಿನಂದಿಸಬೇಕು. ಎಲ್ಲರಿಗೂ ನ್ಯಾಯ ಸಿಗಬೇಕೆಂಬ ದೃಷ್ಟಿಯಿಂದ ಆದಷ್ಟು ಬೇಗ ಜಾರಿಯಾಗಬೇಕಾದುದು ಅತ್ಯಗತ್ಯ. ಇನ್ನೂ ವಿಳಂಬವಾಗಿದ್ದರೆ ಅನ್ಯಾಯವೇ ಆಗಿಬಿಡುತ್ತಿತ್ತು. ಆದರೆ, ಇಂತಹ ಗಣತಿಯು ವಿಶ್ವಾಸವನ್ನೂ ಮೂಡಿಸಬೇಕು. ಕೆಲವು ಸಮುದಾಯಗಳಿಗೆ ತಮ್ಮ ಸಂಖ್ಯೆಯನ್ನು ಸರಿಯಾಗಿ ಎಣಿಸಿಲ್ಲ ಎನ್ನುವ ಅವಿಶ್ವಾಸ ಇರಬಾರದು. ಶಾಶ್ವತವಾಗಿ ಉಳಿಯುವಂತಹ ಯಾವುದೇ ಕೆಲಸ ಮಾಡುವಾಗ, ಸರ್ವರ ವಿಶ್ವಾಸ ಗಳಿಸುವುದೂ ಮುಖ್ಯ.

ಕರ್ನಾಟಕದಲ್ಲಿ ಈಗಾಗಲೇ ಒಂದು ಜಾತಿ ಜನಗಣತಿ ಆಗಿದೆ. ಮೂಲೆಮೂಲೆಯಲ್ಲಿರುವ, ಇದುವರೆಗೆ 'ಲೆಕ್ಕಕ್ಕೂ ಸಿಗದೇ ಇದ್ದ' ಎಷ್ಟೋ ಸಮುದಾಯಗಳನ್ನು ಒಳಗೊಂಡು, ಅವರ ಸ್ಥಿತಿಗತಿಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡು ಈ ಗಣತಿ ನಡೆಸಿದ್ದೇವೆ ಎಂದು ಈ ಗಣತಿ ನಡೆದಾಗ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ಅವರು ಹೇಳಿದ್ದಾರೆ. ನೂರಾರು ಕೋಟಿ ರೂಪಾಯಿ ಸಾರ್ವಜನಿಕರ ಹಣ ಖರ್ಚು ಮಾಡಿ ಸಂಗ್ರಹಿಸಿರುವ ಆ ಸಮೀಕ್ಷೆಯ ಸಾರ ಸರ್ಕಾರಕ್ಕೂ ಸಮಾಜಕ್ಕೂ ಅತ್ಯಗತ್ಯ. ಅದನ್ನು ಒಪ್ಪಿಕೊಳ್ಳೋಣ. ಆದರೆ, ಕೆಲವು ಸಮುದಾಯಗಳ ಲೆಕ್ಕ ಸರಿಯಾಗಿ ಮಾಡಿಲ್ಲ ಎಂಬ ಅಪನಂಬಿಕೆ ಇರಬಾರದು. 40 ಲಕ್ಷಕ್ಕೂ ಹೆಚ್ಚು ಜನರ ಎಣಿಕೆ ಆಗಿಲ್ಲ ಎಂಬ ಸುದ್ದಿಯಿದೆ. ಹೀಗಾಗಿ, ಈ ವರದಿಯನ್ನು ಒಪ್ಪಿಕೊಂಡೇ, ಲೆಕ್ಕ ಮಾತ್ರ ಇನ್ನೊಮ್ಮೆ ಮಾಡುವುದು ಇಂದಿನ ಅಗತ್ಯ ಇರಬಹುದು. ಸರ್ಕಾರ ಈ ದಿಸೆಯಲ್ಲಿ ಆಲೋಚಿಸಬೇಕು. ಅದೇ ಸಂದರ್ಭದಲ್ಲಿ– ಇದನ್ನು ಒಂದೆರಡು ತಿಂಗಳಲ್ಲಿ ಮಾಡಿ ಮುಗಿಸುವಷ್ಟು ಮಾನವ ಸಂಪನ್ಮೂಲ ಮತ್ತು ತಂತ್ರಜ್ಞಾನ ಸರ್ಕಾರದ ಬಳಿ ಇದ್ದೇ ಇದೆ. ಹೀಗಾಗಿ, ಎರಡು ತಿಂಗಳಲ್ಲಿ ಜಾತಿ ಜನಗಣತಿ/ಸಮೀಕ್ಷೆಯನ್ನೇ ಮುಗಿಸಬಹುದು. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಂಡು, ಸಾಮಾಜಿಕ ನ್ಯಾಯಕ್ಕೆ ಅತ್ಯಗತ್ಯವಾಗಿರುವ ಈ ವಿಚಾರಕ್ಕೆ ಶಾಶ್ವತ ಪರಿಹಾರ ಕಲ್ಪಿಸುತ್ತದೆ ಎಂದು ಆಶಿಸುತ್ತೇನೆ.

ದೇವನೂರ ಮಹಾದೇವ, ಮೈಸೂರು

ಪೇಚಿಗೆ ಸಿಲುಕಿದ 'ಆಕ್ರೋಶ' ಯಾತ್ರಿಗಳು

ರಾಜ್ಯ ಸರ್ಕಾರದ ಬೆಲೆ ಏರಿಕೆ ನೀತಿಯ ವಿರುದ್ಧ ವಿರೋಧ ಪಕ್ಷಗಳ 'ಜನ ಆಕ್ರೋಶ ಯಾತ್ರೆ' ಪ್ರಗತಿಯಲ್ಲಿ ಇರುವಾಗಲೇ ಕೇಂದ್ರ ಸರ್ಕಾರ ತಾನೇನೂ ಕಡಿಮೆಯಿಲ್ಲ ಎಂಬಂತೆ ಅಡುಗೆ ಅನಿಲದ ದರವನ್ನು ಸಿಲಿಂಡರ್‌ಗೆ ₹ 50 ಹೆಚ್ಚು ಮಾಡಿ 'ಆಕ್ರೋಶ' ಯಾತ್ರೆಯ ರೂವಾರಿಗಳನ್ನು ಪೇಚಿಗೆ ಸಿಲುಕಿಸಿದೆ. ಇದನ್ನು ನೋಡಿದಾಗ, 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ' ಎಂಬ ದಾಸರಪದ ನೆನಪಾಯಿತು.

ಕೇಂದ್ರದ ನಿರ್ಧಾರವನ್ನು ಈಗ ಸಮರ್ಥಿಸಿಕೊಳ್ಳುವ ಅನಿವಾರ್ಯವನ್ನು ರಾಜ್ಯದ ವಿರೋಧ ಪಕ್ಷ ಎದುರಿಸುತ್ತಿದೆ. ವಿರೋಧ ಪಕ್ಷಗಳ ನಿಲುವು ಸರ್ಕಾರ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಪಡೆಯುವಂತೆ ಇರಬೇಕು. ಅದು, ಪ್ರಜಾಪ್ರಭುತ್ವದ ತಾಕತ್ತು ಕೂಡ. ಇಲ್ಲವಾದಲ್ಲಿ, ಇಂತಹ ಯಾತ್ರೆಗಳು ಪ್ರದರ್ಶನಕ್ಕೆ ಮಾತ್ರ ಸೀಮಿತಗೊಳ್ಳುತ್ತವೆ. ಪರಿಣಾಮ, ಶೂನ್ಯ ಅಷ್ಟೇ.

ವೆಂಕಟೇಶ್ ಮುದಗಲ್, ಕಲಬುರಗಿ

'ಸ್ವರ್ಗಸುಖ' ನೀಡಿದ ಆರ್‌ಬಿಐ!

ದಿನಪತ್ರಿಕೆ ತೆರೆದರೆ ಸಾಕು, ಸುದ್ದಿವಾಹಿನಿಗಳ ಚಾನೆಲ್ ಹಾಕಿದರೆ ಸಾಕು, ಬಸ್ ಪ್ರಯಾಣ, ಮೆಟ್ರೊ ಪ್ರಯಾಣ, ಹಾಲು, ನೀರು, ಇಂಧನ, ವಿದ್ಯುತ್, ಅಡುಗೆ ಅನಿಲ, ದಿನಬಳಕೆಯ ಅಗತ್ಯ ವಸ್ತುಗಳ ದರ ಏರಿಕೆಯದ್ದೇ ಸುದ್ದಿ. ಇದನ್ನು ಓದೀ ಓದೀ, ಕೇಳೀ ಕೇಳೀ ಜನ ಬೇಸತ್ತು ಹೋಗಿದ್ದರು. ಅದರ ವಿರುದ್ಧ ಏನೂ ಮಾಡಲಾಗದೆ ಕೈ ಕೈ ಹಿಸುಕಿಕೊಂಡು ಸರ್ಕಾರಗಳಿಗೆ ಶಾಪ ಹಾಕುತ್ತಿದ್ದರು.

ಇಂತಹ ಸಮಯದಲ್ಲಿ ಎಲ್ಲೋ ಕೊಂಚ ಸಂತಸದ ಸುದ್ದಿಯೂ ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಇಳಿಸಿದೆ. ತತ್ಪರಿಣಾಮವಾಗಿ, ಸಾಲ ಪಡೆದವರ ಇಎಂಐ ಕಡಿಮೆಯಾಗಿ ಸಾಲ ಅಗ್ಗವಾಗಿದೆ. ಈ 'ಅಗ್ಗ' ಎಂಬ ಪದವನ್ನು ಓದಿಯೇ ಎಷ್ಟೋ ದಿನಗಳಾಗಿದ್ದವು. ಅಗ್ಗ ಎಂಬ ಪದ ಕೇಳುವುದು ಅಥವಾ ಓದುವುದೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಸ್ವರ್ಗವೇ ದೊರಕಿದಂತೆ. ಅಂತಹ ಸ್ವರ್ಗಸುಖವನ್ನು (ಕ್ಷಣಿಕವಾದರೂ) ನೀಡಿದ ಆರ್‌ಬಿಐಗೆ ಧನ್ಯವಾದ. ಸರ್ಕಾರಗಳೂ ಇದೇ ಹಾದಿಯಲ್ಲಿ ಸಾಗಿ, ವಸ್ತುಗಳ ದರ ಇಳಿಸಿ ಜನರಲ್ಲಿ ಮಂದಹಾಸ ಮೂಡಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸಮ್ಮೇಳನದ ವೆಚ್ಚಕ್ಕೆ ಮಿತಿ ಬೇಡವೇ?

ಮಂಡ್ಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಒಟ್ಟು 27 ಸಮಿತಿಗಳ ಪೈಕಿ 17 ಸಮಿತಿಗಳಿಂದ ಬರೋಬ್ಬರಿ ₹ 25 ಕೋಟಿ ವೆಚ್ಚ ಮಾಡಲಾಗಿದೆ. ಇನ್ನುಳಿದ ಸಮಿತಿಗಳ ವೆಚ್ಚವೂ ಸೇರಿದರೆ ಇನ್ನಷ್ಟು ಕೋಟಿ ತಲುಪಬಹುದು. ಇಷ್ಟೊಂದು ವೆಚ್ಚ ಮಾಡಿ ಒಂದು ಸಾಹಿತ್ಯ ಸಮ್ಮೇಳನವನ್ನು ಪ್ರತಿವರ್ಷವೂ ಮಾಡಬೇಕಾದ ಅಗತ್ಯವಿದೆಯೇ? ಹೋಗಲಿ ಇಷ್ಟೆಲ್ಲಾ ವೆಚ್ಚ ಮಾಡಿದ ಬಳಿಕವೂ ಸಮ್ಮೇಳನದ ಉದ್ದೇಶ ಎಷ್ಟರಮಟ್ಟಿಗೆ ಈಡೇರಿದೆ ಎಂಬ ಬಗ್ಗೆ ಚಿಂತಿಸಬೇಕಲ್ಲವೇ?

ಕನ್ನಡ ಭಾಷೆ, ಸಾಹಿತ್ಯದ ಹೆಸರಿನಲ್ಲಿ ಇಷ್ಟೊಂದು ಹಣವನ್ನು ಪೋಲು ಮಾಡುವ ಬದಲು ಸರಳವಾಗಿಯೂ ಅರ್ಥಪೂರ್ಣವಾಗಿಯೂ ವರ್ಷವಿಡೀ ಸಾಹಿತ್ಯದ ಕಂಪನ್ನು ಬೀರಬಹುದಾದ ಇತರ ಮಾರ್ಗಗಳ ಬಗ್ಗೆ ಏಕೆ ಸಮಾಲೋಚಿಸಬಾರದು? ಈ ಲೆಕ್ಕಪತ್ರವನ್ನು ನೋಡಿದಾಗ, ಎಮ್ಮೆಗಿಂತಲೂ ಮೂಗುದಾರಕ್ಕೇ ಹೆಚ್ಚು ಖರ್ಚು ಮಾಡಿದಂತೆ ಭಾಸವಾಗುತ್ತದೆ. ಹಾಗಾಗಿ, ಇನ್ನು ಮುಂದೆ ಸಾಹಿತ್ಯ ಸಮ್ಮೇಳನದ ಹೆಸರಿನಲ್ಲಿ ದುಂದುವೆಚ್ಚ ಮಾಡುವುದನ್ನು ನಿಲ್ಲಿಸುವುದು ಒಳಿತು. ಜೊತೆಗೆ ಸಮ್ಮೇಳನ ಮುಗಿದ ಎರಡು ವಾರದೊಳಗೆ ವೆಚ್ಚದ ವಿವರವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಹಾಕುವಂತೆ ಆಗಬೇಕು. ಆ ಮೂಲಕ ಪಾರದರ್ಶಕತೆಗೆ ಅವಕಾಶ ಕಲ್ಪಿಸಬೇಕು.

ಸುರೇಂದ್ರ ಪೈ, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಮುಖ ಸಂಚುಕೋರ ಹೆಡ್ಲಿಯೊಂದಿಗೆ ನಂಟು

ಮುಂಬೈ ದಾಳಿ ರಾಣಾ ಪಾತ್ರವೇನು?

ಮುಂದೇನು?

- 26/11 ಘಟನೆಯ ಹೆಚ್ಚು ವಿವರಗಳು ಬಯಲಿಗೆ ಬರುವ ಸಾಧ್ಯತೆ
- ಮುಂಬೈ ದಾಳಿಯಲ್ಲಿ ಪಾಕಿಸ್ತಾನದ ಪಾತ್ರದ ಬಗ್ಗೆ ಹೊಸ ಸುಳಿವು, ಸಾಕ್ಷ್ಯ ಸಿಗುವ ಸಂಭವ
- ಪಾಕಿಸ್ತಾನದಲ್ಲಿ ಇದ್ದಾರೆ ಎನ್ನಲಾಗುತ್ತಿರುವ ಪ್ರಕರಣದ ಇತರೆ ಆರೋಪಿಗಳ ಬಗ್ಗೆ ಸುಳಿವು ಸಿಗುವ ಸಾಧ್ಯತೆ
- ದೇಶದ ಇತರೆ ನಗರಗಳಲ್ಲಿ ನಡೆದಿದ್ದ ಉಗ್ರ ದಾಳಿ ಮತ್ತು ಸಂಚುಗಳ ಬಗ್ಗೆ ಮಾಹಿತಿ

ದುಷ್ಕೃತ್ಯಕ್ಕೆ ಅಡಿಪಾಯ ಹಾಕಿದ್ದ ಜೋಡಿ

ಮುಂಬೈನ 26/11 ದಾಳಿ ಆಗಿ 16 ವರ್ಷಗಳ ನಂತರ ಪ್ರಕರಣದಲ್ಲಿ ಮಹತ್ವದ ಬೆಳವಣಿಗೆ ಘಟಿಸಿದೆ. ಪ್ರಕರಣದ ಸಂಚುಕೋರರಲ್ಲಿ ಒಬ್ಬನಾದ ತಹವ್ವುರ್ ಹುಸೇನ್ ರಾಣಾನನ್ನು ಅಮೆರಿಕವು ಭಾರತಕ್ಕೆ ಹಸ್ತಾಂತರಿಸಿದೆ. 26/11ರ ಕರಾಳ ಘಟನೆಯ ಜತೆಗೆ ದೇಶದ ಇತರೆಡೆ ನಡೆದಿದ್ದ ಭಯೋತ್ಪಾದನಾ ದಾಳಿಗಳ ಕುರಿತ ಪ್ರಮುಖ ಮಾಹಿತಿಯೂ ರಾಣಾ ಬಳಿ ಇರುವ ಸಾಧ್ಯತೆ ಇದೆ. ಜತೆಗೆ, ಭಾರತದಲ್ಲಿ ಭಯೋತ್ಪಾದನಾ ಚಟುವಟಿಕೆ ನಡೆಸುವ ಉಗ್ರರಿಗೆ ತನ್ನ ದೇಶದಲ್ಲಿ ನೆಲೆ ಒದಗಿಸಿರುವ ಪಾಕಿಸ್ತಾನದ ಮುಖವಾಡ ಕಳಚಲಿದೆ ಎನ್ನಲಾಗುತ್ತಿದೆ. ರಾಣಾ ಹಸ್ತಾಂತರವು ಭಯೋತ್ಪಾದನೆ ವಿರುದ್ಧದ ಭಾರತದ ಮುಂದಿನ ಹೋರಾಟಕ್ಕೆ ಬಲ ತುಂಬಲಿದೆ ಎನ್ನುವ ನಿರೀಕ್ಷೆ ಇದೆ

ರಾಣಾ ಹಸ್ತಾಂತರದ ಹಾದಿ

2009 ಅ.3: ಮುಂಬೈ ದಾಳಿ ಮತ್ತು ಪ್ರವಾದಿ ಅವರ ವ್ಯಂಗ್ಯಚಿತ್ರ ಪ್ರಕಟಿಸಿದ್ದ ಡೆನ್ಮಾರ್ಕ್ ಪತ್ರಿಕೆ ಹಾಗೂ ಸಿಬ್ಬಂದಿ ಮೇಲೆ ದಾಳಿ ಮಾಡಲು ಸಂಚು ರೂಪಿಸಿದ ಆರೋಪದಲ್ಲಿ ಡೇವಿಡ್ ಹೆಡ್ಲಿಯನ್ನು ಬಂಧಿಸಿದ ಎಫ್‌ಬಿಐ

2009 ಅ.18: ಈ ಪ್ರಕರಣಗಳ ಸಂಬಂಧ ತಹವ್ವುರ್ ರಾಣಾ ಬಂಧನ

ಮಾರ್ಚ್ 2010: ಮುಂಬೈನಲ್ಲಿ 2008ರಲ್ಲಿ ನಡೆದಿದ್ದ ದಾಳಿಯಲ್ಲಿ ಆರು ಮಂದಿ ಅಮೆರಿಕ ನಾಗರಿಕರು ಮತ್ತು ಇತರರ ಹತ್ಯೆ ಪ್ರಕರಣ ಸಂಬಂಧ ತಪ್ಪೊಪ್ಪಿಕೊಂಡ ಹೆಡ್ಲಿ

2011 ಜೂನ್ 9: ಡೆನ್ಮಾರ್ಕ್ ದಿನಪತ್ರಿಕೆಯ ಸಿಬ್ಬಂದಿಯ ಶಿರಚ್ಛೇದ ಮಾಡಲು ಸಂಚು ರೂಪಿಸಿದ ಪ್ರಕರಣದಲ್ಲಿ ರಾಣಾ ಮತ್ತು ಹೆಡ್ಲಿ ಅಪರಾಧಿಗಳು ಎಂದು ಘೋಷಿಸಿದ ನ್ಯಾಯಾಲಯ. ಆದರೆ, ಮುಂಬೈ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಣಾನನ್ನು ಖುಲಾಸೆಗೊಳಿಸಿದ ನ್ಯಾಯಾಧೀಶರು

2011 ಜೂನ್ 10: ರಾಣಾನನ್ನು ಖುಲಾಸೆಗೊಳಿಸಿದ ಕೋರ್ಟ್ ನಿರ್ಧಾರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಭಾರತ ಸರ್ಕಾರ

2013 ಜ.17: ಡೆನ್ಮಾರ್ಕ್ ದಿನಪತ್ರಿಕೆ ಮೇಲೆ ದಾಳಿ ನಡೆಸಲು ಸಂಚು ರೂಪಿಸಿದ ಪ್ರಕರಣದಲ್ಲಿ ರಾಣಾಗೆ 14 ವರ್ಷ ಜೈಲು ಶಿಕ್ಷೆ ವಿಧಿಸಿದ ನ್ಯಾಯಾಲಯ

2016 ಮಾರ್ಚ್–ಏಪ್ರಿಲ್: ಮುಂಬೈ ದಾಳಿಗೆ ಸಂಬಂಧಿಸಿದಂತೆ ನಡೆದ ವಿಡಿಯೊ ಕಾನ್ಫರೆನ್ಸಿಂಗ್ ವಿಚಾರಣೆಯಲ್ಲಿ ಮುಂಬೈ ದಾಳಿಯಲ್ಲಿ ರಾಣಾ ನಿರ್ವಹಿಸಿದ ಪಾತ್ರದ ಬಗ್ಗೆ ವಿವರಣೆ ನೀಡಿದ ಹೆಡ್ಲಿ

2018, ಆ.28: ರಾಣಾ ಬಂಧನಕ್ಕೆ ವಾರಂಟ್ ಹೊರಡಿಸಿದ ಮುಂಬೈ ದಾಳಿ ಪ್ರಕರಣ ವಿಚಾರಣೆ ನಡೆಸುತ್ತಿದ್ದ ಎನ್‌ಐಎ ನ್ಯಾಯಾಲಯ

2020 ಜೂನ್ 9: ಕೋವಿಡ್ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಮಾನವೀಯತೆ ಆಧಾರದಲ್ಲಿ ರಾಣಾ ಬಿಡುಗಡೆಗೆ ಆದೇಶಿಸಿದ ಅಮೆರಿಕದ ಜಿಲ್ಲಾ ನ್ಯಾಯಾಲಯ

2020 ಜೂನ್ 10: ಭಾರತ–ಅಮೆರಿಕ ಹಸ್ತಾಂತರ ಒಪ್ಪಂದದ ಅಡಿಯಲ್ಲಿ ರಾಣಾ ಬಂಧನಕ್ಕೆ ವಾರಂಟ್ ಹೊರಡಿಸಲು ಮನವಿ ಮಾಡಿದ ಅಮೆರಿಕ ಸರ್ಕಾರ

2020 ಜುಲೈ 21: ಹಸ್ತಾಂತರಕ್ಕಾಗಿ ರಾಣಾನನ್ನು ವಶಕ್ಕೆ ಪಡೆಯಲು ಸಮ್ಮತಿಸಿದ ಕೋರ್ಟ್

2020 ಆ.13: ರಾಣಾ ಎಸಗಿದ ಅಪರಾಧಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಿದ ಭಾರತ

2023 ಮೇ 16: ರಾಣಾನನ್ನು ಭಾರತಕ್ಕೆ ಹಸ್ತಾಂತರ ಮಾಡಲು ಅನುಮತಿ ನೀಡಿದ ಕ್ಯಾಲಿಫೋರ್ನಿಯಾದ ಮ್ಯಾಜಿಸ್ಟ್ರೇಟ್ ಕೋರ್ಟ್

2023 ಆ.10: ಹಸ್ತಾಂತರವನ್ನು ಪ್ರಶ್ನಿಸಿ ರಾಣಾ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ ಜಿಲ್ಲಾ ನ್ಯಾಯಾಲಯ

2024 ನ.13: ಹಸ್ತಾಂತರಕ್ಕೆ ತಡೆ ನೀಡುವಂತೆ ಮನವಿ ಮಾಡಿ ಅಮೆರಿಕ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ರಾಣಾ

2024 ಡಿ.16: ರಾಣಾ ಮೇಲ್ಮನವಿಯನ್ನು ವಿರೋಧಿಸಿದ ಅಮೆರಿಕ ಸರ್ಕಾರ

2025 ಜ.21: ರಾಣಾ ಅರ್ಜಿಯನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್

2025 ಫೆ.28: ಮೇಲ್ಮನವಿಯನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್ ನಿರ್ಧಾರಕ್ಕೆ ತಡೆ ನೀಡಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಮತ್ತೊಂದು ಅರ್ಜಿ ಹಾಕಿದ ರಾಣಾ

2025 ಫೆ.11: ರಾಣಾನನ್ನು ಭಾರತಕ್ಕೆ ಒಪ್ಪಿಸುವ ಸಂಬಂಧದ ಆದೇಶಕ್ಕೆ ಸಹಿ ಹಾಕಿದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ

2025 ಮಾರ್ಚ್ 7: ಹಸ್ತಾಂತರಕ್ಕೆ ತಡೆ ಒಡ್ಡಲು ಮತ್ತು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರು ಅರ್ಜಿ ವಿಚಾರಣೆ ನಡೆಸುವಂತೆ ತುರ್ತು ಅರ್ಜಿ ಸಲ್ಲಿಸಿದ ರಾಣಾ

2025 ಏಪ್ರಿಲ್ 7: ತುರ್ತು ಅರ್ಜಿಯನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್

2020 ಏಪ್ರಿಲ್ 10: ಅಮೆರಿಕದಿಂದ ರಾಣಾನನ್ನು ಭಾರತಕ್ಕೆ ಕರೆತಂದ ಎನ್‌ಐಎ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಭಾರತದ ವಾಣಿಜ್ಯ ರಾಜಧಾನಿ ಮುಂಬೈಗೆ 2008ರ ನ.26ರ ರಾತ್ರಿ ದೋಣಿ ಮೂಲಕ ಬಂದಿದ್ದ ಉಗ್ರ ಸಂಘಟನೆ ಲಷ್ಕರ್– ಎ –ತಯಬಾದ (ಎಲ್‌ಇಟಿ) 10 ಆತ್ಮಾಹುತಿ ದಾಳಿಕೋರರು ಮೂರು ದಿನ ನಗರದಲ್ಲಿ ಮಾರಣಹೋಮ ನಡೆಸಿದ್ದರು. ವಿದೇಶಿಯರು ಹೆಚ್ಚಾಗಿ ಸೇರುವ, ಜನಸಂದಣಿ ಇರುವ ಆರು ಸ್ಥಳಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿತ್ತು. ಅಮೆರಿಕದ ಆರು ಮಂದಿ ಸೇರಿದಂತೆ 166 ಮಂದಿ ಸಾವಿಗೀಡಾಗಿದ್ದರು. 300ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಒಂಬತ್ತು ಉಗ್ರರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿದ್ದವು. ಅಜ್ಮಲ್ ಕಸಬ್ ಎಂಬಾತ ಸೆರೆಸಿಕ್ಕಿದ್ದ. ಆತನನ್ನು 2012ರಲ್ಲಿ ನೇಣಿಗೆ ಏರಿಸಲಾಗಿತ್ತು.

ಪಾಕಿಸ್ತಾನದಲ್ಲಿ ಎಲ್‌ಇಟಿ, ಅಲ್ಲಿನ ಗುಪ್ತಚರ ಸಂಸ್ಥೆ ಐಎಸ್‌ಐ ವ್ಯವಸ್ಥಿತವಾಗಿ ಯೋಜಿಸಿದ್ದ ಈ ದಾಳಿಯ ಮುಖ್ಯ ಸಂಚುಕೋರ ಡೇವಿಡ್ ಕೋಲೆಮನ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿ ಎನ್ನುವ ಅಮೆರಿಕದ ಪ್ರಜೆ. ಮುಂಬೈ ಮತ್ತು ಡೆನ್ಮಾರ್ಕ್‌ನಲ್ಲಿ ಭಯೋತ್ಪಾದನಾ ದಾಳಿಗೆ ಸಂಚು ರೂಪಿಸಿದ್ದ ಆರೋಪದಲ್ಲಿ ಪೊಲೀಸರು ಅವನನ್ನು ಬಂಧಿಸಿದ್ದರು. ಆತ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತನ್ನ ಸಹಚರ ಮತ್ತು ದಾಳಿಯ ಮತ್ತೊಬ್ಬ ಸಂಚುಕೋರ ತಹವ್ವುರ್ ಹುಸೇನ್ ರಾಣಾನ ಪಾತ್ರದ ಬಗ್ಗೆ ಮಾಹಿತಿ ನೀಡಿದ್ದ.

ಯಾರು ಈ ರಾಣಾ?: 64 ವರ್ಷದ ತಹವ್ವುರ್ ರಾಣಾ ಪಾಕಿಸ್ತಾನ ಮೂಲದ ಕೆನಡಾ ಪ್ರಜೆ. ಪಾಕ್‌ನ ಪಂಜಾಬ್ ಪ್ರಾಂತ್ಯದ ಸಾಹಿವಾಲ್ ಜಿಲ್ಲೆಯ ಚಿಚಾವತನೀ ಎಂಬ ನಗರದವನು. ವೈದ್ಯಕೀಯ ಪದವಿ ಪಡೆದು ಪಾಕ್ ಸೇನೆಯಲ್ಲಿ ವೈದ್ಯನಾಗಿ ಒಂದಷ್ಟು ಕೆಲಸ ಮಾಡಿದ ಈತ, 1997ರಲ್ಲಿ ನಂತರ ಕೆನಡಾಕ್ಕೆ ವಲಸೆ ಹೋಗಿ, 2001ರಲ್ಲಿ ಅಲ್ಲಿನ ಪೌರತ್ವವನ್ನೂ ಪಡೆದಿದ್ದ. ನಂತರ ಅಮೆರಿಕಕ್ಕೆ ತೆರಳಿದ ಈತ ಅಲ್ಲಿ 'ಫಸ್ಟ್ ವರ್ಲ್ಡ್ ಇಮಿಗ್ರೇಷನ್ ಸರ್ವೀಸಸ್' ಎನ್ನುವ ಕಚೇರಿಯನ್ನು ಷಿಕಾಗೊ, ನ್ಯೂಯಾರ್ಕ್, ಕೆನಡಾದ ಟೊರಂಟೊಗಳಲ್ಲಿ ಆರಂಭಿಸಿ ವೀಸಾ ಸಂಬಂಧಿ ಕೆಲಸ ಮಾಡುತ್ತಿದ್ದ.

ರಾಣಾ ಮತ್ತು ಹೆಡ್ಲಿ ಬಾಲ್ಯಸ್ನೇಹಿತರು. ಹೆಡ್ಲಿಯ ಅಪ್ಪ ಪಾಕಿಸ್ತಾನಿ, ಅಮ್ಮ ಅಮೆರಿಕದವರು. ಹೆಡ್ಲಿ ಚಿಕ್ಕಂದಿನಲ್ಲಿ ಪಾಕ್‌ನಲ್ಲಿ ಓದಿದ್ದ. ಈ ವೇಳೆ ರಾಣಾ ಆತನ ಸ್ನೇಹಿತನಾಗಿದ್ದ. ಎಲ್‌ಇಟಿ ಬಗ್ಗೆ ಆಕರ್ಷಿತನಾಗಿದ್ದ ಹೆಡ್ಲಿ, ಭಯೋತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿದ. ಅಮೆರಿಕದಲ್ಲಿ ಹೆಡ್ಲಿಯೊಂದಿಗೆ ರಾಣಾನೂ ಸೇರಿಕೊಂಡ. ಎನ್‌ಐಎ 2009 ನ.11ರಂದು ದಾಖಲಿಸಿರುವ ದೂರಿನಂತೆ, ಎಲ್‌ಇಟಿ ಮತ್ತು ಹರ್ಕತ್–ಉಲ್ ಜಿಹಾದಿ ಇಸ್ಲಾಮಿ ಜತೆ ಸೇರಿ ಇವರಿಬ್ಬರೂ ಭಾರತದ ದೆಹಲಿ, ಮುಂಬೈ ಮತ್ತಿತರ ನಗರಗಳಲ್ಲಿ ಭಯೋತ್ಪಾದನಾ ಕೃತ್ಯಗಳನ್ನು ಎಸಗಲು ಯೋಜಿಸಿದ್ದರು. ಹೆಡ್ಲಿಗೆ ಉಗ್ರರೊಂದಿಗೆ ಇರುವ ಸಂಪರ್ಕಗಳ ಬಗ್ಗೆ ರಾಣಾಗೆ ಅರಿವಿತ್ತು ಎಂದು ತನಿಖೆ ವೇಳೆ ತಿಳಿದುಬಂದಿತ್ತು.

ರಾಣಾ ಪಾತ್ರವೇನು?: ಸಂಚಿನ ಭಾಗವಾಗಿ ರಾಣಾ ಹಲವು ಬಾರಿ ಭಾರತಕ್ಕೆ ಭೇಟಿ ನೀಡಿದ್ದ; ದೆಹಲಿಯ ನ್ಯಾಷನಲ್ ಡಿಫೆನ್ಸ್ ಕಾಲೇಜ್, ವಿವಿಧ ನಗರಗಳಲ್ಲಿನ ಛಾಬಡ್ ಹೌಸ್‌ಗಳ ಮೇಲೆ ದಾಳಿ ನಡೆಸಲು ಸಂಚು ರೂಪಿಸಲಾಗಿತ್ತು ಎಂದು ಎನ್‌ಐಎ ಉಲ್ಲೇಖಿಸಿದೆ. ರಾಣಾ 2008ರ ನ.13 ಮತ್ತು ನ.21ರ ನಡುವೆ ತನ್ನ ಪತ್ನಿಯೊಂದಿಗೆ ಭಾರತಕ್ಕೆ ಭೇಟಿ ನೀಡಿದ್ದ. ಈ ವೇಳೆ ಆತ ಉತ್ತರ ಪ್ರದೇಶದ ಹಾಪುರ, ದೆಹಲಿ, ಆಗ್ರಾ, ಕೊಚ್ಚಿ, ಅಹಮದಾಬಾದ್ ಮತ್ತು ಮುಂಬೈ ನಗರಗಳನ್ನು ಸುತ್ತಾಡಿದ್ದ. ರಾಣಾ ಮೊದಲ ಬಾರಿಗೆ ಭಾರತಕ್ಕೆ ಬಂದಿದ್ದ ವೇಳೆ ಹೆಡ್ಲಿ ಆತನಿಗೆ 32 ಬಾರಿ ಕರೆ ಮಾಡಿದ್ದ; ಇದೇ ರೀತಿ ಎಂಟು ಬಾರಿ ಭಾರತಕ್ಕೆ ಭೇಟಿ ನೀಡಿದ್ದ ರಾಣಾ ಜತೆ ಹೆಡ್ಲಿ ಹತ್ತಾರು ಬಾರಿ ಮಾತನಾಡಿದ್ದ ಎಂದು ತನಿಖೆ ವೇಳೆ ತಿಳಿದುಬಂದಿತ್ತು.

ಇನ್ನೊಂದೆಡೆ, 26/11ರ ದಾಳಿಯ ಮತ್ತೊಬ್ಬ ಪ್ರಮುಖ ಸಂಚುಕೋರ ಐಎಸ್‌ಐ ಅಧಿಕಾರಿ ಮೇಜರ್ ಇಕ್ಬಾಲ್‌ನೊಂದಿಗೆ ರಾಣಾ ನಿರಂತರ ಸಂಪರ್ಕದಲ್ಲಿದ್ದ. ದಾಳಿ ಸಿದ್ಧತೆಗಳಿಗೆ ಅನುಕೂಲವಾಗಲೆಂದೇ ರಾಣಾ ಮುಂಬೈನಲ್ಲಿ 'ಇಮ್ಮಿಗ್ರೆಂಟ್ ಲಾ ಸೆಂಟರ್' ಆರಂಭಿಸಿದ್ದ; ಅದಕ್ಕೆ ಹೆಡ್ಲಿಯನ್ನು ನೇಮಕ ಮಾಡಿದ್ದ. ಹೆಡ್ಲಿಗೆ ಭಾರತದ ವೀಸಾ ಕೊಡಿಸಲು ಸಹಾಯ ಮಾಡಿದ್ದ. ಭಾರತದ ವಿವಿಧ ಪ್ರದೇಶಗಳಿಗೆ ಭೇಟಿ ನೀಡುವುದಕ್ಕಾಗಿ ಮತ್ತು ಇತರೆ ಕಾರ್ಯಗಳಿಗಾಗಿ ಹೆಡ್ಲಿಗೆ ಹಣಕಾಸಿನ ನೆರವನ್ನೂ ನೀಡಿದ್ದ ಎಂದು ಎನ್‌ಐಎ ಹೇಳಿತ್ತು.

ಪ್ರವಾದಿ ಮುಹಮ್ಮದ್ ಅವರ ವ್ಯಂಗ್ಯಚಿತ್ರವನ್ನು ಪ್ರಕಟಿಸಿದ್ದ ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನ ದಿನಪತ್ರಿಕೆ ಮತ್ತು ಅದರ ಸಿಬ್ಬಂದಿ ಮೇಲೆ ದಾಳಿ ನಡೆಸಲು ಮತ್ತು ಮುಂಬೈ ದಾಳಿ ಸಂಚು ರೂಪಿಸಿದ ಆರೋಪದ ಅಡಿಯಲ್ಲಿ ಶಿಕಾಗೊದಲ್ಲಿ ಫೆಡರಲ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್ (ಎಫ್‌ಬಿಐ) 2009ರ ಅಕ್ಟೋಬರ್‌ನಲ್ಲಿ ಹೆಡ್ಲಿ ಮತ್ತು ರಾಣಾನನ್ನು ಬಂಧಿಸಿತ್ತು. ಆ ಪ್ರಕರಣದಲ್ಲಿ ರಾಣಾಗೆ 14 ವರ್ಷ ಜೈಲು ಶಿಕ್ಷೆ ವಿಧಿಸಲಾಗಿತ್ತು. ಆದಾಗ್ಯೂ, ಮುಂಬೈ ದಾಳಿಗೆ ನೆರವು ನೀಡಿದ ಪ್ರಕರಣದಲ್ಲಿ ರಾಣಾ ನಿರಪರಾಧಿ ಎಂದು ಅಮೆರಿಕದ ನ್ಯಾಯಾಲಯ ತೀರ್ಪು ನೀಡಿತ್ತು. ಇದೇ ಪ್ರಕರಣದಲ್ಲಿ 35 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಹೆಡ್ಲಿ, ವಿಚಾರಣೆ ವೇಳೆ ಮುಂಬೈ ದಾಳಿಯಲ್ಲಿ ರಾಣಾ ಪಾತ್ರದ ಬಗ್ಗೆ ಬಾಯಿ ಬಿಟ್ಟಿದ್ದ. ಅದರ ನಂತರ ರಾಣಾನನ್ನು ಹಸ್ತಾಂತರಿಸುವಂತೆ ಭಾರತವು ಅಮೆರಿಕವನ್ನು ಕೋರಿತ್ತು.

ಆಧಾರ: ಪಿಟಿಐ, ಎನ್‌ಐಎ ವೆಬ್‌ಸೈಟ್

ಒಂಬತ್ತು ಆರೋಪಿಗಳು, ಕೈಗೆ ಸಿಕ್ಕಿದ್ದು ಒಬ್ಬ

ಹಫೀಜ್

ಮುಂಬೈ ದಾಳಿಯ ಸಂಚು ರೂಪಿಸಿದ ಆರೋಪದ ಅಡಿಯಲ್ಲಿ ಒಂಬತ್ತು ಮಂದಿಯ ವಿರುದ್ಧ ಎನ್‌ಐಎ ಪ್ರಕರಣ ದಾಖಲಿಸಿತ್ತು. ಡೇವಿಡ್ ಹೆಡ್ಲಿ, ರಾಣಾ, ಲಷ್ಕರ್–ಎ ತಯಬಾ (ಎಲ್‌ಇಟಿ) ಮತ್ತು ಹರ್ಕತ್ ಉಲ್ ಜಿಹಾದಿ ಇಸ್ಲಾಮಿ (ಎಚ್‌ಯುಜೆಐ) ಸಂಘಟನೆಯ ಐವರು, ಪಾಕಿಸ್ತಾನ ಗುಪ್ತಚರ ಸಂಸ್ಥೆ ಐಎಸ್‌ಐನ ಇಬ್ಬರು ಸೇರಿ ಒಂಬತ್ತು ಮಂದಿಯ ವಿರುದ್ಧ ಎನ್‌ಎಐ ಅಧಿಕಾರಿಗಳು 2011ರ ಡಿಸೆಂಬರ್ 24ರಂದು ನವದೆಹಲಿಯ ಪಟಿಯಾಲ ಹೌಸ್‌ನ ಎನ್‌ಐಎ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಮುಂಬೈ ಪೊಲೀಸರು ಕೂಡ 2023ರಲ್ಲಿ ರಾಣಾ ವಿರುದ್ಧ ಹೆಚ್ಚುವರಿ ಆರೋಪಪಟ್ಟಿ ಸಲ್ಲಿಸಿದ್ದರು.

ಝೂಕಿರ್

ಆರೋಪಿಗಳು ಯಾರು ಯಾರು: 1. ಹಫೀಜ್ ಮುಹಮ್ಮದ್ ಸಯೀದ್ ಅಲಿಯಾಸ್ ತೆಯ್ಯಾಜಿ (ಎಲ್‌ಇಟಿ ಮುಖ್ಯಸ್ಥ) 2. ಝೂಕಿರ್ ರೆಹಮಾನ್ ಲಖ್ವಿ (ಎಲ್‌ಇಟಿ ಮುಖಂಡ) 3. ಸಜ್ಜಿದ್ ಮಜಿದ್ ಅಲಿಯಾಸ್ ವಾಸಿ 4. ಇಲ್ಯಾಸ್ ಕಾಶ್ಮೀರಿ (ಅಲ್ ಕೈದಾ ಮುಖಂಡ) 5. ಅಬ್ದುರ್ ರೆಹಮಾನ್ ಹಶೀಮ್ ಸೈಯದ್ ಅಲಿಯಾಸ್ ಅಬ್ದುರ್ ರೆಹಮಾನ್ ಅಲಿಯಾಸ್ ಪಾಷಾ 6. ಮೇಜರ್ ಇಕ್ಬಾಲ್ ಅಲಿಯಾಸ್ ಮೇಜರ್ ಅಲಿ 7. ಮೇಜರ್ ಸಮೀರ್ ಅಲಿ ಅಲಿಯಾಸ್ ಮೇಜರ್ ಸಮೀರ್ 8. ಡೇವಿಡ್ ಕೋಲೆಮನ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿ ಮತ್ತು 9. ತಹವ್ವುರ್ ರಾಣಾ

ಒಂಬತ್ತು ಜನರ ವಿರುದ್ಧವೂ ಭಾರತ ಬಂಧನ ವಾರಂಟ್ ಹೊರಡಿಸಿದೆ. ಈ ಪೈಕಿ ಹೆಡ್ಲಿಯು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೆರಿಕದಲ್ಲಿ 35 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದು, ಕಾರಾಗೃಹದಲ್ಲಿದ್ದಾನೆ. ರಾಣಾನನ್ನು ಕರೆತರುವಲ್ಲಿ ಭಾರತ ಯಶಸ್ವಿಯಾಗಿದೆ. ಉಳಿದ ಏಳು ಮಂದಿಯೂ ಪಾಕಿಸ್ತಾನದಲ್ಲಿದ್ದಾರೆ ಎಂದು ಹೇಳಲಾಗಿದೆ.


ಇಲ್ಯಾಸ್

ಹೆಡ್ಲಿ ಹಸ್ತಾಂತರ ಯಾಕಿಲ್ಲ?



ಅಮೆರಿಕದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಹೆಡ್ಲಿಯನ್ನೂ ಹಸ್ತಾಂತರಿಸಬೇಕು ಎಂದು ಭಾರತ ಅಮೆರಿಕಕ್ಕೆ ಮನವಿ ಮಾಡಿದೆ. ಮುಂಬೈ ದಾಳಿಯ ಪ್ರಮುಖ ಸಂಚುಕೋರ ಹೆಡ್ಲಿ. ಕೇಂದ್ರ ಸರ್ಕಾರದ ಪ್ರಯತ್ನದ ಹೊರತಾಗಿಯೂ ಅಮೆರಿಕ ಸರ್ಕಾರ ಇನ್ನೂ ಆತನನ್ನು ಹಸ್ತಾಂತರಿಸಿಲ್ಲ.

ಹೆಡ್ಲಿಯು ಅಮೆರಿಕ ಸರ್ಕಾರ ಮತ್ತು ಪಾಕಿಸ್ತಾನದ ಐಎಸ್‌ಐಗೆ ಡಬಲ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ ಎಂಬ ಆರೋಪ ಇದೆ. ಆತ, ಭಾರತ ವಿರೋಧಿ ಚಟುವಟಿಕೆಯಲ್ಲಿ ತೊಡಗುತ್ತಿದ್ದುದು ತಿಳಿದಿದ್ದರೂ ಅಮೆರಿಕ ಆತನ ವಿರುದ್ಧ ಕ್ರಮ ಕೈಗೊಂಡಿರಲಿಲ್ಲ ಎಂಬ ಆಪಾದನೆಯೂ ಇದೆ.

2020ರಲ್ಲಿ ರಾಣಾ ಹಸ್ತಾಂತರಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ವೇಳೆ, ಹೆಡ್ಲಿಯನ್ನು ಭಾರತಕ್ಕೆ ಹಸ್ತಾಂತರಿಸುವುದು ಸಾಧ್ಯವಿಲ್ಲ ಎಂದು ಅಮೆರಿಕದ ಸಹಾಯಕ ಅಟಾರ್ನಿ ಜಾನ್ ಜೆ. ಲುಲೆಜಿಯಾನ್ ಅವರು ಲಾಸ್ ಏಂಜಲೀಸ್‌ನ ಫೆಡರಲ್ ಕೋರ್ಟ್‌ಗೆ ತಿಳಿಸಿದ್ದರು.

'ಮುಂಬೈ ದಾಳಿಗೆ ಸಂಬಂಧಿಸಿದಂತೆ ತನ್ನ ವಿರುದ್ಧ ಮಾಡಲಾಗಿದ್ದ ಎಲ್ಲ ದೋಷಾರೋಪಗಳನ್ನು ಹೆಡ್ಲಿ ಒಪ್ಪಿಕೊಂಡಿದ್ದಾನೆ. ತನಿಖೆಗೂ ಸಹಕರಿಸಿದ್ದಾನೆ. ಆತನು ಎಲ್ಲ ಷರತ್ತುಗಳನ್ನು ಒಪ್ಪಿಕೊಂಡಿರುವುದರಿಂದ ಅರ್ಜಿಗೆ ಸಂಬಂಧಿಸಿದಂತೆ ನಡೆದಿರುವ ಒಪ್ಪಂದದ ಪ್ರಕಾರ ಆತನನ್ನು ಭಾರತಕ್ಕೆ ಹಸ್ತಾಂತರಿಸಲಾಗದು' ಎಂದು ಜಾನ್ ಅವರು ನ್ಯಾಯಾಲಯಕ್ಕೆ ತಿಳಿಸಿದ್ದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ನಾವು ನೋಡಿದ ಸಿನಿಮಾ

ನಾಗಭೂಷಣ್

ಹಾಸ್ಯ, ಆ್ಯಕ್ಷನ್, ಭಾವನೆಗಳ ಹದವಾದ ಮಿಶ್ರಣ

ಜಾಕಿ ಚಾನ್, ಜೇಡನ್ ಸ್ಮಿತ್ ಅಭಿನಯದ 'ದಿ ಕರಾಟೆ ಕಿಡ್' ಎಳೆಯಲ್ಲಿ 'ವಿದ್ಯಾಪತಿ' ತೆರೆಗೆ ಬಂದಿದೆ. 'ಇಕ್ಕಟ್' ಬಳಿಕ ಇಶಾಂ ಮತ್ತು ಹಸೀಂ ಮತ್ತೊಮ್ಮೆ ನಾಗಭೂಷಣ್‌ಗೆ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದಲ್ಲಿ ಆ್ಯಕ್ಷನ್ ಹೆಚ್ಚು ಇದೆ. ಭಾವನಾತ್ಮಕ ಹಾಗೂ ಹಾಸ್ಯದ ಅಂಶ ಕಥೆಯಲ್ಲಿ ಅಡಕವಾಗಿದೆ. ಆ್ಯಕ್ಷನ್–ಕಾಮಿಡಿ ಎಂಬ ಎರಡು ದೋಣಿಗಳಲ್ಲಿ ಕಾಲಿಟ್ಟಿರುವ ನಾಗಭೂಷಣ್ ಇಕ್ಕಟ್ಟಿಗೆ ಸಿಲುಕದೆ ದಡ ಸೇರಿದ್ದಾರೆ.

ನಾಯಕ ಸಿದ್ದುವಿಗೆ (ನಾಗಭೂಷಣ್) ಹಣದ ಹಪಹಪಿ. ಸಿನಿಮಾ ನಾಯಕಿಯಾಗಿರುವ 'ಸೂಪರ್‌ಸ್ಟಾರ್ ವಿದ್ಯಾ'(ಮಲೈಕಾ) ಸಾಮಾನ್ಯ ಜನರಂತೆ ಬದುಕುವಾಕೆ. ತಾನೊಬ್ಬ ಅನಾಥ ಎಂಬಂತೆ ನಾಟಕವಾಡಿ ಸುಳ್ಳಿನ ಸರಮಾಲೆ ಕಟ್ಟಿ 'ಸಿದ್ದು' 'ವಿದ್ಯಾ'ಳ ಮನಸ್ಸು ಗೆದ್ದು ಆಕೆಯನ್ನು ವರಿಸುತ್ತಾನೆ. ನಂತರ 'ವಿದ್ಯಾ'ಳ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿರುತ್ತಾನೆ. ಈ ಸಂದರ್ಭದಲ್ಲಿ ಇವರಿಬ್ಬರ ಜೀವನದ ನಡುವೆ 'ಜಗ್ಗು'ವಿನ(ಗರುಡಾ ರಾಮ್) ಪ್ರವೇಶವಾಗುತ್ತದೆ. 'ಸಿದ್ದು'ವಿನ ಮುಖವಾಡ ಕಳಚುತ್ತದೆ. ಆತನ ಜೀವನ ಬದಲಾಗುತ್ತದೆ, ಕಥೆ ಮುಂದುವರಿಯುತ್ತದೆ.

'ದಿ ಕರಾಟೆ ಕಿಡ್' ಎಳೆಯಲ್ಲೇ ಈ ಸಿನಿಮಾ ಕಥೆಯಿದೆ. ಅನನುಕ್ರಮಣಿಕೆ-(non linear) ಮಾದರಿಯ ಚಿತ್ರಕಥೆಯಲ್ಲಿ ಸಿದ್ದುವಿನ ಜೀವನ ತೆರೆದಿಡಲಾಗಿದೆ. ಪ್ರಸ್ತುತಿಯಲ್ಲಿ ಹಾಸ್ಯ-ಆ್ಯಕ್ಷನ್–ಭಾವನೆಗಳ ಹದವಾದ ಮಿಶ್ರಣವಿದೆ. ಚಿತ್ರಕಥೆಯು ಎಳೆದಾಡಿದಂ-ತಾಗುತ್ತಿದೆ ಎಂದೆನಿಸುವಾಗ 'ಅನಕೊಂಡ'(ಡಾಲಿ ಧನಂಜಯ) ಪಾತ್ರವನ್ನು ನಿರ್ದೇಶಕರು ಪರಿಚಯಿಸುತ್ತಾರೆ. ಇದು ಕಥೆಗೆ ವೇಗ ನೀಡುತ್ತದೆ. ಎರಡು ಗಂಟೆಯ ಸಿನಿಮಾ ನೋಡಿಸಿಕೊಂಡು ಹೋಗುತ್ತದೆ. ಹಾಸ್ಯ ಸಂಭಾಷಣೆ ಮೇಲೆ ಇನ್ನೊಂದಿಷ್ಟು ಕೆಲಸ ಮಾಡಬಹುದಿತ್ತು. 'ಮದನಾರಿ' ಹಾಡು ಗುನುಗುವಂತಿದೆ. ಮಕ್ಕಳೂ ನೋಡಬಹುದು ಎಂದಿರುವ ಈ ಸಿನಿಮಾದಲ್ಲಿ ಮದ್ಯಪಾನದ ದೃಶ್ಯಗಳು ಹೆಚ್ಚಿವೆ. ನಟನೆಯಲ್ಲಿ ನಾಗಭೂಷಣ್ ತನ್ನೊಳಗಿರುವ ನಟನಿಗೆ ಹೆಚ್ಚು ಸಾಣೆ ಹಿಡಿದಿದ್ದಾರೆ. ಹಾಸ್ಯಕ್ಕಿಂತಲೂ ಭಾವನಾತ್ಮಕ ದೃಶ್ಯಗಳಲ್ಲಿ ಅಂಕ ಗಿಟ್ಟಿಸುತ್ತಾರೆ. ನಾಗಭೂಷಣ್ ಇಡೀ ಸಿನಿಮಾ ಆವರಿಸಿಕೊಂಡಿದ್ದಾರೆ. ಪತಿಯಾಗಿ, ಮಗನಾಗಿ, ಮಲ ಮಗನಾಗಿ, ಅಣ್ಣನಾಗಿ, ಸ್ನೇಹಿತನಾಗಿ ಹಲವು ಸಂದೇಶಗಳನ್ನು ನೀಡುವ ರೀತಿಯಲ್ಲಿ ಅವರ ಪಾತ್ರವನ್ನು ಕೆತ್ತಲಾಗಿದೆ. ಶ್ರೀವತ್ಸ, ಮಲೈಕಾ, ಗಿರೀಶ್ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. 'ಕೆ.ಜಿ.ಎಫ್' ಖಳನಾಯಕನನ್ನು ಭಿನ್ನವಾದ ಒಂದು ಪಾತ್ರದಲ್ಲಿ ಕಾಣಬಹುದು. ಹಾಸ್ಯದಲ್ಲೂ ಒಂದು ಕೈ ನೋಡಿದ್ದಾರೆ ಗರುಡ ರಾಮ್. 'ಅವನ ಯುದ್ಧ ಅವನೇ ಹೋರಾಡಬೇಕು' ಎನ್ನುವ ಧನಂಜಯ ಪಾತ್ರದ ಸಂಭಾಷಣೆ ಹಿಂದೆ ಚಿತ್ರರಂಗದ ವಾಸ್ತವ ಅಂಶಗಳು ಇವೆ.

–ಅಭಿಲಾಷ್ ಪಿ.ಎಸ್.

ವಿದ್ಯಾಪತಿ

- ನಿರ್ಮಾಣ: 'ಡಾಲಿ' ಧನಂಜಯ
- ನಿರ್ದೇಶನ: ಇಶಾಂ ಹಾಗೂ ಹಸೀಂ ಖಾನ್
- ತಾರಾಗಣ: ನಾಗಭೂಷಣ್, ಮಲೈಕಾ ಟಿ.ವಸುಪಾಲ್, ಗರುಡ ರಾಮ್, ಶ್ರೀವತ್ಸ, ಗಿರೀಶ್, 'ಡಾಲಿ' ಧನಂಜಯ ಮತ್ತಿತರರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಮನದಲ್ಲಿ ದೈವೀಭಾವ ಇರಬೇಕು!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

171

ಒಂದು ಊರಲ್ಲಿ ಗಣಪತಿ ಇಟ್ಟಿದ್ದರು. ಆ ಗಣಪತಿ ಮುಂದೆ ಇದ್ದ ಹುಂಡಿಯನ್ನು ಯಾರೋ ಕದ್ದುಬಿಟ್ಟದ್ದರಂತೆ. ಆಯೋಜಕರು ಮೈಕ್‌ನಲ್ಲಿ 'ಯಾರು ಗಣಪತಿ ಹುಂಡಿ ತೆಗೆದುಕೊಂಡು ಹೋಗಿದ್ದೀರಿ. ದಯವಿಟ್ಟು ತಂದು ಇಡಿ' ಎಂದು ಹೇಳಿದರು. ಯಾರೂ ತಂದು ಇಡಲಿಲ್ಲ. ಆಗ ಆಯೋಜಕರಿಗೆ ಜ್ಞಾನೋದಯವಾಯಿತು. ಬೆಳಕು ಇದ್ದರೆ ಯಾರೂ ತಂದು ಇಡಲ್ಲ ಅಂತ ಬೆಳಕು ಆರಿಸಿದರು. ಸ್ವಲ್ಪ ಸಮಯದ ನಂತರ ಬೆಳಕು ಹಾಕಿದಾಗ ಗಣೇಶನ ಮೂರ್ತಿಯೇ ಇರಲಿಲ್ಲವಂತೆ. ದೇವರನ್ನೇ ಕಳವು ಮಾಡಲಾಗಿತ್ತು. 'ಹೌದ್ರಿ, ಎಲ್ಲಾ ಬಿಡು ಅಂದರೆ ನಾವು ಆಸ್ತಿ ಮಾಡೋದು, ಹಣ ಗಳಿಸೋದೇ ಬೇಡವಾ' ಎಂದು ನೀವು ಕೇಳುತ್ತೀರಿ. ಅದಕ್ಕೆ ಪತಂಜಲಿ ಮಹರ್ಷಿ ಹೇಳುವುದು ಏನೆಂದರೆ, 'ನೀವು ಹೊಲ ಬಿಡಿ, ಮನೆ ಬಿಡಿ, ನೌಕರಿ ಬಿಡಿ, ಹಣ ಗಳಿಸಬೇಡಿ ಎಂದಲ್ಲ. ಎಲ್ಲವನ್ನೂ ಮಾಡಿ. ಆದರೆ ವಸ್ತುಗಳ ಮೇಲಿನ ಮೋಹ ಬಿಡಿ' ಎಂದು. ಹೊರಗೆ ವಸ್ತುಗಳ ಬಳಕೆ ಇರಬೇಕು. ಒಳಗೆ, 'ಇದು ನನ್ನದಲ್ಲ' ಎಂಬ ಬೆಳಕು ಇರಬೇಕು.

ಪತಂಜಲಿ ಒಬ್ಬ ಮನಃಶಾಸ್ತ್ರಜ್ಞರು. 'ನಾವು ಯಾಕೆ ಎಲ್ಲವೂ ದೇವರ ಕೊಡುಗೆ ಎಂದು ಭಾವಿಸಬೇಕು, ಹಾಗೆ ಭಾವಿಸದೆ ಇದ್ದರೆ ಏನಾಗುತ್ತದೆ' ಎಂದು ಸಂಶೋಧನೆ ಮಾಡಿದರು. ಮನಸ್ಸನ್ನು ಬಿಡಿಸಿ ಬಿಡಿಸಿ ನೋಡಿದರು. ಮನುಷ್ಯನಿಗೆ ನಂದು ಎನ್ನುವುದು ಬಂದಾಗ ದುಃಖವಾಗುತ್ತದೆ. ನಂದು ಎನ್ನುವುದು ಎಷ್ಟು ಪ್ರಬಲವಾಗಿದೆ ಎಂದರೆ ಇಬ್ಬರು ಹುಡುಗರು ಜಗಳ ಮಾಡುತ್ತಿದ್ದಾರೆ. ಒಬ್ಬ ಹುಡುಗ ಇನ್ನೊಬ್ಬನಿಗೆ ನಾಲ್ಕು ಬಾರಿಸಿದ. ಯಾಕೆ ಎಂದು ಕೇಳಿದರೆ 'ಅವ ನನ್ನ ಅಂಗಿಯ ಕಾಲರ್ ಹಿಡಿದು ಎಳೆದ' ಎಂದ. ಅವನಿಗೆ ಯಾಕೆ ದುಃಖ ಆಯಿತು ಎಂದರೆ ನನ್ನ ಅಂಗಿಯ ಕಾಲರ್ ಹಿಡಿದ ಎಂಬ ಕಾರಣಕ್ಕೆ. ಕೆಲವು ದಿನಗಳ ನಂತರ ಅಂಗಿ ಹಳೆಯದಾಯಿತು. ಅದನ್ನು ಬಚ್ಚಲ ಮೂಲೆಯಲ್ಲಿ ಬಿಸಾಕಿದರು. ಆಗ ಎಲ್ಲರೂ ಅದರಲ್ಲಿ ಕಾಲು ಒರೆಸಿ ಹೋಗುತ್ತಿದ್ದರು. ಆಗ ದುಃಖ ಆಗಲಿಲ್ಲ. ಯಾಕೆಂದರೆ ಆಗ ನಂದು ಎನ್ನುವುದು ಇರಲಿಲ್ಲ. ಮನಸ್ಸಿನ ಒಳಗೆ ನಂದು ಎನ್ನುವ ಭಾವ ಬಲವಾಗಿ ಸೇರಿಕೊಂಡಿದೆಯಲ್ಲ. ಅದೇ ದುಃಖದ ಬೀಜ ಎಂದು ಪತಂಜಲಿ ಹೇಳುತ್ತಾರೆ.

ನಾವು ನಂದು ಎನ್ನುವುದನ್ನು ಗಂಟು ಹಾಕಿಕೊಂಡಿದ್ದೇವೆ. ಇವೆಲ್ಲ ಭಾವ ಬಂಧನ. ದೇಹದ ಹೊರಗೆ ಗಾಯವಾದರೆ ಅಥವಾ ಗಂಟಾದರೆ ಶಸ್ತ್ರ ಚಿಕಿತ್ಸೆ ಮಾಡಬೇಕು. ಒಳಗೆ ಅಂದರೆ ಮನಸ್ಸಿಗೆ ಗಂಟಾದರೆ ಅಥವಾ ಗಾಯವಾದರೆ ಶಾಸ್ತ್ರಗಳಿಂದ ಚಿಕಿತ್ಸೆ ಮಾಡಬೇಕು. ಅದಕ್ಕೆ ಪತಂಜಲಿ ಅವರು 'ಮನುಷ್ಯನೇ, ಮನಸ್ಸಿನ ಒಳಗೆ ಒಂದಿಷ್ಟು ದೈವೀಭಾವ ಇರಲಿ' ಎಂದರು. ಉಣ್ಣುವಾಗ, ಉಡುವಾಗ, ನಡೆಯುವಾಗ, ಗಳಿಸುವಾಗ ದೇವರೇ... ಇದು ನಿನ್ನ ಪ್ರಸಾದ ಎನ್ನುವ ಭಾವ ಇರಲಿ' ಎಂದರು. ನೀವು ಹೋಳಿಗೆಯನ್ನು ದೇವರ ಬಳಿಗೆ ತೆಗೆದುಕೊಂಡು ಹೋಗಿ ನೈವೇದ್ಯ ಮಾಡಿ ತರ್ತೀರಿ. ಮನೆಯಲ್ಲಿ ಇದ್ದಾಗ ಅದು ಹೋಳಿಗೆ, ಆದರೆ ಬರುವಾಗ ಅದು ಪ್ರಸಾದ ಆಯ್ತು. ಅಂದರೆ ದೈವೀ ಭಾವ ಇದ್ದರೆ ಪದಾರ್ಥ ಪ್ರಸಾದ ಆಗುತ್ತದೆ. ಮನೆಯಲ್ಲಿರುವ ಎಲ್ಲ ವಸ್ತುಗಳಲ್ಲಿ ಇರುವ ನಂದು ಎನ್ನುವುದನ್ನು ತೆಗೆದು ದೈವೀಭಾವ ತುಂಬಿದರೆ ಎಲ್ಲವೂ ಪ್ರಸಾದವಾಗುತ್ತವೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಏಪ್ರಿಲ್ 11, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಚತುರ್ದಶಿ ಗಂ. 27-22 ನಕ್ಷತ್ರ: ಉತ್ತರಫಲ್ಗುನಿ ಗಂ. 15-10 ಯೋಗ: ಧ್ರುವ ಗಂ. 19-45 ಕರಣ: ಗರ ಗಂ. 14-10, ಮೀನ ಮಾಸದ 28 ನೇ ದಿನ, ಮಳೆನಕ್ಷತ್ರ: ರೇವತಿ 4.
ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-23 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 11 ಶವ್ವಾಲ್ , ದಿನ ವಿಶೇಷ : ದಮನಕ ಚತುರ್ದಶಿ, ಫಂಗುಣಿ ಉತ್ತರೀಯಮ್, ತ್ರಿವೇಂಡ್ರಮ್ ಆರತಿ(ಕೇರಳ)
ಅದೃಷ್ಟ ಸಂಖ್ಯೆ : 2, 9

ಮೇಷ: ಎಂದಿನಂತೆ ಮನಸ್ಸು ಹೆಚ್ಚು ಉಲ್ಲಾಸದಿಂದ ಕೂಡಿರುವುದರಿಂದ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದು. ಹೋಟೆಲ್ ಉದ್ಯಮಿಗಳಿಗೆ ಮತ್ತು ಅಡುಗೆಯ ವೃತ್ತಿಯವರಿಗೆ ಲಾಭದಾಯಕ.

ವೃಷಭ: ರಾಜಿಯಾಗುವ ಮನೋಭಾವ ಬೆಳೆಸಿಕೊಳ್ಳಿ. ಹೊಸ ಕ್ಷೇತ್ರದಲ್ಲಿ ಏಳಿಗೆ ಪಡೆಯುವಿರಿ. ಏಕಾಂಗಿಯಾಗಿರುವವರಿಗೆ ಸಂಗಾತಿ ಸಿಗುವ ಲಕ್ಷಣಗಳಿವೆ. ಸಗಟು ವ್ಯಾಪಾರಿಗಳಿಗೆ ಹೇರಳ ಲಾಭ.

ಮಿಥುನ: ಪಾಲುದಾರಿಕೆ ವಿಚಾರವಾಗಿ ಆಶ್ವಾಸನೀಯ ವರ್ತನೆಯಿಂದ ಸಹೋದರ ವರ್ಗದಲ್ಲಿ ಬಹಳ ಸಂತಸ ಉಂಟಾಗುವುದು. ಕೌಟುಂಬಿಕವಾಗಿ ತೆಗೆದುಕೊಳ್ಳಬೇಕಾದ ನಿರ್ಣಯದ ಬಗ್ಗೆ ಮೇಲ್ವಿಚಾರಣೆ ಮಾಡಬಹುದು.

ಕರ್ಕಾಟಕ: ಅಭಿರುಚಿಗೆ ತಕ್ಕಂಥ ವ್ಯಕ್ತಿಗಳೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತ. ದೇಹದಲ್ಲಿ ಅಧಿಕ ಉಷ್ಣಾಂಶದಿಂದ ಅನಾರೋಗ್ಯ ಉಂಟಾಗುವ ಸಂಭವವಿದೆ. ಆರ್ಥಿಕವಾಗಿ ಸೌಕರ್ಯ ಪಡೆದುಕೊಳ್ಳುವಿರಿ.

ಸಿಂಹ: ಕೃಷಿ ಭೂಮಿಗೆ ಸಂಬಂಧಿಸಿದಂತೆ ರಿಯಲ್ ಎಸ್ಟೇಟ್ ಏಜೆಂಟರಿಗೆ ಅಧಿಕ ಲಾಭ ದೊರೆಯುತ್ತದೆ. ಕರಕುಶಲ ವಸ್ತು ತಯಾರಿಕರಿಗೆ ಆದಾಯದಲ್ಲಿ ಹೆಚ್ಚಳ. ಪ್ರಗತಿಯ ಲಕ್ಷಣಗಳು ನಿಚ್ಚಳವಾಗಿ ತೋರಿಬರುವುದು.

ಕನ್ಯಾ: ಧಾರ್ಮಿಕವಾಗಿ ಹೆಚ್ಚಿನ ಏಕಾಗ್ರತೆ ಹಾಗೂ ಧ್ಯಾನಗಳಿಂದ ಮಾನಸಿಕವಾಗಿ ಸದೃಢರಾಗುವಿರಿ. ಜನಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಬಹಳ ಕೆಲಸದ ಒತ್ತಡ ಇರುವುದು. ನಂಬಿಕೆ ವಿಶ್ವಾಸ ಅಧಿಕವಾಗುವುದು.

ತುಲಾ: ಕಾರ್ಯಕ್ಷೇತ್ರದಲ್ಲಿನ ನಷ್ಟ ಪ್ರಮಾಣ ಅಧಿಕವಾಗಿದ್ದರೂ, ಹೊಸ ಜವಾಬ್ದಾರಿಗಳು ಅರಸಿ ಬರಲಿವೆ. ನವಗ್ರಹ ಪೀಡಾ ಪರಿಹಾರ ಸ್ತೋತ್ರ ಪಠಿಸಿದರೆ ಉತ್ತಮ. ಸಂಜೆಯ ಸಮಯದಲ್ಲಿ ಆಲಸ್ಯವಾಗಬಹುದು.

ವೃಶ್ಚಿಕ: ಗುರಿಯನ್ನು ತಲುಪುವಲ್ಲಿ ಪರಿಶ್ರಮದ ಕೊರತೆ ಮತ್ತು ಅದೃಷ್ಟ ಹೀನತೆ ಸಮಬಲ ಸಾಧಿಸುವುದು. ವಿದ್ಯಾಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಶ್ರಮದ ಅಗತ್ಯವಿದೆ. ಸಂತಸದ ಕ್ಷಣಗಳನ್ನು ತಂದುಕೊಳ್ಳುವ ಪ್ರಯತ್ನ ಮಾಡಿ.

ಧನು: ಜೀವನದಲ್ಲಿ ಬೇಸರಗೊಂಡಿರುವ ನೀವು ಮಾನಸಿಕವಾಗಿ ಸದೃಢರಾಗುವಿರಿ. ಭೋಗ ವಸ್ತುವಿನ ಖರೀದಿಯ ಅವಕಾಶವು ನಿಮ್ಮದಾಗಲಿದೆ. ಆರೋಗ್ಯದಲ್ಲಿ ವ್ಯತ್ಯಯಗಳು ಕಾಣಲಿವೆ.

ಮಕರ: ಗಣ್ಯ ವ್ಯಕ್ತಿಗಳ ವೈಯಕ್ತಿಕ ಭೇಟಿಯಲ್ಲಿ ಉಂಟಾದ ಕೆಲವು ಘಟನೆಗಳಿಂದ ಸಹಚರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ವೈಯಕ್ತಿಕ ವ್ಯವಹಾರದಲ್ಲಿಯೂ ಗೌಪ್ಯತೆಯನ್ನು ಕಾಪಾಡುವುದು ಮುಖ್ಯ.

ಕುಂಭ: ಈ ದಿನ ಎಲೆಕ್ಟ್ರಿಕಲ್ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷೆಗೂ ಮೀರಿದ ಸಂಪಾದನೆ ಉಂಟಾಗುವುದು. ದಿನದಿಂದ ದಿನಕ್ಕೆ ತಂದೆ-ತಾಯಿ ಅವರ ಆರೋಗ್ಯ ಸ್ಥಿತಿಯು ಉತ್ತಮ. ಗೃಹ ಸೌಲಭ್ಯಗಳನ್ನು ಹೆಚ್ಚು ಮಾಡಿಕೊಳ್ಳುವಿರಿ.

ಮೀನ: ಖಾದಿ ಉದ್ಯಮದವರಿಗೆ ಸರ್ಕಾರದಿಂದ ಸೌಲಭ್ಯ ದೊರೆಯುವ ಅವಕಾಶಗಳಿದೆ. ದುಂದುವೆಚ್ಚ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಆಲೋಚನೆ ಮಾಡಬೇಕಾದೀತು. ನೆನಪಿನಶಕ್ತಿ ವೃದ್ಧಿಯಾಗುವಂತೆ ಶಾರದೆಯಲ್ಲಿ ಪ್ರಾರ್ಥಿಸಿ.

ಪದಬಂಧ 6008

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಾದ್ಯವನ್ನು ನುಡಿಸುವವನು (3)
3.ಈತ ಚಿಕ್ಕ ಹುಡುಗ (3)
5.ಸೂರ್ಯನ ರಶ್ಮಿ (5)
6.ದ್ವಾದಶಿ ನಂತರದ ತಿಥಿ (4)
8.ಈತ ತಿಂಡಿಪೋತ (4)
9.ಹಾಲಿನಲ್ಲಿ ಬೇಯಿಸಿದ ಅನ್ನ (4)
10.ಜ್ಞಾಪಕದಿಂದ ಮಾಡಿರುವ ಕೋರಿಕೆ (4)
12.ಅಶ್ವದ ಮುಖವಿದು (5)
14.ಲವ ಹಿಡಿದಿರುವ ಉಪ್ಪು (3)
15.ಸಾಗಿಸುವಿಕೆಯನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ

1.ಪವನ ಸುತ ಹನುಮಂತ ಇಲ್ಲಿದ್ದಾನೆ (4)
2. ಕೈ ಇಲ್ಲಿ ಕಾಣುತ್ತಿದೆ (2)
3.ಬಾದಾರಾಯಣನ ಕಾಲದ ಶರ ಇಲ್ಲಿದೆ (2)
5.ಕನ್ನಡಿಗರ ನಾಡು (4)
7.ಸೈನ್ಯವು ಬೀಡು ಬಿಡುವ ಸ್ಥಳ (3)
8.ಭಸ್ಮವಿಲ್ಲಿ ಉಲ್ಟಾ ಕಾಣುತ್ತಿದೆ (3)
9.ಅತಿ ಘೋರವಾದ ವಿಷ (4)
11.ಪಕ್ಕದ ಮನೆಯಿದು (4)
12.ಹಗರಣದಲ್ಲಿ ಸಿಕ್ಕಿರುವ ದುಡ್ಡು ಇಲ್ಲಿದೆ (2)
13. ನರಕದಲ್ಲಿರುವ ಮನುಷ್ಯ (2)



6007ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜನಜನಿತ 3.ಶತಕ
5.ಸದ್ವಿನಿಯೋಗ
7.ರಿವಾಜು 9.ಕವಾಟ
11.ಊರ್ವಶಿ 13.ಹೊಲಸುನಾತ
15.ಸಂಪುಟ 16.ದುರುಪಯೋಗ

ಮೇಲಿಂದ ಕೆಳಕ್ಕೆ:
1.ಜವಾಹಿರಿ 2.ನಿಶ್ವಾಸ
4.ತರಂಗ 6.ನಿಕಟ
8.ವಾವೆ 9.ಕಡಸು
10.ಪರ್ವ 12.ಶಿಲಾಯುಗ
13.ಹೊಳಪು 14.ತವರು

ಸುಡೊಕು 6393

	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5	2			7			
9		1		5	8	2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6392 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಶುಕ್ರವಾರ • ಏಪ್ರಿಲ್ 11, 2025 ಪ್ರಜಾವಾಣಿ

₹70 ಲಕ್ಷ ಕೋಟಿ ದಾಟಿದ ರಫ್ತು ಮೌಲ್ಯ: ಕೇಂದ್ರ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ರಫ್ತು ಮೌಲ್ಯವು ₹70.55 ಲಕ್ಷ ಕೋಟಿ ದಾಟಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

2023-24ನೇ ಆರ್ಥಿಕ ವರ್ಷದಲ್ಲಿ ₹66.94 ಲಕ್ಷ ಕೋಟಿ ಆಗಿತ್ತು. ಜಾಗತಿಕ ಅನಿಶ್ಚಿತ ಸ್ಥಿತಿಯ ನಡುವೆಯೂ ರಫ್ತು ಪ್ರಮಾಣ ದಲ್ಲಿ ಶೇ 6ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.

ಭಾರತದ ಮೇಲೆ ಅಮೆರಿಕ ವಿಧಿಸಿರುವ ಪ್ರತಿ ಸುಂಕ ಹಾಗೂ ಅದರಿಂದ ಆಗುವ ಪರಿಣಾಮಗಳ ಬಗ್ಗೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು, ರಫ್ತು ಉತ್ತೇಜನಾ ಮಂಡಳಿ ಮತ್ತು ಕೈಗಾರಿಕಾ ಸಂಸ್ಥೆಗಳ ಜೊತೆಗೆ ಚರ್ಚೆ ನಡೆಸುತ್ತಿದ್ದಾರೆ. ದೇಶದ ವ್ಯಾಪಾರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರವು ಕ್ರಮ ಕೈಗೊಳ್ಳಲಿದೆ.

ಕೆಂಪು ಸಮುದ್ರ ಬಿಕ್ಕಟ್ಟು, ಇಸ್ರೇಲ್–ಹಮಾಸ್ ಸಂಘರ್ಷ, ರಷ್ಯಾ–ಉಕ್ರೇನ್ ಬಿಕ್ಕಟ್ಟಿನ ನಡುವೆಯೂ ದೇಶದ ರಫ್ತು ಉತ್ತಮ ಬೆಳವಣಿಗೆ ದಾಖಲಿಸಿದೆ. ಇದೇ ವೇಳೆ ಅಭಿವೃದ್ಧಿ ಹೊಂದಿದ ದೇಶಗಳ ಪ್ರಗತಿ ಮಂದಗತಿಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹450

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಕೆ.ಜಿ)	₹224-570
ದ್ವಿತಳಿ (ಕೆ.ಜಿ)	₹242-685

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹191
ಆರ್‌ಎಸ್‌ಎಸ್-5	₹186
ಗುಡ್ ಲಾಟ್	₹178

ವಿನಿಮಯ ದರ	
$ ಡಾಲರ್	86.04
£ ಪೌಂಡ್	111.48
€ ಯೂರೊ	96.07
¥ ಯೆನ್ (100ಕ್ಕೆ)	60

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)	
ಶೇಂಗಾ (ರಿಫೈನ್ಡ್)	₹1370 (1370)
ಸೋಯಾ (ರಿಫೈನ್ಡ್)	₹1285 (1280)
ಸೂರ್ಯಕಾಂತಿ (ರಿಫೈನ್ಡ್)	₹1405 (1400)
ಪಾಮೋಲಿನ್	₹1315 (1310)

ಚಿನ್ನದ ಸಾಲಕ್ಕೆ ಬಿಗಿ ನಿಯಮ • ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಕರಡು ಪ್ರಕಟ

ಬ್ಯಾಂಕ್, ಎನ್‌ಬಿಎಫ್‌ಸಿಗೆ ಲಗಾಮು

ಮುಂಬೈ (ಪಿಟಿಐ): ಬ್ಯಾಂಕ್ ಹಾಗೂ ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ನೀಡುವ ಚಿನ್ನದ ಮೇಲಿನ ಸಾಲಕ್ಕೆ ಸಂಬಂಧಿಸಿದಂತೆ ಬಿಗಿ ನಿಯಮ ರೂಪಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮುಂದಾಗಿದ್ದು, ಈ ಸಂಬಂಧ ಕರಡು ನಿಯಮಾವಳಿಗಳನ್ನು ಪ್ರಕಟಿಸಿದೆ.

ಗ್ರಾಹಕರು ಆಪತ್ಕಾಲದಲ್ಲಿ ಮನೆಯಲ್ಲಿರುವ ಚಿನ್ನದ ಒಡವೆಗಳನ್ನು ಅಡವಿಟ್ಟು ಸಾಲ ಪಡೆಯುವುದು ವಾಡಿಕೆ. ಈ ವೇಳೆ ಬ್ಯಾಂಕ್‌ಗಳು ಮತ್ತು ಕಂಪನಿಗಳು ಪಾಲಿಸುವ ಕಠಿಣ ನಿಯಮಗಳಿಂದ ಸಾಲಗಾರರು ತೊಂದರೆಗೆ ಸಿಲುಕುತ್ತಾರೆ. ಹಾಗಾಗಿ, ಸಾಲಗಾರರ ಹಿತರಕ್ಷಣೆ ದೃಷ್ಟಿಯಿಂದ ಸ್ಪಷ್ಟ ನಿಯಮಾವಳಿ ರೂಪಿಸಲು ಆರ್‌ಬಿಐ ನಿರ್ಧರಿಸಿದೆ.

ಸಾಲದಾತರು ಗ್ರಾಹಕರಿಗೆ ಸಾಲ ನೀಡುವುದಕ್ಕೂ ಮೊದಲು ಚಿನ್ನದ ಶುದ್ಧತೆ, ಅದರ ತೂಕ (ಒಟ್ಟು ಮತ್ತು ನಿವ್ವಳ) ಇತ್ಯಾದಿ ಪರೀಕ್ಷಿಸಲು ಪ್ರಮಾಣೀಕೃತ ಕಾರ್ಯವಿಧಾನ ಅನುಸರಿಸಬೇಕಿದೆ. ತಮಗೆ ಸೇರಿದ ಎಲ್ಲಾ ಶಾಖೆಗಳಲ್ಲಿ ಏಕರೂಪದ ಕಾರ್ಯವಿಧಾನ ಅಳವಡಿಸಿಕೊಳ್ಳಬೇಕು ಎಂದು ಕರಡು ನಿಯಮಾವಳಿಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ಬಗ್ಗೆ ತಮ್ಮ ವೆಬ್‌ಸೈಟ್‌ಗಳಲ್ಲಿ ಸಾಲಗಾರರಿಗೆ ಅರ್ಥವಾಗುವಂತೆ ಪ್ರಕಟಿಸಬೇಕಿದೆ ಎಂದು ಹೇಳಿದೆ.

ಚಿನ್ನ ಒತ್ತೆಯಿಟ್ಟುಕೊಂಡು ಸಾಲ ನೀಡುವ ವೇಳೆ ಸಾಲಗಾರರ ಸಮ್ಮುಖದಲ್ಲಿಯೇ ಚಿನ್ನದ ಪರೀಕ್ಷೆ ನಡೆಸಬೇಕು. ಹರಳಿನ ತೂಕ ಇತ್ಯಾದಿ ಕೈಬಿಡುವುದನ್ನು ಅವರ ಎದುರಿನಲ್ಲಿಯೇ ಮಾಡಬೇಕು. ಈ ಬಗ್ಗೆ ಅವರಿಗೆ ವಿವರಿಸಿ ಹೇಳಬೇಕಿದೆ ಎಂದು ಹೇಳಿದೆ.

‘ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರ ಕಡಿತಗೊಳಿಸಿದೆ. ಇದು ವ್ಯಾಪಾರ ವಹಿವಾಟಿನ ಬಲವರ್ಧನೆಗೆ ನೆರವಾಗಲಿದೆ. ಪ್ರಸ್ತುತ ಹಳದಿ ಲೋಹದ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ. ಹಾಗಾಗಿ, ಚಿನ್ನದ ಮೇಲೆ ಸಾಲ ಪಡೆಯುವ ಪ್ರಮಾಣವು ಏರಿಕೆಯಾಗಲಿದೆ’ ಎಂದು ಇಂಡೆಲ್ ಮನಿ ಸಿಇಒ ಉಮೇಶ್ ಮೋಹನನ್ ಹೇಳಿದ್ದಾರೆ.

ಚಿನ್ನದ ಸಾಲ ನಿಯಮಗಳನ್ನು ಬಿಗಿಗೊಳಿಸುತ್ತಿಲ್ಲ. ಸುಧಾರಣೆಗೆ ಕ್ರಮವಹಿಸಲಾಗಿದೆ. ಎನ್‌ಬಿಎಫ್‌ಸಿಗೆ ಇದ್ದ ನಿಯಮಗಳು ಇನ್ನು ಮುಂದೆ ಬ್ಯಾಂಕ್‌ಗಳಿಗೂ ಅನ್ವಯಿಸಲಿವೆ

ಸಂಜಯ್ ಮಲ್ಹೋತ್ರಾ, ಆರ್‌ಬಿಐ ಗವರ್ನರ್

ಸ್ಥಳೀಯ ಭಾಷೆಯಲ್ಲಿ ಸಾಲ ಒಪ್ಪಂದ

ಚಿನ್ನದ ಸಾಲ ನೀಡುವಾಗ ಬ್ಯಾಂಕ್‌ಗಳು ಹಾಗೂ ಬ್ಯಾಂಕೇತರ ಹಣಕಾಸು ಕಂಪನಿಗಳು ಸಾಲಗಾರರಿಂದ ಒಪ್ಪಂದ ಪತ್ರಕ್ಕೆ ಸಹಿ ಹಾಕಿಸಿಕೊಳ್ಳುತ್ತವೆ. ಈ ಪತ್ರವು ಸ್ಥಳೀಯ ಭಾಷೆ ಅಥವಾ ಸಾಲಗಾರರಿಗೆ ಅರ್ಥವಾಗುವ ಭಾಷೆಯಲ್ಲಿಯೇ ಇರಬೇಕಿದೆ ಎಂದು ಕರಡು ನಿಯಮದಲ್ಲಿ ಪ್ರಸ್ತಾಪಿಸಲಾಗಿದೆ.

ಪತ್ರದಲ್ಲಿ ಚಿನ್ನದ ಭದ್ರತೆಯ ಮೌಲ್ಯ, ಸಾಲ ಮರುಪಾವತಿ ಮಾಡದಿದ್ದರೆ ಹರಾಜು ಹಾಕುವ ಪ್ರಕ್ರಿಯೆ, ಸಾಲ ಮರುಪಾವತಿಗೆ ನೀಡುವ ಗಡುವಿನ ಬಗ್ಗೆ ನಮೂದಿಸಬೇಕಿದೆ. ಅಲ್ಲದೆ, ಸಾಲಗಾರರು ಹರಾಜಿಗೂ ಮೊದಲು ಸಾಲ ಮರುಪಾವತಿ ಮಾಡಲು ಇರುವ ಅವಧಿ ಬಗ್ಗೆಯೂ ನಮೂದಿಸುವುದು ಕಡ್ಡಾಯ ಎಂದು ಹೇಳಿದೆ.

ಸಾಲದ ಷರತ್ತು ಮತ್ತು ನಿಯಮಗಳ ಬಗ್ಗೆ ಸಾಲಗಾರರಿಗೆ ಸ್ಪಷ್ಟವಾಗಿ ತಿಳಿಸಬೇಕಿದೆ. ಎಷ್ಟು ಪ್ರಮಾಣದ ಬಡ್ಡಿ ಅನ್ವಯವಾಗಲಿದೆ ಎಂದು ಹೇಳಬೇಕಿದೆ ಎಂದು ಹೇಳಿದೆ.

ಸಾಲದಾತರು ಚಿನ್ನದ ಮೌಲ್ಯ ಆಧರಿಸಿ ಸಾಲ ನೀಡುತ್ತಾರೆ. ಚಿನ್ನದ ಮೌಲ್ಯ ಹೋಲಿಸಿ ಎಷ್ಟು ಪ್ರಮಾಣದ ಸಾಲ ನೀಡಲಾಗಿದೆ ಎಂಬ ಬಗ್ಗೆಯೂ ಸಾಲಗಾರರಿಗೆ ವಿವರಿಸಬೇಕಿದೆ. ಸಾಲ ಮತ್ತು ಚಿನ್ನದ ಮೌಲ್ಯದ ಅನುಪಾತವನ್ನು (ಎಲ್‌ಟಿವಿ) ನಮೂದಿಸಬೇಕಿದೆ. ಸ್ಥಳೀಯ ಭಾಷೆ ಅಥವಾ ಸಾಲಗಾರರು ಅಪೇಕ್ಷಿಸುವ ಭಾಷೆಯಲ್ಲಿಯೇ ವಿವರಣೆ ನೀಡಬೇಕಿದೆ.

ಅನಕ್ಷರಸ್ಥ ಸಾಲಗಾರರಿಗೆ ಸಾಕ್ಷಿಗಳ ಸಮ್ಮುಖದಲ್ಲಿ ಷರತ್ತು ಮತ್ತು ನಿಯಮಗಳ ಬಗ್ಗೆ ವಿವರಿಸಿ ಹೇಳಬೇಕಿದೆ.

ಸುದ್ದಿ 2 ನಿಮಿಷ

ಬಡ್ಡಿದರ ಇಳಿಸಿದ ಪಿಎನ್‌ಬಿ, ಬಿಒಬಿ, ಇಂಡಿಯನ್ ಬ್ಯಾಂಕ್

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಕಡಿತಗೊಳಿಸಿದ ಬೆನ್ನಲ್ಲೇ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಾದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ), ಇಂಡಿಯನ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಬರೋಡಾ (ಬಿಒಬಿ) ಬಡ್ಡಿದರ ಕಡಿತಗೊಳಿಸಿವೆ.

ಇಂಡಿಯನ್ ಬ್ಯಾಂಕ್ ರೆಪೊ ಆಧರಿತ ಸಾಲದ ಮೇಲಿನ ಬಡ್ಡಿದರವನ್ನು ಶೇ 0.35ರಷ್ಟು ಕಡಿತಗೊಳಿಸಿದ್ದು, ಶೇ 8.70ಕ್ಕೆ ನಿಗದಿಪಡಿಸಿದೆ.

ಶುಕ್ರವಾರದಿಂದ ಈ ಪರಿಷ್ಕೃತ ದರ ಜಾರಿಯಾಗಲಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್ ಬಡ್ಡಿದರವನ್ನು ಶೇ 9.10ರಿಂದ ಶೇ 8.85ಕ್ಕೆ ತಗ್ಗಿಸಿದೆ. ಈ ಪರಿಷ್ಕೃತ ದರವು ಗುರುವಾರದಿಂದಲೇ ಜಾರಿಗೆ ಬಂದಿದೆ.

ಬ್ಯಾಂಕ್ ಆಫ್ ಬರೋಡಾ ಶೇ 0.25ರಷ್ಟು ಬಡ್ಡಿದರ ಕಡಿತಗೊಳಿಸಿದೆ. ಆಟೊ, ವೈಯಕ್ತಿಕ ಸಾಲದ ಒಂದು ವರ್ಷದ ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧರಿತ ಸಾಲದ (ಎಂಸಿಎಲ್‌ಆರ್) ಮೇಲಿನ ಬಡ್ಡಿ ದರವು ಯಥಾಸ್ಥಿತಿಯಲ್ಲಿದ್ದು, ಶೇ 9ರಷ್ಟಿದೆ.

ಈಗಾಗಲೇ ಬ್ಯಾಂಕ್ ಆಫ್ ಇಂಡಿಯಾ ಮತ್ತು ಯುಕೊ ಬ್ಯಾಂಕ್ ಬಡ್ಡಿದರ ಕಡಿತ ಮಾಡಿವೆ. ಆರ್‌ಬಿಐ ರೆಪೊ ದರವನ್ನು ಶೇ 6.25ರಿಂದ ಶೇ 6ಕ್ಕೆ ತಗ್ಗಿಸಿದೆ.

ಟಿಸಿಎಸ್ ನಿವ್ವಳ ಲಾಭ ಇಳಿಕೆ

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಐ.ಟಿ ಸೇವಾ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ನಿವ್ವಳ ಲಾಭದಲ್ಲಿ ಶೇ 1.68ರಷ್ಟು ಇಳಿಕೆಯಾಗಿದೆ.

ಕಂಪನಿಯು ಒಟ್ಟು ₹12,224 ಕೋಟಿ ಲಾಭ ಗಳಿಸಿದೆ.

ಹಣದುಬ್ಬರ ಏರಿಕೆ ಮತ್ತು ಜಾಗತಿಕ ಅನಿಶ್ಚಿತ ಸ್ಥಿತಿಯಿಂದಾಗಿ ಬೇಡಿಕೆ ಮಂದಗತಿಯಲ್ಲಿದೆ. ಇದರಿಂದ ಲಾಭದ ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಒಟ್ಟು ವರಮಾನ ₹64,479 ಕೋಟಿ ಆಗಿದೆ, 2023–24ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 5.3ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಪ್ರತಿ ಈಕ್ವಿಟಿ ಷೇರಿಗೆ ₹30 ಲಾಭಾಂಶ (ಡಿವಿಡೆಂಡ್) ನೀಡಲು ಟಿಸಿಎಸ್ ಆಡಳಿತ ಮಂಡಳಿಯು ಶಿಫಾರಸು ಮಾಡಿದೆ.

ಬಿಒಬಿ: ಹೊಸ ಠೇವಣಿ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬಿಒಬಿ), 444 ದಿನಗಳಿಗೆ ಶೇ 7.15ರಷ್ಟು ಬಡ್ಡಿದರ ಒದಗಿಸುವ ‘ಬಾಬ್ ಸ್ಕ್ವೇರ್ ಡ್ರೈವ್ ಡೆಪಾಸಿಟ್ ಸ್ಕೀಂ’ ಅನ್ನು ಪರಿಚಯಿಸಿದೆ.

ಇದು ಹೊಸ ಚಿಲ್ಲರೆ ಠೇವಣಿ ಯೋಜನೆಯಾಗಿದೆ. ಇದರಡಿ ನಾಗರಿಕರಿಗೆ ವಾರ್ಷಿಕ ಶೇ 7.15, ಹಿರಿಯ ನಾಗರಿಕರಿಗೆ ಶೇ 7.65, 80 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಶೇ 7.75ರಷ್ಟು ಬಡ್ಡಿದರ ನಿಗದಿಪಡಿಸಿದೆ. ನಿಶ್ಚಿತ ಠೇವಣಿಗೆ ಶೇ 7.80ರಷ್ಟು ಬಡ್ಡಿದರ ನೀಡಲಾಗುವುದು ಎಂದು ಬ್ಯಾಂಕ್ ತಿಳಿಸಿದೆ.

ಈ ಯೋಜನೆಯು ಠೇವಣಿದಾರರಿಗೆ ಉತ್ತಮ ಬಡ್ಡಿ ಸೌಲಭ್ಯ ಒದಗಿಸುತ್ತದೆ. ಜೊತೆಗೆ ಸ್ಥಿರ ಮತ್ತು ಉತ್ತಮ ಆದಾಯ ಗಳಿಸಲು ನೆರವಾಗಲಿದೆ. ಆಸಕ್ತ ಗ್ರಾಹಕರು ಬ್ಯಾಂಕ್‌ನ ಡಿಜಿಟಲ್ ವ್ಯವಸ್ಥೆಗಳಾದ ಬಾಬ್ ವರ್ಲ್ಡ್ ಆಪ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಅಥವಾ ಬ್ಯಾಂಕ್ ಆಫ್ ಬರೋಡಾದ ಯಾವುದೇ ಶಾಖೆಯಲ್ಲಿ ನಿಶ್ಚಿತ ಠೇವಣಿ ತೆರೆಯಬಹುದು ಎಂದು ತಿಳಿಸಿದೆ.

ಹೊಸ ಗ್ರಾಹಕರು ಉಳಿತಾಯ ಖಾತೆ ತೆರೆಯದೆ ಬ್ಯಾಂಕ್ ಆಫ್ ಬರೋಡಾ ವೆಬ್‌ಸೈಟ್‌ನಲ್ಲಿ ವಿಡಿಯೊ ಕೆವೈಸಿ ಮೂಲಕ ನಿಶ್ಚಿತ ಠೇವಣಿಯಲ್ಲಿ ಹಣ ಹೂಡಿಕೆ ಮಾಡಬಹುದಾಗಿದೆ ಎಂದು ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕಿ ಬೀನಾ ವಹೀದ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಣ ಸುರಕ್ಷಿತ: ಭಯ ಬೇಡ– ಎಸ್‌ಬಿಐ

ಬೆಂಗಳೂರು: ಬ್ಯಾಂಕ್‌ನ ಖಾತೆಯಲ್ಲಿರುವ ಗ್ರಾಹಕರ ಹಣ ಸದಾ ಸುರಕ್ಷಿತವಾಗಿರುತ್ತದೆ. ಹಾಗಾಗಿ, ಅನಗತ್ಯವಾಗಿ ಆತಂಕಪಡುವ ಅಗತ್ಯವಿಲ್ಲ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸ್ಪಷ್ಟನೆ ನೀಡಿದೆ.

ಕೆಲವು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬ್ಯಾಂಕ್ ಬಗ್ಗೆ ವ್ಯತಿರಿಕ್ತವಾಗಿ ಸುದ್ದಿಗಳು ಪ್ರಸಾರವಾಗುತ್ತಿವೆ. ಗ್ರಾಹಕರು ಇದಕ್ಕೆ ಕಿವಿಗೊಡಬಾರದು ಎಂದು ಕೋರಿದೆ.

ಗ್ರಾಹಕರ ಒಪ್ಪಿಗೆಯಿಲ್ಲದೆ ಅಥವಾ ಸರ್ಕಾರಿ ಅಧಿಕಾರಿಗಳು, ನ್ಯಾಯಾಲಯಗಳು, ತೆರಿಗೆ ಪ್ರಾಧಿಕಾರಗಳಿಂದ ನಿರ್ದಿಷ್ಟ ಸೂಚನೆ ಇಲ್ಲದೆ ಗ್ರಾಹಕರ ಖಾತೆಯಿಂದ ಹಣ ತಡೆಹಿಡಿಯುವುದಿಲ್ಲ ಅಥವಾ ವರ್ಗಾಯಿಸುವುದಿಲ್ಲ. ಬ್ಯಾಂಕ್ ತನ್ನ ಗ್ರಾಹಕರ ಹಿತಾಸಕ್ತಿ ರಕ್ಷಣೆಗೆ ಬದ್ಧವಾಗಿದೆ ಎಂದು ಬ್ಯಾಂಕ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ್ಯಾಪಾರೋದ್ಯಮ ಮತ್ತು ಸಂಪರ್ಕ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿ ಸುಂಕ ಜಾರಿ ಮುನ್ನವೇ ಅಮೆರಿಕಕ್ಕೆ ಐಫೋನ್ ರವಾನೆ

ನವದೆಹಲಿ (ರಾಯಿಟರ್ಸ್): ಪ್ರತಿ ಸುಂಕ ಜಾರಿಗೂ ಮೊದಲೇ ಆ್ಯಪಲ್ ಕಂಪನಿಯು ಭಾರತದಿಂದ ಸರಕು ಸಾಗಣೆ ವಿಮಾನಗಳಲ್ಲಿ 600 ಟನ್ (15 ಲಕ್ಷ) ಐಫೋನ್‌ಗಳನ್ನು ಅಮೆರಿಕಕ್ಕೆ ಸಾಗಿಸಿದೆ ಎಂದು ಮೂಲಗಳು ತಿಳಿಸಿವೆ.

ಭಾರತದ ಮೇಲೆ ಟ್ರಂಪ್ ಶೇ 26ರಷ್ಟು ಪ್ರತಿ ಸುಂಕ ಹೇರಿದ್ದಾರೆ. ಏಪ್ರಿಲ್ 9ರಂದು ಅಧಿಕೃತವಾಗಿ ಈ ನೀತಿ ಜಾರಿಗೊಳಿಸುವುದಾಗಿ ಟ್ರಂಪ್ ಘೋಷಿಸಿದ್ದರು. ಇದಕ್ಕೂ ಮುನ್ನವೇ ಐಫೋನ್‌ಗಳನ್ನು ಸಾಗಿಸಿದೆ ಎಂದು ಹೇಳಿವೆ.

ಐಫೋನ್‌ಗಳ ಸಾಗಣೆಗೆ 6 ವಿಮಾನಗಳನ್ನು ಬಳಸಿಕೊಂಡಿದೆ. ಪ್ರತಿ ವಿಮಾನವು 100 ಟನ್‌ನಷ್ಟು ಫೋನ್‌ಗಳನ್ನು ಸಾಗಿಸಿದೆ ಎಂದು ಹೇಳಿವೆ.

ಅಮೆರಿಕವು ಐಫೋನ್‌ಗಳಿಗೆ ದೊಡ್ಡ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಹೀಗಾಗಿ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿ ಸುಂಕದ ಹೊರೆಯಿಂದ ತಪ್ಪಿಸಿಕೊಳ್ಳಲು ಮಾರ್ಚ್ ತಿಂಗಳಲ್ಲಿಯೇ ಚೆನ್ನೈ ವಿಮಾನ ನಿಲ್ದಾಣದಿಂದ ಐಫೋನ್‌ಗಳನ್ನು ಸಾಗಿಸಿದೆ. ಕೇಂದ್ರವು ಇದಕ್ಕೆ ಪೂರಕವಾಗಿ ಕಸ್ಟಮ್ಸ್ ಪ್ರಕ್ರಿಯೆಯನ್ನು ತ್ವರಿತವಾಗಿ ಬಗೆಹರಿಸಿದೆ ಎಂದು ತಿಳಿಸಿವೆ.

ದಕ್ಷಿಣ ಕಾಶ್ಮೀರದಲ್ಲಿ ‘ಸಂಚಾರಿ ಹೃದಯ ಕ್ಲಿನಿಕ್’ ಆರಂಭ

ಶ್ರೀನಗರ (ಪಿಟಿಐ): ದೇಶದ ಖ್ಯಾತ ಹೃದ್ರೋಗ ತಜ್ಞ ಉಪೇಂದ್ರ ಕೌಲ್ ಅವರು ದಕ್ಷಿಣ ಕಾಶ್ಮೀರದ ಪುಲ್ವಾಮಾ, ಶೋಪಿಯಾನ್ ಮತ್ತು ಕುಲ್ಗಾಮ್ ಜಿಲ್ಲೆಗಳಲ್ಲಿ ಸರಿಯಾದ ರಸ್ತೆ ಸಂಪರ್ಕಗಳಿಲ್ಲದ ಪ್ರದೇಶಗಳಲ್ಲಿ ಜನರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ‘ಹಾರ್ಟ್ ಕ್ಲಿನಿಕ್ ಆನ್ ವ್ಹೀಲ್ಸ್’ ಎಂಬ ಯೋಜನೆಯನ್ನು ಗುರುವಾರ ಆರಂಭಿಸಿದರು.

5ರಿಂದ 15 ವರ್ಷದೊಳಗಿನ ಮಕ್ಕಳಲ್ಲಿ ಸ್ಥೂಲಕಾಯದ ಜತೆಗೆ ಸಂಧಿವಾತ ಮತ್ತು ಜನ್ಮಜಾತ ಹೃದಯ ಕಾಯಿಲೆಗಳನ್ನು ಪತ್ತೆಹಚ್ಚಲು ಶಾಲಾ ಸಮೀಕ್ಷೆಗಳಿಗೆ ಈ ಸಂಚಾರಿ ಕ್ಲಿನಿಕ್ ಬಳಸಲಾಗುವುದು ಎಂದು ಕೌಲ್ ಹೇಳಿದರು.

ಉಕ್ಕು ಕಾರ್ಖಾನೆಗೆ ಅನುಮತಿ: ಬಲ್ಡೋಟಾ

ಒಂದನೇ ಪುಟದಿಂದ...

ಉದ್ದೇಶಿತ ಈ ಯೋಜನೆಯಡಿ 296 ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಕಾರ್ಖಾನೆ ವಿಸ್ತರಿಸುವ ಗುರಿಯನ್ನೂ ಹೊಂದಲಾಗಿದೆ ಎಂದು ಹೇಳಿದ್ದಾರೆ.

ಕಾರ್ಖಾನೆ ಸ್ಥಾಪನೆಯಿಂದ ಪರಿಸರದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಹಾಗಾಗಿ, ಸ್ಥಾಪನೆಗೆ ಅನುಮತಿ ನೀಡಬಾರದು ಎಂದು ಕೆಲವು ಸ್ಥಳೀಯ ಸಂಘ–ಸಂಸ್ಥೆಗಳು ವಿರೋಧ ವ್ಯಕ್ತಪಡಿಸಿವೆ ಎಂದು ತಿಳಿಸಿದ್ದಾರೆ.

ಹಾಗಾಗಿಯೇ, ಯೋಜನೆಯ ಜಾರಿಯಿಂದ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ಮೌಲ್ಯಮಾಪನ ನಡೆಸಲಾಗಿದೆ. ಯೋಜನೆಯ ವಿನ್ಯಾಸ, ಸುಸ್ಥಿರತೆ, ಪರಿಸರ ಮಾಲಿನ್ಯ ಮತ್ತು ತ್ಯಾಜ್ಯ ನಿರ್ವಹಣೆ ಬಗ್ಗೆ ಕಂಪನಿಯಿಂದ ಕೈಗೊಳ್ಳಲಿರುವ ಸುರಕ್ಷತಾ ಕ್ರಮಗಳ ಬಗ್ಗೆ ಮೌಲ್ಯಮಾಪನ ನಡೆಸಲಾಗಿದೆ ಎಂದು ಹೇಳಿದ್ದಾರೆ.

ಸ್ಲೊವಾಕಿಯಾ ವಿದ್ಯಾರ್ಥಿಗಳು ಪಂಚತಂತ್ರ ಹಾಗೂ ಜಾತಕ ಕತೆಗಳನ್ನು ಆಧರಿಸಿ ರಚಿಸಿದ್ದ ಕಲಾಕೃತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗಹನವಾಗಿ ನೋಡಿದರು —ಪಿಟಿಐ ಚಿತ್ರ

ಸ್ಲೊವಾಕಿಯಾ: ರಾಮಾಯಣ ಬೊಂಬೆಯಾಟ ವೀಕ್ಷಿಸಿದ ಮುರ್ಮು

ಬ್ರಾಟಿಸ್ಲಾವಾ (ಪಿಟಿಐ): ಸ್ಲೊವಾಕಿಯಾ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಸ್ಲೊವಾಕ್ ಭಾಷೆಯಲ್ಲಿ ಪ್ರದರ್ಶನ ಕಂಡ ರಾಮಾಯಣ ಬೊಂಬೆಯಾಟವನ್ನು ಗುರುವಾರ ಕಣ್ತುಂಬಿಕೊಂಡರು.

45 ನಿಮಿಷದ ಈ ಬೊಂಬೆಯಾಟವನ್ನು ಸ್ಲೊವಾಕಿಯಾದ ಕೃಷ್ಣ ಭಕ್ತೆ ಲೆಂಕಾ ಮುಕೋವಾ ಅವರು ರಚಿಸಿದ್ದರು. ಮುರ್ಮು ಅವರೊಂದಿಗೆ 150 ವಿದ್ಯಾರ್ಥಿಗಳು ಈ ಅಪರೂಪದ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಪ್ರದರ್ಶನದಲ್ಲಿ, ರಾವಣ ಸೀತೆಯನ್ನು ಅಪಹರಣ ಮಾಡುವಾಗ ಹಾಗೂ ಹನುಮಂತನು ಲಂಕೆಗೆ ತೆರಳಿದ್ದಾಗ ಆತನನ್ನು ಸೆರೆಹಿಡಿಯಲು ರಾವಣನು ಇಡೀ ಲಂಕೆಗೆ ಬೆಂಕಿ ಹಚ್ಚಿದ ದೃಶ್ಯಗಳನ್ನು ನೋಡಿ ವಿದ್ಯಾರ್ಥಿಗಳು ಭಾವುಕರಾಗಿದ್ದು ಕಂಡುಬಂತು.

ಸ್ಲೊವಾಕಿಯಾ ವಿದ್ಯಾರ್ಥಿಗಳು ಪಂಚತಂತ್ರ ಹಾಗೂ ಜಾತಕ ಕತೆಗಳನ್ನು ಆಧರಿಸಿ ರಚಿಸಿದ್ದ ಕಲಾಕೃತಿಗಳನ್ನು ನೋಡಿ ಮುರ್ಮು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Domestic Helpers / Housekeeping

ಜಾಬ್! ಜಾಬ್!! ಜಾಬ್!!! ಹೌಸ್ ಕೀಪಿಂಗ್ ಸಿಬ್ಬಂದಿ ಮತ್ತು ಸೂಪರ್‌ವೈಸರ್‌ಗಳು ಬೆಂಗಳೂರಿನ ಕಲ್ಯಾಣನಗರ ದಲ್ಲಿರುವ ಪ್ರಸಿದ್ಧ ಆಸ್ಪತ್ರೆಗೆ ತುರ್ತಾಗಿ ಬೇಕಾಗಿದ್ದಾರೆ. ಸಂಬಳ : ಸಿಬ್ಬಂದಿಗೆ ರೂ.19300/-, ಸೂಪರ್‌ವೈಸರ್ಗೆ ರೂ. 23000/- ವಯಸ್ಸು : 18 ವರ್ಷದಿಂದ 39 ವರ್ಷಗಳವರೆಗೆ 9945779607, 9112959375, 9108946691

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 14,000 - 18,000. ಸಂಪರ್ಕಿಸಿ: 8951315839, 7022770052.

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ,TVS, ಟಾಟಾಮೋಟಾರ್ಸ್, ಬ್ರಿಟಾನಿಯಾಗಳಿಗೆ SSLC, PUC, Degree, ITIನವರು. 18,000/- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್`ಸೌಲಭ್ಯವಿದೆ. 6366625808, 6366627808.

Wanted

ಬೇಕಾಗಿದ್ದಾರೆ: ಮಂಗಳೂರಿನಲ್ಲಿ ಕಂಪನಿ ಕೆಲಸಕ್ಕೆ SSLC ಮೇಲ್ಪಟ್ಟ ಯುವಕ ಯುವತಿಯರು: ವೇತನ 15000—20000 ಊಟ ವಸತಿ ಉಚಿತ. 9738892878

ಪ್ರವಾಸ

Travel

22.4.2025 ಜಾರ್ಖಂಡ್ ವೈದ್ಯನಾಥ ಕಾಶಿ ಎರಡು ಜ್ಯೋತಿರ್ಲಿಂಗ ದರ್ಶನ ಗಯ ಪ್ರಯಾಗ್ ರಾಜ್ ಅಯೋಧ್ಯೆ: 4.5.25 ಶ್ರೀಶೈಲ ಮಂತ್ರಾಲಯ ಹೈದರಾಬಾದ್: 30.5.25: ತಮಿಳುನಾಡು ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

14 ದಿನಗಳ ಚಾರ್ಧಾಮ್`ಯಾತ್ರ 29.5.2025. 8 ದಿನಗಳ ಅಮರನಾಥ್`ಯಾತ್ರ 2.7.2025. ಶ್ರೀಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್. ಸಂಪರ್ಕಿಸಿ: 9611801143, 9742810701.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

90 ದಿನಗಳ ಮಟ್ಟಿಗೆ ಪ್ರತಿ ಸುಂಕ ತಡೆಹಿಡಿದ ಐರೋಪ್ಯ ಒಕ್ಕೂಟ

ಅಮೆರಿಕ– ಚೀನಾ ವ್ಯಾಪಾರ ಸಮರಕ್ಕಿಲ್ಲ ತಡೆ

ಬ್ರಸೆಲ್ಸ್, (ಬೆಲ್ಜಿಯಂ) (ಎಎಫ್‌ಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವ್ಯಾಪಾರ ಪಾಲುದಾರ ದೇಶಗಳು ಮತ್ತು ಇತರ ದೇಶಗಳ ಮೇಲೆ ವಿಧಿಸಿದ ಹೆಚ್ಚಿನ ಸುಂಕಗಳ ಜಾರಿಯನ್ನು ದಿಢೀರನೇ 90 ದಿನಗಳ ಅವಧಿಗೆ ಸ್ಥಗಿತಗೊಳಿಸಿದ ನಂತರ ಐರೋಪ್ಯ ಒಕ್ಕೂಟ (ಇಯು) ಕೂಡ ಗುರುವಾರ ಅಮೆರಿಕದ ಸರಕುಗಳ ಮೇಲೆ ಹೇರಿದ್ದ ಪ್ರತಿ ಸುಂಕದ ಯೋಜನೆಗಳನ್ನು ತಡೆಹಿಡಿಯಿತು.

ಅಮೆರಿಕದ ಸರಕುಗಳಿಗೆ ಚೀನಾ ವಿಧಿಸಿದ ಶೇ 84 ಸುಂಕ ಗುರುವಾರದಿಂದಲೇ ಜಾರಿಗೆ ಬಂದಿದ್ದು, ಚೀನಾದ ಸರಕುಗಳಿಗೆ ಹೆಚ್ಚಿಸಿರುವ ಶೇ 125 ಪ್ರತಿಸುಂಕ ಅಮೆರಿಕದಲ್ಲೂ ಇದೇ ವೇಳೆ ಜಾರಿಗೆ ಬಂದಿದೆ. ಇದು ಜಗತ್ತಿನ ಎರಡು ಅತಿ ದೊಡ್ಡ ಆರ್ಥಿಕತೆಗಳ ನಡುವಿನ ವ್ಯಾಪಾರ ಸಮರ ಮುಂದುವರಿಯುವಂತೆ ಮಾಡಿದೆ.

‘ಅಮೆರಿಕದ ಸುಂಕ ನೀತಿಯು ವಿಶ್ವದ ಹಿತಾಸಕ್ತಿಗೆ ವಿರುದ್ಧವಾಗಿದೆ ಮತ್ತು ಇಡೀ ಜಗತ್ತಿಗೆ ಮಾರಕವಾಗಿದೆ’ ಎಂದು ಚೀನಾ ಹೇಳಿದೆ. ಹಾಲಿವುಡ್ ಅನ್ನು ತನ್ನ ಪ್ರತಿ ಸುಂಕದ ಗುರಿ ಪಟ್ಟಿಗೆ ಸೇರಿಸಿರುವ ಚೀನಾ, ಅಮೆರಿಕದಿಂದ ಆಮದು ಮಾಡಿಕೊಳ್ಳುವ ಚಲನಚಿತ್ರಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡುವುದಾಗಿ ಘೋಷಿಸಿದೆ.

ಈ ಸುಂಕ ಸಮರದ ವಿಚಾರದಲ್ಲಿ ಮಾತುಕತೆಗೆ ಬಾಗಿಲು ತೆರೆದಿದೆ ಎಂದು ಚೀನಾದ ವಾಣಿಜ್ಯ ಸಚಿವಾಲಯವು ಹೇಳಿದೆ.

‘ಪರಸ್ಪರ ಗೌರವ, ಶಾಂತಿಯುತ ಸಹಬಾಳ್ವೆ ಮತ್ತು ಪರಸ್ಪರರಿಗೆ ಲಾಭ ತರುವ ಸಹಕಾರದ ತತ್ವಗಳ ಆಧಾರದ ಮೇಲೆ ಅಮೆರಿಕವು ಚೀನಾ ಜತೆ ಮಾತುಕತೆ ಮತ್ತು ಸಮಾಲೋಚನೆ ನಡೆಸಿ, ಭಿನ್ನಾಭಿಪ್ರಾಯಗಳನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಲಿದೆ ಎಂಬುದಾಗಿ ನಾವು ಭಾವಿಸಿದ್ದೇವೆ’ ಎಂದು ವಾಣಿಜ್ಯ ಸಚಿವಾಲಯದ ವಕ್ತಾರರಾದ ಹಿ ಯೊಂಗಿಯಾನ್ ಹೇಳಿದ್ದಾರೆ.

ಟ್ರಂಪ್ ಸುಂಕ ಹಿಂತೆಗೆದುಕೊಳ್ಳುವಿಕೆ ನಿರ್ಧಾರ ಸ್ವಾಗತಾರ್ಹ. ಇದೇ 28ರಂದು ಒಟ್ಟಾವಾ ಹೊಸ ಆರ್ಥಿಕ ಒಪ್ಪಂದದ ಬಗ್ಗೆ ವಾಷಿಂಗ್ಟನ್ ಜತೆಗೆ ಮಾತುಕತೆ ಪ್ರಾರಂಭಿಸಲಿದೆ

ಮಾರ್ಕ್ ಕಾರ್ನೆ, ಕೆನಡಾ ಪ್ರಧಾನಿ

ಅಮೆರಿಕದ ಸರಕುಗಳ ಮೇಲಿನ ಪ್ರತಿ ಸುಂಕ ಹಿಂಪಡೆಯಲು ನಿರಾಕರಿಸಿರುವ ಚೀನಾ ಸೇರಿ ಎಲ್ಲ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳು ಏರ್ಪಡಲಿವೆ ಎಂದು ಶ್ವೇತಭವನದಲ್ಲಿ ಭವಿಷ್ಯ ನುಡಿದಿರುವ ಟ್ರಂಪ್, ‘ಒಪ್ಪಂದ ಮಾಡಿಕೊಳ್ಳುವ ವಿಚಾರದಲ್ಲಿ ಯಾವ ಮಾರ್ಗದಲ್ಲಿ ಹೋಗಬೇಕೆಂಬುದು ಚೀನಾದ ನಾಯಕರಿಗೆ ತಿಳಿದಿಲ್ಲ. ಚೀನಾ ಅತಿಯಾದ ಉತ್ಪಾದನೆ ಮಾಡಿ, ತನ್ನ ಸರಕುಗಳನ್ನು ಇತರ ದೇಶಗಳಿಗೆ ತಂದು ಸುರಿಯುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಇದು ಅಮೆರಿಕದ ಇತಿಹಾಸದಲ್ಲೇ ಅತ್ಯಂತ ದೊಡ್ಡ ವ್ಯಾಪಾರ ಸಂಧಾನದ ದಿನವಾಗಲಿದೆ. ಪಾಲುದಾರರೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳಲು ನಾವು ಮುಂದಿನ 90 ದಿನಗಳವರೆಗೆ ಮುಕ್ತವಾಗಿ ಇರಲಿದ್ದೇವೆ. ಈಗಾಗಲೇ 75ಕ್ಕೂ ಹೆಚ್ಚು ದೇಶಗಳ ನಾಯಕರು ವಾಷಿಂಗ್ಟನ್ ಜತೆಗೆ ಮಾತುಕತೆ ನಡೆಸಲು ಪ್ರಯತ್ನಿಸಿದ್ದಾರೆ’ ಎಂದು ಟ್ರಂಪ್ ಅವರ ಹಿರಿಯ ವ್ಯಾಪಾರ ಸಲಹೆಗಾರ ಪೀಟರ್ ನವಾರೋ ಅವರು ‘ಎಬಿಸಿ ನ್ಯೂಸ್’ಗೆ ತಿಳಿಸಿದ್ದಾರೆ.

‘ಹೊಂದಾಣಿಕೆಗೆ ಮುಕ್ತ’

ಅಮೆರಿಕದ ಉತ್ಪನ್ನಗಳ ಮೇಲೆ ವಿಧಿಸಲು ಉದ್ದೇಶಿಸಿದ್ದ ಹೆಚ್ಚುವರಿ ಪ್ರತಿಸುಂಕವನ್ನು 90 ದಿನ ತಡೆಹಿಡಿಯಲು 27 ರಾಷ್ಟ್ರಗಳ ಸದಸ್ಯತ್ವವುಳ್ಳ ಐರೋಪ್ಯ ಒಕ್ಕೂಟದ (ಇ.ಯು) ಕಾರ್ಯಕಾರಿ ಆಯೋಗವು ತೀರ್ಮಾನಿಸಿದೆ.

ವಿವಿಧ ದೇಶಗಳ ಆಮದು ಉತ್ಪನ್ನಗಳಿಗೆ ಅಧಿಕ ಸುಂಕ ವಿಧಿಸುವ ಆದೇಶವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 90 ದಿನ ಮುಂದೂಡಿದ ನೀಡಿದ ಹಿಂದೆಯೇ ಈ ತೀರ್ಮಾನ ಕೈಗೊಂಡಿದೆ.

‘ಸುಂಕ ಕುರಿತ ಹೊಂದಾಣಿಕೆ ಮಾತುಕತೆಯನ್ನು ಮುಕ್ತವಾಗಿರಿಸುವ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಇ.ಯು ಮುಖ್ಯಸ್ಥೆ ಉರ್ಸುಲಾ ವೊನ್ ಡೆರ್ ಲೆಯೆನ್ ತಿಳಿಸಿದ್ದಾರೆ. ‘ಅಮೆರಿಕ ಜೊತೆಗಿನ ರಾಜಿ ಮಾತುಕತೆ ಫಲಪ್ರದವಾಗಿ ಇರದಿದ್ದಲ್ಲಿ, ಇ.ಯುವಿನ ಉದ್ದೇಶಿತ ಪ್ರತಿಕ್ರಿಯಾತ್ಮಕ ಕ್ರಮಗಳು ಜಾರಿಗೆ ಬರಲಿವೆ’ ಎಂದೂ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದ್ವಿಪಕ್ಷೀಯ ಮಾತುಕತೆಗೆ ತೆರೆದ ಬಾಗಿಲು

ನವದೆಹಲಿ (ಪಿಟಿಐ): ಟ್ರಂಪ್ ಆಡಳಿತವು ಪ್ರತಿ ಸುಂಕ ಜಾರಿಗೆ ನೀಡಿರುವ ವಿರಾಮವು, ಅಮೆರಿಕದ ಜೊತೆಗೆ ಭಾರತವು ದ್ವಿಪಕ್ಷೀಯ ವ್ಯಾಪಾರ ಕುರಿತು ಮಾತುಕತೆ ನಡೆಸಲು ಅವಕಾಶದ ಬಾಗಿಲನ್ನು ತೆರೆದಿಟ್ಟಿದೆ ಎಂದು ತಜ್ಞರು ಹೇಳಿದ್ದಾರೆ.

ಈಗಾಗಲೇ ಕೇಂದ್ರ ಸರ್ಕಾರವು ಅಮೆರಿಕದೊಟ್ಟಿಗೆ ದ್ವಿಪಕ್ಷೀಯ ವ್ಯಾಪಾರಕ್ಕೆ ಹೆಜ್ಜೆ ಇಟ್ಟಿದೆ. ರಾಜತಾಂತ್ರಿಕ ಮಾತುಕತೆ ಹಾಗೂ ತ್ವರಿತಗತಿಯಲ್ಲಿ ನಡೆಯುವ ಸಂಧಾನ ಪ್ರಕ್ರಿಯೆಗಳು ಭಾರತಕ್ಕೆ ವರದಾನವಾಗಲಿವೆ ಎಂದು ಹೇಳಿದ್ದಾರೆ.

‘ಟ್ರಂಪ್ ಆಡಳಿತದ ನಿರ್ಧಾರವು ಉತ್ತಮವಾಗಿದೆ. ಈ ನಿಟ್ಟಿನಲ್ಲಿ ವಾಣಿಜ್ಯ ಸಚಿವಾಲಯವು ಉಭಯ ದೇಶಗಳ ನಡುವಿನ ವ್ಯಾಪಾರಕ್ಕೆ ಸಂಬಂಧಿಸಿದಂತೆ ತ್ವರಿತವಾಗಿ ಒಪ್ಪಂದಕ್ಕೆ ಸಹಿ ಹಾಕಬೇಕಿದೆ’ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎಸ್.ಸಿ. ರಾಲ್ಹಾನ್ ಹೇಳಿದ್ದಾರೆ.

ಶ್ವೇತಭವನ ನೀಡಿರುವ ಅವಕಾಶವು ರಫ್ತುದಾರರಿಗೆ ದೊಡ್ಡ ಪರಿಹಾರ ನೀಡಿದೆ. ಇದನ್ನು ಬಳಸಿಕೊಂಡರೆ ಪ್ರತಿ ಸುಂಕದಿಂದ ಭಾರತದ ಮೇಲಾಗುವ ಪರಿಣಾಮಗಳನ್ನು ತಗ್ಗಿಸಲು ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

‘ಚೀನಾದ ಮೇಲೆ ಅಮೆರಿಕ ವಿಧಿಸಿರುವ ಅತಿಹೆಚ್ಚು ಸುಂಕದ ಪ್ರಯೋಜನ ಪಡೆಯಲು ದೇಶದ ಕೈಗಾರಿಕಾ ವಲಯವು ಮುಂದಾಗಬೇಕಿದೆ. ಇದು ದೇಶೀಯ ತಯಾರಿಕಾ ವಲಯದ ಬಲವರ್ಧನೆಗೆ ನೆರವಾಗಲಿದೆ’ ಎಂದು ಮುಂಬೈನ ರಫ್ತುದಾರ ಎಸ್.ಕೆ. ಸರಾಫ್ ಹೇಳಿದ್ದಾರೆ. ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದವು ಅಕ್ಟೋಬರ್ ಅಥವಾ ನವೆಂಬರ್ ವೇಳೆಗೆ ಅಂತಿಮಗೊಳ್ಳುವ ನಿರೀಕ್ಷೆಯಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277

Tanveer: +91 9886213331 | Anitha: +91 9900428036

‘ಸುಪ್ರೀಂ’ ತೀರ್ಪು: ಶಿಕ್ಷಕರಿಂದ ಉಪವಾಸ ಸತ್ಯಾಗ್ರಹ

ಕೋಲ್ಕತ್ತಾ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಸುಮಾರು 26 ಸಾವಿರ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿ ನೇಮಕವನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದ ಕಾರಣ ಕೆಲಸ ಕಳೆದುಕೊಂಡಿರುವ ಹಲವಾರು ಶಿಕ್ಷಕರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ.

ನಗರದಲ್ಲಿರುವ ಶಾಲಾ ಸೇವೆ ಆಯೋಗ (ಎಸ್‌ಎಸ್‌ಸಿ) ಕಚೇರಿ ‘ಆಚಾರ್ಯ ಸದನ’ದ ಹೊರಗೆ ಬುಧವಾರ ರಾತ್ರಿಯಿಂದ ಪ್ರತಿಭಟನಕಾರರು ಧರಣಿ ನಡೆಸುತ್ತಿದ್ದಾರೆ.

‘ನಾವು ಉಪವಾಸ ಸತ್ಯಾಗ್ರಹ ಮೆರವಣಿಗೆಯನ್ನು ಪ್ರಾರಂಭಿಸಿದ್ದೇವೆ. ನಮ್ಮ ಪ್ರತಿಭಟನೆಯ ಭಾಗವಾಗಿ ಇನ್ನಷ್ಟು ಹೋರಾಟ ನಡೆಸುತ್ತೇವೆ. ಕಸ್ಬಾ ಠಾಣೆ ಹತ್ತಿರದ ಜಿಲ್ಲಾ ಇನ್‌ಸ್ಪೆಕ್ಟರ್ (ಡಿಐ) ಕಚೇರಿ ಬಳಿ ಪ್ರತಿಭಟನೆ ನಡೆಸುತ್ತಿದ್ದ ತಮ್ಮ ಸಹಚರರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ ಹಾಗೂ ನೂಕಿದ್ದಾರೆ. ಪೊಲೀಸರ ಈ ಕ್ರಮದ ವಿರುದ್ಧವೂ ನಾವು ಪ್ರತಿಭಟನೆ ನಡೆಸುತ್ತಿದ್ದೇವೆ’ ಎಂದು ಧರಣಿನಿರತರು ಆರೋಪಿಸಿದರು.

2016ರಲ್ಲಿ ಎಸ್‌ಎಸ್‌ಸಿ ಪರೀಕ್ಷೆಯಲ್ಲಿ ಆಯ್ಕೆಯಾಗಿ 25,753 ಶಿಕ್ಷಕರು, ಬೋಧಕೇತರ ಸಿಬ್ಬಂದಿ ನೇಮಕಗೊಂಡಿದ್ದರು. ಈ ನೇಮಕಾತಿಯನ್ನು ರದ್ದುಗೊಳಿಸಿ ಕಲ್ಕತ್ತ ಹೈಕೋರ್ಟ್ ಆದೇಶಿಸಿತ್ತು. ಸುಪ್ರೀಂ ಕೋರ್ಟ್ ಕೂಡ ಹೈಕೋರ್ಟ್ ಆದೇಶವನ್ನು ಎತ್ತಿಹಿಡಿದು, ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಹೇಳಿತು.

‘31 ಕೆ.ಜಿ ಚಿನ್ನ ಕಳ್ಳಸಾಗಣೆ ಮಾಡಿದ್ದ ರನ್ಯಾ–ತರುಣ್’

ಒಂದನೇ ಪುಟದಿಂದ...

‘ಇಬ್ಬರು ಆರೋಪಿಗಳು ಬೆಂಗಳೂರಿನಿಂದ ದುಬೈಗೆ, ದುಬೈನಿಂದ ಬೆಂಗಳೂರಿಗೆ ಹಲವು ಬಾರಿ ಪ್ರಯಾಣ ಮಾಡಿದ್ದಾರೆ. ಒಂದು ವೇಳೆ ಪ್ರಕರಣ ಹೊರ ಬಂದರೆ, ತನಿಖೆಯ ಹಾದಿ ತಪ್ಪಿಸುವುದಕ್ಕಾಗಿಯೇ ಬೇರೆ–ಬೇರೆ ವಿಮಾನಗಳಲ್ಲಿ ಪ್ರಯಾಣಿಸಿದ್ದಾರೆ. ಹಲವು ಬಾರಿ ಇಬ್ಬರು ಪರಸ್ಪರ ಭೇಟಿಯೇ ಮಾಡಿಲ್ಲ’ ಎಂದು ಡಿಆರ್‌ಐ ನ್ಯಾಯಾಲಯಕ್ಕೆ ತಿಳಿಸಿದೆ.

‘ತರುಣ್ ಅಮೆರಿಕದ ಪೌರತ್ವ ಹೊಂದಿದ್ದು, ಅಲ್ಲಿನ ಪಾಸ್‌ಪೋರ್ಟ್‌ಗೆ ಇರುವ ಕೆಲ ವಿನಾಯಿತಿಗಳನ್ನು ಚಿನ್ನಕಳ್ಳಸಾಗಣೆಗೆ ದುರ್ಬಳಕೆ ಮಾಡಿಕೊಂಡಿದ್ದಾರೆ. ಕಳ್ಳಸಾಗಣೆ ಸಂಬಂಧ ತರುಣ್ ಮತ್ತು ರನ್ಯಾ ವ್ಯವಸ್ಥಿತ ಕಾರ್ಯವಿಧಾನವನ್ನು ರೂಪಿಸಿಕೊಂಡಿದ್ದು, ಆ ಬಗ್ಗೆ ಇನ್ನಷ್ಟು ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದಿದೆ.

‘31 ಕೆ.ಜಿ ಚಿನ್ನಕ್ಕೆ ಸಂಬಂಧಿಸಿದಂತೆ ₹12.30 ಕೋಟಿಯನ್ನಷ್ಟೇ ಹವಾಲಾ ಮೂಲಕ ರವಾನೆ ಮಾಡಿದ್ದಾರೆ. ಚಿನ್ನದ ಮಾರುಕಟ್ಟೆ ಬೆಲೆಗೂ, ಹವಾಲಾ ಮೂಲಕ ಕಳುಹಿಸಿದ ಹಣಕ್ಕೂ ಬಹಳ ವ್ಯತ್ಯಾಸವಿದೆ. ಈ ಸಂಬಂಧ ತನಿಖೆ ನಡೆಯುತ್ತಿದೆ. ಕಳ್ಳಸಾಗಣೆ ಚಿನ್ನದ ಬೆಲೆ ಮತ್ತು ತೆರಿಗೆ ವಂಚನೆಯ ಪ್ರಮಾಣದ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಹೇಳಿದೆ.

ಹಸೀನಾ, ಮಗಳ ವಿರುದ್ಧ ಹೊಸ ಅರೆಸ್ಟ್ ವಾರಂಟ್ ಜಾರಿ

ಢಾಕಾ (ಪಿಟಿಐ): ನಿವೇಶನವೊಂದನ್ನು ಅಕ್ರಮವಾಗಿ ಪಡೆದ ಆರೋಪದ ಮೇಲೆ ಬಾಂಗ್ಲಾದೇಶದ ಪದಚ್ಯುತ ಮಾಜಿ ಪ್ರಧಾನಿ ಶೇಖ್ ಹಸೀನಾ ಹಾಗೂ ಅವರ ಮಗಳು ಸೈಮಾ ವಾಜಿದ್ ಪುತುಲ್ ಹಾಗೂ ಇತರೆ 17 ಮಂದಿ ವಿರುದ್ಧ ಇಲ್ಲಿನ ನ್ಯಾಯಾಲಯವು ಗುರುವಾರ ಹೊಸತಾಗಿ ಬಂಧನ ವಾರಂಟ್ ಹೊರಡಿಸಿದೆ.

ಭ್ರಷ್ಟಾಚಾರ ನಿಗ್ರಹ ಆಯೋಗ (ಎಸಿಸಿ) ಸಲ್ಲಿಸಿದ್ದ ದೋಷಾರೋಪ ಪಟ್ಟಿ ಸ್ವೀಕರಿಸಿ ಢಾಕಾದ ಮೆಟ್ರೊಪಾಲಿಟನ್‌ನ ಹಿರಿಯ ವಿಶೇಷ ನ್ಯಾಯಾಧೀಶ ಝಾಕೀರ್ ಹೊಸೈನ್ ಗಾಲಿಬ್ ಈ ಆದೇಶ ಪ್ರಕಟಿಸಿದರು.

‘ಆರೋಪಿಗಳೆಲ್ಲರೂ ನಾಪತ್ತೆ ಆಗಿದ್ದು, ನ್ಯಾಯಾಲಯವು ಬಂಧನ ವಾರಂಟ್ ಹೊರಡಿಸಿದೆ’ ಎಂದು ಎಸಿಸಿ ಪರ ಪ್ರಾಸಿಕ್ಯೂಟರ್ ಮಿರ್ ಅಹಮ್ಮದ್ ಸಲಾಂ ತಿಳಿಸಿದರು.

ಡೆಲ್ಲಿ ಕ್ಯಾಪಿಟಲ್ಸ್‌ಗೆ ಸತತ ನಾಲ್ಕನೇ ಗೆಲುವು • ತವರಿನಲ್ಲಿ ಮತ್ತೆ ಮುಗ್ಗರಿಸಿದ ಪಾಟೀದಾರ್ ಪಡೆ

ರಾಹುಲ್ ಆಟಕ್ಕೆ ಆರ್‌ಸಿಬಿ ನಿರುತ್ತರ

• ನಾಗೇಶ್ ಶೆಣೈ

ಬೆಂಗಳೂರು: ಯಶ್ ದಯಾಳ್ ಅವರ ಫುಲ್‌ಟಾಸ್ ಎಸೆತವನ್ನು ಫೈನ್‌ಲೆಗ್‌ಗೆ ಸಿಕ್ಸರ್ ಎತ್ತಿದ ಕೆ.ಎಲ್.ರಾಹುಲ್ ಚಿನ್ನಸ್ವಾಮಿ ಕ್ರೀಡಾಂಗಣದ ಹೊನಲು ಬೆಳಕಿನಲ್ಲಿ ಮಿಂಚಿದರು. ಅಜೇಯ 93 ರನ್ (53 ಎಸೆತ, 4x7, 6x6) ಬಾರಿಸಿದ ಈ ಕನ್ನಡಿಗ ಬ್ಯಾಟರ್ ಡೆಲ್ಲಿ ಕ್ಯಾಪಿಟಲ್ಸ್ ತಂಡ ಗುರುವಾರ ಐಪಿಎಲ್ ಪಂದ್ಯದಲ್ಲಿ ಸತತ ನಾಲ್ಕನೇ ಗೆಲುವು ದಾಖಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಗೆಲುವಿನ ಹೊಡೆತದ ನಂತರ ಮುಂದಡಿಯಿಟ್ಟು ಬ್ಯಾಟನ್ನು ನೆಲಕ್ಕೆ ಕುಕ್ಕಿದರು. ಇದು ನನ್ನ ನೆಲ ಎಂದು ಬೆರಳಿನಿಂದ ಸಂಜ್ಞೆ ಮಾಡಿದರು. ತವರಿನಲ್ಲಿ ಈ ಬಾರಿ ಮೊದಲ ಗೆಲುವನ್ನು ನಿರೀಕ್ಷಿಸಿ ಬಂದಿದ್ದ ಆರ್‌ಸಿಬಿ ಅಭಿಮಾನಿಗಳ ಸದ್ದಡಗಿಸಿದರು. 164 ರನ್‌ಗಳ ಗುರಿಯನ್ನು ಎದುರಿಸಿದ್ದ ಡೆಲ್ಲಿ ತಂಡ ಇನ್ನೂ 13 ಎಸೆತಗಳಿರುವಂತೆ 4 ವಿಕೆಟ್‌ಗೆ 169 ಬಾರಿಸಿ ಆರು ವಿಕೆಟ್‌ಗಳ ಜಯಪಡೆಯಿತು.

ಒಂದು ಹಂತದಲ್ಲಿ 58 ರನ್ ಗಳಾಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿದ್ದ ಡೆಲ್ಲಿ ಕ್ಯಾಪಿಟಲ್ಸ್ ಸಂಕಷ್ಟದಲ್ಲಿತ್ತು. ಆದರೆ ರಾಹುಲ್ ಅವರಿಗೆ ದಕ್ಷಿಣ ಆಫ್ರಿಕಾದ ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 38) ಉಪಯುಕ್ತ ಬೆಂಬಲ ನೀಡಿದರು. 55 ಎಸೆತಗಳಲ್ಲಿ ಇವರಿಬ್ಬರು ಮುರಿಯದ ಐದನೇ ವಿಕೆಟ್‌ಗೆ ದಾಖಲೆಯ 111 ರನ್ ಸೇರಿಸಿ ಗೆಲುವನ್ನು ತ್ವರಿತಗೊಳಿಸಿದರು.

ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಈ ಹಿಂದಿನ ಪಂದ್ಯದಲ್ಲೂ ರಾಹುಲ್ (77) ಅರ್ಧ ಶತಕ ಬಾರಿಸಿ ಪಂದ್ಯ ಶ್ರೇಷ್ಠರಾಗಿದ್ದರು.

ಕೇವಲ 5 ರನ್ ಗಳಿಸಿದ್ದಾಗ (ತಂಡದ ಮೊತ್ತ 22ಕ್ಕೆ2) ಯಶ್ ದಯಾಳ್ ಬೌಲಿಂಗ್‌ನಲ್ಲಿ ಮಿಡ್ ಆಫ್‌ನಲ್ಲಿದ್ದ ರಜತ್ ಪಾಟೀದಾರ್ ಅವರು ಕೈಬಿಟ್ಟ ಕಷ್ಟದ ಕ್ಯಾಚಿನಿಂದ ಬಚಾವಾಗಿದ್ದ ರಾಹುಲ್ ಆಟ ನಂತರ ಅರಳತೊಡಗಿತು. ಆರಂಭದಲ್ಲಿ ಸ್ವಲ್ಪ ನಿಧಾನವಾದರೂ ನಂತರ ಅವರು ಆಕ್ರಮಣಕಾರಿಯಾದರು. ಹೇಜಲ್‌ವುಡ್ ಮಾಡಿದ 15ನೇ ಓವರಿನಲ್ಲಿ 22 ರನ್ ಸೂರೆ ಮಾಡಿದರು. ಒಂದು ಸಿಕ್ಸರ್, ಮೂರು ಬೌಂಡರಿಗಳು ಇದರಲ್ಲಿ ಒಳಗೊಂಡಿದ್ದವು. ದಯಾಳ್ ಅವರ ನಾಲ್ಕನೇ ಓವರಿನಲ್ಲಿ ಎರಡು ಸಿಕ್ಸರ್, ಒಂದು ಬೌಂಡರಿ ಸಹಿತ 17 ರನ್ ಬಾರಿಸಿದರು.

ಭುವನೇಶ್ವರ ಕುಮಾರ್ (26ಕ್ಕೆ2) ಮತ್ತು ಯಶ್ ದಯಾಳ್ ಅವರು ಆರಂಭದಲ್ಲಿ ದೊರಕಿಸಿಕೊಟ್ಟ ಯಶಸ್ಸು ಪ್ರೇಕ್ಷಕರಲ್ಲಿ ಸಂಚಲನ ಮೂಡಿಸಿತ್ತು. ಆರ್‌ಸಿಬಿಯ ಮಾಜಿ ನಾಯಕ ಫಾಫ್ ಡುಪ್ಲೆಸಿ, ಮೆಕ್‌ಗುರ್ಕ್, ಅಭಿಷೇಕ್ ಪೊರೆಲ್ 30 ರನ್‌ಗಳಾಗುಷ್ಟರಲ್ಲಿ ಪೆವಿಲಿಯನ್‌ಗೆ ಮರಳಿದ್ದರು. ನಂತರ ಸುಯಶ್ ಶರ್ಮಾ (25ಕ್ಕೆ1) ಅವರು ಅಕ್ಷರ್ ಪಟೇಲ್ ವಿಕೆಟ್ ಪಡೆದು ಒತ್ತಡ ಹೇರಿದ್ದರು. 11ನೇ ಓವರ್ ನಂತರ ಮೊತ್ತ 4 ವಿಕೆಟ್‌ಗೆ 67 ರನ್ ಆಗಿದ್ದು ಡೆಲ್ಲಿ ತಂಡಕ್ಕೆ ಪ್ರತಿ ಓವರಿಗೆ 11 ರನ್ ಗಳಿಸುವ ಒತ್ತಡ ಎದುರಾಗಿತ್ತು. ಆದರೆ ರಾಹುಲ್ ಜೊತೆಗೂಡಿದ ಸ್ಟಬ್ಸ್ ಗೆಲುವಿನ ಯಾತ್ರೆ ಆರಂಭಿಸಿದರು.

ಇದಕ್ಕೆ ಮೊದಲು ಮಿಂಚಿನ ಆರಂಭ ಪಡೆದ ರಾಯಲ್ ಚಾಲೆಂಜರ್ಸ್ ತಂಡ ನಂತರ ಪರದಾಡಿ ಅಂತಿಮವಾಗಿ 7 ವಿಕೆಟ್‌ಗೆ 163 ರನ್‌ಗಳ ಸಾಧಾರಣ ಮೊತ್ತ ಗಳಿಸಿತ್ತು.

ಫಿಲ್ ಸಾಲ್ಟ್ (37, 17ಎ, 4x4, 6x3) ಮತ್ತು ವಿರಾಟ್ ಕೊಹ್ಲಿ (22, 14 ಎ) ಜೊತೆಯಾಟ ಮತ್ತು ಕೊನೆಯಲ್ಲಿ ಟಿಮ್ ಡೇವಿಡ್ (37, 20ಎ, 4X2, 6X4) ಅಬ್ಬರ ಬಿಟ್ಟರೆ ಉಳಿದಂತೆ ಡೆಲ್ಲಿ ಕ್ಯಾಪಿಟಲ್ಸ್ ಬೌಲರ್‌ಗಳ ಮೆರೆದಾಟವೇ ಎದ್ದುಕಂಡಿತು.

ಸಾಲ್ಟ್ ಮತ್ತು ಕೊಹ್ಲಿ ತಂಡಕ್ಕೆ ತವರಿನಲ್ಲಿ 'ಕನಸಿನ ಆರಂಭ' ನೀಡಿದ್ದರು. ಅದರಲ್ಲೂ ಸಾಲ್ಟ್ ಆಕ್ರಮಣಕಾರಿಯಾಗಿದ್ದರು. ಮಿಚೆಲ್ ಸ್ಟಾರ್ಕ್ ಬೌಲಿಂಗ್‌ನಲ್ಲಿ ಎರಡು ಸಿಕ್ಸರ್, ಮೂರು ಬೌಂಡರಿ ಸೇರಿ 24 ರನ್ ಬಾರಿಸಿದರು. ಆ ಓವರಿನಲ್ಲಿ ಒಟ್ಟು 30 ರನ್‌ಗಳು ಹರಿದುಬಂದವು. ಗ್ಯಾಲರಿಯಿಂದ ಹರ್ಷೋದ್ಗಾರಗಳ ಭೋರ್ಗರೆತವಾಯಿತು.

ಸಾಲ್ಟ್ ದುರದೃಷ್ಟಕರ ರೀತಿಯಲ್ಲಿ ರನ್‌ಔಟ್ ಆದರು. ಅಕ್ಷರ್ ಮಾಡಿದ ನಾಲ್ಕನೇ ಓವರಿನಲ್ಲಿ ಎಕ್ಸ್‌ಟ್ರಾ ಕವರ್ ಕಡೆ ಚೆಂಡನ್ನು ಆಡಿದ ಸಾಲ್ಟ್ ರನ್ನಿಗೆ ಮುಂದಾದರು. ಕೊಹ್ಲಿ ಮೊದಲು ಸ್ಪಂದಿಸಿದರೂ ನಂತರ ಹಿಂದಡಿಯಿಟ್ಟರು. ಸಾಲ್ಟ್ ಮರಳಿ ಡೈವ್ ಮಾಡಿದರೂ ವಿಪ್ರಜ್ ಅವರಿಂದ ಚೆಂಡನ್ನು ಪಡೆದ ವಿಕೆಟ್ ಕೀಪರ್ ರಾಹುಲ್ ಬೇಲ್ಸ್ ಉರುಳಿಸಿದರು. ಆಗ ಮೊತ್ತ 3.5 ಓವರುಗಳಲ್ಲಿ 61.

ಸಾಲ್ಟ್ ಅವರ ನಿರ್ಗಮನವು ಡೆಲ್ಲಿ ಕ್ಯಾಪಿಟಲ್ಸ್ ಇನಿಂಗ್ಸ್ ಮೇಲೆ ಹಿಡಿತ ಪಡೆಯಲು ನೆರವಾಯಿತು. 64 ರನ್‌ಗಳ ಅಂತರದಲ್ಲಿ ಆರು ವಿಕೆಟ್‌ಗಳು ಬಿದ್ದವು.

ಸ್ಪಿನ್ನರ್‌ಗಳಾದ ವಿಪ್ರಜ್ (18ಕ್ಕೆ2) ಮತ್ತು ಕುಲದೀಪ್ (17ಕ್ಕೆ2) ಅವರ ಎಸೆತಗಳಲ್ಲಿ ವೈವಿಧ್ಯವಿದ್ದು, ಬ್ಯಾಟರ್‌ಗಳು ಪರದಾಡಿದರು. 6 ರಿಂದ 13ರವರೆಗಿನ ಓವರುಗಳಲ್ಲಿ ಕೇವಲ ಒಂದು ಸಿಕ್ಸರ್, ಎರಡು ಬೌಂಡರಿಗಳಷ್ಟೇ ಬಂದವು. ವೇಗಿ ಮುಕೇಶ್ ಕೂಡ ಮೊದಲ ಓವರಿನಲ್ಲೇ ವಿಕೆಟ್ ಮೇಡನ್ ಪಡೆದು ಸ್ಪಿನ್ನರ್‌ಗಳಿಗೆ ಬೆಂಬಲ ನೀಡಿದರು. ದೇವದತ್ತ ಪಡಿಕ್ಕಲ್ ಅವರನ್ನು ಸ್ಲೊ ಆಫ್‌ಕಟ್ಟರ್ ಎಸೆತದಲ್ಲಿ ವಂಚಿಸಿದರು. ನಂತರ ದೊಡ್ಡ ಜೊತೆಯಾಟ ಬರಲಿಲ್ಲ. ಕೊನೆಯಲ್ಲಿ ಟಿಮ್ ಡೇವಿಡ್ ಬಿರುಸಿನ ಆಟವಾಡಿದ್ದರಿಂದ ಮೊತ್ತ 160ರ ಗಡಿ ದಾಟಲು ಸಾಧ್ಯವಾಯಿತು.



ಕೆ.ಎಲ್.ರಾಹುಲ್	
ರನ್	93*
ಎಸೆತ	53
ಬೌಂಡರಿ	7
ಸಿಕ್ಸರ್	6

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ. ಎಲ್ ರಾಹುಲ್ ಗೆಲುವನ್ನು ಸಂಭ್ರಮಿಸಿದ ಪರಿ. ಚಿತ್ರ: ಪ್ರಶಾಂತ್ ಎಚ್‌.ಜಿ.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 7ಕ್ಕೆ163 (20 ಓವರ್‌ಗಳಲ್ಲಿ)

ಸಾಲ್ಟ್ ರನ್‌ಔಟ್ (ವಿಪ್ರಜ್/ರಾಹುಲ್) 37 (17ಎ, 4X4, 6X3)
ಕೊಹ್ಲಿ ಸಿ ಸ್ಟಾರ್ಕ್ ಬಿ ವಿಪ್ರಜ್ 22 (14ಎ, 4X1, 6X2)
ಪಡಿಕ್ಕಲ್ ಸಿ ಅಕ್ಷರ್ ಬಿ ಮುಕೇಶ್ 1 (8ಎ)
ರಜತ್ ಸಿ ರಾಹುಲ್ ಬಿ ಕುಲದೀಪ್ 25 (23ಎ, 4X1, 6X1)
ಲಿವಿಂಗ್‌ಸ್ಟೋನ್ ಸಿ ಆಶುತೋಷ್ ಬಿ ಮೋಹಿತ್ 4 (6ಎ)
ಜಿತೇಶ್ ಸಿ ರಾಹುಲ್ ಬಿ ಕುಲದೀಪ್ 3 (11ಎ)
ಕೃಣಾಲ್ ಸಿ ಆಶುತೋಷ್ ಬಿ ವಿಪ್ರಜ್ 18 (18ಎ, 4X1)
ಟಿಮ್ ಔಟಾಗದೇ 37 (20ಎ, 4X2, 6X4)
ಭುವನೇಶ್ವರ್ ಔಟಾಗದೇ 1 (4ಎ)
ಇತರೆ: 15 (ಲೆಗ್‌ಬೈ 5, ವೈಡ್ 9, ನೋಬಾಲ್ 1)
ವಿಕೆಟ್ ಪತನ: 1–6 (ಫಿಲ್ ಸಾಲ್ಟ್; 3.5), 2–64 (ದೇವದತ್ತ ಪಡಿಕ್ಕಲ್; 5.4), 3–74 (ವಿರಾಟ್ ಕೊಹ್ಲಿ; 6.6), 4–91 (ಲಿಯಾಮ್ ಲಿವಿಂಗ್‌ಸ್ಟೋನ್; 9.3), 5–102 (ಜಿತೇಶ್ ಶರ್ಮಾ; 12.2), 6–117 (ರಜತ್ ಪಾಟೀದಾರ್; 14.5), 7–125 (ಕೃಣಾಲ್ ಪಾಂಡ್ಯ; 17.1)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 3–0–35–0, ಅಕ್ಷರ್ ಪಟೇಲ್ 4–0–52–0, ವಿಪ್ರಜ್ ನಿಗಮ್ 4–0–18–2, ಮುಕೇಶ್ ಕುಮಾರ್ 3–1–26–1, ಕುಲದೀಪ್ ಯಾದವ್ 4–0–17–2, ಮೋಹಿತ್ ಶರ್ಮಾ 2–0–10–1

ಡೆಲ್ಲಿ ಕ್ಯಾಪಿಟಲ್ಸ್ 4ಕ್ಕೆ 169 (17.5 ಓವರ್‌ಗಳಲ್ಲಿ)

ಫಾಫ್ ಸಿ ಪಾಟೀದಾರ್ ಬಿ ದಯಾಳ್ 2 (7ಎ)
ಮೆಕ್‌ಗುರ್ಕ್ ಸಿ ಅಶುತೋಷ್ ಬಿ ಭುವನೇಶ್ವರ್ 7 (6ಎ, 4x1)
ಪೊರೆಲ್ ಸಿ ಅಶುತೋಷ್ ಬಿ ಭುವನೇಶ್ವರ್ 7 (7ಎ, 4x1)
ಕೆ.ಎಲ್. ರಾಹುಲ್ ಔಟಾಗದೇ 93 (53ಎ, 4x7, 6x6)
ಅಕ್ಷರ್ ಸಿ ಡೆವಿಡ್ ಬಿ ಸುಯಶ್ 15 (11ಎ, 4x2)
ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 38 (23ಎ, 4x4, 6x1)
ಇತರೆ: 7 (ವೈಡ್ 7)
ವಿಕೆಟ್ ಪತನ: 1-9 (ಫಾಫ್ ಡುಪ್ಲೆಸಿ, 1.6), 2-10 (ಜೇಕ್ ಫ್ರೇಸರ್ ಮೆಕ್‌ಗುರ್ಕ್, 2.1), 3-30 (ಅಭಿಷೇಕ್ ಪೊರೆಲ್, 4.3), 4-58 (ಅಕ್ಷರ್ ಪಟೇಲ್, 8.4)
ಬೌಲಿಂಗ್: ಭುವನೇಶ್ವರ ಕುಮಾರ್ 4–0–26–2, ಯಶ್ ದಯಾಳ್ 3.5–0–45–1, ಜೋಶ್ ಹೇಜಲ್‌ವುಡ್ 3–0–40–0, ಸುಯಶ್ ಶರ್ಮಾ 4–0–25–1, ಕೃಣಾಲ್ ಪಾಂಡ್ಯ 2–0–19–0, ಲಿಯಾಮ್ ಲಿವಿಂಗ್‌ಸ್ಟೋನ್ 1–0–14–0
ಪಂದ್ಯದ ಆಟಗಾರ: ಕೆ.ಎಲ್. ರಾಹುಲ್

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 6 ವಿಕೆಟ್‌ಗಳ ಜಯ

ಕೊಹ್ಲಿ ಸಾಧನೆ

ಆರ್‌ಸಿಬಿಯ ತಾರಾ ಬ್ಯಾಟರ್ ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಬಾರಿಸಿದ ಸಿಕ್ಸರ್ ಮತ್ತು ಬೌಂಡರಿಗಳ ಸಂಖ್ಯೆ ಸಾವಿರ ದಾಟಿತು. ಅವರು 721 ಬೌಂಡರಿ ಮತ್ತು 280 ಸಿಸಕ್ಸರ್‌ಗಳನ್ನು ಬಾರಿಸಿದ್ದಾರೆ. ಈ ಪಂದ್ಯದಲ್ಲಿ ಅವರು ಒಂದು ಬೌಂಡರಿ, ಎರಡು ಸಿಕ್ಸರ್ ಗಳಿಸಿದ್ದರು.

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಜಿಟಿ	5	4	1	8	1.413
2	ಡಿಸಿ	4	4	0	8	1.278
3	ಆರ್‌ಸಿಬಿ	5	3	2	6	0.539
4	ಪಿಬಿಕೆಎಸ್	4	3	1	6	0.289
5	ಎಲ್‌ಎಸ್‌ಜಿ	5	3	2	6	0.078
6	ಕೆಕೆಆರ್	5	2	3	4	-0.056
7	ಆರ್‌ಆರ್	5	2	3	4	-0.733
8	ಎಂಐ	5	1	4	2	-0.010
9	ಸಿಎಸ್‌ಕೆ	5	1	4	2	-0.889
10	ಎಸ್‌ಆರ್‌ಎಚ್	5	1	4	2	-1.629

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 288 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 11 ವಿಕೆಟ್

ವಿಕೆಟ್ ಪಡೆದ ಡೆಲ್ಲಿ ಕ್ಯಾಪಿಟಲ್ಸ್‌ನ ಕುಲದೀಪ್ ಯಾದವ್ ಅವರನ್ನು ನಾಯಕ ಅಕ್ಷರ್ ಪಟೇಲ್ ಮತ್ತು ಸಹ ಆಟಗಾರರು ಅಭಿನಂದಿಸಿದರು ಪ್ರಜಾವಾಣಿ ಚಿತ್ರ

ಇದು ನನ್ನ ನೆಲ ಎಂದ ರಾಹುಲ್

ಬೆಂಗಳೂರು: 'ಇದು ನನ್ನ ನೆಲ. ನನ್ನ ತವರು. ಇಲ್ಲಿನ ಮೈದಾನದ ಬಗ್ಗೆ ಉಳಿದ ಎಲ್ಲರಿಗಿಂತ ಹೆಚ್ಚು ತಿಳಿದುಕೊಂಡಿದ್ದೇನೆ' ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿಕೆಟ್ ಕೀಪರ್- ಬ್ಯಾಟರ್ ಕೆ.ಎಲ್.ರಾಹುಲ್ ಪ್ರತಿಕ್ರಿಯಿಸಿದರು.

'20 ಓವರುಗಳ ಕಾಲ ವಿಕೆಟ್ ಹಿಂದುಗಡೆ ನಿಂತು ಪಿಚ್ ಹೇಗೆ ವರ್ತಿಸುತ್ತದೆ ಎಂದು ಗಮನಿಸುತ್ತಿದ್ದುದು ನನಗೆ ನೆರವಾಯಿತು' ಎಂದು ಅವರು ಗುರುವಾರ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ 'ಪಂದ್ಯ ಶ್ರೇಷ್ಠ' ಪ್ರಶಸ್ತಿ ಸ್ವೀಕರಿಸಿದ ಬಳಿಕ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನಾನು ಉತ್ತಮ ಆರಂಭ ಪಡೆಯಲು ಬಯಸಿದ್ದೆ. ಅದಾದ ಬಳಿಕ ನಂತರ ಚೆಂಡನ್ನು ಎಲ್ಲಿ ಆಡಬೇಕೆಂಬುದನ್ನು ಮನಸ್ಸಿನಲ್ಲಿ ಸ್ಪಷ್ಟಮಾಡಿಕೊಂಡೆ. ಇಂಥ ಪಿಚ್‌ಗಳಲ್ಲಿ ನನ್ನ ಸಾಮರ್ಥ್ಯ ಏನೆಂಬುದರ ಅಂದಾಜು ನನಗಿತ್ತು. ಕೀಪಿಂಗ್ ವೇಳೆ ಬ್ಯಾಟರ್‌ಗಳು ಹೇಗೆ ಔಟಾದರು; ಎಲ್ಲಿ ಸಿಕ್ಸರ್ ಹೊಡೆದರು ಎಂಬುದನ್ನು ಗಮನಿಸಿದ್ದೆ. ಜೀವದಾನ ದೊರಕಿದ್ದು ವರವಾಯಿತು' ಎಂದು 32 ವರ್ಷ ವಯಸ್ಸಿನ ಆಟಗಾರ ತಿಳಿಸಿದರು.

ಈ ಹಿಂದೆಯೂ ರಾಹುಲ್, ಆರ್‌ಸಿಬಿ ತಂಡವನ್ನು ಕಾಡಿದ್ದು ಇದೆ. ದುಬೈನಲ್ಲಿ ನಡೆದಿದ್ದ (2020 ಸೆಪ್ಟೆಂಬರ್) ಐಪಿಎಲ್ ಪಂದ್ಯದಲ್ಲಿ ಅವರು ಪಂಜಾಬ್ ಕಿಂಗ್ಸ್ ನಾಯಕನಾಗಿ ಅಜೇಯ 132 ರನ್ ಬಾರಿಸಿದ್ದರು. ಆ ಪಂದ್ಯವನ್ನು ಆರ್‌ಸಿಬಿ 97 ರನ್‌ಗಳಿಂದ ಸೋತಿತ್ತು.

ಆತಿಥೇಯರಿಗೆ ಸತತ ಸೋಲುಗಳ ಸರಪಣಿ ಕಳಚುವ ಒತ್ತಡ • ಕೋಲ್ಕತ್ತಕ್ಕೆ ಗೆಲುವಿನ ಛಲ

ಧೋನಿ ನಾಯಕತ್ವಕ್ಕೆ ರಹಾನೆ ಪಡೆ ಸವಾಲು

ಚೆನ್ನೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಮಹೇಂದ್ರಸಿಂಗ್ ಧೋನಿ ಅವರು ಮತ್ತೆ ನಾಯಕರಾಗಿದ್ದಾರೆ. ಋತುರಾಜ್ ಗಾಯಕವಾಡ ಅವರು ಗಾಯಗೊಂಡಿರುವುದರಿಂದ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಶುಕ್ರವಾರ ಚೆಪಾಕ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ನಡೆಯಲಿರುವ ಪಂದ್ಯದಲ್ಲಿ ಚೆನ್ನೈ ತಂಡವನ್ನು ಧೋನಿ ಮುನ್ನಡೆಸಲಿದ್ದಾರೆ. ಋತುರಾಜ್ ಅವರ ಮೊಣಕೈ ಮೂಳೆ ಮುರಿದಿದೆ. ಅದರಿಂದಾಗಿ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಕಳೆದ ಪಂದ್ಯದಲ್ಲಿ ವೇಗದ ಬೌಲರ್ ಜೋಫ್ರಾ ಆರ್ಚರ್ ಹಾಕಿದ್ದ ಶಾರ್ಟ್ ಪಿಚ್ ಎಸೆತದಲ್ಲಿ ಚೆಂಡು ಋತುರಾಜ್ ಮೊಣಕೈಗೆ ಬಡಿದಿತ್ತು.

'ಋತುರಾಜ್ ಗಾಯಗೊಂಡಿದ್ದಾರೆ. ಆದ್ದರಿಂದ ಟೂರ್ನಿಯಿಂದಲೇ ಹೊರನಡೆಯಬೇಕಾಗಿದೆ. ಧೋನಿ ನಾಯಕತ್ವದ ಹೊಣೆ ನಿಭಾಯಿಸುವರು' ಎಂದು ತಂಡದ ಮುಖ್ಯ ಕೋಚ್ ಸ್ಟೀಫನ್ ಫ್ಲೆಮಿಂಗ್ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮುಖ್ಯ ಘಟ್ಟ: ಚೆಪಾಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಜಯಿಸುವುದು ಚೆನ್ನೈ ತಂಡಕ್ಕೆ ಮುಖ್ಯವಾಗಿದೆ. ತಂಡವು ಸತತ ನಾಲ್ಕು ಪಂದ್ಯಗಳಲ್ಲಿ ಸೋತಿದೆ. ತನ್ನ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು ಜಯಿಸಿತ್ತು. ಈಚೆಗೆ ಪಂಜಾಬ್ ಕಿಂಗ್ಸ್ ಎದುರು 18 ರನ್‌ಗಳಿಂದ ಚೆನ್ನೈ ಪರಾಭವಗೊಂಡಿತ್ತು. ಇದೀಗ ತಂಡವು ಗೆಲುವಿನ ಹಾದಿಗೆ ಮರಳದಿದ್ದರೆ ನಾಕೌಟ್ ಘಟ್ಟ ಪ್ರವೇಶಿಸುವುದು ಕಠಿಣವಾಗಬಹುದು. ಈಗ ಧೋನಿ ಅವರ ಅನುಭವ ಮತ್ತು ಚಾಣಾಕ್ಷತೆಯ ಪರೀಕ್ಷೆಯೂ ಆಗಲಿದೆ. ಚೆನ್ನೈ ತಂಡವು ತನ್ನ ತವರಿನಂಗಳದಲ್ಲಿ ಈಚೆಗೆ ನಡೆದ ಪಂದ್ಯಗಳಲ್ಲೂ ಸೋತಿದೆ.

ತಂಡವು ಜಯದ ಹಾದಿಗೆ ಮರಳಬೇಕಾದರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಫಾರ್ಮ್‌ಗೆ ಮರಳಬೇಕು. ಆರಂಭಿಕ ಬ್ಯಾಟರ್‌ಗಳೂ ಇನಿಂಗ್ಸ್‌ಗೆ ಉತ್ತಮ ಅಡಿಪಾಯ ಹಾಕಿದರೆ ತಂಡವು ದೊಡ್ಡ ಮೊತ್ತ ಗಳಿಸಲು ನೆರವಾಗಲಿದೆ. 43 ವರ್ಷ ವಯಸ್ಸಿನ ಧೋನಿ ಅವರು ತಮ್ಮ 'ಫಿನಿಷರ್' ಖ್ಯಾತಿಯನ್ನು ಮರಳಿ ಪಡೆಯುವ ಸವಾಲು ಕೂಡ ಇದೆ. ವೇಗಿಗಳಾದ ಖಲೀಲ್ ಅಹಮದ್, ಮಥೀಷ ಪಥಿರಾಣ, ಸ್ಪಿನ್ನರ್ ಆರ್. ಅಶ್ವಿನ್, ರವೀಂದ್ರ ಜಡೇಜ ಮತ್ತು ನೂರ್ ಅಹಮದ್ ಅವರ ಮುಂದೆ ಕೋಲ್ಕತ್ತ ತಂಡದ ಬ್ಯಾಟರ್‌ಗಳ ಅಬ್ಬರಕ್ಕೆ ತಡೆಯೊಡ್ಡುವ ಸವಾಲು ಇದೆ.

ಅಜಿಂಕ್ಯ ರಹಾನೆ ನಾಯಕತ್ವದ ಕೋಲ್ಕತ್ತ ತಂಡವು ಐದು ಪಂದ್ಯಗಳಲ್ಲಿ ಆಡಿ ಮೂರರಲ್ಲಿ ಸೋತಿದೆ. ಎರಡರಲ್ಲಿ ಜಯಿಸಿದೆ. ತಂಡದ ವೆಂಕಟೇಶ್ ಅಯ್ಯರ್, ಅಂಗಕ್ರಿಷ್ ರಘುವಂಶಿ ಹಾಗೂ ರಿಂಕು ಸಿಂಗ್ ಹಾಗೂ ರಹಾನೆ ಉತ್ತಮ ಲಯದಲ್ಲಿದ್ದಾರೆ. ಸ್ಪಿನ್ ಜೋಡಿ ಸುನಿಲ್ ನಾರಾಯಣ್ ಮತ್ತು ವರುಣ್ ಚಕ್ರವರ್ತಿ ಅವರು ಯಶಸ್ಸು ಸಾಧಿಸಿದರೆ ಚೆನ್ನೈ ತಂಡದ ಹಾದಿ ಕಠಿಣವಾಗಬಹುದು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ಅಜಿಂಕ್ಯ ರಹಾನೆ –ಪಿಟಿಐ ಚಿತ್ರ

ಧೋನಿ ನಾಯಕತ್ವದಲ್ಲಿ ಸಿಎಸ್‌ಕೆ ತಂಡ ಐದು ಬಾರಿ ಪ್ರಶಸ್ತಿ ಗೆದ್ದಿದೆ

ಮಹೇಂದ್ರಸಿಂಗ್ ಧೋನಿ

ಐಪಿಎಲ್‌ನಲ್ಲಿ ಧೋನಿಯ ಹಾದಿ

ಆಡಿದ ಒಟ್ಟು ಪಂದ್ಯ	ಇನಿಂಗ್ಸ್	ರನ್
269	234	5346

ನಾಯಕನಾಗಿ ಸಾಧನೆ

ಒಟ್ಟು	ಗೆಲುವು	ಸೋಲು	ಫಲಿತಾಂಶವಿಲ್ಲ
226	133	91	2

ಐಪಿಎಲ್ ಹೊಸ ನಿಯಮದ ಪ್ರಕಾರ ಈ ಟೂರ್ನಿಯಲ್ಲಿ ಅವರು ಅನ್‌ಕ್ಯಾಪ್ಡ್ (₹4 ಕೋಟಿ) ಆಟಗಾರನಾಗಿದ್ದಾರೆ

ಸಿಎಸ್‌ಕೆ ನಾಯಕನಾಗಿ ಸಾಧನೆ

ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ
212	128	82	2

ಮಂಡೇಪಂಡ, ಅಳಂಗಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮಂಡೇಪಂಡ, ಅಳಂಗಂಡ ಹಾಗೂ ಪರದಂಡ ತಂಡಗಳು ಗುರುವಾರ ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿರುವ 'ಮುದ್ದಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಪಂದ್ಯಗಳಲ್ಲಿ ಗೆಲುವು ಸಾಧಿಸಿದವು.

ಮಂಡೇಪಂಡ 6-0ಯಿಂದ ಮಾಚಂಡ ವಿರುದ್ಧ, ಅಳಂಗಂಡ 6-1ರಿಂದ ಚಪ್ಪಂಡ ವಿರುದ್ಧ, ಪರದಂಡ 5-0ಯಿಂದ ಬೊಪ್ಪಂಡ ತಂಡದ ವಿರುದ್ಧ ಗೆದ್ದವು.

ಮೇಚಿಯಂಡ 2-1ರಿಂದ ಮಾಚಿ ಮಾಡ ವಿರುದ್ಧ; ಕೂತಂಡ 4-0ಯಿಂದ ಮಂಡೀರ (ನೆಲಜಿ) ವಿರುದ್ಧ; ವಾಟೇರಿರ 4-0ಯಿಂದ ಬಾಚಿನಾಡಂಡ ವಿರುದ್ಧ; ಕೇಚೇಟಿರ (ಕಡಗದಾಳು) 3-0ಯಿಂದ ಬಡ್ಡೀರ ವಿರುದ್ಧ; ಮಂಡೇಡ 1-0ಯಿಂದ ಮಂದನೆರವಂಡ ವಿರುದ್ಧ; ಮೂಕಳಮಾಡ 3-0ಯಿಂದ ಕಾಂಡೇರ ವಿರುದ್ಧ; ಚೆರುಮಾಡಂಡ 3-1ಯಿಂದ ಚೌರೀರ (ಹೊದವಾಡ) ವಿರುದ್ಧ; ಮುರುವಂಡ 4-0ಯಿಂದ ಚೆರಿಯಪಂಡ ವಿರುದ್ಧ ಜಯ ಗಳಿಸಿದವು.

ಅಜ್ಜಿನಂಡ 3-1ರಿಂದ ಬೈರೆಟೀರ ವಿರುದ್ಧ; ಮುಡ್ಯೋಳಂಡ 3-1ಯಿಂದ ಚೌರೀರ (ಹೊದ್ದೂರು) ವಿರುದ್ಧ; ಪಾಡೆಯಂಡ 4-0ಯಿಂದ ಕರ್ತಚ್ಚಿರ ವಿರುದ್ಧ; ಮೈಂದಪಂಡ 2-0ಯಿಂದ ಬಟ್ಟೀರ ವಿರುದ್ಧ; ಮಲ್ಲಮಾಡ 2-0ಯಿಂದ ಆಪಾಡಂಡ ವಿರುದ್ಧ ಗೆದ್ದವು. ಟೈ ಬ್ರೇಕರ್ ಹಣಾಹಣಿಯಲ್ಲಿ ಮದ್ರೀರ 4-2ರಿಂದ ಜಮ್ಮಡ ವಿರುದ್ಧ, ಕೇಳಪಂಡ 4-2ರಿಂದ ಬೊಳ್ಳಂಡ ವಿರುದ್ಧ, ಅಣ್ಣಾಡಿಯಂಡ 4-1ರಿಂದ ದಾಸಂಡ ವಿರುದ್ಧ ಜಯ ಸಾಧಿಸಿದವು.

ಮತ್ತೆ 'ಕಮಿಷನ್' ಸದ್ದು

ಒಂದನೇ ಪುಟದಿಂದ..

ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ ಇಲಾಖೆಗಳಲ್ಲಿ ಜ್ಯೇಷ್ಠತೆ ಉಲ್ಲಂಘಿಸಿ ಬಲಾಢ್ಯ ಗುತ್ತಿಗೆದಾರರಿಗಷ್ಟೇ ಬಿಲ್ ಪಾವತಿಸಲಾಗುತ್ತಿದೆ. 'ಹಣ ಭರವಸೆ ಪತ್ರ' (ಎಲ್‌ಒಸಿ) ವಿತರಣೆಯಲ್ಲಿ ಮಧ್ಯವರ್ತಿಗಳ ಹಾವಳಿ ಅತಿಯಾಗಿದೆ ಎಂದು ಸಂಘ ಆರೋಪಿಸಿದೆ.

'ಸಣ್ಣಮತ್ತುಮಧ್ಯಮವರ್ಗದಗುತ್ತಿಗೆದಾರರಿಗೆ ₹5ರಿಂದ ₹50 ಲಕ್ಷದವರೆಗಿನ ಬಿಲ್‌ಗಳನ್ನು ಜ್ಯೇಷ್ಠತೆ ಆಧಾರದಲ್ಲಿ ಪಾವತಿಸಲು ಹಣ ಬಿಡುಗಡೆ ಮಾಡದೆ, 'ಸ್ಪೆಷಲ್ ಎಲ್‌ಒಸಿ' ನೆಪದಲ್ಲಿ ಬಲಾಢ್ಯ ಗುತ್ತಿಗೆದಾರರಿಗೆ ವಿತರಿಸಲಾಗುತ್ತಿದೆ. ಇಲಾಖೆಗಳಲ್ಲಿ ಹಿಡಿತ ಸಾಧಿಸಿರುವ 'ಕಾಣದ ಕೈಗಳು' (ಮಧ್ಯವರ್ತಿಗಳು) ವ್ಯವಸ್ಥೆಯನ್ನು ಹದಗೆಡಿಸುತ್ತಿದ್ದಾರೆ' ಎಂದು ಸಂಘ ದೂರಿದೆ.

'ಸಂಬಂಧಪಟ್ಟ ಇಲಾಖೆಗಳ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ನಮ್ಮ ಪದಾಧಿಕಾರಿಗಳೊಂದಿಗೂ ಚರ್ಚಿಸಿ, ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರಿಗೆ ನ್ಯಾಯ ಒದಗಿಸಿಕೊಡಬೇಕು' ಎಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

'ಮಾರ್ಚ್ 3ರಂದು ತಮ್ಮ ಭೇಟಿಯ ಸಂದರ್ಭದಲ್ಲಿ ಬಾಕಿ ಬಿಲ್‌ಗಳಲ್ಲಿ ಶೇ 50ರಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗುವುದು. ಎಲ್ಲ ಇಲಾಖೆಯ ಸುಮಾರು ₹15 ಸಾವಿರ ಕೋಟಿಯನ್ನು ಏಪ್ರಿಲ್‌ನಲ್ಲಿ ಬಿಡುಗಡೆ ಮಾಡುವ ಭರವಸೆ ನೀಡಿದ್ದೀರಿ. ಈ ಸಂಬಂಧ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಲಾಗಿದೆ.

'ಮೂರು–ನಾಲ್ಕು ತಿಂಗಳಿನಿಂದ ಅವ್ಯವಸ್ಥೆ': ಈ ಮೂರೂ ಇಲಾಖೆಗಳಲ್ಲಿ ಮೂರು- ನಾಲ್ಕು ತಿಂಗಳಿನಿಂದ 'ಕಾಣದ ಕೈಗಳು' ವ್ಯವಸ್ಥೆಯನ್ನು ಹದಗೆಡಿಸುತ್ತಿವೆ ಎಂಬ ದೂರು ಪತ್ರಗಳಲ್ಲಿದೆ.

'ಲೋಕೋಪಯೋಗಿ ಇಲಾಖೆಯಲ್ಲಿ ಎಲ್‌ಒಸಿ ಬಿಡುಗಡೆಯಲ್ಲಿ 'ಜ್ಯೇಷ್ಠತೆ ಮತ್ತು ಪಾವಿತ್ರ್ಯ' ಕಾಯ್ದುಕೊಂಡು ಬರಲಾಗಿತ್ತು. ಮೂರ್ನಾಲ್ಕು ತಿಂಗಳಿನಿಂದ 'ಕಾಣದ ಕೈಗಳು' ವ್ಯವಸ್ಥೆಯನ್ನು ಹದಗೆಡಿಸುತ್ತಿದ್ದಾರೆ. ಜ್ಯೇಷ್ಠತೆ ಉಲ್ಲಂಘಿಸಿ ಬಲಾಢ್ಯ ಗುತ್ತಿಗೆದಾರರಿಗೆ ಆದ್ಯತೆ ಮೇರೆಗೆ ಬಿಲ್ ಪಾವತಿಸಲಾಗುತ್ತಿದೆ' ಎಂದು ಗುತ್ತಿಗೆದಾರರ ಸಂಘವು ಪತ್ರದಲ್ಲಿ ದೂರಿದೆ.

'ಲೋಕೋಪಯೋಗಿ ಇಲಾಖೆಯಲ್ಲಿ 26 ಲೆಕ್ಕ ಶೀರ್ಷಿಕೆಗಳಡಿ ಕಾಮಗಾರಿ ನಡೆಸಲಾಗಿದ್ದರೂ ಜಿಲ್ಲಾ ಮುಖ್ಯ ರಸ್ತೆ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಮತ್ತು ಅಪೆಂಡಿಕ್ಸ್–ಇ ಕಾಮಗಾರಿಗಳಿಗೆ ಹೆಚ್ಚಿನ ನಿಗಾವಹಿಸಿ, ಹಣ ಬಿಡುಗಡೆ ಮಾಡಲಾಗಿದೆ. ಬಾಕಿ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಕಾಮಗಾರಿ ನಡೆಸಿರುವ ಗುತ್ತಿಗೆದಾರರು ಸಂಕಷ್ಟದಲ್ಲಿದ್ದಾರೆ. ಇವರ ಪಟ್ಟಿಯನ್ನು ನಿಮ್ಮ ವಿಶೇಷ ಅಧಿಕಾರಿಗೆ ಕಳುಹಿಸಲಾಗಿದೆ' ಎಂದು ಸಚಿವ ಸತೀಶ ಜಾರಕಿಹೊಳಿ ಅವರಿಗೆ ಬರೆದಿರುವ ಪತ್ರದಲ್ಲಿ ದೂರಲಾಗಿದೆ.

ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರ ಬಳಿ ಸಮಸ್ಯೆಯನ್ನು ಹೇಳಿದರೆ ಪರಿಹಾರ ಸಿಗುತ್ತಿಲ್ಲ. ಯಾರೂ ಮೊದಲಿನಂತೆ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ ಎಂಬ ಉಲ್ಲೇಖ ಪತ್ರದಲ್ಲಿದೆ.

ಜಲ ಸಂಪನ್ಮೂಲ ಇಲಾಖೆಯಲ್ಲಿನ ಬಿಲ್ ಪಾವತಿ ಕುರಿತ ದೂರುಗಳಿಗೆ ನೀರಾವರಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಸ್ಪಂದಿಸುತ್ತಿಲ್ಲ. ದೂರವಾಣಿ ಕರೆಗಳಿಗೂ ಉತ್ತರಿಸುತ್ತಿಲ್ಲ. ಸಣ್ಣ ನೀರಾವರಿ ಇಲಾಖೆಯಲ್ಲಿ ಚೆಕ್ ಡ್ಯಾಂ ಕಾಮಗಾರಿಗಳಿಗೆ ಶೇಕಡ 5ರಿಂದ 10ರಷ್ಟು ಹಣ ಮಾತ್ರ ಬಿಡುಗಡೆ ಮಾಡಲಾಗುತ್ತಿದೆ ಎಂದು ದೂರು ಪತ್ರಗಳಲ್ಲಿದೆ.

ಸಂಬಂಧಿಕರ ಕೈವಾಡ: ಮಂಜುನಾಥ್

'ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಲು ಸಚಿವರ ಸಭೆಯಲ್ಲಿ ಕೈಗೊಂಡಿರುವ ನಿರ್ಧಾರವನ್ನೂ 'ಕಾಣದ ಕೈಗಳು' (ಸಚಿವರ ಸಂಬಂಧಿಕರು) ಬದಲಿಸುತ್ತಿದ್ದಾರೆ. ಹೀಗಾಗಿ, ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರಿಗೆ ಹಣ ಬಿಡುಗಡೆಯಾಗದೆ ಸಂಕಷ್ಟದಲ್ಲಿದ್ದಾರೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ದೂರಿದರು.

'ಜ್ಯೇಷ್ಠತೆ ಆಧಾರದಲ್ಲಿ ಬಿಲ್ ಬಿಡುಗಡೆ ಮಾಡುತ್ತಿಲ್ಲ. ಸಚಿವರ ವಿವೇಚನಾ ಅಧಿಕಾರ ಬಳಸಿ ಶೇ 20ರಷ್ಟು ಮೊತ್ತವನ್ನು ಮಾತ್ರ 'ಸ್ಪೆಷಲ್ ಎಲ್‌ಒಸಿ' ನೀಡಬಹುದು. ಆದರೆ, ಅದಕ್ಕೇ ಹೆಚ್ಚು ಒತ್ತು ನೀಡಿ, ಸಾಮಾನ್ಯ ವರ್ಗದ ಬಿಲ್‌ಗಳನ್ನು ಪಾವತಿಸುತ್ತಿಲ್ಲ. ಮೂರು ವರ್ಷಗಳಿಂದ ಬಿಲ್‌ಗಳು ಬಾಕಿ ಇದ್ದು, ಅದರ ಬಿಡುಗಡೆಗೆ ಹೆಚ್ಚಿನ ಕಮಿಷನ್ ಕೂಡ ನೀಡಬೇಕಾಗಿದೆ' ಎಂದು ಆರೋಪಿಸಿದರು.

'ಬಿಲ್ ಪಾವತಿಯಲ್ಲಿ ಹಸ್ತಕ್ಷೇಪ ಇಲ್ಲ'

'ಕಾಮಗಾರಿಗಳ ಬಿಲ್ ಪಾವತಿಯಲ್ಲಿ ಕುಟುಂಬದ ಸದಸ್ಯರ ಹಸ್ತಕ್ಷೇಪ ಇಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಾಕಿ ಬಿಲ್‌ಗಳ ಪಾವತಿಗೆ ಶಿಫಾರಸುಗಳು ಸಾಮಾನ್ಯವಾಗಿ ಬರುತ್ತವೆ. ಅದನ್ನು ಇಲಾಖೆ ಪರಿಗಣಿಸುತ್ತದೆ. ವಿಶೇಷವಾಗಿ ಶೇ 20ರಷ್ಟು ಬಿಲ್ ಪಾವತಿಗೆ ಮೊದಲಿನಿಂದಲೂ ಅವಕಾಶವಿದೆ. ಉಳಿದಂತೆ ಜ್ಯೇಷ್ಠತೆ ಆಧಾರದಲ್ಲಿ ಹಣ ಬಿಡುಗಡೆಯಾಗುತ್ತದೆ' ಎಂದರು.

'ಸಣ್ಣ ನೀರಾವರಿ ಇಲಾಖೆಯಲ್ಲಿ ನಡೆಯುವ ಪ್ರಕ್ರಿಯೆಗಳ ಬಗ್ಗೆ ನಾನು ಪ್ರತಿಕ್ರಿಯಿಸಲು ಬಯಸುವುದಿಲ್ಲ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಗುತ್ತಿಗೆದಾರರ ಸಂಘವು ಈ ಮೊದಲು ನೀಡಿದ್ದ ಸಲಹೆಗಳನ್ನು ಆಧರಿಸಿ ಕ್ರಮ ಕೈಗೊಂಡಿದ್ದೇನೆ. ಯಾವುದೇ ಸಲಹೆ ನೀಡಿದರೆ ಅದನ್ನು ಪರಿಗಣಿಸುತ್ತೇನೆ. ರಾಜಕಾರಣ ಎಂದ ಮೇಲೆ ಶಾಸಕರು, ಪಕ್ಷದ ಕಾರ್ಯಕರ್ತರು ಶಿಫಾರಸು ನೀಡುವುದು ಸಹಜ. ಅದರಲ್ಲಿ ತಪ್ಪಿಲ್ಲ' ಎಂದರು.

ಯಾವ ಇಲಾಖೆಯಲ್ಲಿ ಎಷ್ಟು ಬಾಕಿ

ಒಳಾಡಳಿತ	16
ಕಂದಾಯ	39
ಶಾಲಾ ಶಿಕ್ಷಣ	3
ಆರೋಗ್ಯ	7
ಆರ್‌ಡಿಪಿಆರ್	15
ಆರ್ಥಿಕ	2
ಸಮಾಜ ಕಲ್ಯಾಣ	2
ರಾಜ್ಯಪಾಲರ ಸಚಿವಾಲಯ	1
ವಾಣಿಜ್ಯ ಮತ್ತು ಕೈಗಾರಿಕೆ	3
ಕಾರ್ಮಿಕ	2
ತೋಟಗಾರಿಕೆ	2
ಸಣ್ಣ ನೀರಾವರಿ/ ಜಲಸಂಪನ್ಮೂಲ	1
ಅರಣ್ಯ	1
ಲೋಕೋಪಯೋಗಿ	1
ಇಲಾಖೆ ನಮೂದಿಸಿಲ್ಲದವು	10
ಒಟ್ಟು	**105**

'ಲೋಕಾ' ಪ್ರಾಸಿಕ್ಯೂಷನ್: 105 ಪ್ರಕರಣ ಬಾಕಿ

ಒಂದನೇ ಪುಟದಿಂದ...

2024ರ ಸೆ. 21ರಂದು ಸರ್ಕಾರಕ್ಕೆ ಪತ್ರ ಬರೆದಿದ್ದ ಲೋಕಾಯುಕ್ತ, ಒಟ್ಟು 525 ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ಕೋರಿ ಸಕ್ಷಮ ಪ್ರಾಧಿಕಾರಗಳಿಗೆ ಪತ್ರ ಬರೆದಿದ್ದನ್ನು ಉಲ್ಲೇಖಿಸಿತ್ತು. ಆ ಪಟ್ಟಿಯಲ್ಲಿನ 328 ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆಗಳು ಈಗಾಗಲೇ ಪ್ರಾಸಿಕ್ಯೂಷನ್ ಮಂಜೂರಾತಿ ನೀಡಿವೆ. ಆರು ಪ್ರಕರಣಗಳನ್ನು ತಿರಸ್ಕರಿಸಲಾಗಿದೆ. 191 ಪ್ರಕರಣಗಳು ಬಾಕಿ ಇದ್ದವು.

'ಈ 191 ಪ್ರಕರಣಗಳ ಮಾಹಿತಿಯನ್ನು 2024 ಅ. 28 ಮತ್ತು 2025ರ ಜ. 24ರಂದು ನಡೆದ ಸಚಿವ ಸಂಪುಟ ಸಭೆಗೆ ಒದಗಿಸಲಾಗಿತ್ತು. ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತುರ್ತಾಗಿ ಕ್ರಮ ಕೈಗೊಂಡು, ಆ ಮಾಹಿತಿಯನ್ನು ನೀಡುವಂತೆ ಹಲವು ಬಾರಿ ಅನಧಿಕೃತ ಟಿಪ್ಪಣಿ, ಪತ್ರಗಳ ಮೂಲಕ ಮನವಿ ಮಾಡಲಾಗಿತ್ತು. ಜ. 24ರಂದು ನಡೆದ ಸಚಿವ ಸಂಪುಟ ಸಭೆಗೆ ಒಟ್ಟು 127 ಪ್ರಕರಣಗಳು ಪ್ರಾಸಿಕ್ಯೂಷನ್ ಮಂಜೂರಾತಿಗೆ ಬಾಕಿ ಇರುವ ಬಗ್ಗೆ ಮಾಹಿತಿ ನೀಡಲಾಗಿತ್ತು. ಪ್ರಾಸಿಕ್ಯೂಷನ್‌ಗೆ ಪ್ರಕರಣಗಳು ಬಾಕಿ ಇರುವುದಕ್ಕೆ ಅಂದಿನ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದ ಮುಖ್ಯಮಂತ್ರಿ, ಒಂದು ತಿಂಗಳ ಒಳಗೆ ಈ ವಿಷಯದಲ್ಲಿ ಪ್ರಗತಿ ಸಾಧಿಸಬೇಕು ಮತ್ತು ಪ್ರಗತಿಯ ಮಾಹಿತಿಯನ್ನು ನೀಡಬೇಕು ಎಂದು ಸೂಚನೆ ನೀಡಿದ್ದರು. ಆದರೂ ಇನ್ನೂ 105 ಪ್ರಕರಣಗಳು ಬಾಕಿ ಇವೆ' ಎಂದೂ ಮೂಲಗಳು ತಿಳಿಸಿವೆ.

'ಅತ್ಯಾಚಾರ: ಆಕೆಯೇ ಹೊಣೆ'

ಒಂದನೇ ಪುಟದಿಂದ...

'ನಾವು ಬೆಳಿಗ್ಗೆ 3 ಗಂಟೆಯವರೆಗೆ ಬಾರ್‌ನಲ್ಲಿಯೇ ಇದ್ದೆವು. 'ವಿಶ್ರಾಂತಿ' ಪಡೆಯಲು ತನ್ನ ಮನೆಗೆ ಬರುವಂತೆ ಆ ವ್ಯಕ್ತಿಯು ತುಂಬಾ ಒತ್ತಾಯಿಸಿದ. ಹಾಗಾಗಿ ಆತನ ಜೊತೆಗೆ ಹೋಗಲು ನಾನು ಒಪ್ಪಿಕೊಂಡೆ' ಎಂದು ವಿದ್ಯಾರ್ಥಿನಿಯು ದೂರಿನಲ್ಲಿ ವಿವರಿಸಿದ್ದಾರೆ.

'ಆತ ತನ್ನ ಮನೆಗೆ ನನ್ನನ್ನು ಕರೆದುಕೊಂಡು ಹೋಗುವ ಬದಲು ಗುರುಗ್ರಾಮದಲ್ಲಿರುವ ಆತನ ಸಂಬಂಧಿಕರ ಮನೆಯೊಂದಕ್ಕೆ ಕರೆದುಕೊಂಡು ಹೋದ. ಮನೆಗೆ ತೆರಳುವ ವೇಳೆ ನನ್ನನ್ನು ಅಶ್ಲೀಲವಾಗಿ ಮುಟ್ಟಿದ. ಮನೆಗೆ ತೆರಳಿದ ನಂತರ ಅತ್ಯಾಚಾರ ಎಸಗಿದ' ಎಂದು ಹೇಳಿದ್ದಾರೆ.

ಎಫ್‌ಐಆರ್ ದಾಖಲಾದ ಬಳಿಕ ವ್ಯಕ್ತಿಯನ್ನು 2024ರ ಡಿಸೆಂಬರ್‌ನಲ್ಲಿ ಬಂಧಿಸಲಾಗಿದೆ. 'ನಾನು ಆಕೆಯ ಮೇಲೆ ಅತ್ಯಾಚಾರ ಎಸಗಿಲ್ಲ. ನಮ್ಮಿಬ್ಬರ ನಡುವೆ ಒಪ್ಪಿತ ಲೈಂಗಿಕ ಕ್ರಿಯೆ ನಡೆದಿತ್ತು' ಎಂದು ಆರೋಪಿಯು ಪೊಲೀಸರಿಗೆ ತಿಳಿಸಿದ್ದಾರೆ.

'ಮಹಿಳೆಯರ ಸ್ತನಗಳನ್ನು ಹಿಡಿಯುವುದು, ಪೈಜಾಮದ ಲಾಡಿ ಬಿಚ್ಚುವುದು ಅತ್ಯಾಚಾರದ ಯತ್ನವಲ್ಲ' ಎಂದು ಇದೇ ಹೈಕೋರ್ಟ್‌ನ ಇನ್ನೊಬ್ಬ ನ್ಯಾಯಾ-ಮೂರ್ತಿಯೊಬ್ಬರು ಈ ಹಿಂದೆ ತೀರ್ಪು ನೀಡಿದ್ದರು. ಇದು ಭಾರಿ ವಿವಾದವನ್ನೇ ಸೃಷ್ಟಿಸಿತ್ತು. ಬಳಿಕ ನ್ಯಾಯಮೂರ್ತಿಯ ಈ ಅಭಿಪ್ರಾಯಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿತ್ತು.

ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್: ಸಿಂಧುಗೆ ನಿರಾಸೆ

ಕ್ವಾರ್ಟರ್‌ಗೆ ಕಪಿಲ– ಕ್ರಾಸ್ಟೊ

ಭಾರತದ ಧ್ರುವ್ ಕಪಿಲ ಮತ್ತು ತನಿಶಾ ಕ್ರಾಸ್ಟೊ —ಎಕ್ಸ್ ಚಿತ್ರ

ನಿಂಗ್ಬೊ (ಚೀನಾ), (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದಿರುವ ಪಿ.ವಿ. ಸಿಂಧು ಮತ್ತು ಉದಯೋನ್ಮುಖ ಆಟಗಾರ ಪ್ರಿಯಾಂಶು ರಾಜಾವತ್ ಅವರು ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನ ಸಿಂಗಲ್ಸ್ ಪ್ರಿ ಕ್ವಾರ್ಟರ್‌ಫೈನಲ್‌ನಲ್ಲಿ ಗುರುವಾರ ಸೋಲನುಭವಿಸಿದರು.

ವಿಶ್ವ ಕ್ರಮಾಂಕದಲ್ಲಿ 17ನೇ ಸ್ಥಾನ ಹೊಂದಿರುವ ಸಿಂಧು ಉತ್ತಮ ಹೋರಾಟ ಕಂಡ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ಜಪಾನ್‌ನ ಆಟಗಾರ್ತಿ ಅಕಾನೆ ಯಮಾಗುಚಿ ಅವರಿಗೆ 12–21, 21–16, 16–21ರಲ್ಲಿ ಮಣಿದರು. ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಅಕಾನೆ 66 ನಿಮಿಷಗಳಲ್ಲಿ ಪಂದ್ಯ ಗೆದ್ದು ಎಂಟರ ಘಟ್ಟಕ್ಕೆ ಮುನ್ನಡೆದರು.

ರಾಜಾವತ್ ಅವರು ಪುರುಷರ ಸಿಂಗಲ್ಸ್‌ನಲ್ಲಿ 14–21, 17–21 ರಲ್ಲಿ ಏಳನೇ ಕ್ರಮಾಂಕದ ಕೊಡೈ ನರವೋಕಾ (ಜಪಾನ್) ಅವರಿಗೆ ಶರಣಾದರು.

ವಿಶ್ವದ ಐದನೇ ಕ್ರಮಾಂಕದ ಆಟಗಾರ ಕುನ್ಲಾವುತ್ ವಿಟಿಡ್‌ಸರ್ನ್ (ಥಾಯ್ಲೆಂಡ್) ಅವರು ಇನ್ನೊಂದು ಪಂದ್ಯದಲ್ಲಿ ಭಾರತದ ಕಿರಣ್ ಜಾರ್ಜ್ ಅವರನ್ನು 19–21, 21–13, 21–16 ರಿಂದ ಸೋಲಿಸಿದರು. ಇದರೊಂದಿಗೆ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಧ್ರುವ್– ತನಿಶಾ ಮುನ್ನಡೆ: ಮಿಶ್ರ ಡಬಲ್ಸ್‌ನಲ್ಲಿ ಭಾರತದ ಧ್ರುವ್ ಕಪಿಲ– ತನಿಶಾ ಕ್ರಾಸ್ಟೊ ಜೋಡಿ ಎಂಟರ ಘಟ್ಟ ಪ್ರವೇಶಿಸಿತು. ಈ ಜೋಡಿ 12–21, 21–16, 21–18 ರಿಂದ ಚೀನಾ ತೈಪೆಯ ಯೆ ಹಾಂಗ್ ವೀ– ನಿಕೋಲ್ ಗೊನ್ಸಾಲ್ವೆಸ್ ಅವರನ್ನು ಸೋಲಿಸಿತು.

ಧ್ರುವ್ ಮತ್ತು ಕ್ರಾಸ್ಟೊ ಕ್ವಾರ್ಟರ್ ಫೈನಲ್‌ನಲ್ಲಿ ಹಾಂಗ್‌ಕಾಂಗ್‌ನ ಚುನ್ ಮನ್ ಟಾಂಗ್– ಯಿಂಗ್ ಸುಯೆತ್ ತ್ಸೆ ಜೋಡಿಯನ್ನು ಎದುರಿಸಲಿದೆ. ಚುನ್ ಮನ್– ಯಿಂಗ್ ಜೋಡಿ ಐದನೇ ಶ್ರೇಯಾಂಕ ಪಡೆದಿದೆ.

ಆದರೆ ಇದೇ ವಿಭಾಗದಲ್ಲಿ ಭಾರತದ ಅಶಿತ್ ಸೂರ್ಯ– ಅಮೃತಾ ಪ್ರಮುತೇಶ್ ಜೋಡಿ ನಿರ್ಗಮಿಸಿತು. ಇವರಿಬ್ಬರು 11–21, 14–21 ರಲ್ಲಿ ಅಗ್ರ ಶ್ರೇಯಾಂಕದ ಜಿಯಾಂಗ್ ಝೆನ್ ಬಾಂಗ್– ವೀ ಯಾ ಷಿನ್ (ಚೀನಾ) ಅವರಿಗೆ ಮಣಿದರು.

ಡಿವೈಇಎಸ್ ತಂಡಕ್ಕೆ ಗೆಲುವು

ಬೆಂಗಳೂರು: ಕೊನೆಯ ಹಂತದಲ್ಲಿ ಸಚಿನ್ ಗುಡ್ಡದ ಯಲ್ಲಪ್ಪವರ ಗಳಿಸಿದ ಗೋಲಿನ ನೆರವಿನಿಂದ ಡಿವೈಇಎಸ್ ಫುಟ್‌ಬಾಲ್ ಕ್ಲಬ್ ತಂಡವು ಬಿಡಿಎಫ್‌ಎ ‘ಎ’ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1–0ಯಿಂದ ಬ್ಲಿಟ್ಜ್ ಎಫ್‌.ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಸಚಿನ್ 80ನೇ ನಿಮಿಷದಲ್ಲಿ ಗೆಲುವಿನ ಗೋಲು ದಾಖಲಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಆದಾಯ ತೆರಿಗೆ ಎಫ್‌ಸಿ 2–1ರಿಂದ ಸ್ನೈಪರ್ಸ್ ಎಫ್‌ಸಿ ತಂಡವನ್ನು ಸೋಲಿಸಿತು.

ಆದಾಯ ತೆರಿಗೆ ಪರ ಪದ್ಯಾನ್ ಎಂ. (8ನೇ) ಮತ್ತು ಪ್ರಶಾಂತ್ ಕಳಿಂಗ್ (40 + 2ನೇ) ಗೋಲು ಗಳಿಸಿದರು. ನಿಕೇಶ್ ಟಿ. (5ನೇ) ಸ್ನೈಪರ್ಸ್ ಪರ ಚೆಂಡನ್ನು ಗುರಿ ಸೇರಿಸಿದರು.

ಪಾಸ್ ಎಫ್‌ಸಿ ತಂಡಕ್ಕೆ ಗೆಲುವು: ಇದೇ ಕ್ರೀಡಾಂಗಣದಲ್ಲಿ ನಡೆದ ಮಹಿಳೆಯರ ಬಿ ಡಿವಿಷನ್ ಲೀಗ್‌ನ ಪಂದ್ಯದಲ್ಲಿ ಪಾಸ್ ಎಫ್‌ಸಿ ತಂಡವು 10–1 ಗೋಲುಗಳಿಂದ ವುಮೆನ್ಸ್ ಕ್ಲಬ್ ತಂಡವನ್ನು ಮಣಿಸಿತು. ಸೌಮ್ಯಾ ಕೆ. ಆರು ಗೋಲು ದಾಖಲಿಸಿದರು.

ಇತರ ಪಂದ್ಯಗಳಲ್ಲಿ ಎಫ್‌ಸಿ ಡೆಕ್ಕನ್ 1–0ಯಿಂದ ಗೆದ್ದರೆ, ಸ್ಪೋರ್ಟ್ಸ್‌ಹುಡ್ ತಂಡವು 1–1 ರಿಂದ ಗೋಲ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು.

2028ರ ಒಲಿಂಪಿಕ್ಸ್: ಕ್ರಿಕೆಟ್‌ನಲ್ಲಿ ಆರು ತಂಡಗಳಿಗೆ ಅವಕಾಶ

ನವದೆಹಲಿ (ಪಿಟಿಐ): ಲಾಸ್ ಏಂಜಲಿಸ್‌ನಲ್ಲಿ ನಡೆಯಲಿರುವ 2028ರ ಒಲಿಂಪಿಕ್ಸ್‌ಗೆ ಕ್ರಿಕೆಟ್ ಮರು ಸೇರ್ಪಡೆಗೊಳ್ಳಲಿದ್ದು ಆರು ತಂಡಗಳು ಭಾಗವಹಿಸಲಿವೆ ಎಂದು ಆಯೋಜಕರು ಬುಧವಾರ ಖಚಿತಪಡಿಸಿದ್ದಾರೆ.

128 ವರ್ಷಗಳ ನಂತರ ಕ್ರಿಕೆಟ್ ಆಟವು ಒಲಿಂಪಿಕ್ಸ್‌ಗೆ ಮರಳುತ್ತಿದೆ. 1900ರ ಪ್ಯಾರಿಸ್ ಕ್ರೀಡೆಗಳಲ್ಲಿ ಕೊನೆಯ ಬಾರಿ ಕ್ರಿಕೆಟ್ ಆಡಲಾಗಿತ್ತು. ಆ ಒಲಿಂಪಿಕ್ಸ್‌ನಲ್ಲಿ ಎರಡು ದಿನಗಳ ಒಂದು ಪಂದ್ಯವನ್ನು ಬ್ರಿಟನ್ ಮತ್ತು ಫ್ರಾನ್ಸ್ ತಂಡಗಳ ನಡುವೆ ಆಡಿಸಲಾಗಿತ್ತು. ಇದನ್ನು ಅನಧಿಕೃತ ಟೆಸ್ಟ್ ಎಂದು ಪರಿಗಣಿಸಲಾಗಿದೆ.

2028ರ ಕ್ರೀಡೆಗಳಲ್ಲಿ ಕ್ರಿಕೆಟ್ ಆಟವನ್ನು ಟಿ20 ಮಾದರಿಯಲ್ಲಿ ಆಡಲಾಗುತ್ತಿದೆ. ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ. ಪ್ರತಿ ತಂಡವು 15 ಆಟಗಾರರ ಪಟ್ಟಿಯನ್ನು ಕಳುಹಿಸಲು ಅವಕಾಶವಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನಲ್ಲಿ 12 ಪೂರ್ಣ ಪ್ರಮಾಣದ ಸದಸ್ಯ ರಾಷ್ಟ್ರಗಳಿವೆ. ಅವುಗಳೆಂದರೆ ಅಫ್ಗಾನಿಸ್ತಾನ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಇಂಗ್ಲೆಂಡ್, ಭಾರತ, ಐರ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ವೆಸ್ಟ್ ಇಂಡೀಸ್ ಮತ್ತು ಜಿಂಬಾಬ್ವೆ. 94 ರಾಷ್ಟ್ರಗಳು ಸಹ ಸದಸ್ಯತ್ವ ಹೊಂದಿವೆ.

ಒಲಿಂಪಿಕ್ಸ್ ಕ್ರಿಕೆಟ್ ಟೂರ್ನಿಗೆ ಅರ್ಹತಾ ಮಾನದಂಡವನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ. ಆದರೆ ಅಮೆರಿಕವು ಆತಿಥ್ಯ ವಹಿಸಿರುವ ಕಾರಣ ನೇರ ಪ್ರವೇಶ ಪಡೆಯುವ ಸಾಧ್ಯತೆಯಿದೆ. ಇದರಿಂದಾಗಿ ಐದು ರಾಷ್ಟ್ರಗಳಿಗೆ ಮಾತ್ರ ಅರ್ಹತಾ ಪ್ರಕ್ರಿಯೆ ಮೂಲಕ ಒಲಿಂಪಿಕ್ಸ್‌ಗೆ ಪ್ರವೇಶ ಗಿಟ್ಟಿಸಲು ಅವಕಾಶವಿದೆ.

ಐಒಸಿಯು ಕ್ರಿಕೆಟ್ ಸೇರಿ ಐದು ಹೊಸ ಕ್ರೀಡೆಗಳನ್ನು 2028ರ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಗೊಳಿಸಲು 2023ರಲ್ಲಿ ನಿರ್ಧರಿಸಿತ್ತು. ಬೇಸ್‌ಬಾಲ್/ಸಾಫ್ಟ್‌ಬಾಲ್, ಫ್ಲ್ಯಾಗ್ ಫುಟ್‌ಬಾಲ್, ಲ್ಯಾಕ್ರೋಸ್ (ಸಿಕ್ಸಸ್) ಮತ್ತು ಸ್ಕ್ವಾಷ್ ಉಳಿದ ನಾಲ್ಕು ಆಟಗಳು.

ಇದೇ ಮೊದಲ ಬಾರಿ, 2028ರ ಒಲಿಂಪಿಕ್ಸ್‌ನಲ್ಲಿ ಎಲ್ಲ ಗುಂಪು ಕ್ರೀಡೆಗಳಲ್ಲಿ ಪುರುಷರ ತಂಡಗಳಷ್ಟೇ ಸಂಖ್ಯೆಯಲ್ಲಿ ಮಹಿಳಾ ತಂಡಗಳು ಇರಲಿವೆ.

ಬಾಕ್ಸಿಂಗ್‌ನಲ್ಲಿ ಮಹಿಳಾ ವಿಭಾಗದಲ್ಲೂ, ಪುರುಷರ ವಿಭಾಗದಲ್ಲಿ ಇರುವಂತೆ ಏಳು ತೂಕ ವಿಭಾಗಗಳು ಇರಲಿದ್ದು ಲಿಂಗ ಸಮಾನತೆ ಸಾಧಿಸಲಾಗಿದೆ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda.hmsi.in